ವಿಶ್ವವಾಣಿ

ವಿಶ್ವಾಸವೇ ವಿಶ್ವ

ಆರ್ಯಭಟ ಪ್ರಶಸ್ತಿ ಪ್ರಕಟ

ಆರ್ಯಭಟ ಸಾಂಸ್ಕೃತಿಕ ಸಂಸ್ಥೆಯ 50ನೇ ವರ್ಷದ ಸುವರ್ಣ ಸಂಭ್ರಮದ ಹಿನ್ನೆಲೆಯಲ್ಲಿ ವಿಶ್ವವಾಣಿ ಪ್ರಧಾನ ಸಂಪಾದಕರಾದ ವಿಶ್ವೇಶ್ವರ ಭಟ್, ಭಾರತಿ ವಿಷ್ಣುವರ್ಧನ್, ರಾಜೇಂದ್ರ ಸಿಂಗ್ ಬಾಬು ಸೇರಿ 63 ಸಾಧಕರಿಗೆ ಆರ್ಯಭಟ ಪ್ರಶಸ್ತಿ ಪ್ರಕಟವಾಗಿದೆ.

ಸಮಾಚಾರ ಸಣ್ಣದಲ್ಲ

ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರಿನ ಸರಕಾರಿ ಮಹಿಳಾ ಪಾಲಿಟೆಕ್ನಿಕ್ ಸಂಸ್ಥೆಯಲ್ಲಿ 2025-26 ನೇ ಸಾಲಿಗೆ ಪ್ರಥಮ ವರ್ಷದ ಡಿಪ್ಲೊಮಾ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. ಕಂಪ್ಯೂಟರ್ ಸೈನ್ಸ್, ಎಲೆಕ್ಟ್ರಾನಿಕ್ ಅಂಡ್ ಕಮ್ಯೂನಿ ಕೇಷನ್, ಗೇಮಿಂಗ್ ಅಂಡ್ ಅನಿಮೇಶನ್, ಸಿವಿಲ್, ಕಮರ್ಷಿಯಲ್ ಪ್ರಾಕ್ಟೀಸ್, ಎಡಿಎಫ್‌ಟಿ ಮತ್ತು ಲೈಬ್ರರಿ ಸೈನ್ಸ್ ಕೋರ್ಸುಗಳು ಲಭ್ಯವಿವೆ. ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾದವರು ಬೆಂಗಳೂ ರಿನ ಸರಕಾರಿ ಮಹಿಳಾ ಪಾಲಿಟೆಕ್ನಿಕ್ ನಲ್ಲಿ ಅರ್ಜಿಗ ಳನ್ನು ಪಡೆದು ಅಗತ್ಯ ದಾಖಲೆಗಳೊಂದಿಗೆ 2025 ನೇ ಮೇ 25ರ ಒಳಗಾಗಿ ಅರ್ಜಿ ಸಲ್ಲಿಸಬ ಹುದು ಎಂದು ಪ್ರಕಟಣೆ ತಿಳಿಸಿದೆ.

85 ಮೊಬೈಲ್ ಕದ್ದು ಪರಾರಿಯಾದ ಕಳ್ಳ

ಬೆಂಗಳೂರು: ನಗರದ ಮೊಬೈಲ್ ಅಂಗಡಿಯ ಹಿಂಬದಿ ಗೋಡೆ ಕೊರೆದು ಬೆತ್ತಲಾಗಿ ಒಳನುಗ್ಗಿದ ಕಳ್ಳ, ವಿವಿಧ ಕಂಪನಿಗಳ 85 ಮೊಬೈಲ್‌ಗಳನ್ನು ಕದ್ದು ಪರಾರಿಯಾಗಿದ್ದಾನೆ. ಬೊಮ್ಮನಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.ಬೊಮ್ಮನಹಳ್ಳಿಯ ಹೊಂಗಸಂದ್ರ ಬಳಿಯ ದಿನೇಶ್ ಎಂಬವರಿಗೆ ಸೇರಿದ ಹನುಮಾನ್ ಟೆಲಿಕಾಂ ಮೊಬೈಲ್ ಶಾಪ್‌ನಲ್ಲಿ ಮೇ 9ರ ಮಧ್ಯರಾತ್ರಿ ಕಳ್ಳತನ ವಾಗಿದೆ. ಈ ಸಂಬಂಧ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿ ತನಿಖೆ ಕೈಗೊಳ್ಳಲಾ ಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ದಿನೇಶ್ ಅವರು ಹಲವು ವರ್ಷಗಳಿಂದ ಹೊಂಗಸಂದ್ರ ದಲ್ಲಿ ಮೊಬೈಲ್ ಶಾಪ್ ಇಟ್ಟುಕೊಂಡಿದ್ದಾರೆ. ಮೇ 9ರಂದು ಎಂದಿನಂತೆ ಅಂಗಡಿಗೆ ಬೀಗ ಹಾಕಿ ಮನೆಗೆ ತೆರಳಿದ್ದರು. ಪೂರ್ವಸಂಚಿನಂತೆ ಮಧ್ಯರಾತ್ರಿ ಬಂದ ಕಳ್ಳ ಕೃತ್ಯ ಎಸಗಿದ್ದಾನೆ. ಮುಖಚಹರೆ ಗೊತ್ತಾಗದಿರಲು ಮಾಸ್ಕ್ ಹಾಕಿದ್ದ. ಮಾಲೀಕರು ಬೆಳಗ್ಗೆ ಬಂದು ನೋಡಿದಾಗ ಕೃತ್ಯ ಗೊತ್ತಾಗಿದೆ. ಕಳ್ಳತನದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದೆ. ಹಲವು ಅಪರಾಧ ಪ್ರಕರಣಗಳಲ್ಲಿ ಪೊಲೀಸರು ಆರೋಪಿ ಧರಿಸಿರುವ ಬಟ್ಟೆ ಆಧರಿಸಿ ಬಂಧಿಸಿರುವುದನ್ನು ತಿಳಿದುಕೊಂಡಿದ್ದ ಕಳ್ಳ, ಪೊಲೀಸರನ್ನು ಯಾಮಾರಿಸಲು ಬೆತ್ತಲೆಯಾಗಿ ಕೃತ್ಯವೆಸಗಿದ್ದಾನೆ ಎಂಬ ಅಂಶ ಪೊಲೀಸ್ ಮೂಲಗಳಿಂದ ತಿಳಿದು ಬಂದಿದೆ.

ಪ್ರತಿ ಸಂಸ್ಥೆಯು ಉಳಿಯಲು ಬದಲಾವಣೆ ಅಗತ್ಯ: ನಾಡೋಜ ಡಾ.ಮಹೇಶ ಜೋಶಿ

ಸರ್ವಾಧಿಕಾರದ ಲವಲೇಶವೂ ಇಲ್ಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕಸಾಪ ನಿಬಂಧನೆಗಳ ತಿದ್ದುಪಡಿ ಸ್ಥಿತ್ಯಂತರದ ಭಾಗವಾಗಿದ್ದು ಇದು ಪರಿಷತ್ತಿನ ಘನತೆ ಗೌರವ ಎತ್ತಿ ಹಿಡಿಯುವ ಜತೆಗೆ ಸಮಕಾಲೀನ ಸವಾಲುಗಳಿಗೆ ಸ್ಪಂದಿಸುವ ಉದ್ದೇಶವನ್ನು ಹೊಂದಿದೆ, ಇದರಲ್ಲಿ ಸರ್ವಾಧಿಕಾರದ ಲವಲೇಶವೂ ಇಲ್ಲ ಎಂದು ಕಸಾಪ ಅಧ್ಯಕ್ಷ ನಾಡೋಜ ಡಾ.ಮಹೇಶ ಜೋಶಿ ಸ್ಪಷ್ಟಪಡಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪ್ರತಿ ಸಂಸ್ಥೆಯು ಜೀವಂತವಾಗಿ ಉಳಿಯಲು ಕಾಲಕ್ಕೆ ತಕ್ಕಂತಹ ಬದಲಾವಣೆಗಳನ್ನು ಮಾಡಿಕೊಳ್ಳ ಬೇಕು, ಆಡಳಿತ ಎಂದಿಗೂ ನಿಂತ ನೀರಾಗಬಾರದು, ಅದು ನಿರಂತರವಾಗಿ ಹರಿಯುವ ನದಿಯಂತಿರಬೇಕು. ಸ್ಥಗಿತ ಎನ್ನುವುದು ಮಾರಣಾಂತಿಕ ಸ್ಥಿತಿ. ಹೊಸ ಬದಲಾಣೆಗಳನ್ನು ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಮೂರು ಕ್ಷೇತ್ರಗಳು ನಿರಂತರವಾಗಿ ಅಳವಡಿಸಿವೆ. ಇದೇ ರೀತಿ 110 ವರ್ಷದ ಇತಿಹಾಸವಿರುವ ಕಸಾಪದಲ್ಲಿಯೂ ಕೆಲ ನಿಬಂಧನೆಗಳನ್ನು ಬದಲಾಯಿಸಲು ಅವಕಾಶವಿದೆ. ಅದನ್ನು ಮಾಡಿದ್ದೇವೆ ಎಂದರು.

ಕನ್ನಡ ಸಾಹಿತ್ಯ ಪರಿಷತ್ತಿನ ನಿಬಂಧನೆಗಳ ತಿದ್ದುಪಡಿಯ ಉದ್ದೇಶ. ಪರಿಷತ್ತಿನ ಆಡಳಿತವು ಹಾಗೂ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವು ಸುಸೂತ್ರವಾಗಿ ನಡೆಯುವುದು ಕಾಲಕ್ಕೆ ತಕ್ಕಂತೆ ಬದಲಾವಣೆಗಳನ್ನು ಮಾಡಿಕೊಂಡು ಹೊಸ ಸಾಧ್ಯತೆಗಳಿಗೆ ಸ್ಪಂದಿಸಿ ಪಾಲನೆಗೆ ಸೂಕ್ತವಾಗುವಂತೆ ಈ ತಿದ್ದಪಡಿಗಳನ್ನು ಮಾಡಲಾಗಿದೆ. ಕನ್ನಡ ಸಾಹಿತ್ಯ ಪರಿಷತ್ತು ಸ್ಥಾಪಿತವಾದಾಗ ಮಾಹಿತಿ ಹಕ್ಕಿನ ಕಲ್ಪನೆಯೇ ಇರಲಿಲ್ಲ. ಆದರೆ ಈಗ ಅದು ಜಾರಿಗೆ ಬಂದಿರುವುದರಿಂದ ನಿಬಂಧನೆ 35ರ ಅಡಿಯಲ್ಲಿ ಅದನ್ನು ಅಳವಡಿಸಿ ಕೊಳ್ಳಲಾಗಿದೆ ಎಂದು ತಿಳಿಸಿದರು.

> **ನಿರಂತರವಾಗಿ, ಪೂರ್ವಾಗ್ರಹ ಪೀಡಿತರಾಗಿ, ದುರುದ್ದೇಶದಿಂದ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಫಲಾಕಾಂಕ್ಷಿಗಳಾಗಿ ವಿಫಲರಾದ ಅನೇಕರು ಕನ್ನಡ ಸಾಹಿತ್ಯ ಪರಿಷತ್ತಿನ ಘನತೆ, ಗೌರವಕ್ಕೆ ಧಕ್ಕೆ ತರುವ, ಆಡಳಿತದಲ್ಲಿ ಹಸ್ತಕ್ಷೇಪ ಮಾಡುವ ಪ್ರವೃತ್ತಿ ಹಾಗೂ ವಾಸ್ತವಾಂಶಗಳನ್ನು ತಿರುಚುವ ಮೂಲಕ ಉರಿಯುವ ಬೆಂಕಿಗೆ ತುಪ್ಪ ಸುರಿಯುವ ಕೆಲಸ ಮಾಡತ್ತಲೇ ಬಂದಿದ್ದಾರೆ. ಕೆಲವರು ತಮ್ಮ ಅಸ್ತಿತ್ವಕ್ಕಾಗಿ, ಮಾಹಿತಿಗಳ ಕೊರತೆಯಿಂದ, ತಪ್ಪು ಗ್ರಹಿಕೆಯಿಂದ ಸರ್ವಾಧಿಕಾರ ಎಂಬೆಲ್ಲ ಸುಳ್ಳು ಕಥೆಗಳನ್ನು ಕಟ್ಟುತ್ತಿದ್ದಾರೆ.**
>
> **- ನಾಡೋಜ ಮಹೇಶ್ ಜೋಶಿ,** ಕಸಾಪ ಅಧ್ಯಕ್ಷರು

ಕೇಳಿಬಂದಿರುವ ಆಪಾದನೆಗೆ ಉತ್ತರವೇನು?

ಆಪಾದನೆ-1: ಮನಸ್ಸಿಗೆ ಬಂದ ಹಾಗೆ ಸರ್ವಾಧಿಕಾರಿಯಾಗಲು ಮತ್ತು ಪರಮಾಧಿಕಾರ ಪಡೆಯಲು ಕಸಾಪ ನಿಬಂಧನೆಗಳನ್ನು ಮನಸೋ ಇಚ್ಛೆ ತಿದ್ದುಪಡಿ ಮಾಡಲಾಗುತ್ತಿದೆ.

ಸ್ಪಷ್ಟನೆ: ಕಸಾಪ ಸ್ಥಾಪನೆಯಾದಗಿಂದಲೂ ನಿಬಂಧನೆಗಳ ತಿದ್ದುಪಡಿ ನಡೆಯುತ್ತಲೇ ಬಂದಿರುವುದು ನಮಗೆ ಚರಿತ್ರೆಯನ್ನು ಗಮನಿಸಿದರೆ ಗೊತ್ತಾಗುತ್ತದೆ. ನಿಬಂಧನೆ ತಿದ್ದುಪಡಿಗಾಗಿ ಕಸಾಪ ನಿಬಂಧನೆ 27(1), (2), (3), (4) ರಲ್ಲಿ ಸ್ಪಷ್ಟ ನಿಯಮಗಳಿದ್ದದು, ಇದರಂತೆ ತಿದ್ದುಪಡಿಗಳು ಆಗುತ್ತಲೇ ಬರುತ್ತಿದೆ. ನನ್ನ ಅವಧಿಯಲ್ಲಿ ನಡೆದಿರುವ ತಿದ್ದುಪಡಿಗಳ ಕ್ರಮ ಕೂಡ ಪಾರದರ್ಶಕವಾಗಿದ್ದು ಸುಧಾರಣೆ ಗಣನೀಯವಾಗಿದೆ.

ಆಪಾದನೆ-2: ಮಹೇಶ್ ಜೋಶಿ ವಿರುದ್ಧ ಮಾತನಾಡುವಂತಹ, ವಿರೋಧವನ್ನು ವ್ಯಕ್ತಪಡಿಸುವಂತಹವರ ವಿರುದ್ಧ ಸೇಡು ತೀರಿಸಿಕೊಳ್ಳಲು ಸದಸ್ಯತ್ವ ಅಮಾನತ್ತಿನಲ್ಲಿಡುತ್ತಾರೆ.

ಸ್ಪಷ್ಟನೆ: ಕಸಾಪ ನಿಬಂಧನೆ 7 (8)ರಲ್ಲಿ ನಮೂದಿಸಿರುವಂತೆ ಯಾವುದೇ ಸದಸ್ಯನ ಅಥವಾ ಸದಸ್ಯ ಸಂಸ್ಥೆಯ ವರ್ತನೆಯು ಪರಿಷತ್ತಿನ ಘನತೆ, ಗೌರವಗಳಿಗೆ ಹಾಗೂ ಧ್ಯೇಯೋದ್ದೇಶಗಳಿಗೆ ವಿರುದ್ಧವಾಗಿದ್ದರೆ ಅಂತಹ ಸದಸ್ಯರಿಂದ ವಿವರಣೆ ಪಡೆದು, ಪರಿಶೀಲನೆ ಮಾಡಿ ಕ್ರಮವಹಿಸಲು ಅವಕಾಶವಿದೆ. ಈ ಸಂಬಂಧ ತಮ್ಮ ನಿರ್ಣಯಕ್ಕೆ ಅಧ್ಯಕ್ಷರು ಕಾರ್ಯಕಾರಿ ಸಮಿತಿ ಸಭೆಯ ಅನುಮೋದನೆ ಪಡೆಯಬೇಕು. ನಿರ್ಮಲಾ ಎಲಿಗಾರ್ ಅವರ ಸದಸ್ಯತ್ವ ರದ್ದು ಮಾಡಲು ಷೋಕಾಸ್ ನೋಟಿಸ್ ನೀಡಲಾಗಿತ್ತು. ಅವರು ಉತ್ತರ ನೀಡದೇ ಇರುವ ಕಾರಣ ಅವರ ಸದಸ್ಯತ್ವವನ್ನು ಸರ್ವ ಸದಸ್ಯರ ಒಪ್ಪಿಗೆ ಪಡೆದು ರದ್ದು ಮಾಡಲಾಗಿತ್ತು. ನಂತರ ವಿ. ಹರ್ಷ ಮತ್ತು ರಂಗಸ್ವಾಮಿ.ಎಚ್. ಅವರುಗಳಿಗೆ ವಿವರಣೆ ಕೇಳಿ ಷೋಕಾಸ್ ನೋಟಿಸ್ ನೀಡಿದ್ದು, ಅದಕ್ಕೆ ಅವರು ಉತ್ತರಗಳನ್ನು ನೀಡಿರುತ್ತಾರೆ. ಈ ಕುರಿತು ಅವರುಗಳು ನೀಡಿದ ಉತ್ತರವನ್ನು ಪರಿಶೀಲಿಸಿ ಮುಂದಿನ ಕ್ರಮ ಜರುಗಿಸಲಾಗುವುದು.

ಆಪಾದನೆ-3: ಮಂಡ್ಯದಲ್ಲಿ ಜರುಗಿದ 87ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರಗಳನ್ನು ನೀಡದೆ ಇರುವುದು ಭ್ರಷ್ಟಾಚಾರದ ಅನುಮಾನ

ಸ್ಪಷ್ಟನೆ: ಸ್ವಾಗತ ಸಮಿತಿ ಲೆಕ್ಕಪರಿಶೋಧನೆ ಮಾಡಿಸಿ, ಸಮ್ಮೇಳನಕ್ಕೆ ಖರ್ಚು ಮಾಡಲಾಗಿ ಉಳಿದ ಮೊತ್ತವನ್ನು ಕೇಂದ್ರ ಪರಿಷತ್ತಿನ ಬ್ಯಾಂಕ್ ಖಾತೆಗೆ ಜಮಾ ಮಾಡಿ ಕೇಂದ್ರ ಪರಿಷತ್ತಿನ ಕಚೇರಿಗೆ ಮಾಹಿತಿ ಸಲ್ಲಿಸತಕ್ಕದ್ದು. ಈ ಹಿನ್ನೆಲೆಯಲ್ಲಿ ಸ್ವಾಗತ ಸಮಿತಿ ಅವರೇ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿಗೆ ಲೆಕ್ಕವನ್ನು ನೀಡಬೇಕೇ ಹೊರತು, ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಸ್ವಾಗತ ಸಮಿತಿಗಲ್ಲ. ಮಂಡ್ಯ ಸಾಹಿತ್ಯ ಸಮ್ಮೇಳನದ ಪ್ರಯುಕ್ತ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತು ಕೇಳಿದ್ದು ಮೂರು ಕೋಟಿ ಬಿಡುಗಡೆಯಾಗಿದ್ದು ಎರಡು ಕೋಟಿ ಐವತ್ತು ಲಕ್ಷ ರು. ಮಾತ್ರ. ದೊರೆತ ಅನುದಾನದಲ್ಲಿ ಸಮ್ಮೇಳನಾಧ್ಯಕ್ಷರ ಮತ್ತು ನಿಕಟಪೂರ್ವ ಸಮ್ಮೇಳನಾಧ್ಯಕ್ಷರ ಪ್ರಯಾಣ ವೆಚ್ಚ, ವಿಚಾರ ಗೋಷ್ಠಿಯಲ್ಲಿ ಭಾಗವಹಿಸುವವರ ಗೌರವಧನ, ಆಹ್ವಾನ ಪತ್ರಿಕೆ ಮುದ್ರಣ, ಸನ್ಮಾನಿತರು ಮತ್ತು ವಿಶೇಷ ಆಹ್ವಾನಿತರು, ಗಣ್ಯರ ಪ್ರಯಾಣಕ್ಕೆ ಖರ್ಚು ಮಾಡಲಾಗಿದೆ. ಇವರ ಸಂಖ್ಯೆ ಸರಿ ಸುಮಾರು ಎರಡು ಸಾವಿರದ ಸಮೀಪದಲ್ಲಿ ಇರುವುದರಿಂದ ಪ್ರತಿಯೊಬ್ಬರ ಬ್ಯಾಂಕ್ ವಿವರ ಪಡೆದು ಪರಿಶೀಲಿಸುವುದು, ತಂತ್ರಾಂಶದಲ್ಲಿ ದಾಖಲೆ ತಾಳೆ ಹಾಕವುದು ದೀರ್ಘವಾದ ಪ್ರಕ್ರಿಯೆಯಾಗಿದೆ. ಇದಕ್ಕಾಗಿ ಆರು ತಿಂಗಳ ಸಮಯಾವಕಾಶವಿದ್ದು ಜೂ.23 ರೊಳಗೆ ಲೆಕ್ಕಪತ್ರ ಪರಿಶೋಧಕರಿಂದ ಪರಿಶೀಲನೆ ನಡೆಸಲಾಗುತ್ತದೆ.

ಆಪಾದನೆ-4: ಕಸಾಪ ಅಧ್ಯಕ್ಷರು ತಮ್ಮ ಅನುಕೂಲಕ್ಕೆ ತಕ್ಕಂತೆ ಅಧ್ಯಕ್ಷತೆ ಅವಧಿ ಬದಲಾಯಿಸಿಕೊಂಡಿದ್ದಾರೆ ಆಪಾದನೆ

ಸ್ಪಷ್ಟನೆ: ನಾಡೋಜ ಡಾ.ಮಹೇಶ ಜೋಶಿ ಅವರ ಅವಧಿಯಲ್ಲಿ ಮಾಡಿರುವುದಿಲ್ಲ. ಇದು ಹಿಂದಿನ ಅಧ್ಯಕ್ಷರಾದ ಡಾ.ಮನು ಬಳಿಗಾರ್ ಅವರ ಅವಧಿಯಲ್ಲಿ ಉಡುಪಿ ಜಿಲ್ಲೆಯ ಕೋಟಾದಲ್ಲಿ ನಡೆದ ವಿಶೇಷ ಸರ್ವ ಸದಸ್ಯರ ಸಭೆಯಲ್ಲಿ ಆದ ತಿದ್ದುಪಡಿಯಾಗಿದೆ. ಇದಕ್ಕೂ ನಾಡೋಜ ಡಾ. ಮಹೇಶ ಜೋಶಿ ಅವರಿಗೂ ಯಾವುದೇ ಸಂಬಂಧವಿಲ್ಲ.

18 ರಾಜ್ಯದ ವಿದ್ಯಾರ್ಥಿನಿಯರಿಗೆ ಅಜೀಂಪ್ರೇಮ್‌ಜಿ ವಿದ್ಯಾರ್ಥಿವೇತನ

ಬೆಂಗಳೂರು: ಹೆಣ್ಣುಮಕ್ಕಳ ಉನ್ನತ ಶಿಕ್ಷಣಕ್ಕೆ ಸಹಕಾರಿಯಾಗುವ ಸಲುವಾಗಿ ಅಜೀಂಪ್ರೇಮ್‌ಜಿ ಫೌಂಡೇಷನ್ 18 ರಾಜ್ಯಗಳ ಹೆಣ್ಣುಮಕ್ಕಳಿಗೆ ವಿದ್ಯಾರ್ಥಿವೇತನ ನೀಡಲು ನಿರ್ಧರಿಸಿದೆ ಎಂದು ಫೌಂಡೇಷನ್‌ನ ಸಿಇಒ ಅನುರಾಗ್ ಬೆಹರ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಉತ್ತಮ ಶಾಲಾ ಶಿಕ್ಷಣವು ಜೀವನದ ಅಡಿಪಾಯವಾದರೆ, ಉನ್ನತ ಶಿಕ್ಷಣವು ಜೀವನದ ಸಾಮಾಜಿಕ ಮತ್ತು ಆರ್ಥಿಕ ನಿರೀಕ್ಷೆಗಳನ್ನು ಬದಲಾಯಿಸುತ್ತದೆ. ಭಾರತವು ವಿವಿಧ ರಂಗಗಳಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಿದ ಹೊರತಾಗಿಯೂ, ಹೆಣ್ಣುಮಕ್ಕಳು ಎಲ್ಲ ಶೈಕ್ಷಣಿಕ ಹಂತಗಳಲ್ಲೂ ಸಾಮಾಜಿಕ ಮತ್ತು ಆರ್ಥಿಕ ಅಡೆತಡೆಗಳನ್ನು ಎದುರಿಸುತ್ತಿದ್ದಾರೆ. ಈ ನಿಟ್ಟಿನಲ್ಲಿ ಹೆಣ್ಣುಮಕ್ಕಳು ತಮ್ಮ ಜೀವನದ ಹಾದಿಯಲ್ಲಿ ಸ್ವ-ನಿಯಂತ್ರಣ ಸಾಧಿಸಲು ನೆರವಾಗುವಂತಹ ಉನ್ನತ ಶಿಕ್ಷಣ ಪಡೆಯುವಂತಾಗಲು ಗಣನೀಯ ಬೆಂಬಲ ನೀಡಲು ಮುಂದಾಗುತ್ತಿದ್ದೇವೆ ಎಂದು ತಿಳಿಸಿದರು.

2024-25ರ ಶೈಕ್ಷಣಿಕ ವರ್ಷದಲ್ಲಿ ಇಡೀ ಮಧ್ಯಪ್ರದೇಶ, ಹಾಗೂ ಉತ್ತರಪ್ರದೇಶ, ರಾಜಸ್ಥಾನ ಮತ್ತು ಜಾರ್ಖಂಡ್‌ನ ಕೆಲವು ಜಿಲ್ಲೆಗಳಲ್ಲಿ ಅಜೀಂಪ್ರೇಮ್‌ಜಿ ವಿದ್ಯಾರ್ಥಿವೇತನವನ್ನು ಪ್ರಾಯೋಗಿಕವಾಗಿ ಪ್ರಾರಂಭಿಸಲಾಯಿತು. 25 ಸಾವಿರಕ್ಕಿಂತ ಹೆಚ್ಚು ಹೆಣ್ಣುಮಕ್ಕಳಿಗೆ ಈ ಪ್ರಾಯೋಗಿಕ ಹಂತದಲ್ಲಿ ವಿದ್ಯಾರ್ಥಿವೇತ ನೀಡಲಾಗಿದೆ. 2025-26ನೇ ಸಾಲಿನ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಕೆಯ ಪ್ರಕ್ರಿಯೆ ಸೆಪ್ಟೆಂಬರ್‌ನಲ್ಲಿ ಪ್ರಾರಂಭವಾಗಲಿದೆ. ಅರುಣಾಚಲ ಪ್ರದೇಶ, ಅಸ್ಸಾಂ, ಬಿಹಾರ, ಛತ್ತೀಸ್‌ಗಢ, ಜಾರ್ಖಂಡ್, ಕರ್ನಾಟಕ, ಮಧ್ಯಪ್ರದೇಶ, ಮಣಿಪುರ, ಮೇಘಾಲಯ, ಮಿಜೋರಾಂ, ನಾಗಾಲ್ಯಾಂಡ್, ಒಡಿಶಾ, ರಾಜಸ್ಥಾನ, ಸಿಕ್ಕಿಂ, ತೆಲಂಗಾಣ, ತ್ರಿಪುರಾ, ಉತ್ತರ ಪ್ರದೇಶ ಮತ್ತು ಉತ್ತರಾಖಂಡ ರಾಜ್ಯಗಳಲ್ಲಿ ವಿದ್ಯಾರ್ಥಿವೇತನ ನೀಡಲಾಗುವುದು. ಮುಂಬರುವ ವರ್ಷಗಳಲ್ಲಿ ಈ ವಿದ್ಯಾರ್ಥಿವೇತನ ಕಾರ್ಯಕ್ರಮವನ್ನು ದೇಶವ್ಯಾಪಿ ವಿಸ್ತರಿಸುವ ಸಾಧ್ಯತೆ ಇದೆ ಎಂದು ಹೇಳಿದರು.

ವಿದ್ಯಾರ್ಥಿವೇತನದ ಮುಖ್ಯ ವಿವರಗಳು: ಮುನಿಸಿಪಲ್ ಶಾಲೆ ಒಳಗೊಂಡಂತೆ ಸರಕಾರಿ ಶಾಲೆಗಳಲ್ಲಿ 10 ಮತ್ತು 12ನೇ ತರಗತಿ ಶಿಕ್ಷಣ ಪೂರೈಸಿರುವ ಹೆಣ್ಣುಮಕ್ಕಳು. ಪದವಿ ಅಥವಾ ಡಿಪ್ಲೊಮ ಕೋರ್ಸ್ ಮಾಡಲು ಮಾನ್ಯತೆ ಪಡೆದ ಉನ್ನತ ಶಿಕ್ಷಣ ಸಂಸ್ಥೆಯಲ್ಲಿ ದಾಖಲಾತಿ ಪಡೆದವರು. ಮಾನ್ಯತೆ ಪಡೆದ ಉನ್ನತ ಶಿಕ್ಷದಣ ಸಂಸ್ಥೆಗಳ ಪಟ್ಟಿಯಲ್ಲಿ ಎಲ್ಲಾ ಸರಕಾರಿ ಹಾಗೂ ಕೆಲವು ಖಾಸಗಿ ಸಂಸ್ಥೆಗಳು ಸೇರಿರುತ್ತವೆ. ಪದವಿ/ಡಿಪ್ಲೊಮ ಕೋರ್ಸ್ ಮುಗಿಸುವವರೆಗೆ ಯಶಸ್ವಿಯಾಗಿ ಓದಿನಲ್ಲಿ ಮುಂದುವರೆಯುತ್ತಿದ್ದಲ್ಲಿ, ಪ್ರತಿ ವರ್ಷ 30 ಸಾವಿರ ರು. ಹಣವನ್ನು ಪ್ರತಿ ವರ್ಷ ಎರಡು ಕಂತುಗಳಲ್ಲಿ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಲಾಗುವುದು ಎಂದು ಅನುರಾಗ್ ಬೆಹರ್ ವಿವರಿಸಿದರು.

ಎಂಎನ್‌ಸಿಯಲ್ಲಿ ಕೆಲಸದ ಆಮಿಷ

ಬೆಂಗಳೂರು: ಎಂಎನ್‌ಸಿ ಕಂಪನಿಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ ಹಣ ಪಡೆದು ವಂಚಿಸಿದ್ದ ಆರೋಪಿ ಎಚ್‌ಆರ್ ಅನ್ನು ಸಿಸಿಬಿ ಪೊಲೀಸರ ಬಂಧಿಸಿದ್ದಾರೆ.

ಮೈಕ್ರೋಸಾಫ್ಟ್, ಬಾಷ್ ಸೇರಿ ಪ್ರತಿಷ್ಠಿತ ಕಂಪನಿಗಳಲ್ಲಿ ಕೆಲಸ ಕೊಡಿಸುವುದಾಗಿ ನಂಬಿಸಿ 8 ಮಂದಿ ಉದ್ಯೋಗಾಕಾಂಕ್ಷಿಗಳಿಂದ 14.23 ಲಕ್ಷ ಹಣ ಪಡೆದಿದ್ದ ಖಾಸಗಿ ಕಂಪನಿ ನೌಕರನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ. ವಂಚನೆಗೊಳಗಾದ ಯುವತಿಯು ನೀಡಿದ ದೂರು ಆಧರಿಸಿ ಪತ್ನೂಲ್ ಕಲಂದರ್ ಖಾನ್ (43) ಎಂಬವನನ್ನು ಬಂಧಿಸಿ, ಆತನಿಂದ 1.50 ಲಕ್ಷ ರು. ಹಣ ವಶಕ್ಕೆ ಪಡೆಯಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಇನ್ನಿಬ್ಬರು ತಲೆಮರೆಸಿಕೊಂಡಿದ್ದು, ಅವರ ಬಂಧನಕ್ಕೆ ಶೋಧ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಮುಖ ಆರೋಪಿ ಕಲಂದರ್ ಜೆ.ಪಿ.ನಗರದ ಸಾರಕ್ಕಿ ನಿವಾಸಿಯಾಗಿದ್ದು, ಖಾಸಗಿ ಕಂಪನಿಯಲ್ಲಿ ಎಚ್‌ಆರ್ ಆಗಿ ಕೆಲಸ ಮಾಡುತ್ತಿದ್ದ. ಇದೇ ವೇಳೆ ವಂಚನೆಗೊಳಗಾದ ಯುವತಿಯು ಆರೋಪಿ ಕೆಲಸ ಮಾಡುತ್ತಿದ್ದ ಕಂಪನಿಯಲ್ಲಿ ಕೆಲಸ ಖಾಲಿಯಿರುವುದಾಗಿ ಆನ್‌ಲೈನ್‌ನಲ್ಲಿ ತಿಳಿದುಕೊಂಡು ಸಂದರ್ಶನಕ್ಕೆ ಹೋಗಿದ್ದಳು. ಸಂದರ್ಶನ ನಡೆಸಿದ ಆರೋಪಿಯು ವಿದ್ಯಾರ್ಹತೆ ಹೆಚ್ಚಿದ್ದು, ಪ್ರತಿಷ್ಠಿತ ಕಂಪನಿಯಲ್ಲಿ ನನ್ನ ಸ್ನೇಹಿತರಿದ್ದಾರೆ. ಅಲ್ಲಿ ಕೆಲಸ ಕೊಡಿಸುವುದಾಗಿ ಆಮಿಷವೊಡ್ಡಿ ಆಕೆಯ ಮೊಬೈಲ್ ನಂಬರ್ ಪಡೆದುಕೊಂಡಿದ್ದ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೈಕ್ರೋಸಾಫ್ಟ್ ಹೆಸರಲ್ಲಿ 2.70 ಲಕ್ಷ ವಂಚನೆ

ಮೈಕ್ರೋಸಾಫ್ಟ್ ಕಂಪನಿಯಲ್ಲಿ ಕೆಲಸ ಖಾಲಿಯಿದ್ದು, ಹುದ್ದೆ ಕೊಡಿಸಬೇಕಾದರೆ 2.70 ಲಕ್ಷ ರು. ತಗುಲಲಿದೆ ಎಂದು ಸುಳ್ಳು ಹೇಳಿ ಯುವತಿಯಿಂದ ಹಣ ವರ್ಗಾಯಿಸಿಕೊಂಡಿದ್ದ. ಇದೇ ರೀತಿ ಇನ್ನಿತರ 7 ಮಂದಿಗೂ ಕೆಲಸ ಕೊಡಿಸುವುದಾಗಿ ಹೇಳಿ ಒಟ್ಟು 14.23 ಲಕ್ಷ ರುಪಾಯಿ ಯುಪಿಐ ಮೂಲಕ ಹಣ ವರ್ಗಾಯಿಸಿ ಮೋಸ ಮಾಡಿದ್ದ. ಸದ್ಯ ಓರ್ವನನ್ನು ಬಂಧಿಸಲಾಗಿದ್ದು, ಕೃತ್ಯಕ್ಕೆ ಸಹಕರಿಸಿದ್ದ ಇನ್ನಿಬ್ಬರು ತಲೆಮರೆಸಿಕೊಂಡಿದ್ದಾರೆ.

ಖ್ಯಾತ ಗಾಯಕ ಸೋನು ನಿಗಮ್ ವಿರುದ್ಧ ಬಲವಂತದ ಕ್ರಮ ಬೇಡ ಎಂದ ಹೈಕೋರ್ಟ್

ಸೋನು ವಿರುದ್ಧ ತನಿಖಾ ವರದಿ ಸಲ್ಲಿಕೆಗೆ ಹೈ ತಡೆ

ಬೆಂಗಳೂರು: ನಗರದಲ್ಲಿ ಆಯೋಜಿಸಿದ್ದ ಸಂಗೀತ ಕಾರ್ಯಕ್ರಮದಲ್ಲಿ ಪ್ರೇಕ್ಷಕರು ಕನ್ನಡ ಹಾಡುಗಳನ್ನು ಹಾಡುವಂತೆ ಒತ್ತಾಯಿಸಿದ ಸಂದರ್ಭದಲ್ಲಿ ಕನ್ನಡಾಭಿಮಾನವನ್ನು ಪಹಲ್ಗಾಮ್ ಘಟನೆಗೆ ಹೋಲಿಸುವ ಮೂಲಕ ಆಕ್ಷೇಪಾರ್ಹವಾಗಿ ಮಾತನಾಡಿದ್ದ ಆರೋಪಕ್ಕೆ ಸಂಬಂಧಿಸಿದಂತೆ ಪ್ರಸಿದ್ಧ ಗಾಯಕ ಸೋನು ನಿಗಮ್ ವಿರುದ್ಧದ ಅಂತಿಮ ತನಿಖಾ ವರದಿ ಸಲ್ಲಿಕೆಗೆ ಹೈಕೋರ್ಟ್ ತಡೆ ನೀಡಿ ಆದೇಶಿಸಿತು.



ಅರ್ಜಿದಾರ ಸೋನು ನಿಗಮ್ ಅವರನ್ನು ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೆ ಒಳಪಡಿಸಬಹುದು. ಇಲ್ಲವೇ, ಗಾಯಕನ ವೆಚ್ಚದಲ್ಲಿ ತನಿಖಾಧಿಕಾರಿಗಳು ಅವರಿರುವ ಸ್ಥಳಕ್ಕೆ ತೆರಳಿ ವಿಚಾರಣೆಗೊಳಪಡಿಸಿ ಹೇಳಿಕೆಗಳನ್ನು ದಾಖಲಿಸಿಕೊಳ್ಳಬಹುದು. ತಮ್ಮ ವಿರುದ್ಧ ಆವಲಹಳ್ಳಿಯ ಪೊಲೀಸ್ ಠಾಣೆಯಲ್ಲಿ ದಾಖಲಾಗಿರುವ ಪ್ರಕರಣ ಮತ್ತು ಅದಕ್ಕೆ ಸಂಬಂಧಿಸಿದಂತೆ ವಿಚಾರಣಾ ನ್ಯಾಯಾಲಯದ ಪ್ರಕ್ರಿಯೆ ರದ್ದು ಕೋರಿ ಸೋನು ನಿಗಮ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಶಿವಶಂಕರ್ ಅಮರಣ್ಣನವರ್ ಅವರಿದ್ದ ರಜಾಕಾಲದ ನ್ಯಾಯಪೀಠ ಈ ಆದೇಶ ನೀಡಿತು.

ವಿಚಾರಣೆ ವೇಳೆ ಸರಕಾರದ ಪರ ವಕೀಲರು, ಅರ್ಜಿದಾರರು ನೀಡಿರುವ ಹೇಳಿಕೆ ಕನ್ನಡಿಗರ ಭಾವನೆಗಳಿಗೆ ಧಕ್ಕೆಯಾಗಿದೆ. ಆದ್ದರಿಂದ ಅವರನ್ನು ವಿಚಾರಣೆಗೆ ಒಳಪಡಿಸಬೇಕು. ಅವರು ಹೇಳಿಕೆ ನೀಡಿದ ಸ್ಥಳ ಮಹಜರು ಮಾಡಬೇಕಾಗಿದೆ. ಆದ್ದರಿಂದ ಅರ್ಜಿ ಪುರಸ್ಕರಿಸಬಾರದು ಎಂದು ಮನವಿ ಮಾಡಿದರು. ಇದಕ್ಕೆ ಪ್ರತಿಕ್ರಿಯಿಸಿದ ಪೀಠ, ಅರ್ಜಿದಾರರು ನೀಡಿರುವ ಹೇಳಿಕೆ ಈಗಾಗಲೇ ಸಾಮಾಜಿಕ ಮಾಧ್ಯಮಗಳಲ್ಲಿ ಗೊತ್ತಾಗಿದೆ. ಅವರ ವಿರುದ್ಧ ಯಾವ ತನಿಖೆ ಮಾಡಬೇಕು, ಏನು ಮಹಜರು ಮಾಡಬೇಕು ಎಂದು ಪ್ರಶ್ನಿಸಿ ವಿಡಿಯೊ ಕಾನ್ಫರೆನ್ಸ್ ಮೂಲಕ ವಿಚಾರಣೆಗೊಳಪಡಿಸಿ ಹೇಳಿಕೆ ದಾಖಲಿಸಿಕೊಳ್ಳಬಹುದು ಎಂದು ತಿಳಿಸಿತು.

ಪ್ರಕರಣದ ಹಿನ್ನೆಲೆ

ಏಪ್ರಿಲ್ 25 ಮತ್ತು 26ರಂದು ಸೋನು ನಿಗಮ್ ಅವರು ಈಸ್ಟ್ ಪಾಯಿಂಟ್ ಕಾಲೇಜ್ ಆಫ್ ಎಂಜಿನಿಯರಿಂಗ್ ಆ್ಯಂಡ್ ಟೆಕ್ನಾಲಜಿಯಲ್ಲಿ ನಡೆದ ಸಂಗೀತ ಕಾರ್ಯಕ್ರಮದಲ್ಲಿ ಆಕ್ಷೇಪಾರ್ಹ ಮತ್ತು ಕನ್ನಡಿಗರ ಭಾವನೆ ಕೆರಳಿಸುವ ಹೇಳಿಕೆ ನೀಡಿದ್ದಾರೆ ಎಂದು ಮೇ 2ರಂದು ದೂರು ನೀಡಲಾಗಿತ್ತು. ಇದನ್ನು ಆಧರಿಸಿ ಪೊಲೀಸರು ಮೇ 3ರಂದು ಎಫ್‌ಐಆರ್ ದಾಖಲಿಸಿದ್ದಾರೆ. ಭಾರತೀಯ ನ್ಯಾಯ ಸಂಹಿತೆ ಸೆಕ್ಷನ್‌ಗಳಾದ 351 (2) (ಕ್ರಿಮಿನಲ್ ಬೆದರಿಕೆ), 353 (ಸಾರ್ವಜನಿಕವಾಗಿ ಕಿರಿಕಿರಿ ಉಂಟು ಮಾಡುವ ಹೇಳಿಕೆ), 352(1) (ಉದ್ದೇಶಪೂರ್ವಕವಾಗಿ ಶಾಂತಿ ಭಂಗ) ಅಡಿ ಧರ್ಮರಾಜ ಎಂಬವರು ನೀಡಿದ ದೂರಿನನ್ವಯ ಎಫ್‌ಐಆರ್ ದಾಖಲಿಸಲಾಗಿದೆ. ಇದನ್ನು ಪ್ರಶ್ನಿಸಿ ಸೋನು ನಿಗಮ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಬೆಂಗಳೂರಿಗೆ ಸೋನು ಬೇಡ

ವಾದ ಮಾಡಿದ ಸೋನು ನಿಗಮ್ ಪರ ವಕೀಲರು, ಸೋನು ನಿಗಮ್ ಅವರಿಂದ ಕನ್ನಡ ಹಾಡುಗಳನ್ನು ಹಾಡುವಂತೆ ಓರ್ವ ವಿದ್ಯಾರ್ಥಿ ಒತ್ತಾಯಿಸಿದ್ದರು. ಅದಕ್ಕೆ ಪ್ರತಿಕ್ರಿಯೆ ನೀಡುವ ವೇಳೆ ಎಡವಟ್ಟಾಗಿದೆ. ಯಾರಿಗೂ ನೋವುಂಟು ಮಾಡುವ ಉದ್ದೇಶವಿರಲಿಲ್ಲ. ಅಲ್ಲದೆ, ದೂರು ನೀಡಿರುವ ವ್ಯಕ್ತಿ ಸ್ಥಳದಲ್ಲಿರಲಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿನ ವರದಿಯನ್ನು ಆಧರಿಸಿ ದೂರು ದಾಖಲಿಸಿದ್ದಾರೆ. ಅರ್ಜಿದಾರರು ಪ್ರತಿಷ್ಠಿತ ವ್ಯಕ್ತಿಯಾಗಿದ್ದು, ವಿಚಾರಣೆಗಾಗಿ ಬೆಂಗಳೂರಿಗೆ ಬಂದಲ್ಲಿ ಮತ್ತೆ ಗೊಂದಲ ಉಂಟಾಗುವ ಸಾಧ್ಯತೆಯಿದೆ. ಆದ್ದರಿಂದ ಆನ್ ಲೈನ್ ಇಲ್ಲವೇ, ಲಿಖಿತವಾಗಿ ಹೇಳಿಕೆ ದಾಖಲಿಸಿಕೊಳ್ಳಬಹುದು ಎಂದು ಪೀಠಕ್ಕೆ ಮನವಿ ಮಾಡಿದರು. ಇದಕ್ಕೆ ಆಕ್ಷೇಪಿಸಿದ ಸರಕಾರಿ ವಕೀಲರು, ಅರ್ಜಿದಾರರಿಗೆ ಯಾವುದೇ ತೊಂದರೆಯಾಗದಂತೆ ರಕ್ಷಣೆ ನೀಡುವುದು ಸರಕಾರದ ಜವಾಬ್ದಾರಿ. ಅವರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳುವುದಿಲ್ಲ ಎಂದು ಭರವಸೆ ನೀಡಿದ್ದರು.

sagility™

Sagility India Limited

(formerly known as Sagility India Private Limited and prior to that Berkmeer India Private Limited)

Corporate Identity Number: L72900KA2021PLC150054

Registered office: No.23 & 24 AMR Tech Park, Building 2A, First Floor, Hongasandara Village, Off Hosur Road, Bommanahalli, Bangalore Karnataka, 560 068, India.

Telephone .: 91- 8071251500, **E-mail:** investorservice@sagilityhealth.com ; **website:** www.sagilityhealth.com

CONSOLIDATED FINANCIAL RESULTS FOR THE QUARTER AND YEAR ENDED 31 MARCH 2025

Rs in millions

S. No.	Particulars	Quarter Ended 31 March 2025 (Unaudited)	Year Ended 31 March 2025 (Audited)	Quarter Ended 31 March 2024 (Unaudited)
1	Revenue from operations	15,684.76	55,699.18	12,831.87
2	Profit before tax	2,389.86	7,602.31	928.78
3	Profit after tax	1,825.72	5,391.23	802.08
4	Total comprehensive income for the period	2,146.45	6,431.47	679.15
5	Paid up Equity Share Capital (Face value of Rs. 10/- each)	46,792.74	46,792.74	42,852.82
6	Other equity	36,567.80	36,567.80	21,578.46
7	Earnings Per Share (EPS) (of Rs. 10/- each) (Not annualised except for the year ended 31 March 2025 and 31 March 2024)			
	1. Basic (Rs)	0.39	1.17	0.19
	2. Diluted (Rs)	0.39	1.17	0.19

Notes:

Standalone Financial Results for the quarter and year ended 31 March 2025

Rs in millions

Sr. No.	Particulars	Quarter Ended 31 March 2025 (Unaudited)	Year Ended 31 March 2025 (Audited)	Quarter Ended 31 March 2024 (Unaudited)
1	Revenue from operations	4,553.54	17,166.85	3,936.45
2	Profit before tax	1,094.66	3,699.50	214.13
3	Profit after tax	817.78	2,714.81	171.31
4	Total comprehensive income for the period	862.93	2,607.75	161.98

The above is an extract of the detailed format of Quarter and year ended Standalone and consolidated Financial Results filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format of Financial Results are available on the websites of the Stock Exchange(s) i.e., www.nseindia.com and www.bseindia.com and the Company at www.sagilityhealth.com

In terms of Regulation 33 of the SEBI (Listing Obligation and Disclosure Requirements) Regulations, 2015, as amended, the standalone and consolidated financial results of Sagility India Limited ("the Holding Company" or "the Company") and its subsidiaries (the Holding Company along with subsidiaries together referred to as "the Group") have been reviewed and recommended by the Audit Committee and approved by the Board of Directors, at their meetings held on 14 May 2025.

These standalone and consolidated financial results have been prepared in accordance with the Companies (Indian Accounting Standards) Rules, 2015, as amended, ("Ind AS") prescribed under section 133 of Companies Act, 2013 and other recognised accounting practices and policies to the extent applicable and in terms of Regulation 33 of the SEBI (Listing Obligations and Disclosure Requirements) Regulations, 2015 ('SEBI LODR'), both as amended from time to time.

The figures for the quarter ended 31 March 2025 are the balancing figures between the audited figures for the year ended 31 March 2025 and unaudited year- to- date published figures for the nine months ended 31 December 2024, which were subject to limited review.

Date: 14 May 2025
Place: Bengaluru

Ramesh Gopalan
Managing Director and Group Chief Executive Officer

CONCEPT

ನಿರೂಪಕಿ ದಿವ್ಯಾ ವಸಂತ ವಿರುದ್ಧ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲು

ಹಣಕ್ಕಾಗಿ ಆನಂದ್ ಗುರೂಜಿಗೆ ಜೀವ ಬೆದರಿಕೆ

ಬೆಂಗಳೂರು: ಆನಂದ ಗುರೂಜಿಗೆ ಕರೆ ಮಾಡಿದ್ದಲ್ಲದೆ, ಕಾರು ಅಡ್ಡಗಟ್ಟಿ ಹಣಕ್ಕೆ ಆರೋಪಿ ದಿವ್ಯಾ ವಸಂತ ಬ್ಲ್ಯಾಕ್‌ಮೇಲ್ ಮಾಡಿದ್ದು, ಈ ಪ್ರಕರಣ ಸಂಬಂಧ ಚಿಕ್ಕಜಾಲ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ದೂರಿನ ಸಂಬಂಧ ಪೊಲೀಸರು, ಕೃಷ್ಣಮೂರ್ತಿ (ಎ1) ಹಾಗೂ ದಿವ್ಯಾ ವಸಂತ (ಎ2) ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಆನಂದ ಗುರೂಜಿ ವಿಡಿಯೊ ಹಾಗೂ ಜಮೀನು ಖರೀದಿ ಪ್ರಕರಣ ಸಂಬಂಧ ಕೋರ್ಟ್‌ನಿಂದ ತಡೆಯಾಜ್ಞೆ ತರಲಾಗಿದೆ. ಆದರೂ ಸಹ ಈ ಪ್ರಕರಣ ಸಂಬಂಧ ಹಣಕ್ಕಾಗಿ ಬೆದರಿಸಿ ಬ್ಲ್ಯಾಕ್ ಮೇಲ್, ಜೀವ ಬೆದರಿಕೆ ಹಾಕಿದ್ದಾರೆ ಎಂದು ಆನಂದ ಗುರೂಜಿ ಆರೋಪಿಸಿದ್ದಾರೆ.



ದೂರಿನಲ್ಲಿ ಏನಿದೆ?

ವಿಡಿಯೊ ಇದೆ ಎಂದು ಪ್ರಖ್ಯಾತ ಆನಂದ್ ಗುರೂಜಿಗೆ ಪ್ರತಿನಿತ್ಯ ಹಣಕ್ಕಾಗಿ ಆರೋಪಿಗಳು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾರೆ. ಕೋರ್ಟ್‌ನಿಂದ ತಡೆಯಾಜ್ಞೆ ತಂದರೂ ಹಣಕ್ಕಾಗಿ ಬೆದರಿಸಿ ಬ್ಲ್ಯಾಕ್ ಮೇಲ್, ಜೀವಬೆದರಿಕೆ ಹಾಕಿದ್ದಾರೆ. ಅಲ್ಲದೇ ಕಾರು ಅಡ್ಡಗಟ್ಟಿ ಅಶ್ಲೀಲ ಪದಗಳಿಂದ ನಿಂದನೆ ಮಾಡಿದ್ದಾರೆ ಎಂದು ಆನಂದ್ ಗುರೂಜಿ ದೂರಿನಲ್ಲಿ ಆರೋಪಿಸಿದ್ದಾರೆ. ಸದ್ಯ ಚಿಕ್ಕಜಾಲ ಠಾಣೆ ಪೊಲೀಸರು ತನಿಖೆ ನಡೆಸಿದ್ದಾರೆ. ಅಶ್ಲೀಲ ವಿಡಿಯೊಗಳನ್ನು ಸಾಮಾಜಿಕ ಜಾಲತಾಣದಲ್ಲಿ ಹರಿಬಿಡುವುದಾಗಿ ಬ್ಲ್ಯಾಕ್ ಮೇಲ್ ಮಾಡುತ್ತಿದ್ದಾರೆ. ಹಲವಾರು ಯೂಟ್ಯೂಬ್ ಚಾನೆಲ್‌ಗಳ ಮೂಲಕ ಮಾನಹಾನಿ ಮಾಡಿದ್ದಾರೆ. ಮುಖವಾಡ, ಸಾಮ್ರಾಟ್ ಹೆಸರಿನ ಯೂಟ್ಯೂಬ್ ಚಾನೆಲ್‌ಗಳಲ್ಲೂ ಚಾರಿತ್ರ್ಯ ತೇಜೋವಧೆ ಮಾಡಿದ್ದಾರೆ ಎಂದು ಆನಂದ ಗುರೂಜಿ ಆರೋಪಿಸಿದ್ದಾರೆ.

ಈ ಹಿಂದೆ ಜೈಲು ಸೇರಿದ್ದ ದಿವ್ಯಾ ವಸಂತ

ಕಳೆದ ವರ್ಷ ಹನಿಟ್ರ್ಯಾಪ್ ಪ್ರಕರಣದಲ್ಲಿ ದಿವ್ಯಾ ವಸಂತ ಬಂಧನವಾಗಿತ್ತು. ಇಂದಿರಾನಗರದ ಬ್ಯೂಟಿ ಪಾರ್ಲರ್‌ನಲ್ಲಿ ವಿಡಿಯೋ ಮಾಡಿ ಹಲವರಿಗೆ ಬ್ಲ್ಯಾಕ್ ಮೇಲ್ ಮಾಡಿದ್ದರು. ಈ ಸಂಬಂಧ ಪಾರ್ಲರ್ ಮಾಲೀಕರು ನೀಡಿದ್ದ ದೂರಿನ ಮೇರೆಗೆ ದಿವ್ಯಾ ವಸಂತಳನ್ನು ಬೆಂಗಳೂರು ಪೊಲೀಸರು ಕೇರಳದಲ್ಲಿ ಬಂಧಿಸಿದ್ದರು. ಆ ಬಳಿಕ ಜಾಮೀನಿನ ಮೇಲೆ ಬಿಡುಗಡೆಯಾಗಿತ್ತು.

ಬಂಧನ ಸಾಧ್ಯತೆ

2 ಬಾರಿ ತಮ್ಮ ವಿರುದ್ಧ ಸುದ್ದಿ, ವಿಡಿಯೊ ಪ್ರಸಾರ ಮಾಡದಂತೆ ಆನಂದ್ ಗುರೂಜಿ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ತಡೆಯಾಜ್ಞೆ ನಂತರ ಕೆಲ ಯುಟ್ಯೂಬ್ ಚಾನೆಲ್‌ಗಳಲ್ಲಿ ಸುದ್ದಿ ಪ್ರಸಾರ ಮಾಡಲಾಗಿದೆ. ಜತೆಗೆ 3ನೇ ವ್ಯಕ್ತಿಯಿಂದ ಹಣಕ್ಕೆ ಬೇಡಿಕೆ ಇಟ್ಟಿರುವುದು ಬೆಳಕಿಗೆ ಬಂದಿದೆ. ಆನಂದ ಗುರೂಜಿ ಅವರ ದೂರಿನ ಮೇಲೆ ಪೊಲೀಸರು ದಿವ್ಯಾ ವಸಂತಗೆ ನೋಟಿಸ್ ನೀಡಿದ್ದಾರೆ. ಎಫ್‌ಐಆರ್ ಆಗಿದ್ದು, ಬಂಧಿಸುವ ಸಾಧ್ಯತೆ ಹೆಚ್ಚಿದೆ. ಇನ್ನು ಕೋರ್ಟ್‌ನಿಂದ ತಡೆಯಾಜ್ಞೆ ತಂದ ಬಳಿಕವೂ ವಿಡಿಯೊ ಪ್ರಸಾರ ಮಾಡಿದ್ದ ಕಾರಣಕ್ಕೆ ನ್ಯಾಯಾಂಗ ನಿಂದನೆ ಕೇಸ್ ಕೂಡ ದಾಖಲಾಗುವ ಸಾಧ್ಯತೆ ಇದೆ. ಖಾಸಗಿ ಸುದ್ದಿವಾಹಿನಿಯಲ್ಲಿ ನಿರೂಪಕಿಯಾಗಿದ್ದ ದಿವ್ಯಾ ವಸಂತ ತಿಂಗಳ ಹಿಂದೆ ಕೆಲಸ ಬಿಟ್ಟಿದ್ದಳು. ಇನ್ಸ್ಟಾಗ್ರಾಂ ಮತ್ತು ಇತರ ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್ ಮತ್ತು ವಿಡಿಯೊಗಳ ಮೂಲಕ ಖ್ಯಾತಿ ಪಡೆದಿದ್ದರು. ಈ ಮೊದಲು ಖಾಸಗಿ ಸುದ್ದಿವಾಹಿನಿಯಲ್ಲಿ ಕೆಲಸ ಮಾಡುವಾಗ ಕಡಿಮೆ ಸಂಬಳವಿತ್ತು. ಆಕೆಯು ಐಷಾರಾಮಿ ಜೀವನದ ಆಸೆಗೆ ಬಿದ್ದು ಸುಲಭವಾಗಿ ಹಣ ಸಂಪಾದಿಸಲು ಅಡ್ಡ ಮಾರ್ಗ ತುಳಿದು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಸಾರ್ವಜನಿಕ ಪ್ರಕಟಣೆ

ನನ್ನ ಕಕ್ಷಿದಾರರಾದ **ಶ್ರೀ ಸತೀಶ್** ಸಿ.ಪಿ. ರವರ ತಮ್ಮ ಮಾಲಿಕತ್ವಕ್ಕೊಳಪಟ್ಟ ಈ ಹಿಂದೆ **ಶ್ರೀ ಪ್ರವೀಣ್ ಕುಮಾರ್** ಸ್ವತ್ತಿನ ಹಿಂದಿನ ಮಾಲೀಕರಾದ **ಶ್ರೀ ಅಜಿತ್ ಭೇಡ** ರವರಿಗೆ ಬರೆದುಕೊಟ್ಟು ಬೆಂಗಳೂರು ಕೆಂಗೇರಿ ಉಪನೋಂದಣಾಧಿಕಾರಿಯರ ಕಛೇರಿಯಲ್ಲಿ ದಸ್ತಾವೇಜು ಸಂಖ್ಯೆ 6813/1997-98 ಆಗಿ ನೋಂದಣಿಯಾಗಿರುವ 25-08-1997 ನೇ ದಿನಾಂಕದ ಮೂಲ ಕ್ರಯಪತ್ರವು ಕಳೆದುಹೋಗಿರುತ್ತದೆ.

ಸದರಿ ಮೂಲ ಕ್ರಯಪತ್ರವು ಯಾರಿಗಾದರು ಸಿಕ್ಕಿದ್ದು, ಈ ಕೆಳಕಂಡವರಿಗೆ ಮಾಹಿತಿ ನೀಡಿದ್ದಲ್ಲಿ ಅಥವಾ ಹಿಂದಿರುಗಿಸಿದ್ದಲ್ಲಿ ಸೂಕ್ತ ಬಹುಮಾನ ಕೊಡಲಾಗುವುದು. ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ತೆರನಾದ ಹಕ್ಕಿದ್ದಲ್ಲಿ ಸೂಕ್ತ ಪುರಾವೆಯೊಂದಿಗೆ ಲಿಖಿತ ರೂಪದಲ್ಲಿ ಈ ಕೆಳಕಂಡವರಿಗೆ ತಕ್ಷಣ ಸಲ್ಲಿಸುವುದು.

ಸಹಿ/-

ಮೋಹನದಾಸ ಎನ್., ನ್ಯಾಯವಾದಿ
3944/ಎ, 2ನೇ ಅಡ್ಡರಸ್ತೆ, ಬಿ ಬ್ಲಾಕ್, ರಾಜಾಜಿನಗರ 2ನೇ ಹಂತ, ಸುಬ್ರಹ್ಮಣ್ಯನಗರ, ಬೆಂಗಳೂರು-560 021.
ಸಂ.ದೂ: 9448129391 / 9886776714

LERTHAI FINANCE LIMITED (CIN:L65100KA1979PLC061580)
Registered Office: Barton Centre, Office No. 312/313, Mahatma Gandhi Road, Bangalore 560001, India
Statement of audited Results for the year ended March 31,2025

(Rs. in lakhs, except per equity share data)

Particulars	Quarter ended March 31, 2025 (audited)	Year ended March 31, 2025 (audited)	Quarter ended March 31, 2024 (audited)
Total income from operations (net)	(6.15)	46.93	124.55
Profit / (Loss) from Ordinary activities before tax	(20.90)	(15.09)	105.79
Profit / (Loss) from Ordinary activities after tax	(18.75)	(1.88)	77.35
Profit / (Loss) for the period after tax (after Extraordinary items)	(18.75)	(1.88)	77.35
Equity Share Capital	70.00	70.00	70.00
Reserves (excluding Revaluation Reserve, as shown in the Balance Sheet of previous year)	-	-	-
	(as on 31-Mar-25)	(as on 31-Mar-25)	(as on 31-Mar-24)
Earnings Per Share (before extraordinary items) (of Rs.10/- each) (not annualized):Basic & Diluted	(2.68)	(0.27)	11.05
Earnings Per Share (after extraordinary items) (of Rs.10/- each) (not annualized):Basic & Diluted	(2.68)	(0.27)	11.05

Note : The above is an extract of the detailed format of Quarterly Financial Results filed with the Stock Exchanges under Regulation 33 of the SEBI (Listing Obligations and Disclosure Requirements) Regulations, 2015. The full format of the Quarterly Financial Results are available on the Stock Exchange website www.bseindia.com

Place : Bangalore
Date : 15th May, 2025

For Lerthai Finance Limited
Sd/-
Mr. Shao Xing Max Yang
Chairman and Director
DIN 08114973

CONCEPT

ಕರ್ನಲ್ ಸೋಫಿಯಾ ಖುರೇಷಿ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಮಧ್ಯಪ್ರದೇಶ ಸಚಿವ ವಿಜಯ್ ಶಾ ವಿರುದ್ಧ ಮಹಿಳಾ ಕಾಂಗ್ರೆಸ್ ವತಿಯಿಂದ ಗುರುವಾರ ಪ್ರತಿಭಟನೆ ನಡೆಸಲಾಯಿತು. ಈ ವೇಳೆ ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾರೆಡ್ಡಿ ಸೇರಿದಂತೆ ಪದಾಧಿಕಾರಿಗಳಿದ್ದರು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ತಿರಂಗಾ ಯಾತ್ರೆ

ಆಪರೇಷನ್ ಸಿಂದೂರ ಯಶಸ್ಸಿನ ಹಿನ್ನೆಲೆಯಲ್ಲಿ ಬಿಜೆಪಿ ದೇಶಾದ್ಯಂತ ಕರೆ ನೀಡಿರುವ ತಿರಂಗಾ ಯಾತ್ರೆಯ ಅಂಗವಾಗಿ ಬೆಂಗಳೂರಿನ ಮಲ್ಲೇಶ್ವರದ ಸಿರೂರು ಆಟದ ಮೈದಾನದಲ್ಲಿ ಬೃಹತ್ ಧ್ವಜವನ್ನು ಪ್ರದರ್ಶನ ಮಾಡಲಾಯಿತು.

ಫೋಟೋ: ಸುಧಾಕರ್ ದೇವರಾಜ್

ಸೊಂಪಾದ ಪುಟಗಳು

ಮರೆಯಲಿ ಹ್ಯಾಂಗ ಮರೆವಿನ ಹಂಗ: ಮರೆವು ಒಳ್ಳೆಯದು
ಶಿಶಿರಕಾಲ
ಶಿಶಿರ್ ಹೆಗಡೆ 6


ಹಣ್ಣಿನಲ್ಲೂ ಇದೆ ಕೊಬ್ಬರಿ ಕಾಯಿ' ರುಚಿ!
ಶಶಾಂಕಣ
ಶಶಿಧರ ಹಾಲಾಡಿ 7

ದಾರಿದೀಪೋಕ್ತಿ



ಯಶಸ್ಸಿನ ಬಗ್ಗೆ ಕನಸು ಕಾಣುವುದರಲ್ಲಿ ಅರ್ಥವಿಲ್ಲ. ಅದರ ಬದಲು ಯಶಸ್ಸಿನ ಬಗ್ಗೆ ಕಾರ್ಯಯೋಜನೆ ಸಿದ್ಧಪಡಿಸಿ, ಜಾರಿಗೊಳಿಸುವುದು ಬಹಳ ಮುಖ್ಯ. ಮನಸ್ಸಿನಲ್ಲಿ ಅಂದುಕೊಂಡ ಮಾತ್ರಕ್ಕೆ ಯಾವುದೇ ಯೋಜನೆ ಪೂರ್ಣವಾಯಿತು ಎಂದಲ್ಲ.

ವಕ್ರತುಂಡೋಕ್ತಿ



ಕೆಲವರು ನಮ್ಮನ್ನು ಇಷ್ಟಪಡುವುದಿಲ್ಲ. ಅಂಥವರಿಗೆ ಒಳ್ಳೆಯ ಅಭಿರುಚಿ ಇರುವುದಿಲ್ಲ.

10 ದಿನ 15 ರಾಜ್ಯಗಳಲ್ಲಿ ಜೈಹಿಂದ್ ಸಭೆ

ದೆಹಲಿ: ದೇಶದಾದ್ಯಂತ 15 ರಾಜ್ಯಗಳಲ್ಲಿ ಮೇ 20 ರಿಂದ 30ರವರೆಗೆ ಜೈ ಹಿಂದ್ ಸಭೆ ನಡೆಸುವುದಾಗಿ ಕಾಂಗ್ರೆಸ್ ಗುರುವಾರ ಘೋಷಿಸಿದೆ. ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಮಾಹಿತಿ ಹಂಚಿಕೊಂಡಿರುವ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್, ದೆಹಲಿ, ಬಾರ್ಮರ್, ಶಿಮ್ಲಾ, ಹಲ್ದವಾನಿ, ಪಟ್ನಾ, ಜಬಲ್ಪುರ, ಪುಣೆ, ಗೋವಾ, ಬೆಂಗಳೂರು, ಕೊಚ್ಚಿ, ಗುವಾಹಟಿ, ಕೋಲ್ಕತ್ತ, ಹೈದರಾ ಬಾದ್, ಭುವನೇಶ್ವರ, ಪಠಾನ್‌ಕೋಟ್‌ನಲ್ಲಿ ಜೈಹಿಂದ್ ಸಭೆ ನಡೆಯಲಿದೆ. ಸಭೆಯಲ್ಲಿ ನಿವೃತ್ತ ಸೈನಿಕರು, ಪಕ್ಷದ ನಾಯಕರು, ಸಾರ್ವಜನಿಕರು ಭಾಗಿಯಾಗಲಿದ್ದಾರೆ ಎಂದು ತಿಳಿಸಿದ್ದಾರೆ.

ಫನ್‌ತರಂಗ

- ರಘುಪತಿ ಶೃಂಗೇರಿ -



ಪಹಲ್ಗಾಮ್ ಉಗ್ರರ ದಾಳಿ ಬಳಿಕ ಮೊದಲ ಬಾರಿಗೆ ಶ್ರೀನಗರಕ್ಕೆ ರಕ್ಷಣಾ ಸಚಿವ ರಾಜನಾಥ ಸಿಂಗ್ ಭೇಟಿ

ಗಡಿ ನಿಯಂತ್ರಣಾ ರೇಖೆ ಸೇರಿ ಭದ್ರತಾ ಪರಿಸ್ಥಿತಿಯ ಬಗ್ಗೆ ಸೇನಾಧಿಕಾರಿಗಳಿಂದ ಮಾಹಿತಿ ಸಂಗ್ರಹ

ಮಾಸ್ಟರ್ ಮೈಂಡ್‌ಗಳು ಮುಂದಿನ ಗುರಿ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯಿಂದಾಗಿ 26 ಪ್ರವಾಸಿಗರು ಮೃತಪಟ್ಟ ಬಳಿಕ ಮೊದಲ ಬಾರಿಗೆ ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಶ್ರೀನಗರ ಸೇನಾ ಕಚೇರಿಗೆ ಗುರುವಾರ ಭೇಟಿ ನೀಡಿದ್ದರು. ಭೇಟಿಯ ವೇಳೆ ಗಡಿ ನಿಯಂತ್ರಣಾ ರೇಖೆ ಸೇರಿದಂತೆ ಒಟ್ಟಾರೆ ಭದ್ರತಾ ಪರಿಸ್ಥಿತಿಯ ಬಗ್ಗೆ ಅವರು ಸೇನಾಧಿಕಾರಿಗಳಿಂದ ಮಾಹಿತಿ ಪಡೆದರು.

ಈ ವೇಳೆ ಮಾತನಾಡಿದ ಅವರು, ಉಗ್ರರ ವಿರುದ್ಧದ ಹೋರಾಟದಲ್ಲಿ ಪ್ರಾಣತೆತ್ತ ವೀರ ಯೋಧರಿಗೆ ನನ್ನ ನಮನಗಳು. ಆಪರೇಷನ್ ಸಿಂದೂರ ಬದ್ಧತೆಯಾಗಿದೆ, ಇದು ಉಗ್ರರ ವಿರುದ್ಧದ ಅತಿದೊಡ್ಡ ಕಾರ್ಯಾಚರಣೆಯಾಗಿದೆ. ಭಯೋತ್ಪಾದನೆಯನ್ನು ಕೊನೆಗೊಳಿಸಲು ನಾವು ಯಾವುದೇ ಹಂತಕ್ಕೆ ಬೇಕಾದರೂ ಹೋಗುತ್ತೇವೆ ಎನ್ನುವುದನ್ನು ಸಾರಿದೆ. ನಮ್ಮ ಸೇನೆ ಪಾಕಿಸ್ತಾನಕ್ಕೆ ತಕ್ಕ ಪಾಠ ಕಲಿಸಿದೆ. ಪಾಕಿಸ್ತಾನದಲ್ಲಿ ಅಡಗಿರುವ ಭಯೋತ್ಪಾದಕರು ಮತ್ತು ಅವರ ಮಾಸ್ಟರ್ ಮೈಂಡ್‌ಗಳು ಈಗ ಭಾರತೀಯ ಪಡೆಗಳ ಗುರಿಯಾಗಿದ್ದಾರೆ ಎಂದರು. ಭಾರತ ಎಂದಿಗೂ ಯುದ್ಧವನ್ನು ಬೆಂಬಲಿಸಿಲ್ಲ. ಆದರೆ ನಮ್ಮ ಸಾರ್ವಭೌಮತ್ವದ ಮೇಲೆ ದಾಳಿಯಾದಾಗ ನಾವು ಪ್ರತಿಕ್ರಿಯಿಸುತ್ತೇವೆ. ಕಳೆದ 35-40 ವರ್ಷಗಳಿಂದ ಭಾರತ ಗಡಿಯಾಚೆಗಿನ ಭಯೋತ್ಪಾದನೆಯನ್ನು ಎದುರಿಸಿದೆ. ಪಹಲ್ಗಾಮ್ ದಾಳಿಯ ಬಳಿಕ ಜಮ್ಮು ಮತ್ತು ಕಾಶ್ಮೀರದ ಜನ ಉಗ್ರರು ಮತ್ತು ಪಾಕಿಸ್ತಾನದ ಮೇಲೆ ತೋರಿಸಿರುವ ಸಿಟ್ಟಿನಿಂದಾಗಿಯೇ ಶತ್ರುಗಳನ್ನು ನಾಶ ಮಾಡಲು ಸಾಧ್ಯವಾಯಿತು ಎಂದುಕೊಳ್ಳುತ್ತೇನೆ. ಭಾರತದ ಈ ನಡೆಯನ್ನು ಶತ್ರುಗಳು ಎಂದಿಗೂ ಮರೆಯಲಾರರು ಎಂದರು.

ವಿಶ್ವಸಂಸ್ಥೆ ಅಧಿಕಾರಿಗಳ ಭೇಟಿ: ಭಾರತೀಯ ನಿಯೋಗವು ವಿಶ್ವಸಂಸ್ಥೆಯ ಅಧಿಕಾರಿಗಳನ್ನು ಗುರುವಾರ ಭೇಟಿ ಮಾಡಿದ್ದು, ಭಯೋತ್ಪಾದನಾ ನಿಗ್ರಹ ಸಹಕಾರವನ್ನು ಬಲಪಡಿಸಲು ಕೋರಿದೆ. ಅಲ್ಲದೆ ಲಷ್ಕರ್-ಎ-ತೈಬಾ ಉಗ್ರ ಸಂಘಟನೆಯ ಅಂಗಸಂಸ್ಥೆ ದಿ ರೆಸಿಸ್ಟೆಂಟ್ ಫ್ರಂಟ್ ಅನ್ನು ವಿಶ್ವಸಂಸ್ಥೆಯ ಭಯೋತ್ಪಾದಕ ಸಂಘಟನೆಯ ಪಟ್ಟಿಗೆ ಸೇರಿಸಲು ಆಗ್ರಹಿಸಿದೆ.

ಕೇಂದ್ರ ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರು ಶ್ರೀನಗರ ಸೇನಾ ಕಚೇರಿಗೆ ಗುರುವಾರ ಭೇಟಿ ನೀಡಿದ್ದರು.

ನಾನು ಮಧ್ಯಸ್ಥಿಕೆ ವಹಿಸಿಲ್ಲ

ವಾಷಿಂಗ್ಟನ್: ಭಾರತ ಮತ್ತು ಪಾಕಿಸ್ತಾನ ನಡುವಿನ ಸೇನಾ ಸಂಘರ್ಷವನ್ನು ಕೊನೆಗೊಳಿಸಲು ನೇರವಾಗಿ ಮಧ್ಯಸ್ಥಿಕೆ ವಹಿಸಿದ್ದಾಗಿ ಕಳೆದ ವಾರ ನೀಡಿದ್ದ ಹೇಳಿಕೆಯಿಂದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಿಂದೆ ಸರಿದಿದ್ದಾರೆ. ಕತಾರ್‌ನ ಅಲ್-ಉದೈದ್ ವಾಯುನೆಲೆಯಲ್ಲಿ ಸೈನಿಕರನ್ನು ಉದ್ದೇಶಿಸಿ ಮಾತನಾಡಿದ ಟ್ರಂಪ್, ನಾನು ಮಧ್ಯಸ್ಥಿಕೆ ವಹಿಸಿಲ್ಲ, ಆದರೆ ಕದನ ವಿರಾಮಕ್ಕೆ ಸಹಾಯ ಮಾಡಿದೆ. ಎರಡು ನೆರೆಯ ರಾಷ್ಟ್ರಗಳ ನಡುವಿನ ದ್ವೇಷ ಮುಗಿದಿದೆ. ಅದರ ಬಗ್ಗೆ ಅವರೂ ಸಂತೋಷಪಟ್ಟಿದ್ದಾರೆ. ಸಂಘರ್ಷಗಳನ್ನು ಕೊನೆಗೊಳಿಸುವುದು ತಮ್ಮ ಆದ್ಯತೆಯಾಗಿದ್ದು, ಅವುಗಳನ್ನು ಪ್ರಾರಂಭಿಸುವುದಲ್ಲ ಎಂದು ಹೇಳಿದ್ದಾರೆ.

> ಬೇಜವಾಬ್ದಾರಿ ಮತ್ತು ರಾಕ್ಷಸ ಮನಸ್ಥಿತಿಯ ರಾಷ್ಟ್ರದ ಕೈಯಲ್ಲಿ ಪರಮಾಣು ಶಸ್ತ್ರಾಸ್ತ್ರಗಳು ಸುರಕ್ಷಿತವಾಗಿದೆಯೇ ಎಂದು ನಾನು ಇಡೀ ಜಗತ್ತನ್ನು ಕೇಳುತ್ತೇನೆ. ಪಾಕಿಸ್ತಾನದ ಪರಮಾಣು ಶಸ್ತ್ರಾಸ್ತ್ರಗಳನ್ನು ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆಯ ಮೇಲ್ವಿಚಾರಣೆಗೆ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ.
>
> **- ರಾಜನಾಥ ಸಿಂಗ್,** ರಕ್ಷಣಾ ಸಚಿವ

> ಪಾಕಿಸ್ತಾನವು ಗಡಿಯಾಚೆಗಿನ ಭಯೋತ್ಪಾದನೆಯನ್ನು ವಿಶ್ವಾಸಾರ್ಹವಾಗಿ ಮತ್ತು ಉಗ್ರತ್ವವನ್ನು ಸಂಪೂರ್ಣವಾಗಿ ನಿಲ್ಲಿಸುವವರೆಗೆ ಸಿಂಧೂ ಜಲ ಒಪ್ಪಂದವನ್ನು ಅಮಾನತುಗೊಳಿಸಲಾಗುತ್ತದೆ. ಕಾಶ್ಮೀರದ ಬಗ್ಗೆ ಚರ್ಚಿಸಲು ಉಳಿದಿರುವ ಏಕೈಕ ವಿಷಯವೆಂದರೆ ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಅಕ್ರಮವಾಗಿ ಆಕ್ರಮಿಸಿಕೊಂಡಿರುವ ಭಾರತೀಯ ಪ್ರದೇಶವನ್ನು ಬಿಟ್ಟುಕೊಡುವುದು, ನಾವು ಈ ಚರ್ಚೆಗೆ ಸಿದ್ಧರಿದ್ದೇವೆ.
>
> **- ಡಾ.ಎಸ್.ಜೈಶಂಕರ್,** ವಿದೇಶಾಂಗ ಸಚಿವ



ಉಗ್ರ ತರಬೇತಿ ಕೇಂದ್ರ ಮರು ನಿರ್ಮಾಣ: ಪಾಕ್ ಸಚಿವ ತನ್ವೀರ್

ಇಸ್ಲಾಮಾಬಾದ್: ಆಪರೇಷನ್ ಸಿಂದೂರ ಕಾರ್ಯಾಚರಣೆ ವೇಳೆ ನಾಶವಾಗಿದ್ದ ಉಗ್ರ ತರಬೇತಿ ಕೇಂದ್ರಗಳನ್ನು ಮರು ನಿರ್ಮಾಣ ಮಾಡುವುದಾಗಿ ಪಾಕಿಸ್ತಾನದ ಫೆಡರಲ್ ಸಚಿವ ರಾಣಾ ತನ್ವೀರ್ ಪ್ರತಿಜ್ಞೆ ಮಾಡಿದ್ದಾರೆ. ಮೇ 14ರಂದು ಮುರಿಡ್ಕೆ ಸ್ಥಳಕ್ಕೆ ಭೇಟಿ ನೀಡಿದ್ದ ರಾಣಾ ತನ್ವೀರ್, ಸಂತ್ರಸ್ಥರನ್ನು ಭೇಟಿ ಮಾಡಿದ್ದರು. ಈ ವೇಳೆ ಪಾಕ್ ಸರಕಾರ ಸ್ವಂತ ಖರ್ಚಿನಲ್ಲಿ ಈ ಪ್ರದೇಶವನ್ನು ಪುನರ್ ನಿರ್ಮಿಸಲು ಪ್ರತಿಜ್ಞೆ ಮಾಡಿದೆ ಎಂದು ಹೇಳಿದ್ದಾರೆ. ಆ ಮೂಲಕ ಉಗ್ರ ಸಂಘಟನೆಗಳಿಗೆ ಸರಕಾರ ನೆರವು ನೀಡಲಿದೆ ಎಂದು ಬಹಿರಂಗವಾಗಿಯೇ ಘೋಷಣೆ ಮಾಡಿದ್ದಾರೆ.

ಗಡಿಯಲ್ಲಿ ಮತ್ತೆ ಡ್ರೋನ್ ಸದ್ದು

ರಾಜಸ್ಥಾನದ ಶ್ರೀಗಂಗಾನಗರ ಜಿಲ್ಲೆಯ ಭಾರತ ಮತ್ತು ಪಾಕಿಸ್ತಾನದ ಗಡಿ ಭಾಗದಲ್ಲಿ ಗುರುವಾರ ಡ್ರೋನ್ ಪತ್ತೆಯಾಗಿದೆ. ಬೆಳಗ್ಗೆ 9.45ರ ವೇಳೆಗೆ ಗಡಿ ಭಾಗದಲ್ಲಿ ಡ್ರೋನ್ ಪತ್ತೆಯಾಗಿದ್ದು, ತಕ್ಷಣವೇ ಸ್ಥಳೀಯರು ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಪತ್ತೆಯಾಗಿರುವ ಡ್ರೋನ್, ಸುಮಾರು 5 ರಿಂದ 7 ಅಡಿ ಉದ್ದವಿದೆ. ಕ್ಯಾಮೆರಾ ಹೊಂದಿದ್ದು, ಡ್ರೋನ್ ಪತ್ತೆಯಾದಾಗ ಅದು ನಾಶವಾಗಿತ್ತು ಎಂದು ಬಿಎಸ್‌ಎಫ್ ಅಧಿಕಾರಿಗಳು ತಿಳಿಸಿದರು.

ಮೂವರು ಉಗ್ರರು ಹತ

ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಸೇನಾಪಡೆ ಎನ್‌ಕೌಂಟರ್ ನಡೆಸಿದ್ದು, ಮೂವರು ಉಗ್ರರನ್ನು ಹತ್ಯೆ ಮಾಡಿದೆ. ದಕ್ಷಿಣ ಕಾಶ್ಮೀರದ ಅವಂತಿಪೋ ರಾದ ನಾಡರ್ ಟ್ರಾಲ್ ಪ್ರದೇಶದಲ್ಲಿ ಉಗ್ರರು ಅಡಗಿ ಕುಳಿತಿರುವ ಕುರಿತು ಖಚಿತ ಮಾಹಿತಿ ಲಭ್ಯವಾದ ಹಿನ್ನೆಲೆ ಯಲ್ಲಿ ಭದ್ರತಾ ಪಡೆಗಳು ಕಾರ್ಯಾಚರಣೆಗಿಳಿ ದಿದ್ದವು. ಈ ವೇಳೆ ಪಹಲ್ಗಾಮ್ ದಾಳಿಯಲ್ಲಿ ಭಾಗಿಯಾಗಿದ್ದ ಆಸಿಫ್ ಶೇಖ್, ನಿಜಾರ್ ವಾನಿ, ಯಾವರ್ ಭಟ್ ಎಂಬ ಭಯೋತ್ಪಾದಕರನ್ನು ಕೊಲ್ಲಲಾಗಿದೆ.

14 ಪಾಕ್ ಸೈನಿಕರ ಹತ್ಯೆ

ಆಪರೇಷನ್ ಹರೂಫ್ ಮಿಲಿಟರಿ ವ್ಯಾಯಾಮದ ಸಮಯದಲ್ಲಿ ಪಾಕಿಸ್ತಾನ ಸೇನೆಯ 14 ಸೈನಿಕರನ್ನು ಕೊಂದಿರುವುದಾಗಿ ಬಲೂಚ್ ಲಿಬರೇಶನ್ ಆರ್ಮಿ ತಿಳಿಸಿದೆ. ಮೇ 9ರಂದು ಪಂಜ್‌ಗುರ್ ಜಿಲ್ಲೆಯ ಮಜ್‌ಬೂರಾಬಾದ್‌ನ ಬೋನಿಸ್ತಾನ್‌ನಲ್ಲಿ ಸಂಭವಿಸಿದ ಪ್ರಬಲ ಸ್ಫೋಟದಲ್ಲಿ ಗುಂಡು ನಿರೋಧಕ ವಾಹನ ನಾಶವಾಯಿತು. ದಾಳಿಯಲ್ಲಿ ಎಲ್ಲ 14 ಸೈನಿಕರು ಸಾವನ್ನಪ್ಪಿದರು ಎಂದು ತಿಳಿಸಿದೆ. ದಾಳಿಯ ವೀಡಿಯೊವನ್ನು ಬಿಎಲ್‌ಎ ಬಿಡುಗಡೆ ಮಾಡಿದೆ.

ಪರಮಾಣು ವಿಕಿರಣ ಸೋರಿಲ್ಲ

ಭಾರತ ಮತ್ತು ಪಾಕಿಸ್ತಾನ ನಡುವಿನ ಮಿಲಿಟರಿ ಸಂಘರ್ಷದ ಸಂದರ್ಭದಲ್ಲಿ ಪಾಕಿಸ್ತಾನದಲ್ಲಿರುವ ಪರಮಾಣು ಸೌಲಭ್ಯದಿಂದ ವಿಕಿರಣ ಸೋರಿಕೆ ಬಗ್ಗೆ ಸಾಕಷ್ಟು ಊಹಾಪೋಹಗಳು ಉಂಟಾಗಿದ್ದ ಹಿನ್ನೆಲೆಯಲ್ಲಿ ಅಂತಾರಾಷ್ಟ್ರೀಯ ಪರಮಾಣು ಶಕ್ತಿ ಸಂಸ್ಥೆ ಪಾಕಿಸ್ತಾನಕ್ಕೆ ಭೇಟಿ ನೀಡಿ ಪರಮಾಣು ಸೌಲಭ್ಯಗಳಿರುವ ಸ್ಥಳಗಳಲ್ಲಿ ಪರಿಶೀಲನೆ ನಡೆಸಿದ್ದು, ಪಾಕ್‌ನ ಪರಮಾಣು ಸೌಲಭ್ಯಗಳಲ್ಲಿ ವಿಕಿರಣ ಸೋರಿಕೆಯಾಗಿಲ್ಲ ಅಥವಾ ಬಿಡುಗಡೆಯಾಗಿಲ್ಲ ಎಂದು ಹೇಳಿದೆ.

ಭ್ರಷ್ಟ ಏಳು ಸರಕಾರಿ ಅಧಿಕಾರಿಗಳ ಮನೆಗಳಲ್ಲಿ ಶೋಧ, ಅಪಾರ ಆಸ್ತಿ ಪತ್ತೆ

35 ಕಡೆ ಲೋಕಾಯುಕ್ತ ದಾಳಿ

ಬೆಂಗಳೂರು: ರಾಜ್ಯ ಸರಕಾರದ ವಿವಿಧ ಇಲಾಖೆಗಳ ಅಧಿಕಾರಿಗಳ ಮನೆ ಹಾಗೂ ಕಚೇರಿಗಳ ಮೇಲೆ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿದ್ದಾರೆ. ಸುಮಾರು 150ಕ್ಕೂ ಹೆಚ್ಚು ಲೋಕಾಯುಕ್ತ ಅಧಿ ಕಾರಿಗಳಿಂದ ಏಕಕಾಲಕ್ಕೆ ಏಳು ನಗರಗಳಲ್ಲಿ 35 ಸ್ಥಳಗಳಲ್ಲಿ ದಾಳಿ ನಡೆದಿದೆ.

ತುಮಕೂರು, ಮಂಗಳೂರು, ವಿಯಪುರ, ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಯಾದಗಿರಿಯ ಶಹಾಪುರದಲ್ಲಿನ ಭ್ರಷ್ಟ ಅಧಿಕಾರಿಗಳ ನಿವಾಸ ಹಾಗೂ ಕಚೇರಿ ಮೇಲೆ ದಾಳಿ ಮಾಡಲಾಗಿದೆ. ಬೆಂಗಳೂರಿನ 12 ಕಡೆ, ಬೆಂಗಳೂರು ಗ್ರಾಮಾಂತರ 8, ಯಾದಗಿರಿ 5, ವಿಜಯಪುರ 4, ಮಂಗಳೂರಿನ 4 ಕಡೆಗಳಲ್ಲಿ ಲೋಕಾಯುಕ್ತ ಅಧಿಕಾರಿಗಳು ದಾಳಿ ಮಾಡಿ ದಾಖಲೆ ಪರಿಶೀಲಿಸಿದ್ದಾರೆ.

ರೇಣುಕಾ ಮನೆಯಲ್ಲಿ ಅಪಾರ ಚಿನ್ನಾಭರಣ ಪತ್ತೆ

ಮಂಗಳೂರು ಯು.ಪಿ.ಓ.ಆರ್ ಕಚೇರಿ ಸರ್ವೇ ಸೂಪರ್‌ವೈಸರ್ ಎಂ.ಆರ್.ಮಂಜುನಾಥ ಅವರ ಮೇಲೆ ಲೋಕಾಯುಕ್ತ ದಾಳಿ ನಡೆಸಿದ್ದು, 2.31 ಕೋಟಿ ರು ಸ್ತಿರಾಸ್ತಿ, ಒಟ್ಟು 25.73 ಲಕ್ಷ ರು., ಚರಾಸ್ತಿ, ಒಟ್ಟು 2.56 ಕೋಟಿ ರು., ಮೌಲ್ಯದ ಆಸ್ತಿ ಪತ್ತೆಯಾಗಿದೆ. ವಿಜಯಪುರದ ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಯಮಿತದ ಜಿಲ್ಲಾ ವ್ಯವಸ್ಥಾಪಕರಾದ ರೇಣುಕಾ ಸತಾರ್ಲೆ ಅವರಿಗೆ ಸೇರಿದ 2 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಂಡಿದ್ದು, 1.55 ಕೋಟಿ ರು. ಸ್ತಿರಾಸ್ತಿ, 1.55 ಕೋಟಿ ರು. ಚರಾಸ್ತಿ ಸೇರಿದಂತೆ 3.10 ಕೋಟಿ ರು. ಮೌಲ್ಯದ ಆಸ್ತಿ ಪತ್ತೆಯಾಗಿದೆ. ಅಪಾರ ನಗದು, ಚಿನ್ನಾಭರಣ ಪತ್ತೆಯಾಗಿದೆ. ಯಾದಗಿರಿ ಜಿಲ್ಲೆಯ ಶಹಪುರ ತಾಲೂಕಿನ ತಹಶೀಲ್ದಾರ್ ಉಮಾಕಾಂತ್ ಹಳ್ಳಿ ಅವರ ಮೇಲೆ 4 ಸ್ಥಳಗಳಲ್ಲಿ ಲೋಕಾಯುಕ್ತ ದಾಳಿ ಒಟ್ಟು ಸ್ಥಿರಾಸ್ತಿ 91 ಲಕ್ಷ, 1.07 ಕೋಟಿ ರು. ಚಿರಾಸ್ತಿ ಸೇರಿದಂತೆ 1.98 ಕೋಟಿ ರು. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಈ ವೇಳೆ ಅಪಾರ ಆಸ್ತಿ ಪತ್ತೆಯಾಗಿದೆ.

ಸಿಟಿ ಮಾರ್ಕೆಟ್-1 ಉಪ ವಿಭಾಗದ ಕಾನೂನು ಮಾಪನ ನಿರೀಕ್ಷಕ ಎಚ್.ಆರ್.ನಟರಾಜ್‌ಗೆ ಸೇರಿದ ಒಟ್ಟು 5 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿತ್ತು. 2 ನಿವೇಶನಗಳು, 2 ವಾಸದ ಮನೆಗಳು, 9 ಎಕರೆ ಕೃ ಜಮೀನು ಸೇರಿ 3.13 ಕೋಟಿ ರು. ಸ್ತಿರಾಸ್ತಿ, 81.50 ಲಕ್ಷ ರು. ಚರಾಸ್ತಿ ಸೇರಿದಂತೆ 3.94 ಕೋಟಿ ರು. ಪತ್ತೆಯಾಗಿದೆ.

ವಿನಯ್ ಕುಲಕರ್ಣಿ ವಿರುದ್ಧ ಬಲವಂತದ ಕ್ರಮ ಬೇಡ

ಬೆಂಗಳೂರು: ಮಾಜಿ ಸಂಸದ ಡಿ.ಕೆ.ಸುರೇಶ್ ಸಹೋದರಿಯ ಸೋಗಿನಲ್ಲಿ ಕೋಟ್ಯಂತರ ರುಪಾಯಿ ಮೌಲ್ಯದ ಚಿನ್ನಾಭರಣ ವಂಚಿಸಿದ್ದ ಐಶ್ವರ್ಯಾ ಗೌಡ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ಕಾಯಿದೆಯಡಿ (ಪಿಎಂಎಲ್‌ಎ) ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಜಾರಿ ನಿರ್ದೇಶನಾಲಯಕ್ಕೆ ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಲಕ್ಷದ್ವೀಪಕ್ಕೆ ಹೊರಟಿದ್ದ ಹಡಗು ಮುಳುಗಡೆ

ಮಂಗಳೂರು: ಲಕ್ಷದ್ವೀಪಕ್ಕೆ ಹೊರಟಿದ್ದ ಹಡಗೊಂದು ಮುಳುಗಿದ್ದು, ಸಿಬ್ಬಂದಿಯನ್ನು ಕರಾವಳಿ ಕಾವಲು ಪಡೆ ರಕ್ಷಿಸಿದೆ. ಮೇ 12ರಂದು ಹೊರಟ ಎಂಎಸ್‌ವಿ ಸಲಾಮತ್ ಎಂಬ ಹಡಗು ಮಂಗಳೂರಿನಿಂದ 60 ನಾಟಿಕಲ್ ಮೈಲಿ ದೂರ, ನೈರುತ್ಯಕ್ಕೆ ಮೇ 14ರಂದು ಮಧ್ಯಾಹ್ನ 12 ಗಂಟೆಗೆ ಮುಳುಗಿದೆ ಎಂದು ಅಂದಾಜಿಸಲಾಗಿದೆ. ಈ ಹಡಗು ಮೇ 18ರಂದು ಕಡಮತ್ ದ್ವೀಪ ಸೇರುವ ನಿರೀಕ್ಷೆ ಇತ್ತು.

2 ಸಾವಿರ ರುಪಾಯಿ ಹೆಚ್ಚಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಆದೇಶ

ಅತಿಥಿ ಶಿಕ್ಷಕರು, ಉಪನ್ಯಾಸಕರ ಗೌರವಧನ ಹೆಚ್ಚಳ

ಬೆಂಗಳೂರು: ಶಿಕ್ಷಣ ಇಲಾಖೆ ವ್ಯಾಪ್ತಿಯ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರ ಗೌರವಧನವನ್ನು ಎರಡು ಸಾವಿರ ಹೆಚ್ಚಿಸಿ ರಾಜ್ಯ ಸರಕಾರ ಆದೇಶ ಹೊರಡಿಸಿದೆ. ಪ್ರಾಥಮಿಕ, ಪ್ರೌಢ ಶಾಲೆಯಲ್ಲಿ ಖಾಲಿಯಿರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ಹಾಗೂ ಸರಕಾರಿ ಪಿಯು ಕಾಲೇಜಿನಲ್ಲಿ ಖಾಲಿಯಿರುವ ಉಪನ್ಯಾಸಕ ಹುದ್ದೆಗಳಿಗೆ ಅತಿಥಿ ಉಪನ್ಯಾಸಕರನ್ನು ಗೌರವ ಸಂಭಾವನೆಯೊಂದಿಗೆ ನೇಮಿಸಿಕೊಳ್ಳಲಾಗುತ್ತದೆ. ಅತಿಥಿ ಶಿಕ್ಷಕರು ಮತ್ತು ಉಪನ್ಯಾಸಕರು ಗೌರವಧನ ಹೆಚ್ಚಿಸುವಂತೆ ಆಗ್ರಹಿಸಿ ಈ ಹಿಂದೆ ಪ್ರತಿಭಟನೆ ಮಾಡಿದ್ದರು. ಕಳೆದ ಬಜೆಟ್ ಅಧಿವೇಶನದಲ್ಲಿ ಈ ಬಗ್ಗೆ ಪ್ರತಿಪಕ್ಷಗಳಿಂದ ಒತ್ತಡ ಹೆಚ್ಚಾಗಿತ್ತು. ಇದೀಗ ಅತಿಥಿ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಎರಡು ಸಾವಿರ ರು. ವೇತನ ಹೆಚ್ಚಿಸಿ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ ಆದೇಶ ಹೊರಡಿಸಿದೆ.

→ 4

ಹೆಚ್ಚಳವಾದ ಗೌರವಧನದ ವಿವರ

ಹಂತ	ಹಿಂದಿನ ವೇತನ	ಪರಿಷ್ಕೃತ
ಸರಕಾರಿ ಪ್ರಾಥಮಿಕ ಶಾಲಾ ಅತಿಥಿ ಶಿಕ್ಷಕರು	10,000	12,000
ಸರಕಾರಿ ಪ್ರೌಢ ಶಾಲಾ ಅತಿಥಿ ಶಿಕ್ಷಕರು	10,500	12,500
ಸರಕಾರಿ ಪ.ಪೂ.ಕಾಲೇಜು ಅತಿಥಿ ಉಪನ್ಯಾಸಕರು	12,000	14,000

ಶಾಲೆ ಆರಂಭವಾಗುವುದರೊಳಗೆ ಪಠ್ಯಕ್ರಮ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ಸೂಚನೆ

ಪ್ರಸಕ್ತ ವರ್ಷದಿಂದಲೇ ನೈತಿಕ ಶಿಕ್ಷಣ ಶುರು?

ಬೆಂಗಳೂರು: ಬಹುನಿರೀಕ್ಷಿತ ನೈತಿಕ ಶಿಕ್ಷಣವನ್ನು ಪ್ರಸಕ್ತ ಶೈಕ್ಷಣಿಕ ವರ್ಷದಿಂದಲೇ ಆರಂಭಿಸುವುದು ಬಹುತೇಕ ಖಚಿತವಾಗಿದ್ದು, ಶಾಲೆಗಳು ಆರಂಭವಾಗುವ ವೇಳೆಗೆ ಪಠ್ಯಕ್ರಮ ಸೇರಿದಂತೆ ಎಲ್ಲ ತಯಾರಿಗಳು ಪೂರ್ಣಗೊಳ್ಳಲಿವೆ ಎನ್ನಲಾಗಿದೆ.

ಮೇ 28ರಿಂದಲೇ ಶಾಲೆಗಳು ಆರಂಭಗೊಂಡರೂ, ಜೂನ್ ಅಂತ್ಯದವರೆಗೆ ಸೇತುಬಂಧ ಕಾರ್ಯಕ್ರಮ ನಡೆಯಲಿದೆ. ಆದ್ದರಿಂದ ಪ್ರಸಕ್ತ ಸಾಲಿನ ತರಗತಿ ಆರಂಭಗೊಳ್ಳುವುದು ಜುಲೈ 1ರ ನಂತರ. ರೆಗ್ಯುಲರ್ ತರಗತಿಗಳು ಆರಂಭವಾಗುವ ವೇಳೆ, ನೈತಿಕ ಶಿಕ್ಷಣದ ಪಠ್ಯ ಅಂತಿಮಗೊಳ್ಳಲಿದೆ. ಈ ಸಂಬಂಧ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೂ ಚರ್ಚಿಸಿದ್ದು, ಸಿದ್ದರಾಮಯ್ಯ ಅವರು ಒಪ್ಪಿಗೆ ನೀಡಿದ್ದಾರೆ ಎನ್ನಲಾಗಿದೆ.

ಈಗಾಗಲೇ ಹಲವು ಸುತ್ತಿನ ಸಭೆ ನಡೆಸಿರುವ ಶಿಕ್ಷಣ ಇಲಾಖೆ, ನೈತಿಕ ಶಿಕ್ಷಣದಲ್ಲಿ ಯಾವೆಲ್ಲ ಅಂಶಗಳಿರಬೇಕು ಎನ್ನುವ ಬಗ್ಗೆ ಚರ್ಚಿಸಲಾಗಿದೆ. ಆದರೆ ಈ ಹಿಂದೆ ಬಿಜೆಪಿ ಸರಕಾರದ ಅವಧಿಯಲ್ಲಿ ನೈತಿಕ ಶಿಕ್ಷಣದಲ್ಲಿ ಸೇರಿಸಬೇಕು ಎಂದುಕೊಂಡಿದ್ದ ಧರ್ಮಾಧಾರಿತ ವಿಷಯಗಳಿಗೆ ಅವಕಾಶ ನೀಡಬೇಕೇ? ಬೇಡವೇ? ಎನ್ನುವ ಗೊಂದಲಕ್ಕೆ ಸ್ಪಷ್ಟನೆ ಸಿಕ್ಕಿಲ್ಲ. ಆದ್ದರಿಂದ ತಜ್ಞರೊಂದಿಗೆ ಮತ್ತೊಂದು ಸುತ್ತಿನ ಸಭೆ ನಡೆಸಿ ತೀರ್ಮಾನಿಸುವ ಸಾಧ್ಯತೆಯಿದೆ.

- ಮೊದಲ ಹಂತದಲ್ಲಿ ಪ್ರಾಥಮಿಕ ಶಾಲೆಗೆ ನೈತಿಕ ಶಿಕ್ಷಣ
- ಮುಂದಿನ ವರ್ಷ ಉಳಿದ ತರಗತಿಗಳಲ್ಲಲಿ ಆರಂಭ
- ಎಲ್‌ಕೆಜಿಯಿಂದಲೇ ಆರಂಭವಾಗಲಿ ಎನ್ನುವ ಅಭಿಪ್ರಾಯ ವ್ಯಕ್ತ
- ಮತ್ತೊಂದು ಸುತ್ತಿನ ಸಭೆ ನಡೆಸಲು ಶಿಕ್ಷಣ ಇಲಾಖೆ ತೀರ್ಮಾನ

ಪ್ರಾಥಮಿಕ ಹಂತದಲ್ಲಿ ಆರಂಭ: ನೈತಿಕ ಶಿಕ್ಷಣವನ್ನು ಏಕಕಾಲಕ್ಕೆ ಎಲ್ಲ ತರಗತಿಗಳಿಗೂ ವಿಸ್ತರಣೆ ಮಾಡಿದರೆ ನಿರ್ವಹಣೆ ಕಷ್ಟವಾಗುತ್ತದೆ. ಆದ್ದರಿಂದ ಹಂತ-ಹಂತವಾಗಿ ನೈತಿಕ ಶಿಕ್ಷಣವನ್ನು ವಿಸ್ತರಿಸುವುದು ಸೂಕ್ತ ಎನ್ನುವ ಅಭಿಪ್ರಾಯವನ್ನು ತಜ್ಞರು ನೀಡಿದ್ದಾರೆ. ಪ್ರಸಕ್ತ ವರ್ಷದಿಂದ ಒಂದರಿಂದ ಐದನೇ ತರಗತಿವರೆಗೆ ನೈತಿಕ ಶಿಕ್ಷಣ ತರಗತಿ ಆರಂಭಿಸಿ, ಬಳಿಕ ಮುಂದಿನ ವರ್ಷ ಉಳಿದ ತರಗತಿಗಳಿಗೆ ಆರಂಭಿಸುವುದು ಸೂಕ್ತ ಎನ್ನುವ ಮಾತುಗಳು ಕೇಳಿಬಂದಿವೆ. ಇನ್ನು ಕೆಲವರು ಎಲ್‌ಕೆಜಿಯಿಂದ ತರಗತಿ ಆರಂಭವಾಗಲಿ ಎನ್ನುವ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಯಾವ ರೀತಿ ಮಾಡಿದರೆ ಸೂಕ್ತ ಎನ್ನುವ ಬಗ್ಗೆ ಮತ್ತೊಂದು ಸುತ್ತಿನ ಸಭೆ ನಡೆಸಲು ಶಿಕ್ಷಣ ಇಲಾಖೆ ತೀರ್ಮಾನಿಸಿದೆ ಎನ್ನಲಾಗಿದೆ.

ಹೆಚ್ಚುವರಿ ಅನುದಾನ ಅಗತ್ಯ: ವಾರಕ್ಕೆ ಕನಿಷ್ಠ ಒಂದು ತರಗತಿಯನ್ನು ನೈತಿಕ ಶಿಕ್ಷಣಕ್ಕೆ ಮೀಸಲಿಡಲು ತೀರ್ಮಾನಿಸಿರುವುದರಿಂದ, ಪಠ್ಯಪುಸ್ತಕ ಸೇರಿದಂತೆ ಶಾಲೆಗಳಲ್ಲಿ ಕೆಲ ವಸ್ತುಗಳು ಅಗತ್ಯ ಇವೆ. ಆದ್ದರಿಂದ ಇದಕ್ಕೆ ಹೆಚ್ಚುವರಿ ಅನುದಾನ ಬೇಕಾಗಬಹುದು ಎಂದು ತಜ್ಞರು ಹೇಳಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೊಂದಿಗೆ ಸಚಿವ ಮಧು ಬಂಗಾರಪ್ಪ ಚರ್ಚಿಸಿದ್ದು, ಸಿದ್ದರಾಮಯ್ಯ ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸಿಎಂಗೆ ಗೌಡಾ

ಕೋಲಾರ: ಮುಖ್ಯಮಂತ್ರಿ ಸಿದರಾಮಯ್ಯ ಅವರಿಗೆ ಸಮಾಜ ಸೇವೆಗಾಗಿ ಕೋಲಾರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯು ಗೌರವ ಡಾಕ್ಟರೇಟ್ ಪದವಿ ಘೋಷಿಸಿದೆ.

ಸಂಸ್ಥೆಯಲ್ಲಿ ಗುರುವಾರ ನಡೆದ 15ನೇ ಘಟಿಕೋತ್ಸವದಲ್ಲಿ ಕುಲಾಧಿಪತಿ ಜಿ.ಎಚ್.ನಾಗರಾಜ ಈ ಘೋಷಣೆ ಮಾಡಿದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 2 ಬಾರಿ ಸಮರ್ಪಕವಾಗಿ ಜವಾಬ್ದಾರಿ ನಿರ್ವಹಿಸಿದ್ದು 16 ಬಜೆಟ್ ಮಂಡಿಸಿದ್ದಾರೆ. ಎಲ್ಲ ಜಾತಿ, ಧರ್ಮದವರಿಗೂ 5 ಗ್ಯಾರಂಟಿಗಳನ್ನು ನೀಡುವ ಮೂಲಕ ರಾಜ್ಯದಲ್ಲಿ ಹೊಸ ಭಾಷ್ಯ ಬರೆದಿದ್ದಾರೆ. ಯಾವುದೇ ಸರಕಾರದಿಂದ ಇಂತಹ ಕೆಲಸ ಆಗಿರಲಿಲ್ಲ. ಅವರಿಗೆ ಬಹಳ ಹಿಂದೆಯೇ ಈ ಗೌರವ ಸಲ್ಲಿಸಬೇಕಿತ್ತು. ಇದೀಗ ನಿರ್ಧಾರ ಕೈಗೊಳ್ಳಲಾಗಿದ್ದು ಈ ವಿಷಯ ಇನ್ನೂ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿಲ್ಲ, ಶೀಘ್ರದಲ್ಲೇ ಮೆಡಿಕಲ್ ಕಾಲೇಜಿನ ಗೌರವ ಡಾಕ್ಟರೇಟ್ ವಿಚಾರವನ್ನು ಸಿದ್ದರಾಮಯ್ಯ ಅವರಿಗೆ ತಿಳಿಸುವ ಮೂಲಕ ಅವರು ಕೋಲಾರಕ್ಕೆ ಕಾರ್ಯಕ್ರಮಕ್ಕಾಗಿ ಬಂದಾಗ ಪ್ರದಾನ ಮಾಡಲಾಗುವುದು ಎಂದು ನಾಗರಾಜ್ ಮಾಹಿತಿ ನೀಡಿದರು. ಕಿದ್ವಾಯಿ ಸಂಸ್ಥೆ ವಿಶ್ರಾಂತ ನಿರ್ದೇಶಕಿ ಡಾ.ದೇಶಮಾನೆ ವಿಜಯಲಕ್ಷ್ಮಿ, ಮೆಡಿಕಲ್ ಕಾಲೇಜ್ ಉಪಾಧ್ಯಕ್ಷ ಜೆ.ರಾಜೇಂದ್ರ ಇದ್ದರು.

ಭಾವಚಿತ್ರಕ್ಕೆ ಅವಮಾನ: ಬಂಧನಕ್ಕೆ ಒತ್ತಾಯ

ಮೈಸೂರು: ನಂಜನಗೂಡು ತಾಲೂಕಿನ ಹಲ್ಲರೆ ಗ್ರಾಮದಲ್ಲಿ ಡಾ.ಬಿ.ಆರ್. ಅಂಬೇಡ್ಕರ್ ನಾಮಫಲಕಕ್ಕೆ ಮಣ್ಣು ಬಳಿದು ಅವಮಾನ ಮಾಡಲಾಗಿದೆ. ಕೃತ್ಯವೆಸಗಿದ ಕಿಡಿಗೇಡಿಗಳನ್ನು ಬಂಧಿಸಬೇಕು ಎಂದು ಆಗ್ರಹಿಸಿ ಗ್ರಾಮಸ್ಥರು ಪ್ರತಿಭಟನೆ ನಡೆಸಿದ್ದಾರೆ.

ಹಲ್ಲರೆ ಗ್ರಾಮದಲ್ಲಿ ಕಳೆದ ಕೆಲವು ತಿಂಗಳ ಹಿಂದೆಯಷ್ಟೇ ಅಂಬೇಡ್ಕರ್ ನಾಮಫಲಕ ಅಳವಡಿಸುವ ವಿಚಾರದಲ್ಲಿ 2 ಕೋಮುಗಳ ನಡುವೆ ಘರ್ಷಣೆ ನಡೆದಿತ್ತು. ಅಪಾರ ಪ್ರಮಾಣದ ಹಾನಿ ಉಂಟಾಗಿತ್ತು. 30ಕ್ಕೂ ಹೆಚ್ಚು ಜನರ ಮೇಲೆ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದರು. ಬುಧವಾರ ರಾತ್ರಿ, ಬುದ್ಧ, ಬಸವಣ್ಣ, ಅಂಬೇಡ್ಕರ್ ಇರುವ ನಾಮಫಲಕಕ್ಕೆ ಮಣ್ಣು ಬಳಿದು ನಾಮಫಲಕ ಹರಿದು ಹಾಕಲಾಗಿದೆ. ಇದರಿಂದಾಗಿ ಗ್ರಾಮದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಈಗಾಗಲೇ ಸ್ಥಳಕ್ಕೆ ನಂಜನಗೂಡು ಗ್ರಾಮಾಂತರ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಸಾಲಕ್ಕೆ ಹೆದರಿ ತಂದೆ, ಮಗ ಸಾವು

ಉಡುಪಿ: ಸಾಲಬಾಧೆ ತಂದೆ-ಮಗನನ್ನು ಬಲಿ ಪಡೆದ ಘಟನೆ ಉಡುಪಿಯ ಕೋಟೇಶ್ವರದಲ್ಲಿ ನಡೆ ದಿದೆ. ಸಾಲಕ್ಕೆ ಹೆದರಿ ಮಾಧವ ದೇವಾಡಿಗ ಬಾವಿಗೆ ಹಾರಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಆಗ ತಂದೆಯನ್ನು ಕಾಪಾಡಲು ಹೋದ ಮಗ ಪ್ರಸಾದ್ ಕೂಡ ಬಾವಿಯಲ್ಲಿ ಮುಳುಗಿದ್ದಾನೆ. ದುರಾದೃಷ್ಟವಶಾತ್ ತಂದೆ ಹಾಗೂ ಮಗ ಬಾವಿಯಲ್ಲಿ ಮುಳುಗಿ ದುರ್ಮ ರಣ ಹೊಂದಿದ್ದಾರೆ. ಗಂಡ ಹಾಗೂ ಮಗನ ರಕ್ಷಣೆಗೆ ಮುಂದಾದ ತಾರಾ ದೇವಾಡಿಗ ನೀರಲ್ಲಿ ನಿತ್ರಾಣರಾಗಿ ಗಂಭೀರ ಸ್ಥಿತಿಯಲ್ಲಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೀತಿದ್ದಾರೆ.

ಕೋಟೇಶ್ವರದ ಅಂಕದಕಟ್ಟೆ ಪೆಟ್ರೋಲ್ ಬಂಕ್‌ನಲ್ಲಿ ಕೆಲಸ ಮಾಡುತ್ತಿದ್ದ ಮಾಧವ ದೇವಾಡಿಗ ಹಲವಾರು ಕಡೆ ಸಾಲ ಮಾಡಿದ್ದರು. ಬಡ್ಡಿ ಕಟ್ಟಲಾರದೆ, ಸಾಲ ಪಡೆದ ಹಣ ತೀರಿಸಲಾಗದೆ ಪರಿತಪಿಸುತ್ತಿದ್ದರು. ಗುರುವಾರ ಬೆಳಗಿನ ಜಾವ ಮನೆಯಲ್ಲಿ ಮಲಗಿದ್ದ ಮಾಧವ ದೇವಾಡಿಗ ಬಾವಿಗೆ ಹಾರಿ ಆತ್ಮಹತ್ಯೆ ಯತ್ನಿಸಿದ್ದಾರೆ. ಈ ವಿಚಾರ ತಿಳಿದ ಮಗ ಪ್ರಸಾದ, ತಂದೆಯ ರಕ್ಷಣೆಗಾಗಿ ಬಾವಿಗೆ ಹಾರಿದ್ದಾನೆ. ಇಬ್ಬರು ನೀರಿನಲ್ಲಿ ಮುಳುಗಿ ಸಾವನ್ನಪ್ಪಿದ್ದಾರೆ. ಈ ಬಗ್ಗೆ ಕೋಟ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಜ್ಯದ 35 ಕಡೆ ಲೋಕಾಯುಕ್ತ ದಾಳಿ

← ಮೊದಲಪುಟದಿಂದ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನಗರ ಯೋಜನೆಯ ಹೆಚ್ಚುವರಿ ನಿರ್ದೇಶಕ ಟಿ.ಮುರುಳಿಗೆ ಸೇರಿದ ಒಟ್ಟು 6 ಸ್ಥಳಗಳ ಮೇಲೆ ದಾಳಿ ಮಾಡಿದ್ದು, 3.16 ಕೋಟಿ ರು. ಸ್ತಿರಾಸ್ತಿ, 30.54 ಲಕ್ಷ ರು. ಚರಾಸ್ತಿ ಸೇರಿದಂತೆ ಒಟ್ಟು 3.47 ಕೋಟಿ ರು. ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆ ತಾಲೂಕು ಕಚೇರಿಯ ಎಸ್‌ಡಿಎ ಅನಂತ ಕುಮಾರ್ ಅವರಿಗೆ ಸೇರಿದ ಒಟ್ಟು 4 ಸ್ಥಳಗಳಲ್ಲಿ ಶೋಧನಾ ಕಾರ್ಯ ಕೈಗೊಳ್ಳಲಾಗಿದೆ. ಒಟ್ಟು ಸ್ಥಿರಾಸ್ತಿ 1.51 ಕೋಟಿ ರು., ಒಟ್ಟು ಚರಾಸ್ತಿ 44.84 ಲಕ್ಷ ರು. ಒಟ್ಟು ಆಸ್ತಿ ಮೌಲ್ಯ 1.96 ಕೋಟಿ ರು., ಪತ್ತೆಯಾಗಿದೆ. ತುಮಕೂರಿನ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ ಡಿ.ರಾಜಶೇಖರ್‌ಗೆ ಸೇರಿದ 9 ಸ್ಥಳಗಳಲ್ಲಿ ಲೋಕಾಯುಕ್ತ ದಾಳಿ ನಡೆಸಿದೆ. 3.89 ಕೋಟಿ ರು. ಸ್ಥಿರಾಸ್ತಿ, 1.84 ಕೋಟಿ ರು.ಚರಾಸ್ತಿ ಸೇರಿದಂತೆ 5.74 ಕೋಟಿ ರು. ಆಸ್ತಿ ಪತ್ತೆಯಾಗಿದೆ.

ಬೃಹತ್ ಅಲೆಗೆ ಸಿಲುಕಿ ಹಡಗು ಮುಳುಗಡೆ

ಮಂಗಳೂರು: ಬಂದರಿನಿಂದ ಲಕ್ಷದ್ವೀಪಕ್ಕೆ ಪ್ರಯಾಣಿ ಸುತ್ತಿದ್ದ ಎಂಎಸ್ವಿ ಸಲಾಮತ್ ಎಂಬ ಸರಕು ಹಡಗು ಮಂಗಳೂರಿನ ನೈರುತ್ಯಕ್ಕೆ ಸುಮಾರು 60 ನಾಟಿಕಲ್ ಮೈಲು ದೂರದಲ್ಲಿ ಮುಳುಗಡೆಯಾಗಿದೆ. ಹಡಗಿನಲ್ಲಿದ್ದ ಸಿಬಂದಿಯನ್ನು ಕೋಸ್ಟ್‌ಗಾರ್ಡ್ ಸಿಬಂದಿ ರಕ್ಷಿಸಿದ್ದಾರೆ.

ಈ ಹಡಗು ಮೇ 12 ರಂದು ಮಂಗಳೂರು ಬಂದರಿನಿಂದ ಲಕ್ಷದ್ವೀಪಕ್ಕೆ ಪ್ರಯಾಣ ಬೆಳೆಸಿತ್ತು. ಮೇ 18 ರಂದು ಕಡ್ಮತ್ ದ್ವೀಪವನ್ನು ತಲುಪುವ ನಿರೀಕ್ಷೆಯಿತ್ತು. ಮೇ 14 ರಂದು ಬೆಳಗ್ಗೆ ಭಾರತೀಯ ಕಾಲಮಾನ ಸುಮಾರು 5.30 ರ ವೇಳೆಗೆ ಬೃಹತ್ ಅಲೆಯೊಂದಕ್ಕೆ ಸಿಲುಕಿ ಹಡಗು ಮುಳುಗಡೆಯಾಗಿದೆ. ಆದರೆ ನೈಜ ಕಾರಣ ಇನ್ನೂ ತಿಳಿದು ಬಂದಿಲ್ಲ.

ಹಡಗಿನಲ್ಲಿ ಸಿಮೆಂಟ್ ಮತ್ತು ನಿರ್ಮಾಣ ಸಾಮಗ್ರಿ ಮತ್ತು ಆಹಾರ ವಸ್ತುಗಳು ಇದ್ದವು. ಮುಳುಗುತ್ತಿರುವ ಹಡಗಿನಲ್ಲಿದ್ದ ಸಿಬಂದಿ ಸಣ್ಣ ಡಿಂಗಿ ದೋಣಿಯನ್ನು ಆಶ್ರಯಿಸಿದ್ದು, ವ್ಯಾಪಾರಿ ಹಡಗೊಂದರ ಸಿಬಂದಿ ಇದನ್ನು ಗಮನಿಸಿ ಮಂಗಳೂರಿನ ಭಾರತೀಯ ಕರಾವಳಿ ಕಾವಲು ಪಡೆಗೆ ತಿಳಿಸಿದ್ದಾರೆ. ಗಸ್ತು ತಿರುಗುತ್ತಿದ್ದ ಐಸಿಜಿ ಹಡಗು ವಿಕ್ರಮ್ ಡಿಂಗಿ ದೋಣಿಯಿಂದ ಎಲ್ಲ ಸಿಬ್ಬಂದಿಗಳನ್ನು ರಕ್ಷಿಸಿ ರಕ್ಷಿಸಿ ಪ್ರಥಮ ಚಿಕಿತ್ಸೆ ನೀಡಿ, ಗುರುವಾರ ನವ ಮಂಗಳೂರು ಬಂದರಿಗೆ ಕರೆತಂದಿದ್ದಾರೆ.

ಎಟಿಎಂ ಕದ್ದ ಆರೋಪಿಗೆ ಗುಂಡೇಟು

ಬಳ್ಳಾರಿ: 2 ಕೊಲೆ ಹಾಗೂ 13 ಎಟಿಎಂ ಕಳ್ಳತನ ಸೇರಿದಂತೆ ಸುಮಾರು 30 ಪ್ರಕರಣಗಗಳಲ್ಲಿ ಭಾಗಿಯಾಗಿದ್ದ ಕುಖ್ಯಾತ ಕಳ್ಳನಿಗೆ ಸಿರುಗುಪ್ಪ ಪೊಲೀಸರು ಗುಂಡೇಟು ನೀಡಿದ್ದಾರೆ.

ಆರೋಪಿ ಅಮರೇಶ್ ಗುಂಡೇಟು ತಿಂದ ಆರೋಪಿಯಾಗಿದ್ದಾನೆ. ಆರೋಪಿಯನ್ನು ಪ್ರಕರಣವೊಂದರ ಸ್ಥಳ ಮಹಜರಿಗೆ ಕರೆದೊಯ್ದಿದ್ದಾಗ ಕಾನ್ಸ್‌ಟೇಬಲ್ ಮೇಲೆ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದಾನೆ. ಈ ವೇಳೆ, ಸಿರುಗುಪ್ಪ ಸಿಪಿಐ ಹನುಮಂತಪ್ಪ, ಗಾಳಿಯಲ್ಲಿ ಗುಂಡು ಹಾರಿಸಿ ಎಚ್ಚರಿಕೆ ನೀಡಿದ್ದಾರೆ. ಆರೋಪಿ ಇದನ್ನು ಲೆಕ್ಕಿಸದೇ ಹಲ್ಲೆ ನಡೆಸಿ, ಪರಾರಿಯಾಗಲು ಯತ್ನಿಸಿದ್ದ. ಆಗ ಆತ್ಮರಕ್ಷಣೆಗಾಗಿ ಆರೋಪಿ ಕಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ.

ಆರೋಪಿ ಅಮರೇಶ್ ಕರ್ನಾಟಕ ಹಾಗೂ ಆಂಧ್ರದ ಎರಡೂ ರಾಜ್ಯಗಳಲ್ಲಿ ಕಳ್ಳತನ ಮಾಡುವಾಗ ಕೊಲೆ ಮಾಡಿದ್ದ. ಈತನ ಮೇಲೆ ಎರಡು ಕೊಲೆ, 6 ಡಕಾಯಿತಿ, 13 ಎಟಿಎಂ ಕಳ್ಳತನದಲ್ಲಿ ಭಾಗಿಯಾದ ಆರೋಪಗಳಿವೆ. ಘಟನೆಯಲ್ಲಿ ಪೇದೆ ವಿರೂಪಾಕ್ಷ ಗೌಡ ಹಾಗೂ ಮಾರುತಿಯವರಿಗೆ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಾಗಿದ್ದಾರೆ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ ಇಲಾಖೆ
ಕಾರ್ಯಪಾಲಕ ಇಂಜಿನಿಯರ್‌ವರ ಕಛೇರಿ, ವಿಶೇಷ ವಿಭಾಗ, ಮೈಸೂರು

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ ಸಂಖ್ಯೆ : 02/2025–26
2ನೇ ಕರೆ ದಿನಾಂಕ: 09.05.2025

ಕರ್ನಾಟಕ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರ್ ಲೋಕೋಪಯೋಗಿ ಇಲಾಖೆ, ವಿಶೇಷ ವಿಭಾಗ, ಮೈಸೂರು ಇವರಿಂದ ಮೈಸೂರಿನ ಸರ್ಕಾರಿ ಭವನ ಒಳಭಾಗ ಮತ್ತು ಹೊರ ಭಾಗಕ್ಕೆ ಬಣ್ಣ ಹಚ್ಚುವ ಕಾಮಗಾರಿ. (ಇಂಡೆಂಟ್ ನಂ.20614) ಕಾಮಗಾರಿಗೆ ಲೆಕ್ಕ ಶೀರ್ಷಿಕೆ **4059–80–051–0–29–386** ಇಲಾಖಾ ಕಟ್ಟಡಗಳ ನಿರ್ಮಾಣ ಅಡಿಯಲ್ಲಿ **KW-3** ರ ನಿಬಂಧನೆ ಮತ್ತು ಷರತ್ತುಗಳನ್ವಯ ಕರ್ನಾಟಕ–ಪ್ರೋಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಅಲ್ಪಾವಧಿ ಐಟಂವಾರು ಟೆಂಡರ್‌ನ್ನು **(http://KPPP.karnataka.gov.in)** ಆಹ್ವಾನಿಸಲಾಗಿದ್ದು, ಟೆಂಡರ್ ಕ್ಲೇರೀಸ್ ಗೆ **ದಿನಾಂಕ:16.05.2025** ಆಗಿರುತ್ತದೆ. ಟೆಂಡನ್ನು **ದಿನಾಂಕ: 17.05.2025** ರಂದು ಸಂಜೆ 4.00 ಘಂಟೆವರೆಗೆ ಸಲ್ಲಿಸಬಹುದಾಗಿರುತ್ತದೆ. ಕಾಮಗಾರಿಯ ಟೆಂಡರ್‌ಗೆ ಇಟ್ಟ ಮೊತ್ತ **ರೂ.58.077** ಲಕ್ಷಗಳು ಹಾಗೂ ಇ.ಎಂ.ಡಿ.ಯ ಮೊತ್ತ **ರೂ.1.17** ಲಕ್ಷಗಳಾಗಿರುತ್ತದೆ. ಲೋಕೋಪಯೋಗಿ 3ನೇ ದರ್ಜೆ ಮತ್ತು ಮೇಲ್ಪಟ್ಟ ಲೋಕೋಪಯೋಗಿ ಗುತ್ತಿಗೆದಾರರು ಭಾಗವಹಿಸಬಹುದಾಗಿರುತ್ತದೆ. ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ,
ವಿಶೇಷ ವಿಭಾಗ, ನಝರ್‌ಬಾದ್, ಮೈಸೂರು
DIPR/DDMYS/171/KSMCA/144/2025-26

ಎಸ್.ವಿ.ಸಿ. ಕೋ – ಆಪರೇಟಿವ್ ಬ್ಯಾಂಕ್ ಲಿ.
ಪ್ರಧಾನ ಕಚೇರಿ : ಕಾನೂನು ಮತ್ತು ವಸೂಲಾತಿ ವಿಭಾಗ
ಎಸ್.ವಿ.ಸಿ. ಟವರ್, ನೆಹರು ರಸ್ತೆ, ವಕೋಲಾ, ಸಾಂಟಾಕ್ರೂಜ್ (ಪೂರ್ವ), ಮುಂಬೈ–400055.

ಸತಾರಾ ಶಾಖೆ : ಜಿ3 & ಜಿ4, ರಾಜಭೋಸಲೆ ಹೈಟ್ಸ್, ಎಸ್.ಟಿ ಸ್ಟ್ಯಾಂಡ್ ಹಿಂಭಾಗ ಹಳೆಯ ಆರ್‌ಟಿಒ ರಸ್ತೆ, ಸಾದರ್‌ಬಜಾರ್, ಸತಾರಾ. ದೂರವಾಣಿ ಸಂಖ್ಯೆ.02162–226868/69

ಸ್ಥಿರಾಸ್ತಿಯ ಮಾರಾಟಕ್ಕಾಗಿ ನೀಡಲಾಗಿರುವ ಇ–ಹರಾಜು ಸೂಚನೆ

ಹಣಕಾಸು ಸ್ವತ್ತು ಆಧಾರೀಕರಣ ಮತ್ತು ಪುನರ್‌ನಿರ್ಮಾಣ ಹಾಗೂ ಭದ್ರತಾ ಹಿತಾಸಕ್ತಿ ಜಾರಿ ಅಧಿನಿಯಮ 2002ರ ಅನ್ವಯ ಮತ್ತು ಭದ್ರತಾ ಹಿತಾಸಕ್ತಿ 2002ರ ಅಧಿನಿಯಮದ ನಿಯಮ8(6) ಅನ್ನು ಓದಿಕೊಂಡಂತೆ ಪ್ರಕರಣದ ಅನ್ವಯ ನೀಡಲಾಗಿರುವ ಇ–ಹರಾಜು ಮಾರಾಟ ನೋಟೀಸ್. ಸಮಸ್ತ ಸಾರ್ವಜನಿಕರಿಗೆ ಹಾಗೂ ಸಾಲಗಾರರಿಗೆ ಮತ್ತು ಜಾಮೀನುದಾರರಿಗೆ ಈ ನೋಟೀಸ್ ನೀಡುವ ಮೂಲಕ ತಿಳಿಸುವುದೇನೆಂದರೆ ಈ ಕೆಳಗೆ ತಿಳಿಸಿರುವ ಅಡಮಾನವಿಟ್ಟಿರುವ /ಅಧಿನದಲ್ಲಿರುವ ಸ್ಥಿರಾಸ್ತಿಯನ್ನು ಭದ್ರತಾ ಸಾಲದಾತರಾದ ಎಸ್‌ವಿಸಿ ಕೋ–ಆಪರೇಟೀವ್ ಬ್ಯಾಂಕ್ ಲಿ., (ಈ ಮೊದಲು ದಿ ಶಾಮರಾವ್ ವಿಠಲ್ ಕೋ–ಅಪೇರೇಟಿವ್ ಬ್ಯಾಂಕ್ ಲಿ.,)ನ ಅಧಿಕೃತ ಅಧಿಕಾರಿಗಳು ಭೌತ್ತಿಕವಾಗಿ ಸ್ವಾಧೀನಕ್ಕೆ ತೆಗೆದುಕೊಂಡಿದ್ದು ಸಾಲಗಾರ/ಅಡಮಾನದಾರರು/ಜಾಮೀನುದಾರರು : 1. ಮೆ॥ ಫ್ಲೀಟಿನ್ವೆಲಿ ಸರ್ವ್ ಪ್ರೈ ಲಿಮಿಟೆಡ್, ನೋಂದಾಯಿತ ಕಚೇರಿ ಎಂ –2, ಇನ್ಲ್ಯಾಂಡ್ ಅವೆನ್ಯೂ, ಕಮರ್ಷಿಯಲ್ ಕಾಂಪ್ಲೆಕ್ಸ್ ಬಿಲ್ಡಿಂಗ್, ಕೊಡಿಯಾಲಬೈಲ್, ಮಂಗಳೂರು 575002 ಮತ್ತು 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು ಎಸ್ ಟಿ ಪಿ ಐ, 4ನೇ ಮಹಡಿ, ಐ ಟಿ ಪಾರ್ಕ್, ಹುಬ್ಬಳ್ಳಿ – 580020 ಮತ್ತು 825, 12ನೇ ಅಡ್ಡ ರಸ್ತೆ, ಕಲಾಂತ್ರ ಟೆಕ್ನಾಲಜಿ, ಸಿದ್ದಾರ್ಥ್ ಲೇಔಟ್, ಮೈಸೂರು, ಕರ್ನಾಟಕ ಮತ್ತು ಯೂನಿಟ್ ನಂ. 2 ಮತ್ತು 3, ಮೇಲಿನ ನೆಲ ಮಹಡಿ, ರುಕ್ಮಿಣಿ ಕುಂಜ್ ಅಪಾರ್ಟ್ಮೆಂಟ್, ಸಿ ಎಸ್ ನಂ.599 ರಲ್ಲಿ ನಿರ್ಮಾಣಗೊಂಡಿದೆ, ಗುರುವಾರ್ ಪೇಟ್, ಸತಾರ, 2. ಶ್ರೀಮತಿ ಗುಡಿಬಂಡೆ ಸುಬ್ಬ ರಾವ್ ಶಿವರಂಜನಿ, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು 98, ಮೈಕೋ ಲೇಔಟ್, ಅರಕೆರೆ, ಬೆಂಗಳೂರು – 560076. ಮತ್ತು c/o ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೇ ಕ್ರಾಸ್, 19ನೇ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೇ ಹಂತ, ಬೆಂಗಳೂರು, ಕರ್ನಾಟಕ–560070. 3. ಶ್ರೀಮತಿ ನಾಗಜ್ಯೋತಿ ಗುಡಿಬಂಡೆ ಸುಬ್ಬ ರಾವ್, ವಿಳಾಸ : ನ್ಯೂ ಲಕ್ಷ್ಮೀಪುರ ಎಕ್ಸಟೆನ್ಶನ್, ಮಂಚನಹಳ್ಳಿ, ಗೌರಿಬಿದನೂರು, ಚಿಕ್ಕಬಳ್ಳಾಪುರ – 562211, 4. ಶ್ರೀ ರಘುರಾಮ್ ರಾವ್, ವಿಳಾಸ : 505/ಎ/13, ಎಲ್ ಐ ಸಿ ಕಾಲೋನಿ, ಸಾದರ್ ಬಜಾರ್ ತಾಲೂಕು ಮತ್ತು ಸತಾರ ಜಿಲ್ಲೆ, ಮತ್ತು c/o ಸಂದೀಪ್ ಕುಮಾರ್ ಕುಲ್ಕರ್ಣಿ, 78, ಸುಪರ್ಣ, 6ನೇ ಕ್ರಾಸ್, 19ನೇ ಮೇನ್, ಸಿ ಟಿ ಬೆಡ್, ಟಿ ಆರ್ ನಗರ ಪೊಲೀಸ್ ಸ್ಟೇಷನ್ ಹತ್ತಿರ, ಬನಶಂಕರಿ 2ನೇ ಹಂತ, ಬೆಂಗಳೂರು, ಕರ್ನಾಟಕ–560070 ಮತ್ತು 98, ಮೈಕೋ ಲೇಔಟ್, ಅರಕೆರೆ, ಬೆಂಗಳೂರು–560076. ಬ್ಯಾಂಕಿಗೆ ನೀಡಬೇಕಾದ ಬಾಕಿ ಮೊತ್ತ ದಿನಾಂಕ: 31.12.2024ರಂತೆ ರೂ.10,83,214.50 (ಹತ್ತು ಲಕ್ಷ ಎಂಭತ್ಮೂರು ಸಾವಿರದ ಎರಡುನೂರಾ ಹದಿನಾಲ್ಕು ಮತ್ತು ಪೈಸೆ ಐವತ್ತು ರೂಪಾಯಿಗಳು ಮಾತ್ರ) ಜೊತೆಗೆ 01.01.2025ರಿಂದ ಬಡ್ಡಿ, ಕಾನೂನು ವೆಚ್ಚ ಮತ್ತು ಇತರೆ ಖರ್ಚುಗಳು ಸೇರಿದಂತೆ ಬಾಕಿಮೊತ್ತವನ್ನು ಪಾವತಿಸದೇ ಇರುವ ಕಾರಣ ಅಡಮಾನವಿಟ್ಟಿರುವ ಆಸ್ತಿಯನ್ನು "ಎಲ್ಲಿದೆಯೋ ಹಾಗೆ" "ಏನಿದೆಯೋ ಹಾಗೆ" "ಹೇಗಿದೆಯೋ ಹಾಗೆ" ಮತ್ತು "ಜಾವಾಬ್ದಾರಿ ರಹಿತ" ಆಧಾರದಲ್ಲಿ ದಿನಾಂಕ: 06.06.2025 ರಂದು ಇ–ಹರಾಜಿನ ಮೂಲಕ ಮಾರಾಟ ಮಾಡಲು ಉದ್ದೇಶಿಸಿ ಈ ನೋಟೀಸನ್ನು ನೀಡಿರುತ್ತಾರೆ.

ಆಸ್ತಿಯ ಮೀಸಲು ಬೆಲೆ: ರೂ. 11,00,000/– (ಹನ್ನೊಂದು ಲಕ್ಷ ರೂಪಾಯಿಗಳು ಮಾತ್ರ) ಮತ್ತು ಮುಂಗಡ ಠೇವಣಿ ಹಣ (ಇಎಂಡಿ) ಮೊತ್ತ: ರೂ. 1,10,000/– (ಒಂದು ಲಕ್ಷ ಹತ್ತು ಸಾವಿರ ರೂಪಾಯಿಗಳು ಮಾತ್ರ)

ಸ್ಥಿರಾಸ್ತಿಯ ವಿವರ

ಎಲ್ಲ ಭಾಗಗಳು ಮತ್ತು ಭಾಗಾಂಶಗಳು ಸೇರಿ ವಾಣಿಜ್ಯ ಆವರಣ ನಂ. ಎಂ –2, ಕಾರ್ಪೋರೇಶನ್ ಡೋರ್ ನಂ. 4–1–85/18, ವಿಸ್ತೀರ್ಣ ಅಂದಾಜು 190 ಚದರ ಅಡಿಗಳು, ಮೆಜಾನಿನ್ ಮಹಡಿಯಲ್ಲಿದೆ (ನೆಲಮಹಡಿಯ ಒಂದು ಭಾಗ), ಇನ್ಲ್ಯಾಂಡ್ ಅವೆನ್ಯೂ ಕಮರ್ಷಿಯಲ್ ಕಾಂಪ್ಲೆಕ್ಸ್ ನಲ್ಲಿದೆ, ಜೊತೆಗೆ ಶೇ 0.30 ಅವಿಭಜಿತ ಪಾಲು ಸಾಮಾನ್ಯ ಪ್ರದೇಶಗಳಲ್ಲಿ ಮತ್ತು ಕಟ್ಟಡದ ಸೌಲಭ್ಯಗಳಲ್ಲಿ, ಕೆಳಗಿನ ಪಾಲುಗಳು ಸೇರಿ :

Item No.	R.S.No.	T.S.No.	Kissam	Extent A.C.
1	394	227/1(p)	Converted	0-35
2	394-2	227/2(P)	Converted	0-08
3	394-1	227/1(p)	Converted	0-01

ಮಾರಾಟದ ಸಂಪೂರ್ಣ ಷರತ್ತು ಮತ್ತು ನಿಯಮಗಳನ್ನು ಭದ್ರತಾ ಸಾಲದಾತರಾದ ಎಸ್‌ವಿಸಿ ಕೋ–ಆಪರೇಟೀವ್ ಬ್ಯಾಂಕ್ ಲಿ., ಒದಗಿಸಿರುವ ವೆಬ್‌ಸೈಟ್: https://www.svcbank.com/Notice-Sale ಲಿಂಕ್‌ನಲ್ಲಿ ಪಡೆಯಲು ಕೋರಲಾಗಿದೆ.

ವಿಳಾಸ : ಕೊಡಿಯಾಲಬೈಲ್ ಗ್ರಾಮ, ಮಂಗಳೂರು ತಾಲೂಕು, ಕೊಡಿಯಾಲಬೈಲ್ ವಾರ್ಡ್, ಮಂಗಳೂರು ಮಹಾನಗರ ಪಾಲಿಕೆ ಮತ್ತು ನೋಂದಣಿ ಉಪ ಜಿಲ್ಲಾ, ಮಂಗಳೂರು ವ್ಯಾಪ್ತಿಯಲ್ಲಿ

ದಿನಾಂಕ : 15.05.2025
ಸ್ಥಳ : ಬೆಂಗಳೂರು

ಸಹಿ/–
(ಸಾರಥಿ ಸೊಮಯ್ಯ)
ಅಧಿಕೃತ ಅಧಿಕಾರಿಗಳು & ಸಹಾಯಕ ಮಹಾ ಪ್ರಬಂಧಕರು,
ಬೆಂಗಳೂರು ದಕ್ಷಿಣ ಪ್ರದೇಶ

ಚೆಮ್ ಫೈನಾನ್ಸ್ ಲಿ.
No.19, KCD Complex, 3rd Cross, Mission Road, Bangalore-27. Tel: 22221066, 22221115
ಚಿನ್ನದ ಹರಾಜು ಸೂಚನೆ

ಸಾಲಗಾರರು ಮತ್ತು ಸಾರ್ವಜನಿಕರು, ಈ ಕೆಳಗಿನ ಖಾತೆಗಳಲ್ಲಿ ಅಡವಿಟ್ಟ ಚಿನ್ನಾಭರಣಗಳ ಸಾರ್ವಜನಿಕ ಹರಾಜನ್ನು ಈ ಕೆಳಗಿನ ದಿನಾಂಕಗಳಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ಸೂಚಿಸಲಾಗಿದೆ. ನೋಂದಾಯಿತ ಪತ್ರಗಳ ಮೂಲಕ ತಿಳಿಸಲಾಗಿದ್ದರೂ ಸಾಲದ ಮೊತ್ತವನ್ನು ಪಾವತಿಸಲು ವಿಫಲರಾದ ಡೀಫಾಲ್ಟ್ ಮಾಡಿದ ಗ್ರಾಹಕರ ಚಿನ್ನಾಭರಣಗಳ ಹರಾಜು ಮಾಡಲಾಗುವುದು. ಹೆಚ್ಚಿನ ವಿವರಗಳಿಗಾಗಿ ದಯವಿಟ್ಟು ಶಾಖಾ ವ್ಯವಸ್ಥಾಪಕರನ್ನು ಸಂಪರ್ಕಿಸಿ.

02.06.2025 : **ಚಿಂತಾಮಣಿ:** CND-9693, 9700, 9741, 9757, 9844, 9876, 9886, 10933. **ಮಂಡ್ಯ:** MDY 9563, 9685. **ಮಾರತ್ತ ಹಳ್ಳಿ:** MRT 7325, 7329, 7407, 7409, 7551, 7969, 8075, 8108, 8241, 8318, 8319, 8320, 8321, 8116, 8102. **ಯಲಹಂಕ :** YHA - 411, 585. **03.06.2025** : **ಹೊಸಕೋಟೆ :** HKT-12340, 12395, 12458, 12459, 12526, 12527, 12565, 12613, 12715, 12755, 12764, 12776, 12786, 12839, 12850. **ರಾಮನಗರ :** RMN - 652, 754, 756. **ಭಟ್ಕಳ :** BTK -1235, 1237, 1494. **ದಾಸರ ಹಳ್ಳಿ:** DSR - 6457, 6489, 6539. **05.06.2025** : **ಬೊಮ್ಮನಹಳ್ಳಿ:** BMH 231, 474. **ದೊಡ್ಡಬಳ್ಳಾಪುರ:** DBP 13665, 13687, 13702, 13739, 13758, 13761. **ಕೆ. ಆರ್. ಪುರಂ :** KRP - 9232, 9380, 9412, 9561, 10316, 10318, 10457. **ಮೈಸೂರು - ಕೊಪ್ಪಳ :** MYS2 113. **06.06.2025** : **ಬಸವನಗರ:** BSV - 3341, 3705. **ಚಾಮರಾಜನಗರ:** CMR 12267, 12369, 12237, 12346, 12105, 12475, 12411, 12530, 12488, 13749, 14158. **ತಿಪ್ಪಸಂದ್ರ :** TIP - 5581. **ಚಿಕ್ಕ ಬಳ್ಳಾಪುರ :** CHK 3962, 4509. **ಸುಂಕದಕಟ್ಟೆ:** SKT - 247, 254, 682, 717. **ಹುಬ್ಬಳ್ಳಿ :** HBL - 2788, 2831. **ತುಮಕೂರು :** TMK - 4052. **ಮೈಸೂರು** MYS 4740. **ಮಾಲೂರು:** MLR - 11005, 10942.

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯತ್ ಶಿವಮೊಗ್ಗ
ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ
ನಂ.ಕಾಇಂ/ಪಂರಾಇಂ/ವಿಸಾ ಸೊರಬ/KW-4/ಎಇ/ಜೆಇ/2025–26/173
ದಿನಾಂಕ:– 09.05.2025

ಟೆಂಡರ್ ಪ್ರಕಟಣೆ ("ಕೆ.ಪಿ.ಪಿ.ಪಿ" ಮೂಲಕ)

ಈ ವಿಭಾಗದಿಂದ 2025–26 ನೇ ಸಾಲಿನಲ್ಲಿ ವಿವೇಕಾ ಶಾಲಾ ಸೌಲಭ್ಯ ಯೋಜನೆಯಡಿಯಲ್ಲಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಐಟಂ ವಾರು ದರಗಳನ್ನು ನಮೂದಿಸಲು ಕರ್ನಾಟಕ ರಾಜ್ಯಪಾಲರ ಪರವಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್/ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಹಾಗೂ " ಕೆ.ಪಿ.ಪಿ.ಪಿ " ಸಂಸ್ಥೆಯಲ್ಲಿ ನೋಂದಾಯಿಸಲ್ಪಟ್ಟ ಗುತ್ತಿಗೆದಾರರಿಂದ ಇಲಾಖಾ ನಿಯಮಾವಳಿಯ ಮೇರೆಗೆ ಕೆ.ಪಿ.ಪಿ.ಪಿ" ಮುಖಾಂತರ ಐಟಂವಾರು ಟೆಂಡರ್‌ಗಳನ್ನು Standard Document for procurement of work K/W-1,2&3 ರ ನಮೂನೆಯಲ್ಲಿ ಆಹ್ವಾನಿಸಲಾಗಿದೆ. ಫಾರಂ ಫೀ & ಇ.ಎಂ.ಡಿ.ಯನ್ನು 'ಇ' ಪೇಮೆಂಟ್‌ನಲ್ಲಿ (Credit Card/Direct Debit/NEFT & OTC) ಚಲನ್ ಮೂಲಕ ಭರ್ತಿ ಮಾಡುವ ಗುತ್ತಿಗೆದಾರರು ಕೊನೆಯ ದಿನಾಂಕಕ್ಕಿಂತ ಎರಡು ದಿನ ಮುಂಚಿತವಾಗಿ ಸಲ್ಲಿಸುವುದು.

1) ಟೆಂಡರ್ ಫಾರಂ ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ:09.05.2025 ರಿಂದ 29.05.2025 ರವರೆಗೆ 2) ಟೆಂಡರ್ ಫಾರಂ ಸಲ್ಲಿಸಲು ಕೊನೆಯ ದಿನಾಂಕ: 29.05.2025 ಸಮಯ 17:00:00 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.05.2025 ಸಮಯ 17:01:00. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 09–06–2025 ಸಮಯ 11:00:00.

ಕೆ.ಪಿ.ಪಿ.ಪಿ ವೆಬ್‌ಸೈಟ್ ಟೆಂಡರಿನ ವಿವರಗಳನ್ನು ಈ ಕಛೇರಿಯ ಕಾರ್ಯನಿರ್ವಾಹಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಸಾಗರ ಇವರ ಕಛೇರಿಯನ್ನು ಸಂಪರ್ಕಿಸುವುದು ಮತ್ತು ಕೆ.ಪಿ.ಪಿ.ಪಿ ವೆಬ್ ಸೈಟ್ (www.kppp.gov.in) ನಲ್ಲಿ ನೋಡಬಹುದು ಹಾಗೂ ಡೌನ್‌ಲೋಡ್ ಮಾಡಿಕೊಳ್ಳಬಹುದು. ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯ ದೂರವಾಣಿ ಸಂಖ್ಯೆ: 08183–226064 ಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರಿಂದ ಪಡೆಯಬಹುದು ಅಥವಾ hphelpdesk ದೂರವಾಣಿ ಸಂಖ್ಯೆ: 080–25501216, 25501227 ಇವರನ್ನು ಸಂಪರ್ಕಿಸುವುದು.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ.ವಿಭಾಗ, ಸಾಗರ,
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/25–26/80/05/237

ಗುಲಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಿನ್ ಸಂಖ್ಯೆ: U04010KA2002SGC030436

ಸಂಖ್ಯೆ: ಗುವಿಸಕಂನಿ/ಅಅ(ವಿ)(ಖರೀದಿ)/ ಕಾನಿಇಂ/ಸಕಾನಿಇಂ/2025–26/ 9130–9135 ದಿನಾಂಕ:15.05.2025

:: ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ) ::

ಗು.ವಿ.ಸ.ಕಂ.ನಿ.ಯ ನಿರ್ದಿಷ್ಟತೆಯಂತೆ ಕೆಳಗೆ ತಿಳಿಸಲಾದ ಸುರಕ್ಷತಾ ಸಾಮಗ್ರಿಗಳ ಪೂರೈಕೆ ಮಾಡುವುದು.
ಪಿಸಿ–1400 (ಕರೆ–2): 16 ಫೀಟ್ ಎಫ್‌ಆರ್‌ಪಿ ಟೆಲಿಸ್ಕೋಪಿಕ್ ಡಿಸ್ ಚಾರ್ಜ ರಾಡ್ (3 ಸ್ಟೇಜಸ್) (ಟೆಂಡರ್ ಮೊತ್ತ: **157.6 ಲಕ್ಷಗಳು)**
ದಿನಾಂಕ: ಕೆಪಿಪಿಪಿ ಪೋರ್ಟಲ್ ಬಿಡ್ ದಾಖಲೆಗಳು ಲಭ್ಯವಿರುವ ದಿನಾಂಕ: **17.05.2025** ರಂದು ಅಥವಾ ನಂತರ. ಟೆಂಡರ್ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ, ತಾಂತ್ರಿಕ ಬಿಡ್ ತೆರೆಯುವ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: ಕೆ.ಪಿ.ಪಿ ಪೋರ್ಟಲ್‌ನಲ್ಲಿರುವಂತೆ.
ಬಿಡ್ಡುದಾರರ ಅರ್ಹತೆ ವಿವರ: ಟೆಂಡರ್ ದಸ್ತಾವೇಜು (ಐ.ಎಫ್.ಬಿ) ಪ್ರಕಾರ, ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ,: ಅಧೀಕ್ಷಕ ಅಭಿಯಂತರರು (ವಿ), ಖರೀದಿ, ನಿಗಮ ಕಾರ್ಯಾಲಯ, ಗು.ವಿ.ಸ.ಕಂ.ನಿ. ಕಲಬುರಗಿ–585 102. ಮೊ.ಸಂ: 94484 99997. ಅಂತರ್ಜಾಲತಾಣದ ವಿಳಾಸ: www.kppp.karnataka.gov.in.KPP ಪೋರ್ಟಲ್‌ನ ಬಗ್ಗೆ ಮಾಹಿತಿಗಾಗಿ ಸಹಾಯವಾಣಿ **+91–8046010000/8068948777** ಗೆ ಇಮೇಲ್ ವಿಳಾಸ: upport@eprochelpdesk.com ಗೆ ಸಂಪರ್ಕಿಸಬಹುದಾಗಿದೆ.

ಸಹಿ/– ಅಧೀಕ್ಷಕ ಅಭಿಯಂತರರು (ವಿ).,
ಖರೀದಿ, ನಿಗಮ ಕಛೇರಿ, ಗು.ವಿ.ಸ.ಕಂ.ನಿ, ಕಲಬುರಗಿ.
ವಾ.ಸಾ.ಸಂ.ಇ/ಕಲಬುರಗಿ/116/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಬೆಂಗಳೂರು ನಗರ ಜಿಲ್ಲಾ ಪಂಚಾಯತಿ
ಕಾರ್ಯಪಾಲಕ ಅಭಿಯಂತರರವರ ಕಚೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಜಿಲ್ಲಾ ಪಂಚಾಯಿತಿ ಕಟ್ಟಡ, ಮೊದಲನೇ ಮಹಡಿ, ಎಸ್.ಕರಿಯಪ್ಪ ರಸ್ತೆ, (ಬನಶಂಕರಿ ದೇವಸ್ಥಾನದ ಹತ್ತಿರ), ಬನಶಂಕರಿ, ಬೆಂಗಳೂರು–560070.

ಸಂಖ್ಯೆ:ಕಾಅ/ಪಂರಾಇಂಜಿ/ಬೆಂನ/ಜೆಇ–1/ಟೆಂಡರ್/06/2025–26 ದಿನಾಂಕ:15.05.2025

ಕೆ.ಪಿ.ಪಿ.ಪಿ ಪೋರ್ಟಲ್
ಟೆಂಡರ್ ಪ್ರಕಟಣೆ ನೋಟೀಸ್ ದ್ವಿ–ಲಕೋಟೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಕಚೇರಿಯಿಂದ 5054/2023-24 Grants ಅನುಮೋದನೆಯಾಗಿರುವ ಕಾಮಗಾರಿಗಳಿಗಾಗಿ ದ್ವಿ–ಲಕೋಟೆಯಲ್ಲಿ ಕೆ.ಪಿ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರ್ ಅನ್ನು ಕರೆಯಲಾಗಿದೆ. ವೆಬ್‌ಸೈಟ್ ಮೂಲಕ ಟೆಂಡರ್ ಫಾರಂಗಳನ್ನು **ದಿನಾಂಕ:29.05.2025 ರ ಸಂಜೆ 4.00 ಗಂಟೆಯವರೆಗೆ** ಪಡೆದು ಸಲ್ಲಿಸಬಹುದಾಗಿರುತ್ತದೆ. (RDPR/2024-25/RD/WORK_INDENT13803 & RDPR/2024-25/RD/WORK_INDENT13802) ಕಾಮಗಾರಿವಾರು ವಿವರಗಳನ್ನು ವೆಬ್‌ಸೈಟ್ ಮೂಲಕ ಪಡೆಯಬಹುದಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಕಚೇರಿ ವೇಳೆಯಲ್ಲಿ ಕಚೇರಿಯನ್ನು ಸಂಪರ್ಕಿಸಲು ಅಥವಾ ವೆಬ್‌ಸೈಟ್ http://www.KPPP.karnataka.gov.in ನಲ್ಲಿ ವಿವರಗಳನ್ನು ಪಡೆಯಬಹುದಾಗಿರುತ್ತದೆ.

ಸಹಿ/–ಕಾರ್ಯಪಾಲಕ ಅಭಿಯಂತರರು,
ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ,
ಬೆಂಗಳೂರು ನಗರ, ಬೆಂಗಳೂರು.
ವಾಸಸಂಇ/ಸಿಪಿ/ಎಎಎ/686/2025–26

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
ಜಿಲ್ಲಾ ಯೋಜನಾ ನಿರ್ವಹಣಾ ಘಟಕ ಜಿಲ್ಲಾ ಆಸ್ಪತ್ರೆ ಆವರಣ,
ಅನಂತಪುರರಸ್ತೆ, ಬಳ್ಳಾರಿ. ದೂರವಾಣಿ : 08392–273739
E-Mail ID: rchobellary@gmail.com
ಸಂಖ್ಯೆ:ಆಕುಕ:ಎನ್.ಹೆಚ್.ಎಂ./ಆರ್.ಸಿ.ಹೆಚ್./39/2025–26 Dated:14.05.2025

SHORT TERM TENDER NOTIFICATION

National Health Mission Ballari District have invited E-Tender for supply of Four Wheeler, yellow board Vehicles with Driver for District and Talukas for various health programs from eligible single agency/company in a Double Cover Bid System the details of Four wheeler, yellow board Vehicles with Driver can be viewed from e-procurement portal of Government of Karnataka. www.kppp.karnataka.gov.in
(1). Approximate of Tender value is **Rs.66,00,000/-**
(2). The EMD Value is Rs. **1,32,000/-**
(3). Tender Documents shall download from the e-procurement portal from **14.05.2025**
(4). Tender must be submitted online through e- portal on or before **21.05.2025 up to 05.30 PM.**
(5). Technical Bids will be opened on **22.05.2025 @ 5.10 P.M**
Further required information can be obtained from the above said office during office hours.

Sd/-Member Secretary,
District Health & Family Welfare Society, Ballari.
DIPR/Ballari/105/KSMCA/2025-26

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ
ಸಂಖ್ಯೆ:ಕಾಇಂ/ಲೋಇವಿ/ಮಧು:ಸಇಂ–2/ಟೆಂಡರ್/2025–26 ದಿ: 12.05.2025

ಟೆಂಡರ್ ಪ್ರಕಟಣೆ ಸಂಖ್ಯೆ:06/2025–26
(ಕೆಪಿಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW-4 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರರುಗಳಿಂದ ಲೋಕೋಪಯೋಗಿ ಇಲಾಖೆ, ಮಧುಗಿರಿ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336.

ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ.151.77 ಲಕ್ಷಗಳವರೆಗೆ, ಕೆಪಿಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 27–05–2025 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 28–05–2025 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 29–05–2025 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 22–05–2025 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.
DIPR/TUM/64/KSMCA/2025-26

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಾರ್ಯಾಲಯ, ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ,
ಆಲಮಟ್ಟಿ – 586201 ತಾ: ಬ.ಬಾಗೇವಾಡಿ, ಜಿ:ವಿಜಯಪುರ.
ಸಂಖ್ಯೆ: ಕೃ.ಭಾ.ಜ.ನಿ.ನಿ/ಎಎಲ್‌ಬಿಸಿ–ವಿಭಾಗ/ಡಿ.ಎಮ್/Dy-1&LI/2025–26/149 ದಿನಾಂಕ:13.05.2025

ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್ ಮುಖಾಂತರ)

ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ, ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ ಆಲಮಟ್ಟಿ, ತಾ: ನಿಡಗುಂದಿ ಜಿಲ್ಲೆ: ವಿಜಯಪುರ ಇವರು ಶೇಕಡಾವಾರು ಟೆಂಡರನ್ನು ಕೆಪಿಡಬ್ಲ್ಯೂಡಿ ಪ್ರಥಮ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಂದ **ಮುಖ್ಯ ಸ್ಥಾವರ (ಹೆಡ್ ವರ್ಕ) ಮತ್ತು ವಿತರಣಾ ಕಾಲುವೆಗೆ ಸಂಬಂಧಪಟ್ಟ ಕಾಮಗಾರಿಗಳಿಗೆ** ಟೆಂಡರನ್ನು ಆಹ್ವಾನಿಸಲಾಗಿರುತ್ತದೆ. ಕೆ.ಟಿ.ಟಿ.ಪಿ ಕಾಯ್ದೆ ನಿಯಮ–28 ರನ್ವಯ KW-4 ಮತ್ತು KW-2 ರಲ್ಲಿ **ದ್ವಿ–ಲಕೋಟೆ** ಪದ್ಧತಿಯನ್ನು ಅನುಸರಿಸಲಾಗುವದು. ಗುತ್ತಿಗೆದಾರರು ಭದ್ರತಾ ಠೇವಣಿ ಸಹಿತ **ದ್ವಿ–ಲಕೋಟೆಯಲ್ಲಿ** ಟೆಂಡರನ್ನು ಸಂದಾಯ ಮಾಡುವಂತೆ ಕೋರಲಾಗಿದೆ. ವಿವರಗಳು ಈ ಕೆಳಗಿನಂತೆ;

1) **Restoration of Distributary-1 on IP Side from Ch. 0.550 KM to 0.920 KM and 1.665 KM to 2.005 KM of ALBC,** ಇಂಡೆಂಟ್ ಸಂಖ್ಯೆ: **KBJNL/2025-26/CN/WORK_INDENT1575(KW-2),** ಟೆಂಡರಗಿಟ್ಟ ಮೊತ್ತ **ರೂ. 42.85ಲಕ್ಷಗಳು.** (ಕೆಪಿಡಬ್ಲ್ಯೂಡಿ ಪ್ರಥಮ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಗೆ)– **ಸಾಮಾನ್ಯ**

2) **Supplying & Erection of Trash Rack for Pump No. 1 to 10 at CLIS Headwork** ಇಂಡೆಂಟ್ ಸಂಖ್ಯೆ: **KBJNL/2025-26/LI/WORK_INDENT1576 (KW-4),** ದ್ವಿ–ಲಕೋಟೆಯಲ್ಲಿ ಟೆಂಡರಗಿಟ್ಟ ಮೊತ್ತ **ರೂ. 134.04 ಲಕ್ಷಗಳು.** (ಕೆಪಿಡಬ್ಲ್ಯೂಡಿ ಪ್ರಥಮ ದರ್ಜೆ ಮತ್ತು ಮೇಲ್ಪಟ್ಟು ಗುತ್ತಿಗೆದಾರರಿಗೆ) **– ಸಾಮಾನ್ಯ**

ಟೆಂಡರ ಪ್ರಕ್ರಿಯೆಯ ವಿವಿಧ ಹಂತಗಳು:
1) ಟೆಂಡರ ಡಾಕುಮೆಂಟನ್ನು ಇ–ಪೋರ್ಟಲ್‌ನಲ್ಲಿ ವೀಕ್ಷಿಸುವ & ಭರ್ತಿ ಮಾಡಿದ ಬಿಡ್‌ನ್ನು ಸಲ್ಲಿಸುವ ಕಾಲಾವಧಿ **ದಿನಾಂಕ: 15.05.2025 ರಿಂದ 29.05.2025 ರ ಸಾಯಂಕಾಲ 5.00 ಘಂಟೆಯವರೆಗೆ.**
2) ಪೂರ್ವಭಾವಿ ಸಭೆ (Pre-Bid Meeting) **(ಇಂಡೆಂಟ್ ಸಂಖ್ಯೆ: 1576) – ದಿನಾಂಕ: 23.05.2025 ಮುಂಜಾನೆ 11.00 ಘಂಟೆ.** ಕಾರ್ಯಪಾಲಕ ಅಭಿಯಂತರರು, ಕೃಭಾಜನಿನಿ, ಎ.ಎಲ್.ಬಿ.ಸಿ ವಿಭಾಗ, ಆಲಮಟ್ಟಿ ಕಚೇರಿಯಲ್ಲಿ.
3) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 31.05.2025 ಬೆಳಿಗ್ಗೆ 11.00 ಘಂಟೆಯ ನಂತರ.**
4) ಆರ್ಥಿಕ ಬಿಡ್ ತೆರೆಯುವ **ದಿನಾಂಕ:03.06.2025 ಬೆಳಿಗ್ಗೆ 11.00 ಘಂಟೆಯ ನಂತರ.**

ಯಾವದೇ ಸಂದರ್ಭದಲ್ಲಾದರೂ, ಯಾವದೇ ಕಾರಣ ನೀಡದೇ ಟೆಂಡರನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಈ ಕೆಳಗೆ ಸಹಿ ಮಾಡಿರುವವರು ಕಾಯ್ದಿರಿಸಿಕೊಂಡಿರುತ್ತಾರೆ. ಟೆಂಡರಗೆ ಸಂಬಂಧಿಸಿದ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ಅವಧಿಯಲ್ಲಿ ಅಥವಾ https://kppp.karnataka.gov.in/#/portal/portal ವೆಬ್‌ಸೈಟನಲ್ಲಿ ಪಡೆದುಕೊಳ್ಳಬಹುದು.

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಕೃಭಾಜನಿನಿ, ಎ ಎಲ್ ಬಿ ಸಿ ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/76/ಕೆಎಸ್‌ಎಂಸಿಎ/2025–26

ಕರ್ನಾಟಕ ಅರಣ್ಯ ಇಲಾಖೆ
ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ಕಾರ್ಯಾಲಯ,
ಸಾಮಾಜಿಕ ಅರಣ್ಯ ಉಪ ವಿಭಾಗ, ಜಮಖಂಡಿ.
ನಂ: ಸಅಸಂ/ಸಾಅಜ/ಇ–ಪೋರ್ಟಲ್/ಸಿಆರ್–01/2025–26
ದಿನಾಂಕ: 15–05–2025

ಮರು ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, **2025–26ನೇ ಸಾಲಿನಲ್ಲಿ ಬಾಗಲಕೋಟ ಸಾಮಾಜಿಕ ಅರಣ್ಯ ವಿಭಾಗದ ಜಮಖಂಡಿ ಸಾಮಾಜಿಕ ಅರಣ್ಯ ಉಪ–ವಿಭಾಗದ ವ್ಯಾಪ್ತಿಯಲ್ಲಿ ಬರುವ ಬೀಳಗಿ, ಮುಧೋಳ ಹಾಗೂ ಜಮಖಂಡಿ (ಸಾಅ) ವಲಯಗಳಲ್ಲಿ ವಿವಿಧ ಯೋಜನೆಗಳಡಿ ಕೈಗೊಳ್ಳುವ ನೆಡುತೋಪು ಬೆಳೆಸುವುದು / ನಿರ್ವಹಣೆ ಸಸಿ ಬೆಳೆಸುವುದು / ನಿರ್ವಹಣೆ ಹಾಗೂ ಇತರೆ ಚಟುವಟಿಕೆಗಳಿಗಾಗಿ ಅರಣ್ಯ ಗುತ್ತಿಗೆದಾರರೆಂದು ಹೆಸರನ್ನು ನೊಂದಾಯಿಸಿಕೊಂಡಿರುವಂತಹ ಅರ್ಹ ಗುತ್ತಿಗೆದಾರರಿಗೆ ಮಾತ್ರ** ಕರ್ನಾಟಕ ಸರ್ಕಾರದ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ **(http://kppp.karnataka.gov.in)** ಮರು ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಗಿನಂತಿದೆ.

1) ಟೆಂಡರ್ ಷರತ್ತು ಸಂಬಂಧ ವಿವರ / ಸ್ಪಷ್ಟೀಕರಣ ಪಡೆಯಲು ಕೊನೆಯ ದಿನಾಂಕ 27–05–2025 ಅಪರಾಹ್ನ 01.00 ಘಂಟೆಗೆ. 2) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 28–05–2025 ಅಪರಾಹ್ನ 01.00 ಘಂಟೆಗೆ. 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30–05–2025 ಅಪರಾಹ್ನ 01.00 ಘಂಟೆಗೆ. 4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 31–05–2025 ಅಪರಾಹ್ನ 01.00 ಘಂಟೆಗೆ. 5) ಇ.ಎಂ.ಡಿ ಮೊತ್ತ : 2.5%.

ಸದರಿ ಟೆಂಡರ್‌ಗಳಲ್ಲಿ ಯಾವುದೇ ಗುತ್ತಿಗೆದಾರರು ಭಾಗವಹಿಸದೇ ಇದ್ದಲ್ಲಿ ಇದನ್ನೇ ಮರು ಟೆಂಡರ್ ಪ್ರಕಟಣೆ ಎಂದು ತಿಳಿದು **ದಿನಾಂಕ: 03–06–2025ರ ವರೆಗೆ** ವಿಸ್ತರಿಸಿ ಇ–ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು.

ಸಹಿ/– ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ,
ಸಾಮಾಜಿಕ ಅರಣ್ಯ ಉಪ ವಿಭಾಗ,
ಜಮಖಂಡಿ.
ಡಿಐಪಿಆರ್/ಬಾಗಲಕೋಟೆ/68/ಮಣಿಪಾಲ್/2025-26

ಕರ್ನಾಟಕ ಗೇರು ಅಭಿವೃದ್ಧಿ ನಿಗಮ ನಿಯಮಿತ ಕುಮಟಾ ವಿಭಾಗ, ಕುಮಟಾ
(ಕರ್ನಾಟಕ ಸರಕಾರದ ಅಧೀನಕ್ಕೊಳಪಟ್ಟಿದೆ)
ವಿಭಾಗೀಯ ವ್ಯವಸ್ಥಾಪಕರ ಕಚೇರಿ
ಇಂಡಸ್ಟ್ರೀಯಲ್ ಏರಿಯಾ, ಹೆಗಡೆ ರೋಡ, ಕುಮಟಾ–581 343 (ಉ.ಕ.)
E-mail: kcdckumta@gmail.com Ph: 08386-200994
ಸಂಖ್ಯೆ:ಕೆಸಿಡಿಸಿ:ಕು.ವಿ:ಎ2:ಕಾಮಗಾರಿ:RKVY:2025–26 ದಿನಾಂಕ: 12–05–2025

ಸಂಕ್ಷಿಪ್ತ ಟೆಂಡರು ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ/ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ/ ಅರಣ್ಯ ನೋಂದಾಯಿತ ಗುತ್ತಿಗೆದಾರರಿಗೆ ತಿಳಿಯಪಡಿಸುವುದೇನೆಂದರೆ, 2025–26ನೇ ಸಾಲಿಗೆ ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (RKVY) ಇವರಿಂದ ಅನುದಾನ ಬಿಡುಗಡೆಯಾಗುವ ನಿರೀಕ್ಷೆಯ ಮೇರೆಗೆ ಕರ್ನಾಟಕ ಗೇರು ಅಭಿವೃದ್ಧಿ ನಿಗಮದ ಕುಮಟಾ ವಿಭಾಗದ ವ್ಯಾಪ್ತಿಗೆ ಒಳಪಡುವ ಲಗತ್ತೀಕರಿಸಿದ ಅನುಬಂಧ–1ರಲ್ಲಿ ನಮೂದಿಸಿದ ಗೇರು ನೆಡುತೊಪು ಪುನಶ್ಚೇತನ ಕಾಮಗಾರಿಗಳನ್ನು ನಿರ್ವಹಿಸಲು ಅನುಭವ ಹೊಂದಿರುವವರು ಅಥವಾ ಅಂಗೀಕೃತ ಸಂಸ್ಥೆಗಳಿಂದ ಮಾತ್ರ ಕರ್ನಾಟಕ ಸರಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಇ–ಟೆಂಡರನ್ನು ದಿನಾಂಕ: 02–06–2025 ರಂದು ಸಂಜೆ 4.00 ವರೆಗೆ ಆಹ್ವಾನಿಸಲಾಗಿದೆ.

ಮೊದಲನೇ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: 02–06–2025 ಅಪರಾಹ್ನ: 4.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಆರ್ಥಿಕ ಬಿಡ್ ತೆರೆಯುವ ದಿನಾಂಕ: 04–06–2025 ಪೂರ್ವಾಹ್ನ: 11.00 ಗಂಟೆ ತಾಂತ್ರಿಕ ಬಿಡ್‌ನಲ್ಲಿ ಅರ್ಹತೆ ಹೊಂದಿದ ಬಿಡ್‌ದಾರರಿಗೆ ಮುಂದಿನ ದಿನಗಳಲ್ಲಿ ತಿಳಿಸಲಾಗುವುದು.

ಒಂದು ವೇಳೆ ಮೇಲೆ ಹೇಳಿದ ದಿನಾಂಕದಂದು ಯಾವ ಗುತ್ತಿಗೆದಾರರೂ ಟೆಂಡರು ಹಾಕದಿದ್ದಲ್ಲಿ, ಇದೇ ಟೆಂಡರು ಪ್ರಕ್ರಿಯೆಯನ್ನು ಮುಂದುವರಿಸಿ, ಮರು ಟೆಂಡರನ್ನು ದಿನಾಂಕ: 10–06–2025 ರಂದು ಸಂಜೆ 3.00 ಗಂಟೆವರೆಗೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ (https://kppp.karnataka.gov.in) ಮೂಲಕ ಕರೆಯಲಾಗಿದೆ.

ಈ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ವಿಭಾಗೀಯ ವ್ಯವಸ್ಥಾಪಕರು ಕರ್ನಾಟಕ ಗೇರು ಅಭಿವೃದ್ಧಿ ನಿಗಮ ಇಂಡಸ್ಟ್ರೀಯಲ್ ಏರಿಯಾ, ಹೆಗಡೆ ರೋಡ, ಕುಮಟಾ ಇವರ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.

ಸಹಿ/– ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ
ವಿಭಾಗೀಯ ವ್ಯವಸ್ಥಾಪಕರು
ಕೆಸಿಡಿಸಿ, ಕುಮಟಾ ವಿಭಾಗ.
DIPR/ADK/KSMCA/104/25-26 Dt.15.05.2025

ಸಮಾಚಾರ ಸಣ್ಣದಲ್ಲ

ಮೋದಿ ವಿರುದ್ಧ ಪೋಸ್ಟ್: ಆರೋಪಿ ಸೆರೆ

ಸಿಂಧನೂರು: ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಸಾಮಾಜಿಕ ಜಾಲತಾ ಣಗಳಲ್ಲಿ ಆಕ್ಷೇಪಾರ್ಹ ಪೋಸ್ಟ್ ಹಾಕಿದ್ದ ವ್ಯಕ್ತಿಯೋ ರ್ವನ್ನು ತುರವಿಹಾಳ ಪೊಲೀಸರು ಬಂಧಿಸಿ ದ್ದಾರೆ. ಭಾರತ-ಪಾಕಿಸ್ತ ನದ ನಡುವೆ ಉದ್ವಿಗ್ನ ಸ್ಥಿತಿ, ಕದನ ವಿರಾಮ ಘೋಷಣೆ ಬಳಿಕ ಪ್ರಧಾನಿ ನರೇಂದ್ರ ಮೋದಿ ಹಾಗೂ ರಫೆಲ್ ಯುದ್ಧ ವಿಮಾನದ ಬಗ್ಗೆ ಸಿಂಧನೂರು ತಾಲೂಕಿನ ತುರವಿಹಾಳ ಗ್ರಾಮದ ವ್ಯಕ್ತಿಯೊಬ್ಬ ಅವಹೇಳನಕಾರಿ ಪೋಸ್ಟ್ ಗಳನ್ನು ಸೋಷಿಯಲ್ ಮೀಡಿಯಾಗಳಲ್ಲಿ ಪೋಸ್ಟ್ ಮಾಡಿದ್ದ. ಇದೀಗ ಆರೋಪಿಯನ್ನು ತುರ್ವಿಹಾಳ ಪೊಲೀಸರು ಬಂಧಿಸಿದ್ದಾರೆ. ಬಂಧಿತ ಆರೋಪಿ ಅಜ್ಮೀರ್ (37) ಎಂದು ಗುರುತಿಸಲಾಗಿದೆ. ಚಕ್ಕಡಿ ಮೇಲೆ ಅಳುತ್ತಾ ಕುಳಿತಿರುವ ಪ್ರಧಾನಿ ಮೋದಿ ಚಿತ್ರ, ಹಾಗೂ ಅದರ ಮೇಲೆ ರಫೇಲ್ ಯುದ್ಧ ವಿಮಾನ ವನ್ನು ಸಾಗಿಸುತ್ತಿದ್ದ ಫೋಟೊವನ್ನು ಪೋಸ್ಟ್ ಮಾಡಿದ್ದ. ತುರ್ವಿಹಾಳ ಠಾಣೆಯಲ್ಲಿ ಈ ಬಗ್ಗೆ ಪ್ರಕರಣ ದಾಖಲಾಗಿತ್ತು.ಸದ್ಯ ಆರೋಪಿಯನ್ನು ಬಂಧಿಸಿ ಪೊಲೀಸರು ವಿಚಾರಣೆ ನಡೆಸುತ್ತಿದ್ದಾರೆ.

ವಿಶ್ವವಾಣಿ ಕ್ಲಬ್ ಹೌಸ್
16.05.2025
ಸಂಜೆ: 06.55 ರಿಂದ 08.05 ರವರೆಗೆ

ಶುಕ್ರವಾರದ ಅತಿಥಿ
ಶ್ರೀ ಪಿ.ಕೆ.ನಂದೀಶ
ವಿಷಯ
ಕುವೆಂಪು ರಾಮಾಯಣ ದರ್ಶನಂ - 44
vishwavani.news

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ :** ಯಾದಗಿರಿ

ಸಮಸ್ಯೆಯೇನು..?: ಯಾದಗಿರಿ ಜಿಲ್ಲೆಯ ಸಗರ(ಬಿ) ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

- **ಪರಿಹಾರ:** ಯಾದಗಿರಿ ಜಿಲ್ಲೆಯ ಸಗರ(ಬಿ) ಗ್ರಾಮದ ವಾರ್ಡ್ ನಂ.9 ರ ಎಸ್.ಸಿ ಓಣಿಗೆ ಅಧಿಕಾರಿಗಳು ಭೇಟಿ ನೀಡಿ, ತಾತ್ಕಾಲಿಕವಾಗಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿದ್ದು, ಮೂರು ದಿನದ ಒಳಗೆ ಪೈಪ್‌ಲೈನ್ ಕಾಮಗಾರಿ ಮುಕ್ತಾಯವಾಗಲಿದೆ. ಶೀಘ್ರ ನೀರಿನ ಸಮಸ್ಯೆ ಬಗೆಹರಿಸಲಾಗುವುದು.

ಟ್ವೀಟೂ-ಖಾರಾ

ಆರ್.ಅಶೋಕ್, ಪ್ರತಿಪಕ್ಷ ನಾಯಕ

ವಿಧಾನಸೌಧದಲ್ಲಿ ಪಾಕಿಸ್ತಾನ ಜಿಂದಾಬಾದ್ ಘೋಷಣೆ ಕೂಗಿದ ದೇಶದ್ರೋಹಿಗಳು ನಿಮ್ಮ ಕಾಂಗ್ರೆಸ್ ಕಚೇರಿಯಲ್ಲಿ ಐಟಿ ಸೆಲ್ ನಡೆಸುತ್ತಿದ್ದರಾ ಸಚಿವ @PriyankKharge ಅವರೇ? ಪಹಲ್ಗಾಮ್‌ನಲ್ಲಿ ಅಮಾಯಕ ಭಾರತೀಯ ಪ್ರವಾಸಿಗರನ್ನು ಕೊಂದ ಉಗ್ರರು ತರಬೇತಿ ಪಡೆದ ಕೇಂದ್ರಗಳು, ಅಲ್ಲಿ ನೆಲೆಸಿದ್ದ ಅವರ 100ಕ್ಕೂ ಹೆಚ್ಚು ಜಿಹಾದಿ ಸಂಗಡಿಗರು, ಅವರ ತಲೆಗೆ ಮತಾಂಧತೆ ತುಂಬಿದ ಭಯೋತ್ಪಾದಕ ಸಂಘಟನೆಗಳ ನಾಯಕರು, ಅವರು ನಡೆಸುತ್ತಿದ್ದ ಮದರಸಾಗಳು, ಅಲ್ಲಿದ್ದ ಶಸ್ತ್ರಾಸ್ತ್ರ ಸಂವಹನ ಉಪಕರಣಗಳು, ಅವರಿಗೆ ಬೆಂಬಲವಾಗಿ ನಿಂತಿದ್ದ ಪಾಕಿಸ್ತಾನದ ಸೇನಾ ವಾಯುನೆಲೆಗಳು, ಎಲ್ಲವನ್ನೂ ನಮ್ಮ ಸೇನಾಪಡೆಗಳು ನೆಲಸಮ ಮಾಡಿವೆ. ದಯ ವಿಟ್ಟು ಒಮ್ಮೆ ಪಾಕಿಸ್ತಾನದ ವಾಯು ನೆಲೆಗಳಿಗೆ, ಉಗ್ರರ ಅಡಗುತಾಣಗಳಿಗೆ ಭೇಟಿ ಕೊಟ್ಟು ಬನ್ನಿ.

ಸೋಮಶೇಖರ್

ನಿಮ್ಮ ಬಿಜೆಪಿಯವರು ಏನೇ ಮಾಡಲಿ ಸಾರ್ವಜನಿಕರು ಒಪ್ಪಿಕೊಳ್ಳಬೇಕು ಅದು ತಪ್ಪು ಅಂತ ಪ್ರಶ್ನೆ ಮಾಡಿದರೆ ಅವರು ದೇಶದ್ರೋಹಿಗಳು ಇದು ನಿಮ್ಮ ಸರ್ವಾಧಿಕಾರಿ ಧೋರಣೆ. ಇದನ್ನ ನೀವು ಬದಲಾಯಿಸಿಕೊಳ್ಳದಿದ್ದರೆ ಖಂಡಿತ ನಿಮ್ಮ ಬಿಜೆಪಿ ಕರ್ನಾಟಕದಲ್ಲಿ ಅಧಿಕಾರಕ್ಕೆ ಬರಲ್ಲ.

ಬೃಹತ್ ತ್ರಿವರ್ಣ ಧ್ವಜದಡಿ ಒಗ್ಗೂಡಿದ ಜನತೆ | ನೂರಾರು ಬಿಜೆಪಿ ನಾಯಕರು, ನಾಗರಿಕರು, ವಿದ್ಯಾರ್ಥಿಗಳು ಭಾಗಿ

ವೀರಸೇನಾನಿಗಳಿಗೆ ಕೃತಜ್ಞತೆ ಸಲ್ಲಿಸಿದ ತಿರಂಗಾ ಯಾತ್ರೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ನಗರದಲ್ಲಿ ನಡೆದ ತಿರಂಗಾ ಯಾತ್ರೆ ವೀರಸೇನಾನಿಗಳಿಗೆ ಧನ್ಯವಾದ ಸಲ್ಲಿಸಿತು. ನಗರದ ಮಲ್ಲೇಶ್ವರ ಮಂತ್ರಿಮಾಲ್ ಸಂಪಿಗೆ ರಸ್ತೆಯ ಸಿರೂರು ಆಟದ ಮೈದಾನದಿಂದ ಮಲ್ಲೇಶ್ವರ 18ನೇ ಕ್ರಾಸ್‌ನವರೆಗೂ ನಡೆದ ಯಾತ್ರೆಯಲ್ಲಿ ನೂರಾರು ನಾಯಕರು, ಬೆಂಗಳೂರಿನ ನಾಗರಿಕರು, ಶಾಲಾ-ಕಾಲೇಜಿನ ವಿದ್ಯಾರ್ಥಿಗಳು ಮತ್ತು ಮಹಿಳೆಯರು ಸೇರಿದಂತೆ ಸಾವಿರಾರು ಮಂದಿ ಪಾಲ್ಗೊಂಡಿದ್ದರು. ಬೃಹತ್ ತ್ರಿವರ್ಣ ಧ್ವಜದಡಿ ಜನತೆ ಸೇರಿ ಸೇನಾ ಕಾರ್ಯಾಚರಣೆಗೆ ಬೆಂಬಲ ಸೂಚಿಸಿದರು.

ನಿವೃತ್ತ ಏರ್‌ಮಾರ್ಷಲ್ ಎ.ವಿ.ಮುರುಳಿ ಅವರು ಮಾತನಾಡಿ, ಆಪರೇಷನ್ ಸಿಂದೂರ ಮುಗಿದಿಲ್ಲ. ಇನ್ನೊಮ್ಮೆ ನಡೆದರೆ ಪಾಕಿಸ್ತಾನ ನಿರ್ನಾಮವಾಗಲಿದೆ. ಪಿಒಕೆ ನಮ್ಮದಾಗಲಿದೆ. ಪಾಕಿಸ್ತಾನಕ್ಕೆ ಬುದ್ಧಿ ಕಲಿಸಬೇಕೆಂಬುದು ದೇಶದ ನಿಲುವಾಗಿತ್ತು. ಪ್ರಧಾನಿಯವರು ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿದರು. ಜನರು ಬಯಸಿದ್ದನ್ನು ನಾವು ಮಾಡಿ ತೋರಿಸಿದೆವು. ಸೈನಿಕರ ಹಿಂದೆ ಇಡೀ ರಾಷ್ಟ್ರ ನಿಂತಿತ್ತು. ಪಾಕಿಸ್ತಾನಕ್ಕೆ ಮಹಿಳೆಯರು ಸಮರ್ಥ ಉತ್ತರ ನೀಡಿದ್ದಾರೆ ಎಂದರು.

ಆಪರೇಷನ್ ಸಿಂದೂರ ಯಶಸ್ವಿಯಾಗಿ ಪೂರ್ಣಗೊಳಿಸಿದ ಭಾರತದ ಸೈನಿಕರಿಗೆ ಬೆಂಬಲ ಮತ್ತು ಧನ್ಯವಾದ ಸಲ್ಲಿಸುವ ಸಲುವಾಗಿ ರಾಷ್ಟ್ರ ರಕ್ಷಣೆಗಾಗಿ ನಾಗರಿಕರು ಅಡಿಯಲ್ಲಿ ಈ ಯಾತ್ರೆ ನೆರವೇರಿತು. ಮೊದಲಿಗೆ ಭಾರತ್ ಮಾತಾ ಕೀ ಜೈ, ಪಾಕಿಸ್ತಾನಕ್ಕೆ ಪಾಠಕಲಿಸಿದ ದೇಶ ಭಕ್ತ ಸೈನಿಕರಿಗೆ ಜೈ ಮತ್ತು ಭಾರತಕ್ಕೆ ವಿಶ್ವದಲ್ಲಿ ಗೌರವವನ್ನು ತಂದುಕೊಟ್ಟಿರುವ ವೀರಸೇನಾನಿಗಳಿಗೆ ಜೈ ಎಂಬ ಘೋಷವಾಕ್ಯಗಳನ್ನು ಕೂಗಲಾಯಿತು. ಕರ್ನಾಟಕ ರಾಜ್ಯ ಉಸ್ತುವಾರಿ ಮತ್ತು ರಾಜ್ಯಸಭಾ ಸದಸ್ಯ ಡಾ.ರಾಧಾಮೋಹನ್ ದಾಸ್ ಅಗರ್‌ವಾಲ್, ರಾಜ್ಯ ಸಹ-ಉಸ್ತುವಾರಿ ಸುಧಾಕರ್ ರೆಡ್ಡಿ, ವಿರೋಧ ಪಕ್ಷದ ನಾಯಕ ಆರ್. ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯಣ ಸ್ವಾಮಿ, ಮಾಜಿ ಉಪಮುಖ್ಯಮಂತ್ರಿ ಮತ್ತು ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿಧಾನಪರಿಷತ್ ವಿಪಕ್ಷ ಮುಖ್ಯ ಸಚೇತಕ ಎನ್. ರವಿಕುಮಾರ್, ಸಂಸದ ಪಿ.ಸಿ. ಮೋಹನ್, ವಿಧಾನಪರಿಷತ್ ಸದಸ್ಯ ಸಿ.ಟಿ. ರವಿ, ಶಾಸಕ ಎನ್. ಮುನಿರತ್ನ, ಎಸ್. ಮುನಿರಾಜು ಸೇರಿದಂತೆ ಪಕ್ಷದ ಮುಖಂಡರು, ಕಾಲೇಜು ವಿದ್ಯಾರ್ಥಿಗಳು, ಕಾರ್ಯಕರ್ತರು ಉಪಸ್ಥಿತರಿದ್ದರು.

ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರ' ಸೇನಾ ಕಾರ್ಯಾಚರಣೆಯಲ್ಲಿ ಭಾಗವಹಿಸಿದ್ದ ಸೇನಾನಿಗಳಿಗೆ ಅಭಿನಂದನೆ ಸಲ್ಲಿಸಲು ಗುರುವಾರ ಬೆಳಗ್ಗೆ ಬಿಜೆಪಿ ವತಿಯಿಂದ ತಿರಂಗಾಯಾತ್ರೆ ನಡೆಯಿತು.

> ಇದೊಂದು ಕದನ ವಿರಾಮ ಮಾತ್ರ. ಯುದ್ಧ ಸ್ಥಗಿತಗೊಳಿಸಿದ್ದೇವೆ ಎಂದು ಪ್ರಧಾನಿ ಹೇಳಿದ್ದಾರೆ. ಭಯೋತ್ಪಾದನಾ ಕೃತ್ಯ ಮುಂದುವರಿದಲ್ಲಿ ಯುದ್ಧ ಮುಂದುವರಿಯುತ್ತದೆ ಎಂದೂ ತಿಳಿಸಿದ್ದಾರೆ. ಸಿಂಧೂ ನದಿ ನೀರಿನ ಕುರಿತ ಒಪ್ಪಂದ ಭಾರತ ವಿರೋಧಿ. ಒಪ್ಪಂದದಡಿ ಶೇ 90 ನೀರಿನ ಅಧಿಕಾರ ಪಾಕಿಸ್ತಾನಕ್ಕೆ ನೀಡಲಾಗಿದೆ. ನದಿ ನೀರಿನ ಬಳಕೆಗೆ ಕಾಲುವೆ ನಿರ್ಮಿಸಲು ಭಾರತವು ಹಣ ನೀಡಿತ್ತು. ಇದು ಭಾರತದ ದೀರ್ಘಕಾಲೀನ ಒಳಿತನ್ನು ಪರಿಗಣಿಸಿಲ್ಲ. ರಕ್ತ ಮತ್ತು ನೀರು ಒಂದೇ ನದಿಯಲ್ಲಿ ಒಟ್ಟಿಗೆ ಹರಿಯಲು ಸಾಧ್ಯವಿಲ್ಲ ಎಂದು ಪ್ರಧಾನಿಯವರು ಹೇಳಿದ್ದಾರೆ.
>
> -ರಾಧಾಮೋಹನ್ ಅಗರವಾಲ್, ರಾಜ್ಯ ಬಿಜೆಪಿ ಉಸ್ತುವಾರಿ

ಡಿಕೆಶಿ ಹೊಗಳಿದ ರಾಜ್ಯ ಬಿಜೆಪಿ ಉಸ್ತುವಾರಿ

ಬೆಂಗಳೂರು: ರಾಷ್ಟ್ರ ವಿರೋಧಿ ಮಾನಸಿಕತೆ ಇಷ್ಟಪಡದ ಉಪಮುಖ್ಯಮಂತ್ರಿ ಡಿ. ಕೆ.ಶಿವಕುಮಾರ್ ನಮ್ಮ ಸೇನೆಗೆ ಬೆಂಬಲಿಸಿ ಮಾತನಾಡಿರುವ ನಡೆಗೆ ಅಭಿನಂದನೆಗಳು ಎಂದು ರಾಜ್ಯ ಬಿಜೆಪಿ ಉಸ್ತುವಾರಿ ರಾಧಾಮೋಹನ್ ಅಗರವಾಲ್ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಡಿಸಿಎಂ ಶಿವಕುಮಾರ್ ಅವರು ಸೇನೆ ಬೆಂಬಲಿಸಿದ್ದಾರೆ. ಆದರೆ, ಸಿಎಂ ಸಿದ್ದರಾಮಯ್ಯ ಅವರು ಹಿಂದೂ ಹಾಗೂ ರಾಷ್ಟ್ರ ವಿರೋಧಿ ಹೇಳಿಕೆ ನೀಡುತ್ತಿರುವುದು ಸರಿಯಲ್ಲ ಎಂದರು. ಆಪರೇಷನ್ ಸಿಂದೂರದ ಮೂಲಕ ಭಾರತದ ವಾಯು ರಕ್ಷಣಾ ವ್ಯವಸ್ಥೆಯು ಅತ್ಯಂತ ಸಶಕ್ತವಾಗಿರುವುದಾಗಿ ಜಗತ್ತಿಗೇ ನಾವು ತಿಳಿಸಿದ್ದೇವೆ. ಭಾರತದ ಮಾನ, ಸಮ್ಮಾನದ ರಕ್ಷಣೆ ಮತ್ತು ಭಾರತೀಯರ ಹತ್ಯೆಗೆ ಪ್ರತೀಕಾರವಾಗಿ ಭಾರತೀಯ ಸೇನೆಯು ಆಪರೇಷನ್ ಸಿಂದೂರ ಕೈಗೊಂಡಿದೆ. ಇದನ್ನು ಪ್ರಶಂಸಿಸಿ ಮತ್ತು ಭಾರತದ ಸೇನೆಗೆ ಧನ್ಯವಾದ ಸಮರ್ಪಣೆಗಾಗಿ ದೇಶಾದ್ಯಂತ ತಿರಂಗಾ ಯಾತ್ರೆ ನಡೆಸಲಾಗುತ್ತಿದೆ. ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ಭಾರತದ ಸೇನೆಯು ಪಹಲ್ಗಾಮ್ ಭಯೋತ್ಪಾದನಾ ಕೃತ್ಯಕ್ಕೆ ಕಾರಣಕರ್ತರಾದ ಎರಡು ಸಂಘಟನೆಗಳ ಕಾರ್ಯಾಲಯ, ತರಬೇತಿ ಕೇಂದ್ರಗಳನ್ನು ಹಾಗೂ ಉಗ್ರರನ್ನು ಹತ್ಯೆ ಮಾಡಿದೆ. ಸಂಪೂರ್ಣ ಸಂಯಮದಿಂದ ಹಾಗೂ ಯುದ್ಧದ ಎಲ್ಲ ನಿಯಮಗಳನ್ನು ಪಾಲಿಸುತ್ತ, ಈ ಅಭಿನಂದನೀಯ ಕಾರ್ಯ ಮಾಡಿದ್ದು, ಇದು ಹೆಮ್ಮೆಯ ವಿಚಾರ ಎಂದರು.

ಸುಹಾಸ್ ಕೊಲೆ: ಮೂವರು ಸೆರೆ

ಮಂಗಳೂರು: ಬಜ್ಪೆ ಠಾಣಾ ವ್ಯಾಪ್ತಿಯಲ್ಲಿ ಇತ್ತೀಚೆಗೆ ನಡೆದಿದ್ದ ಸುಹಾಸ್ ಶೆಟ್ಟಿ ಕೊಲೆ ಪ್ರಕರಣದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದ ಮೂವರು ಆರೋಪಿಗಳನ್ನು ಮಂಗಳೂರು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ ಎಂದು ಮಂಗಳೂರು ನಗರ ಪೊಲೀಸ್ ಆಯುಕ್ತ ಅನುಪಮ್ ಅಗರ್ವಾಲ್ ತಿಳಿಸಿದ್ದಾರೆ.

ಕಳವಾರು ಗ್ರಾಮದ ಆಶ್ರಯ ಕಾಲನಿ ನಿವಾಸಿ ಅಜರುದ್ದೀನ್ (29), ಬಜ್ಪೆ, ಭಟ್ರಕೆರೆ, ಉಸ್ಮಾನಿಯಾ ಮಸೀದಿ ಬಳಿಯ ನಿವಾಸಿ ಅಬ್ದುಲ್ ಖಾದರ್ ಅಲಿಯಾಸ್ ನೌಫಲ್ (24) ಹಾಗೂ ಬಂಟ್ವಾಳದ ಫರಂಗಿಪೇಟೆಯ ಕುಂಪನಮಜಲು ರಸ್ತೆ ನಿವಾಸಿ ನೌಷಾದ್ (39) ದಸ್ತಗಿರಿಯಾದ ಆರೋಪಿಗಳು. ಆರೋಪಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ. ಇವರ ಪೈಕಿ ಅಜರುದ್ದೀನ್ ಎಂಬಾತನಿಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ಉಳಿದಿಬ್ಬರಾದ ಅಬ್ದುಲ್ ಖಾದರ್ ಮತ್ತು ನೌಷದ್ ಎಂಬವರನ್ನು ಹೆಚ್ಚಿನ ತನಿಖೆಗಾಗಿ 7 ದಿನಗಳ ಕಾಲ ಪೊಲೀಸ್ ಕಸ್ಟಡಿಗೆ ಪಡೆಯಲಾಗಿದೆ. ಪ್ರಕರಣದ ತನಿಖೆಯು ಮುಂದುವರಿದಿದ್ದು, ಇತರ ಆರೋಪಿಗಳ ಪತ್ತೆ ಕಾರ್ಯ ಮುಂದುವರಿದಿದೆ.

ಬೆಸ್ಕಾಂನಿಂದ ಸಹಾಯವಾಣಿ ಸಂಖ್ಯೆ ಆರಂಭ

ಬೆಂಗಳೂರು: ಬೆಸ್ಕಾಂ ಸಾರ್ವಜನಿಕರ ಅನುಕೂಲಕ್ಕಾಗಿ ಹಲವಾರು ಗ್ರಾಹಕ ಸ್ನೇಹಿ ಕ್ರಮಗಳ ಮೂಲಕ ಪರಿಹಾರ ಒದಗಿಸಲು ಕ್ರಮ ಕೈಗೊಳ್ಳುತ್ತಿದ್ದು, ಇದೀಗ ವಿದ್ಯುತ್ ಸಂಬಂಧಿ ಸಮಸ್ಯೆಗಳಿಗೆ ದೂರು ನೀಡುವ ಸಲುವಾಗಿ ಹೊಸ ವಾಟ್ಸ್ ಅಪ್ ಸಹಾಯವಾಣಿಯನ್ನು ಆರಂಭಿಸಿದೆ.

ಬೆಸ್ಕಾಂ ವ್ಯಾಪ್ತಿಯ ಎಲ್ಲ ಜಿಲ್ಲೆಗಳಲ್ಲಿ ಈ ಸೌಲಭ್ಯವನ್ನು ಗ್ರಾಹಕರು ಸದುಪಯೋಗಪಡಿಸಿಕೊಳ್ಳುವಂತೆ ಮನವಿಯನ್ನೂ ಮಾಡಿದ್ದು ಈ ಮೂಲಕ ಗ್ರಾಹಕರ ಸಮಸ್ಯೆಗಳಿಗೆ ಶೀಘ್ರದಲ್ಲೇ ಸ್ಪಂದಿಸುವ ಭರವಸೆ ನೀಡಿದೆ. ಬೆಸ್ಕಾಂ ವ್ಯಾಪ್ತಿಯ ಎಲ್ಲ ವಲಯಗಳಲ್ಲಿ ವಾಟ್ಸ್ ಆ್ಯಪ್ ಸಹಾಯವಾಣಿ ಸಂಖ್ಯೆಗಳನ್ನು ಆರಂಭಿಸಲಾಗಿದ್ದು, ಆ ಕುರಿತು ಸಾಮಾಜಿಕ ಮಾಧ್ಯಮದ ಮೂಲಕ ಬೆಸ್ಕಾಂ ಮಾಹಿತಿ ನೀಡಿದೆ. ವಿದ್ಯುತ್ ಸಂಬಂಧಿತ ಸಮಸ್ಯೆಗಳ ಫೋಟೊ ಅಥವಾ ವಿಡಿಯೊಗಳನ್ನು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟ ವಾಟ್ಸ್‌ಆ್ಯಪ್ ಸಹಾಯವಾಣಿ ಸಂಖ್ಯೆಗೆ ಕಳುಹಿಸಿ, ತ್ವರಿತ ಪರಿಹಾರ ಪಡೆಯಿರಿ. ಹೆಚ್ಚಿನ ಮಾಹಿತಿಗಾಗಿ ಬೆಸ್ಕಾಂ ಸಹಾಯವಾಣಿ 1912ಕ್ಕೆ ಕರೆಮಾಡಿ ಎಂದು ಸಂದೇಶದಲ್ಲಿ ಬೆಸ್ಕಾಂ ಮನವಿ ಮಾಡಿದೆ. ಪ್ರತಿ ಜಿಲ್ಲೆಗಳಿಗೂ ವಿಶೇಷ ವಾಟ್ಸ್ ಆಪ್ ಸಹಾಯವಾಣಿ ಸಂಖ್ಯೆಗಳಿದ್ದು, ನಿಮ್ಮ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಫೋಟೊ, ವಿಡಿಯೊಗಳನ್ನು ನಿಮ್ಮ ಜಿಲ್ಲೆಗೆ ಸಂಬಂಧಪಟ್ಟ ವಾಟ್ಸ್‌ಆಪ್ ಸಹಾಯವಾಣಿ ಸಂಖ್ಯೆಗೆ ಕಳುಹಿಸಿ, ತ್ವರಿತ ಪರಿಹಾರ ಪಡೆಯಿರಿ ಎಂದು ಬೆಸ್ಕಾಂ ಗ್ರಾಹಕರಿಗೆ ಸಲಹೆ ನೀಡಿದೆ.

ವಾಟ್ಸ್‌ಆ್ಯಪ್ ಸಂಖ್ಯೆ

- ಕೋಲಾರ: 8277884015
- ಚಿಕ್ಕಬಳ್ಳಾಪುರ: 8277884016
- ಬಿಆರ್‌ಸಿ: 8277884017
- ರಾಮನಗರ: 8277884018
- ತುಮಕೂರು: 8277884019
- ಚಿತ್ರದುರ್ಗ: 8277884020
- ದಾವಣಗೆರೆ: 8277884021

ಬೆಂ.ನಗರ ಸಹಾಯವಾಣಿ

- ದಕ್ಷಿಣ ವೃತ್ತ: 8277884011
- ಪಶ್ಚಿಮ ವೃತ್ತ: 8277884012
- ಪೂರ್ವ ವೃತ್ತ: 8277884013
- ಉತ್ತರ ವೃತ್ತ: 8277884014

ಸಿಎಂ ಸಿದ್ದರಾಮಯ್ಯ ಆರೋಪ ಸರಿ

ರಾಜ್ಯಕ್ಕೆ ಕೇಂದ್ರದಿಂದ ತಾರತಮ್ಯ ಧೋರಣೆ

ದಾವಣಗೆರೆ: ರಾಜ್ಯಕ್ಕೆ ಅನುದಾನ ಬಿಡುಗಡೆ ಮಾಡುವಲ್ಲಿ ಮಲತಾಯಿ ಧೋರಣೆ ಅನುಸರಿಲಾಗುತ್ತಿದೆ ಎಂದು ಸಚಿವ ಈಶ್ವರ ಖಂಡ್ರೆ ಕೇಂದ್ರ ಸರಕಾರದ ವಿರುದ್ಧ ಕಿಡಿಕಾರಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ರಾಜ್ಯದಿಂದ ಪ್ರತಿ ವರ್ಷ 4.5ಲಕ್ಷ ಕೋಟಿಯಷ್ಟು ತೆರಿಗೆಯನ್ನು ಕೇಂದ್ರ ಸರಕಾರಕ್ಕೆ ಕಟ್ಟಲಾಗುತ್ತಿದೆ. ಆದರೆ ರಾಜ್ಯಕ್ಕೆ ಬರಬೇಕಾದ ನ್ಯಾಯಯುತ ಅನುದಾನ ನೀಡುವಲ್ಲಿ ಕೇಂದ್ರ ಸರಕಾರ ತಾರತಮ್ಯ ಧೋರಣೆ ಮಾಡುತ್ತಿದೆ. ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ನೀಡುತ್ತಿರುವುದು 40 ರಿಂದ 50 ಸಾವಿರ ಕೋಟಿ ಮಾತ್ರ. ಅದನ್ನು ಸರಿಯಾಗಿ ನೀಡುತ್ತಿಲ್ಲ. ಕೇಂದ್ರದ ವಿರುದ್ಧ ಸಿಎಂ ಸಿದ್ದರಾಮಯ್ಯ ಅವರು ಮಾಡುತ್ತಿರುವ ಆರೋಪ ಸರಿಯಾಗಿದೆ. ಮಾಧ್ಯಮ ಹಾಗೂ ಸೋಷಿಯಲ್ ಮೀಡಿಯಾ ಮೂಲಕ ಕೇಂದ್ರದ ವಿರುದ್ಧ ನಾವು ಕೂಡ ಹೋರಾಟ ಮಾಡುತ್ತೇವೆ ಎಂದು ಸಚಿವ ಈಶ್ವರ್ ಖಂಡ್ರೆ ಹೇಳಿದರು. ಲಿಂಗಾಯತ ಮಹಾಸಭಾದ ರಾಷ್ಟ್ರೀಯ ಅಧ್ಯಕ್ಷ ರಾದ ಶಾಮನೂರು ಶಿವಶಂಕರಪ್ಪ ಅವರ ನೇತೃತ್ವದಲ್ಲಿ ಪಂಚಪೀಠಾಧೀಶರರು ಒಂದಾಗುತ್ತಿರುವುದು ಅವರ ಅಸಂಖ್ಯಾತ ಅಭಿಮಾನಿಗಳು, ಅನುಯಾಯಿಗಳು, ಭಕ್ತರಿಗೆ ಸಿಹಿ ಸುದ್ದಿ. ಶಾಮನೂರು ಶಿವಶಂಕರಪ್ಪ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಮಗಳ ಮದುವೆ ಒಪ್ಪಲಾರೆ | ತಂದೆ ಬಾಲಕೃಷ್ಣ ನಾಯ್ಕ್ ಆರೋಪ

ಚೈತ್ರಾ, ಆಕೆಯ ಪತಿ ಇಬ್ಬರೂ ಕಳ್ಳರು

ಕುಂದಾಪುರ: ಇತ್ತೀಚೆಗೆ ವಿವಾಹವಾಗಿರುವ ಬಿಗ್‌ಬಾಸ್ ಖ್ಯಾತಿಯ ಚೈತ್ರಾ ಕುಂದಾಪುರ ಬಗ್ಗೆ ಅವರ ತಂದೆ ಬಾಲಕೃಷ್ಣ ನಾಯ್ಕ್ ಅವರು ಗಂಭೀರವಾದ ಸರಣಿ ಆರೋಪಗಳನ್ನು ಮಾಡಿದ್ದಾರೆ.

ಇತ್ತೀಚೆಗೆ ಚೈತ್ರಾ ಅವರು ಶ್ರೀಕಾಂತ್ ಕಶ್ಯಪ್ ಎನ್ನುವವರ ಜತೆ ದಾಂಪತ್ಯ ಜೀವನಕ್ಕೆ ಕಾಲಿಟ್ಟಿದ್ದಾರೆ. ಆಪ್ತರು ಹಾಗೂ ಸ್ನೇಹಿತರ ಸಮ್ಮುಖದಲ್ಲಿ ಸರಳವಾಗಿ ವೈವಾಹಿಕ ಜೀವನಕ್ಕೆ ಚೈತ್ರಾ ಕಾಲಿಟ್ಟಿದ್ದಾರೆ. ನೂತನ ಜೀವನ ಆರಂಭವಾದ ಕೆಲವೇ ದಿನಗಳಲ್ಲಿ ಅವರ ತಂದೆ ಗಂಭೀರವಾದ ಆರೋಪಗಳನ್ನು ಮಾಡಿರುವುದು ಸದ್ದು ಮಾಡಿದೆ.

ಸುದ್ದಿಗಾರರೊಂದಿಗೆ ಚೈತ್ರಾ ತಂದೆ ಬಾಲಕೃಷ್ಣ ನಾಯ್ಕ್ ಮಾತನಾಡಿ, ನನ್ನ ಮಗಳು ವಿವಾಹಕ್ಕೆ ನನಗೆ ಸರಿಯಾದ ಆಮಂತ್ರಣ ಕೊಟ್ಟಿಲ್ಲ. ಮಗಳ ಮದುವೆಯನ್ನು ನಾನು ಒಪ್ಪಲಾರೆ. ಚೈತ್ರಾ ಹಾಗೂ ಆಕೆಯ ಪತಿ ಇಬ್ಬರೂ ಕಳ್ಳರು ಎಂದಿದ್ದಾರೆ. ನನ್ನ ಪತ್ನಿ ಕೂಡ ಮಗಳ ಬೆಂಬಲಕ್ಕೆ ನಿಂತಿದ್ದಾಳೆ. ಇವರು ಹಣದ ಆಸೆಗೆ ನನ್ನನ್ನು ದೂರವಿಟ್ಟಿದ್ದಾರೆ. ಗೋವಿಂದ ಬಾಬು ಪೂಜಾರಿ ಪ್ರಕರಣದಲ್ಲಿ ಇವರು ಹಣ ಹಂಚಿಕೊಂಡಿದ್ದಾರೆ. ನನಗೆ ನನ್ನ ದೊಡ್ಡ ಮಗಳು ಮಾತ್ರ ಆಸರೆ ಎಂದಿದ್ದಾರೆ.

> ಚೈತ್ರಾ ಮದುವೆ ಸಂದರ್ಭ ಆಕೆ ನನ್ನಲ್ಲಿ ಹಣ ಕೇಳಿದಳು. ನಾನು ಹೋಟೆಲ್‌ನಲ್ಲಿ ಕೆಲಸ ಮಾಡುವ ಸಾಮಾನ್ಯ ನೌಕರ. ಚೈತ್ರಾ ಮತ್ತು ಆಕೆಯ ತಾಯಿ ಹಣಕ್ಕಾಗಿ ನನ್ನನ್ನು ದೂರವಿಟ್ಟಿದ್ದಾರೆ. ಚೈತ್ರ ಪತಿ ನಮ್ಮ ಮನೆಯಲ್ಲಿ ಇದ್ದವನು. ಅವನು ಕೂಡ ಕಳ್ಳ. ಅವರಿಗೆ ಮಾನ ಮರ್ಯಾದೆ ಇಲ್ಲ. ಈಗ ನನ್ನ ಕುಟುಂಬದ ಮಾನ ಮರ್ಯಾದೆ ಕೂಡ ತೆಗೆದಿದ್ದಾರೆ.
>
> ಬಾಲಕೃಷ್ಣ ನಾಯ್ಕ್, ಚೈತ್ರಾ ಕುಂದಾಪುರ ತಂದೆ

ನನ್ನ ತಂದೆ ದೊಡ್ಡ ಕುಡುಕ

ಚೈತ್ರಾ ತಂದೆಯ ಆರೋಪಗಳು ಎಲ್ಲೆಡೆ ಸುದ್ದಿಯಾಗುತ್ತಿದ್ದಂತೆ ಈ ಕುರಿತು ಚೈತ್ರಾ ಅವರು ಸೋಶಿಯಲ್ ಮೀಡಿಯಾದಲ್ಲಿ ಬರೆದುಕೊಂಡಿದ್ದಾರೆ. ಕುಡುಕ ತಂದೆಯ ಚಿತ್ರ ಹಿಂಸೆ ಅನುಭವಿಸಿದವರಿಗಷ್ಟೇ ಗೊತ್ತು. ಎಂತಹ ಮಕ್ಕಳಿಗೂ ಕುಡುಕ ತಂದೆ ಸಿಗಬಾರದು. ಎರಡು ಕ್ವಾಟರ್ ನಾನು ಕೊಟ್ರೆ ನನ್ನ ಮಕ್ಕಳು ದೇವರು ಅನ್ನುವವರ ಮಾತಿಗೆ ಬೆಲೆ ಕೊಡುವವರು ಮೂರ್ಖರಾಗ್ತಾರೆ ಎಂದು ಬರೆದುಕೊಂಡಿದ್ದಾರೆ.

ರೈಲ್ವೆ ಕಾಮಗಾರಿಗಳ ಬಾಕಿ ಹಣ ಕೊಡಿಸಿ

ಕುಷ್ಟಗಿ: ರಾಜ್ಯದಲ್ಲಿ ಆಗಬೇಕಾದ ರೈಲ್ವೆ ಸಂಬಂಧಿತ ಕಾಮಗಾರಿಗಳನ್ನು ಪೂರ್ಣಗೊಳಿಸಲು ರಾಜ್ಯ ಸರಕಾರ ನೀಡಬೇಕಾದ 837 ಕೋಟಿ ಬಾಕಿ ಉಳಿದಿದ್ದು, ಮುಖ್ಯಮಂತ್ರಿ ಆರ್ಥಿಕ ಸಲಹೆಗಾರರಾದ ಬಸವರಾಜ ರಾಯರಡ್ಡಿ ತ್ವರಿತವಾಗಿ ಈ ಹಣ ಕೊಡಿಸಬೇಕು ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ ಆಗ್ರಹಿಸಿದರು.

ಪಟ್ಟಣದಲ್ಲಿ ಗುರುವಾರ ಕುಷ್ಟಗಿ-ತಳಕಲ್ ರೈಲಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿ, ಅನೇಕ ವರ್ಷಗಳಿಂದ ನನೆಗುದಿಗೆ ಬಿದ್ದ ಯೋಜನೆಗಳನ್ನು ಪೂರ್ಣಗೊಳಿಸಲು ಕೇಂದ್ರ ಸರಕಾರ 7 ಲಕ್ಷ ಕೋಟಿ ಖರ್ಚು ಮಾಡುತ್ತಿದೆ. ಈ ವರ್ಷದ ಅಂತ್ಯದಲ್ಲಿ ದೇಶದ ಎಲ್ಲ ರೈಲು ಮಾರ್ಗಗಳನ್ನು ವಿದ್ಯುದ್ದೀಕರಣ ಮಾಡಲಾಗುವುದು ಎಂದು ತಿಳಿಸಿದರು. ಪ್ರಸ್ತುತ ದೇಶದಲ್ಲಿ 1,400 ನಿಲ್ದಾಣಗಳನ್ನು 20 ಸಾವಿರ ಕೋಟಿ ವೆಚ್ಚದಲ್ಲಿ ವಿಮಾನ ನಿಲ್ದಾಣದ ಮಾದರಿಯಲ್ಲಿ ಅಭಿವೃದ್ಧಿ ಮಾಡಲಾಗುತ್ತಿದ್ದು, ಇದರಲ್ಲಿ ರಾಜ್ಯದ 61 ನಿಲ್ದಾಣಗಳು ಕೂಡ ಸೇರಿವೆ. ಆಲಮಟ್ಟಿಯಿಂದ-ಯಾದಗಿರಿ ತನಕದ 162 ಕಿ.ಮೀ. ಮಾರ್ಗದ ಅಂತಿಮ ಸ್ಥಳ ಸಮೀಕ್ಷೆ ಮಾಡಲು 4.05 ಕೋಟಿ, ಭದ್ರಾವತಿಯಿಂದ ಚನ್ನಗಿರಿ ಮಾರ್ಗವಾಗಿ ಚಿಕ್ಕಜಾಜೂರು ತನಕ 73 ಕಿ.ಮೀ. ಸರ್ವೆ ಮಾಡಲು ರೈಲ್ವೆ ಮಂಡಳಿಯ ಅನುಮತಿ ಲಭಿಸಿದೆ ಎಂದು ಹೇಳಿದರು.

ಖುರೇಷಿ ವಿರುದ್ಧ ವಿವಾದಾತ್ಮಕ ಹೇಳಿಕೆ ನೀಡಿದ್ದ ಮಧ್ಯಪ್ರದೇಶ ಸಚಿವ

ವಿಜಯ್ ಶಾ ವಿರುದ್ಧ ಕ್ರಮಕ್ಕೆ ಪತ್ರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಕರ್ನಲ್ ಸೋಫಿಯಾ ಖುರೇಷಿ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಮಧ್ಯಪ್ರದೇಶ ಸಚಿವ ವಿಜಯ್ ಶಾ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಕೇಂದ್ರ ಸರಕಾರಕ್ಕೆ ಶಿಫಾರಸು ಮಾಡಲು ಗೃಹ ಸಚಿವ ಡಾ. ಪರಮೇಶ್ವರ ಸೂಚನೆ ನೀಡಿದ್ದಾರೆ.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ಕರ್ನಲ್ ಸೋಫಿಯಾ ಖುರೇಷಿ ಅವರು ಬೆಳಗಾವಿಯ ಸೊಸೆ. ಅವರ ಬಗ್ಗೆ ವಿವಾದಾತ್ಮಕ ಹೇಳಿಕೆ ನೀಡಿರುವ ಸಚಿವನ ವಿರುದ್ಧ ಎಫ್‌ಐಆರ್ ಮಾಡಿಕೊಂಡು, ಕ್ರಮ ತೆಗೆದುಕೊಳ್ಳುವ ಕುರಿತು ಕೇಂದ್ರ ಸರಕಾರಕ್ಕೆ ತಿಳಿಸುವಂತೆ ಬೆಳಗಾವಿ ಎಸ್‌ಪಿಗೆ ಸೂಚಿಸಿದ್ದೇನೆ. ಬಿಜೆಪಿ ಮುಖಂಡನ ಹೇಳಿಕೆ ಕರ್ನಲ್ ಖುರೇಷಿ ಅವರಿಗಷ್ಟೆ ಅವಮಾನದಂತೆ ಅಲ್ಲ. ಇಡೀ ದೇಶಕ್ಕೆ ಅವಮಾನ ಮಾಡಿದಂತೆ. ಇಂತಹ ಕೀಳು ಮನಸ್ಸು ಯಾರಿಗೂ ಬರಬಾರದು ಎಂದು ಟೀಕಿಸಿದರು.

ಕೇಂದ್ರದಿಂದ ಹಣ ಬಾಕಿ ಬಗ್ಗೆ ಪ್ರತಿಕ್ರಿಯಿಸಿ, ಕಳೆದ ಎರಡು ವರ್ಷದಿಂದಲೂ ರಾಜ್ಯಕ್ಕೆ ಬರಬೇಕಾದ ಅನುದಾನವನ್ನು ಕೇಂದ್ರ ಸರಕಾರಕ್ಕೆ ಕೇಳುತ್ತಿದ್ದೇವೆ. ಅನೇಕ ಕಾರಣಗಳಿಂದ ನಿಧಾನವಾಗುತ್ತಿದೆ. ಕೆಲವು ಸಂದರ್ಭದಲ್ಲಿ ಬರುವುದಿಲ್ಲ. ಈ ಬಗ್ಗೆ ಮುಖ್ಯಮಂತ್ರಿಯವರು ಸಭೆ ನಡೆಸಿದ್ದಾರೆ. ಕೇಂದ್ರ ಸರಕಾರಕ್ಕೆ ಒತ್ತಾಯಿಸಿ ಹಣ ಬಿಡುಗಡೆ ಮಾಡಿಸುವಂತೆ ರಾಜ್ಯದ ಸಂಸದರಿಗೆ ಮನವಿ ಮಾಡಿದ್ದಾರೆ. ಕೇಂದ್ರದಿಂದ ರಾಜ್ಯಕ್ಕೆ ಐದೂವರೆ ಸಾವಿರ ಕೋಟಿ ತಕ್ಷಣ ಬರಬೇಕು. ರಾಜ್ಯ ಮತ್ತು ಕೇಂದ್ರದ ನಡುವೆಯಿರುವ ಸಂಬಂಧದ ನಿಯಮಗಳನ್ನು ಆಧರಿಸಿ ಒತ್ತಾಯ ಮಾಡಬೇಕಾಗುತ್ತದೆ. ಕೊನೆಯ ಬಾರಿ ಕೇಂದ್ರ ಸರಕಾರಕ್ಕೆ ಒತ್ತಾಯಿಸಿ, ದೆಹಲಿ ಪ್ರತಿಭಟನೆ ನಡೆಸಲಾಯಿತು. ನಮಗೆ ಬರಬೇಕಾದ ಅನುದಾನ ಮಂಜೂರು ಮಾಡಿದರೆ, ನಾವೇಕೆ ಒತ್ತಾಯಿಸುತ್ತೇವೆ. ಹಣ ಬಿಡುಗಡೆಯಾದರೆ ರಾಜ್ಯಗಳ ಅಭಿವೃದ್ಧಿಗೆ ಸಹಾಯವಾಗುತ್ತದೆ. ಹಣ ಬಿಡುಗಡೆ ಮಾಡುವಂತೆ ನಾನೂ ಸಹ ಒತ್ತಾಯಿಸುತ್ತೇನೆ ಎಂದು ತಿಳಿಸಿದರು.

> ವಿಜಯನಗರ ಜಿಲ್ಲೆಯ ಹೊಸಪೇಟೆಯಲ್ಲಿ ಇದೇ 20ರಂದು ನಡೆಯುವ ಸಮಾವೇಶ ದೊಡ್ಡ ಪ್ರಮಾಣದಲ್ಲಿ ಮಾಡುತ್ತಿದ್ದೇವೆ. ಮುಖ್ಯವಾಗಿ ಕಂದಾಯ ಇಲಾಖೆಯಿಂದ 50 ಸಾವಿರಕ್ಕೂ ಹೆಚ್ಚು ಜನರಿಗೆ ಹಕ್ಕು ಪತ್ರಗಳನ್ನು ನೀಡಲಾಗುತ್ತಿದೆ. ಇದೊಂದು ಸರಕಾರದ ಕಾರ್ಯಕ್ರಮ. ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ, ಸುರ್ಜೇವಾಲಾ ಭಾಗವಹಿಸಲಿದ್ದಾರೆ.
>
> - ಡಾ.ಜಿ. ಪರಮೇಶ್ವರ, ಗೃಹ ಸಚಿವ

ಸೋಫಿಯಾ ಪತಿ ಮನೆ ಮೇಲೆ ದಾಳಿ ವದಂತಿ: ಎಫ್‌ಐಆರ್

ಬೆಳಗಾವಿ : ಕರ್ನಲ್ ಸೋಫಿಯಾ ಖುರೇಷಿ ಮಾವನ ಮನೆ ಮೇಲೆ ಹಿಂದೂಪರ ಸಂಘಟನೆ ಸದಸ್ಯರು ದಾಳಿ ನಡೆಸಿದ್ದಾರೆ ಎಂದು ಫೋಟೊ ಒಂದನ್ನು ಪ್ರಕಟಿಸಿ ಸುಳ್ಳು ಸುದ್ದಿ ಹರಡಿದ್ದ ಆರೋಪಿಗಳ ವಿರುದ್ಧ ಬೆಳಗಾವಿ ಜಿಲ್ಲಾ ಪೊಲೀಸರು ಪ್ರಕರಣ ದಾಖಲಿಸಿ ತನಿಖೆ ಕೈಗೊಂಡಿದ್ದಾರೆ. ಈ ಕುರಿತು ಮಾಹಿತಿ ನೀಡಿರುವ ಬೆಳಗಾವಿ ಪೊಲೀಸ್ ವರಿಷ್ಠಾಧಿಕಾರಿ ಡಾ. ಭೀಮಾಶಂಕರ ಗುಳೆದ್ ಅವರು, ಹಿಂದೂ ಹಾಗೂ ಮುಸ್ಲಿಂ ಧರ್ಮಿಯರ ಮಧ್ಯೆ ದ್ವೇಷ ಬೀಜ ಬಿತ್ತುವ ಉದ್ದೇಶದಿಂದ ಕೆನಡಾದಲ್ಲಿ ಕುಳಿತು ಆರೋಪಿ ಸಾಮಾಜಿಕ ಜಾಲತಾಣದಲ್ಲಿ ಸೋಫಿಯಾ ಖುರೇಷಿ ಅವರ ಕುರಿತು ಸುಳ್ಳು ಸುದ್ದಿ ಹರಡಿದ್ದಾನೆ. ಕೂಡಲೇ ಎಕ್ಸ್‌ನಲ್ಲಿ ಹಾಕಿದ್ದ ಪೋಸ್ಟ್ ಡಿಲೀಟ್ ಮಾಡಿಸಲಾಗಿದೆ. ಕೆನಡಾದಲ್ಲಿ ಕುಳಿತು ಪೋಸ್ಟ್ ಮಾಡಿದ್ದ ಅನೀಸ್ ಎಂಬ ಹೆಸರಿನ ವಿರುದ್ಧ ಪ್ರಕರಣ ಗಂಭೀರವಾಗಿ ತೆಗೆದುಕೊಳ್ಳಲಾಗಿತ್ತು. ಬಿಎನ್‌ಎಸ್ ಕಾಯ್ದೆಯಡಿ 353(2), 192 ಸೆಕ್ಷನ್ ಅಡಿಯಲ್ಲಿ ಸ್ವಯಂ ಪ್ರೇರಿತ ಪ್ರಕರಣ ದಾಖಲಾಗಿದೆ ಎಂದು ತಿಳಿಸಿದ್ದಾರೆ.

ಮೃತ ಬಾಲಕಿ ತಾಯಿಗೆ ಧೈರ್ಯ ತುಂಬಿದ ಸಂಸದರು

ಹತ್ಯೆಯಾದ ಅಪ್ರಾಪ್ತ ಬಾಲಕಿ ಮನೆಗೆ ಡಾ.ಮಂಜುನಾಥ್ ಭೇಟಿ

ಅಪ್ರಾಪ್ತ ಬಾಲಕಿ ಹತ್ಯೆ ಪ್ರಕರಣ ಹಿನ್ನೆಲೆ ಭದ್ರಾಪುರ ಗ್ರಾಮಕ್ಕೆ ಸಂಸದ ಡಾ.ಮಂಜುನಾಥ್ ಭೇಟಿ ನೀಡಿ ಮೃತ ಬಾಲಕಿ ಕುಟುಂಬಕ್ಕೆ ಸಾಂತ್ವನ ಹೇಳಿದರು.

ರಾಮನಗರ: ಬಿಡದಿಯ ಭದ್ರಾಪುರ ಗ್ರಾಮದ ಅಪ್ರಾಪ್ತ ಬಾಲಕಿ ಹತ್ಯೆ ಪ್ರಕರಣ ಹಿನ್ನೆಲೆ ಗುರವಾರ ಭದ್ರಾಪುರ ಗ್ರಾಮಕ್ಕೆ ಸಂಸದ ಡಾ.ಮಂಜುನಾಥ್ ಭೇಟಿ ನೀಡಿ ಮೃತ ಬಾಲಕಿ ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ.

ಮೃತ ಬಾಲಕಿ ತಾಯಿಗೆ ಧೈರ್ಯ ತುಂಬಿದ ಸಂಸದರು, ಘಟನೆ ಕುರಿತು ಪೊಲೀಸರಿಂದಲೂ ಮಾಹಿತಿ ಸಂಗ್ರಹಿಸಿದ್ದಾರೆ. ವಿಶೇಷಚೇತನ ಬಾಲಕಿ ಹತ್ಯೆಗೆ ವಿಷಾದ ವ್ಯಕ್ತಪಡಿಸಿದ ಸಂಸದರು, ಈ ಬಗ್ಗೆ ಕೂಲಂಕಷವಾಗಿ ತನಿಖೆ ನಡೆಸುವಂತೆ ಪೊಲೀಸರಿಗೆ ಸೂಚನೆ ನೀಡಿದರು. ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 14 ವರ್ಷದ ಬಾಲಕಿಯನ್ನ ಹತ್ಯೆ ಮಾಡಿರೋದು ವಿಕೃತಿ. ಯಾವ ಕಾರಣಕ್ಕೆ ಹತ್ಯೆಯಾಗಿದೆ ಎಂಬುದು ಮರಣೋತ್ತರ ವರದಿ ಹಾಗೂ ಎಫ್‌ಎಸ್‌ಎಲ್ ವರದಿಯಲ್ಲಿ ಬಹಿರಂಗವಾಗಬೇಕಿದೆ. ಈಗಾಗಲೇ ಎರಡು-ಮೂರು ತಂಡಗಳ ರಚನೆ ಮಾಡಿಕೊಂಡು ಪೊಲೀಸರು ತನಿಖೆ ಮಾಡುತ್ತಿದ್ದಾರೆ. ಬಾಲಕಿ ಸಾವಿಗೆ ನ್ಯಾಯ ಒದಗಿಸುವ ಕೆಲಸ ಆಗಬೇಕು. ಗ್ರಾಮಕ್ಕೆ ಕೆಲ ಮೂಲಭೂತ ಸೌಕರ್ಯಗಳ ಕೊರತೆ ಇದೆ. ಅದನ್ನೂ ಸರಿಪಡಿಸುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇವೆ ತಿಳಿಸಿದರು.

ವಿಶ್ವವಾಣಿ

ಸಂಪಾದಕೀಯ

ಉಗ್ರರು ಇನ್ನಾದರೂ ಪಾಠ ಕಲಿಯಲಿ

ಕಾಶ್ಮೀರದ ಪಹಲ್ಗಾಮ್‌ನಲ್ಲಿ ಮೆರೆದ ಪೈಶಾಚಿಕ ಕೃತ್ಯಕ್ಕೆ ಉಗ್ರರ ಮೇಲೆ ಭಾರತವು ಪ್ರತೀಕಾರಕ್ಕೆ ಮುಂದಾಗಿ 'ಆಪರೇಷನ್ ಸಿಂದೂರ್' ಕಾರ್ಯಾಚರಣೆಯನ್ನು ಕೈಗೊಂಡ ಫಲವಾಗಿ, ಪಾಕಿಸ್ತಾನದ ಆಶ್ರಯದಲ್ಲಿದ್ದ ಉಗ್ರರ ಹತ್ತು ಹಲವು ನೆಲೆಗಳು ಧ್ವಂಸಗೊಂಡಿದ್ದು ಈಗಾಗಲೇ ಜಗಜ್ಜಾಹೀರು. ಅದರಲ್ಲೂ, ಉಗ್ರ ಅಜರ್ ಮಸೂದ್‌ನ ಕುಟುಂಬದ 10 ಜನರು ಮತ್ತು ನಾಲ್ವರು ಅತ್ಯಾಪ್ತರು ಈ ಕಾರ್ಯಾಚರಣೆಯಲ್ಲಿ ನಾಮಾವಶೇಷವಾದರು. ಇದಕ್ಕೂ ಮುನ್ನ ಕೆಲ ವರ್ಷದ ಹಿಂದೆ ಭಾರತ ಕೈಗೊಂಡಿದ್ದ ಸರ್ಜಿಕಲ್ ಸ್ಟ್ರೈಕ್‌ನಲ್ಲಿ ಉಗ್ರರ ತರಬೇತಿ ಶಿಬಿರಗಳು ಹೇಳ ಹೆಸರಿಲ್ಲದಂತೆ ನಾಶವಾಗಿದ್ದೂ ಜನರ ಮನದಲ್ಲಿನ್ನೂ ಹಸಿರಾಗಿದೆ. ಇನ್ನು, ವಿನಾಕಾರಣ ಇಸ್ರೇಲ್ ಮೇಲೆ ಭೀಕರ ದಾಳಿ ಕೈಗೊಂಡ ಕಾರಣಕ್ಕೆ ಹಮಾಸ್ ಉಗ್ರರಿಗೆ ಒದಗಿದ ಗತಿಯೇನು ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಈ ವೇಳೆ ಯಾವ ದಯೆ-ದಾಕ್ಷಿಣ್ಯವಿಲ್ಲದೆ ಗಣನೀಯ ಸಂಖ್ಯೆಯ ಹಮಾಸ್ ಉಗ್ರರನ್ನು ಯಮಪುರಿಗೆ ಅಟ್ಟಿದ ಹೆಗ್ಗಳಿಕೆ ಇಸ್ರೇಲ್‌ನ ಯೋಧರದ್ದು. ಈ ಪಟ್ಟಿಗೆ ಇತ್ತೀಚೆಗಷ್ಟೇ ಸೇರ್ಪಡೆಯಾಗಿದ್ದಾನೆ ಹಮಾಸ್ ಉಗ್ರ ಸಂಘಟನೆಯ ಮುಖ್ಯಸ್ಥ ಮುಹಮ್ಮದ್ ಸಿನ್ವರ್. ಗಾಜಾಪಟ್ಟಿಯ ಆಸ್ಪತ್ರೆಯೊಂದರ ಮೇಲೆ ಇಸ್ರೇಲ್ ವಾಯುಪಡೆ ನಡೆಸಿದ ತೀವ್ರ ವಾಯುದಾಳಿಯ ಫಲಶ್ರುತಿಯಿದು. ಅಲ್ಲಿ ಮುಹಮ್ಮದ್ ಸಿನ್ವರ್ ಭೂಗತನಾಗಿದ್ದುಕೊಂಡು ಕಾರ್ಯಾಚರಣೆ ನಡೆಸುತ್ತಿದ್ದ ಎಂಬುದು ಲಭ್ಯಮಾಹಿತಿ. ಈ ಘಟನೆಗಳನ್ನೆಲ್ಲ ಇಲ್ಲಿ ಉಲ್ಲೇಖಿಸುತ್ತಿರುವುದಕ್ಕೆ ಕಾರಣವಿದೆ. ಅಡ್ಡದಾರಿ ಹಿಡಿದಿದ್ದರೂ ಸ್ವಲ್ಪವಾದರೂ ವಿವೇಕವಿರುವವರು ಇಂಥ ಬೆಳವಣಿಗೆಗಳನ್ನು ಕಂಡು ತಿದ್ದಿಕೊಳ್ಳುವ ಪ್ರಯತ್ನಕ್ಕೆ ಮುಂದಾಗುತ್ತಾರೆ. ಅಂತೆಯೇ, ಜಗತ್ತಿನ ವಿವಿಧ ದೇಶಗಳಲ್ಲಿ ಜನರ ಶಾಂತಿ ಮತ್ತು ನೆಮ್ಮದಿಗೆ ಕೊಳ್ಳಿಯಿಟ್ಟಿರುವ ಉಗ್ರರು ಮೇಲೆ ಉಲ್ಲೇಖಿಸಿರುವ ದುರ್ಘಟನೆಗಳಿಂದ ಇನ್ನಾದರೂ ಪಾಠ ಕಲಿಯಲಿ ಎಂಬುದು ಶಾಂತಿಪ್ರಿಯರ ಸಹಜ ನಿರೀಕ್ಷೆ ಮತ್ತು ಆಶಯ. ಎಲ್ಲ ಸಮಸ್ಯೆಗಳ ಪರಿಹಾರಕ್ಕೂ ಉಗ್ರವಾದವೊಂದೇ ಮಾರ್ಗವಲ್ಲ ಎಂಬುದನ್ನು ಇಂಥ ಉಗ್ರರು ಇನ್ನಾದರೂ ಅರಿತುಕೊಳ್ಳಲಿಕ್ಕೆ ಇದು ಸಕಾಲ.

ಸೊಂಪಾದಕೀಯ

ಸೀರೆ ಕದ್ದ ಧೀರ

27 ವರ್ಷದ ಹಿಂದೆ ಕಳ್ಳತನ ಮಾಡಿ ಕುಖ್ಯಾತಿ ಪಡೆದಿದ್ದ ವ್ಯಕ್ತಿಯೊಬ್ಬ ಈಗ ಪೊಲೀಸರ ಅತಿಥಿ ಆಗಿದ್ದಾನಂತೆ. ಮೊಳಕಾಲ್ಮೂರು ಪಟ್ಟಣದಲ್ಲಿ 9 ಸರಣಿ ಕಳ್ಳತನ ಪ್ರಕರಣಗಳಲ್ಲಿ ಭಾಗಿಯಾಗಿದ್ದ ಈ ವ್ಯಕ್ತಿ. ರೇಷ್ಮೆ ಸೀರೆಗಳಿಗೆ ಖ್ಯಾತಿ ಪಡೆದಿರುವ ಮೊಳಕಾಲ್ಮೂರಿನಲ್ಲಿ ಮನೆಗೆ ನುಗ್ಗಿ ಮಹಿಳೆಯರ ರೇಷ್ಮೆ ಸೀರೆಗಳನ್ನು ಕದಿಯುವುದರಲ್ಲಿ ಈತನದ್ದು 'ಸಿಲ್ಕಿ ಟಚ್' ಎನಿಸಿಕೊಂಡಿತ್ತು. ಮೊಳಕಾಲ್ಮೂರಿನಲ್ಲಿ ತನ್ನ ಕೈ ಚಳಕ ತೋರಿಸಿದ್ದ ಈತ ಅದರ ನಂತರ ಕಳ್ಳತನ ಬಿಟ್ಟು ಬದುಕು ಕಟ್ಟಿಕೊಂಡಿದ್ದ. ಆದರೆ ಕಳ್ಳತನ ಮಾಡಿ ಕಟ್ಟಿಕೊಂಡಿದ್ದ ಪಾಪ ಮಾತ್ರ ಈತನ ಬೆನ್ನು ಬಿಡಲಿಲ್ಲ. ಕಳ್ಳನ ಬುದ್ಧಿ ಮೊಣಕಾಲ್ ಕೆಳಗೆ ಅನ್ನುವಂತೆ ಈತನೇನೂ ಮತ್ತೆ ಕಳ್ಳತನ ಮಾಡಲು ಹೋಗಿ ಸಿಕ್ಕಿಬಿದ್ದಿಲ್ಲ. ಬದಲಾಗಿ ಪೊಲೀಸರ ರೆಕಾರ್ಡ್‌ನಲ್ಲಿ ಈತನ ಐಡೆಂಟಿಟಿ ಇನ್ನೂ 'ಕಳ್ಳ' ಅಂತಲೇ ಇರೋದ್ರಿಂದ ಈಗ ಈತ ಅಧಿಕೃತ ಕ್ರಿಮಿನಲ್ ಎನಿಸಿಕೊಂಡಿದ್ದಾನೆ. 27 ವರ್ಷಗಳ ಹಿಂದೆ ಕಳ್ಳತನ ಮಾಡುತ್ತಿದ್ದ ಈತ ತನ್ನ ಸಹಚರರು ಸಿಕ್ಕಿಬಿದ್ದಿದ್ದರೂ ತಾನು ಮಾತ್ರ ರೇಷ್ಮೆಯಂತೆ ನಾಜೂಕಾಗಿ ಜಾರಿಕೊಂಡಿದ್ದ. ಅದಾದ ನಂತರ ಬಳ್ಳಾರಿ, ನಂತರ ಬೆಂಗಳೂರು ಸೇರಿ ಊರಿಂದ ಊರಿಗೆ ಹಾರುವ ದುಂಬಿಯಂತೆ ತನ್ನ ಬದುಕು ಕಟ್ಟಿಕೊಂಡಿದ್ದ. ಈತನಿಗೆ ಮಡಿಕೇರಿಯ ಮಹಿಳೆಯೊಬ್ಬಳು ಫೋನ್‌ನಲ್ಲಿ ಪರಿಚಯ ಆಗಿ, ಈಕೆಯ ಪ್ರೇಮದಲ್ಲಿ ಬಿದ್ದಿದ್ದಾನೆ. ನಂತರ ಆಕೆ ಅಂಗವಿಕಲೆಯಾಗಿದ್ರೂ ಅವಳನ್ನು ಮದುವೆ ಆಗಿ ತನ್ನ ಪಾಡಿಗೆ ತಾನು ಸಂಸಾರ ಮಾಡಿಕೊಂಡಿದ್ದ. ಆದರೆ ಪೊಲೀಸರ ಕೈಗೆ ಸಿಕ್ಕದೆ ಬದುಕೋದು ಈತನಿಗೆ ಸಸಾರ ಆಗಲಿಲ್ಲ. ಈತ ಕಳ್ಳತನವನ್ನು ಮರೆತು ತನ್ನ ಪಾಡಿಗೆ ತಾನು ಕಟ್ಟಡ ಕಾರ್ಮಿಕನಾಗಿ ನಂತರ ಆ ಕೆಲಸ ಬಿಟ್ಟು, ಟೂರಿಸ್ಟ್ ಟ್ಯಾಕ್ಸಿ ಚಾಲಕನಾಗಿ ಕೆಲಸ ಮಾಡುತ್ತಿದ್ದ. ಮೊಳಕಾಲ್ಮೂರು ಈತನನ್ನು ಮರೆತರೂ ಪೊಲೀಸರು ಈತನನ್ನು ಮರೆತಿರಲಿಲ್ಲ. ಪ್ರತಿ ಕಳ್ಳತನ ಕೇಸ್ ಆದಾಗಲೂ ಈತ ಮಿಸ್ಸಿಂಗ್ ಅಂತಲೇ ನೋಟ್ ಮಾಡಿಕೊಳ್ಳುತ್ತಿದ್ದರು. ಇತ್ತೀಚೆಗೆ ಈತನ ಹೆಂಡತಿಯ ಫೇಸ್‌ಬುಕ್ ಅಕೌಂಟ್‌ನಿಂದಾಗಿ ಪೊಲೀಸರ ಅಕೌಂಟ್‌ನಲ್ಲಿ ಕಳ್ಳ ಎಂದೇ ನಮೂದಾಗಿದ್ದ ಈತ ಸಿಕ್ಕಿಬಿದ್ದಿದ್ದಾನೆ. ಸಣ್ಣ ವಯಸ್ಸಿನಲ್ಲಿ ಮಾಡಿದ್ದ ಸಣ್ಣಪುಟ್ಟ ತಪ್ಪುಗಳಿಂದಾಗಿ ಈತ ತನ್ನ 54ನೇ ವಯಸ್ಸಿನಲ್ಲಿ ಅಧಿಕೃತವಾಗಿ ಕಳ್ಳ ಅನ್ನೋ ಹಣೆಪಟ್ಟಿ ಹೊತ್ತುಕೊಳ್ಳಬೇಕಾಗಿ ಬಂದಿದೆ.

ಸಂಪಾದಕರ ಸದ್ಯಶೋಧನೆ

ಜಪಾನಿಯರ ವ್ಯವಹಾರ ಬುದ್ಧಿ

ಜಪಾನಿಯರು ಮಹಾ ಸಂಪ್ರದಾಯವಾದಿಗಳು. ಅವರು ಜಪಾನಿಯೇತರರನ್ನು ಮತ್ತು ವಿದೇಶಿಯರನ್ನು ಅಷ್ಟು ಸುಲಭವಾಗಿ ಒಪ್ಪಿಕೊಳ್ಳುವುದಿಲ್ಲ. ಅಷ್ಟೇ ಅಲ್ಲ, ಅವರು ಬೇರೆಯವರನ್ನು ಸರಳವಾಗಿ ಒಳಗೆ ಬಿಟ್ಟುಕೊಳ್ಳುವುದೂ ಇಲ್ಲ. ಬಿಜಿನೆಸ್ ವಿಷಯದಲ್ಲಿ ತುಸು ಜಿಗುಟು. ತಮ್ಮ ಮಾತೇ ಅಂತಿಮ ಎಂಬ ಜಾಯಮಾನದವರು. ಇದನ್ನು ಜಪಾನಿಯರು 'ಸಕೊಕು ಪ್ರಿಸಂ' ಅಂತ ಕರೆಯುತ್ತಾರೆ. ಇದಕ್ಕೆ ಐತಿಹಾಸಿಕ ಕಾರಣಗಳೂ ಉಂಟು. 'ಸಕೊಕು' ಎಂಬುದು ಟೋಕುಗಾವಾ ಶೋಗುನೇಟು ಆಡಳಿತದ ಅವಧಿಯಲ್ಲಿ ಜಪಾನ್ ಅನುಸರಿಸಿದ ರಾಷ್ಟ್ರೀಯ ಪ್ರತ್ಯೇಕತಾ ನೀತಿಯಾಗಿತ್ತು. ಈ ನೀತಿಯು 1630ರ ದಶಕದಲ್ಲಿ ಟೋಕುಗಾವಾ ಇಯೆಮಿತ್ಸು ಅವರ ಆಡಳಿತದಲ್ಲಿ ಜಾರಿಗೆ ಬಂದು, ಸುಮಾರು 220 ವರ್ಷಗಳ ಕಾಲ ಜಪಾನನ್ನು ಬಾಹ್ಯ ಪ್ರಭಾವಗಳಿಂದ ದೂರವಿಟ್ಟಿತ್ತು. 16ನೇ ಶತಮಾನದಲ್ಲಿ ಯುರೋಪಿಯನ್ ದೇಶಗಳು ಜಪಾನಿನೊಂದಿಗೆ ವ್ಯಾಪಾರ ಮತ್ತು ಧರ್ಮಪ್ರಚಾರವನ್ನು ಆರಂಭಿಸಿದವು. ಪೋರ್ಚುಗೀಸ್ ಮತ್ತು ಸ್ಪ್ಯಾನಿಷ್ ಮಿಷನರಿಗಳು ಕ್ರೈಸ್ತ ಧರ್ಮವನ್ನು ಹರಡಲು ಪ್ರಯತ್ನಿಸಿದರು. ಆದರೆ, ಈ ಧರ್ಮಪ್ರಚಾರವು ಸ್ಥಳೀಯ ಆಡಳಿತಕ್ಕೆ ಆತಂಕವನ್ನುಂಟು ಮಾಡಿತು. ಟೋಕುಗಾವಾ ಇಯೆಮಿತ್ಸು 1635ರಲ್ಲಿ ಸಕೊಕು ಆದೇಶವನ್ನು ಹೊರಡಿಸಿದರು. ಇದರಿಂದ ಜಪಾನಿಯರು ವಿದೇಶಗಳಿಗೆ ಹೋಗುವುದು ಅಥವಾ ವಿದೇಶದಿಂದ ಮರಳುವುದು ನಿಷಿದ್ಧವಾಯಿತು. ಜತೆಗೆ ಕ್ರೈಸ್ತ ಧರ್ಮವನ್ನು ಕಟ್ಟುನಿಟ್ಟಾಗಿ ನಿಷೇಧಿಸಲಾಯಿತು. ಪೋರ್ಚುಗೀಸ್ ವ್ಯಾಪಾರಿಗಳನ್ನು 1639ರಲ್ಲಿ ಸಂಪೂರ್ಣವಾಗಿ ಹೊರಗಿಡಲಾಯಿತು. ಹಾಗಾದರೆ ಸಕೊಕು ನೀತಿಯ ಪ್ರಮುಖ ಅಂಶಗಳಾದರೂ ಏನು? ಜಪಾನಿಯರು ವಿದೇಶಗಳಿಗೆ ಪ್ರಯಾಣಿಸುವಂತಿಲ್ಲ, ಈ ನಿಯಮ ಉಲ್ಲಂಘಿಸಿದರೆ ಮರಣದಂಡನೆ ವಿಧಿಸುವುದು. ವಿದೇಶಿಯರು ಕೂಡ ಜಪಾನಿಗೆ ಬರುವಂತಿಲ್ಲ, ಅನಧಿಕೃತ ಪ್ರವೇಶಕ್ಕೆ ಗಂಭೀರ ಶಿಕ್ಷೆ ವಿಧಿಸುವುದು. ಕ್ರೈಸ್ತ ಧರ್ಮವನ್ನು ಕಟ್ಟುನಿಟ್ಟಾಗಿ ನಿಷೇಧಿಸುವುದು. ಕ್ರೈಸ್ತ ಮಿಷನರಿಗಳು ಮತ್ತು ಅನುಯಾಯಿಗಳು ಕಣ್ತಪ್ಪಿಸಿ ಬಂದರೆ ಅವರಿಗೆ ಶಿಕ್ಷೆ ವಿಧಿಸುವುದು. ಡಚ್ ಮತ್ತು ಚೀನಿ ವ್ಯಾಪಾರಿಗಳಿಗೆ ಮಾತ್ರ ಅವಕಾಶ ನೀಡುವುದು. ಹಾಗಾದರೆ ಸಕೊಕು ನೀತಿಯಿಂದ ಆದ ಪರಿಣಾಮಗಳಾದರೂ ಏನು? ಈ ನೀತಿಯು ಜಪಾನಿನ ರಾಜಕೀಯ ಸ್ಥಿರತೆ ಮತ್ತು ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಕಾಯ್ದುಕೊಳ್ಳಲು ಸಹಾಯಕವಾಯಿತು. ಆದರೆ, ಈ ನೀತಿಯು ಜಪಾನಿನ ತಾಂತ್ರಿಕ ಮತ್ತು ವೈಜ್ಞಾನಿಕ ಪ್ರಗತಿಯನ್ನು ಹಿಮ್ಮೆಟ್ಟಿಸಿತು. ವ್ಯಾಪಾರದ ನಿರ್ಬಂಧದಿಂದ ಆರ್ಥಿಕ ಬೆಳವಣಿಗೆಗೆ ಅಡ್ಡಿಯಾಯಿತು. 19ನೇ ಶತಮಾನದಲ್ಲಿ ಪಶ್ಚಿಮ ದೇಶಗಳು ಜಪಾನಿನೊಂದಿಗೆ ವ್ಯಾಪಾರ ಸಂಬಂಧಗಳನ್ನು ಸ್ಥಾಪಿಸಲು ಒತ್ತಾಯಿಸತೊಡಗಿದವು. 1853ರಲ್ಲಿ ಅಮೆರಿಕದ ಕಾಮೊಡೋರ್ ಮೆಥ್ಯೂ ಪೆರಿ ಜಪಾನಿಗೆ ಬಂದ. ಜಪಾನನ್ನು ಬಾಹ್ಯ ಜಗತ್ತಿಗೆ ತೆರೆಯಲು ಒತ್ತಾಯಿಸಿದ. ಇದರಿಂದ 1854ರಲ್ಲಿ ಕನಗಾವಾ ಒಪ್ಪಂದದ ಮೂಲಕ ಜಪಾನ್ ತನ್ನ ಬಂದರುಗಳನ್ನು ವಿದೇಶಿಯರಿಗೆ ತೆರೆಯಿತು. ಇದರಿಂದ ಸಕೊಕು ನೀತಿಯ ಅಂತ್ಯವಾಯಿತು. ಜಪಾನಿಯರು ಮೇಲ್ನೋಟಕ್ಕೆ ಸಹಜವಾಗಿ ಕಂಡರೂ, ನಿಮ್ಮ ಪ್ರತಿ ಮಾತನ್ನೂ ಒರೆಗಲ್ಲಿಗೆ ಹಚ್ಚುತ್ತಾರೆ. ಜಪಾನಿಯರು ನಿರ್ಧಾರಗಳನ್ನು ಕೈಗೊಳ್ಳಲು ಸಾಕಷ್ಟು ಸಮಯವನ್ನು ತೆಗೆದುಕೊಳ್ಳುತ್ತಾರೆ. ನಾವು ಅವರೊಂದಿಗೆ ತಿಂಗಳುಗಳಿಂದ ಮಾತುಕತೆ ನಡೆಸುತ್ತಿದ್ದರೂ, ಅವರು ನಮ್ಮೊಂದಿಗೆ ವ್ಯವಹಾರಕ್ಕೆ ಒಪ್ಪಿದ್ದಾರಾ, ಇಲ್ಲವಾ ಎಂಬುದನ್ನು ತಿಳಿಯುವುದು ಅಸಾಧ್ಯ. ಅವರು ಸರಳವಾದ ವಿಷಯಗಳನ್ನು ಮತ್ತೆ ಮತ್ತೆ ಹೇಳುತ್ತಾರೆ. ಅವರೊಂದಿಗೆ ವ್ಯವಹರಿಸುವಾಗ ನಿಜವಾಗಿಯೂ ಅವರು ನಮ್ಮ ಮಾತುಗಳಿಗೆ ಸಹಮತ ವ್ಯಕ್ತಪಡಿಸಿದ್ದಾರೆ ಎಂದೇ ಅನಿಸುತ್ತದೆ. ಆದರೆ ಕೊನೆಯಲ್ಲಿ ಅವರು ಯಾವುದೇ ವಿವರಣೆಯಿಲ್ಲದೆ ನಮ್ಮನ್ನು ತಿರಸ್ಕರಿಸಿರುತ್ತಾರೆ. ನಾವು ತುಂಬಾ ಮಾಹಿತಿಯನ್ನು ಹಂಚಿಕೊಳ್ಳುತ್ತೇವೆ, ಆದರೆ ಅವರು ಗುಟ್ಟು ಬಿಟ್ಟುಕೊಡುವುದಿಲ್ಲ. ಮಾತುಕತೆಗಳ ಸಮಯದಲ್ಲಿ, ವಿದೇಶಿಯರು ಸಾಮಾನ್ಯವಾಗಿ ಜಪಾನಿನ ಕಂಪನಿಯೊಂದಿಗೆ ಒಪ್ಪಂದಕ್ಕೆ ಸಹಿ ಹಾಕುವಾಗ ತಕ್ಷಣದ ಆರ್ಥಿಕ ಲಾಭದ ಬಗ್ಗೆ ಯೋಚಿಸುತ್ತಾರೆ, ಆದರೆ ಜಪಾನಿಯರು ಒಪ್ಪಂದದ ಐದು ಅಥವಾ ಹತ್ತು ವರ್ಷಗಳ ನಂತರ ಏನಾಗುತ್ತದೆ ಎಂದು ಯೋಚಿಸುತ್ತಾರೆ.

ಮರೆಯಲಿ ಹ್ಯಾಂಗ ಮರೆವಿನ ಹಂಗ: ಮರೆವು ಒಳ್ಳೆಯದು

ಶಿಶಿರಕಾಲ

ಶಿಶಿರ್ ಹೆಗಡೆ

shishirh@gmail.com

ಚೀನಿಯರ ಪುರಾಣದಲ್ಲಿ ಹೀಗೊಂದು ಪರಿಕಲ್ಪನೆಯಿದೆ. ವ್ಯಕ್ತಿ ಸತ್ತ ನಂತರ ಆತನ 'ಆತ್ಮ' ಮರುಜನ್ಮ ಪಡೆಯಬೇಕೆಂದರೆ ಒಂದಿಷ್ಟು ಕೆಲಸಗಳನ್ನು ಪೂರೈಸಬೇಕು. ಅದರಲ್ಲಿ ಒಂದು- ಪಾತಾಳ ಲೋಕದ ಒಂದು ವಿಶೇಷ ಸೇತುವೆಯನ್ನು ದಾಟುವುದು. ಆ ಸೇತುವೆಯ ಹೆಸರು 'ಮರೆವಿನ ಸೇತುವೆ'. ಅಲ್ಲಿ ಹಾದುಹೋಗುವ ಪ್ರತಿ ಆತ್ಮಕ್ಕೆ 'ಮೆಂಗ್ ಪೊ' ಎಂಬ ದೇವತೆ ಮರೆವಿನ ಚಹಾ ಕೊಡುತ್ತಾಳೆ. ಆ ಚಹಾ ಕುಡಿದರಷ್ಟೇ ಮುಂದೆ ಹೋಗಬಹುದು. ಚಹಾದ ವಿಶೇಷತೆ ಏನೆಂದರೆ, ಅದನ್ನು ಕುಡಿದದ್ದೇ ತಡ, ಆತ್ಮ ತನ್ನ ಪೂರ್ವಜನ್ಮದ ಎಲ್ಲ ವಿಚಾರಗಳನ್ನೂ ಮರೆತುಬಿಡುತ್ತದೆ- ಕಂಪ್ಯೂಟರಿನ ಹಾರ್ಡ್ ಡಿಸ್ಕ್‌ನ ಮಾಹಿತಿಯನ್ನು ಫಾರ್ಮ್ಯಾಟ್ ಮಾಡಿ ಅಳಿಸಿದಂತೆ. ಮುಂದೆ ಒಂದು ಸ್ವಚ್ಛ ಹೊಸಜನ್ಮ. ಆದರೆ ಅಪರೂಪಕ್ಕೆ ಸರತಿಯಲ್ಲಿ ನಿಂತ ಕುಚೇಷ್ಟೆಯ ಕೆಲವು ಆತ್ಮಗಳು ಈ ಚಹಾ ಕುಡಿಯುವುದನ್ನು ತಪ್ಪಿಸಿಕೊಂಡುಬಿಡುತ್ತವಂತೆ. ಅಂಥವರು ಮುಂದಿನ ಜನ್ಮದಲ್ಲಿ ಹುಟ್ಟಿದಾಗಲೂ ಹಿಂದಿನದೆಲ್ಲ ನೆನಪಿಟ್ಟು ಕೊಳ್ಳುತ್ತಾರೆ. ಇದು ಅವರ ನಂಬಿಕೆ. ಮರುಜನ್ಮವನ್ನು ಭಾರತೀಯರಷ್ಟೇ ಅಲ್ಲ, ಬಹುತೇಕ ಸಂಸ್ಕೃತಿಯವರು ನಂಬುತ್ತಾರೆ. ಇನ್ನು ಕೆಲವರಿಗೆ 'ಇದ್ದರೂ ಇರಬಹುದು'. ಅಲ್ಲಲ್ಲಿ-ಆಗೀಗ ಎಳೆಯ ಪ್ರಾಯದ ಹುಡುಗ ಹುಡುಗಿಯರು ಹಿಂದಿನ ಜನ್ಮದ್ದೆಲ್ಲ ಹೇಳಿ ಬೆರಗುಮೂಡಿಸುವುದಿದೆ. 'ನಾನು ಹಿಂದಿನ ಜನ್ಮದಲ್ಲಿ ಅಲ್ಲಿ ಹುಟ್ಟಿದ್ದೆ, ಆ ವ್ಯಕ್ತಿಯಾಗಿದ್ದೆ, ಹೀಗೆ ಸತ್ತೆ' ಎಂಬ ಪ್ರಸಂಗಗಳು ಭಾರತದಲ್ಲಷ್ಟೇ ಅಲ್ಲ, ಅಮೆರಿಕ, ಇಂಗ್ಲೆಂಡಿನಲ್ಲಿಯೂ ನಡೆಯುತ್ತಿರುತ್ತದೆ. ಪತ್ರಿಕೆಗಳಲ್ಲಿ ಸುದ್ದಿಯೂ ಆಗುತ್ತದೆ.

ಇವರು ನೆನಪಿಸಿ ಹೇಳುವುದು ಎಷ್ಟು ಸತ್ಯವೋ, ವಿಷಯ ಅದಲ್ಲ. ಈ ನೆನಪಿನ ಶಕ್ತಿಯ ವಿಚಾರ ಬಂದಾಗಲೆಲ್ಲ ನನಗೆ ಇಂಥವರನ್ನು ಕಂಡರೆ ಭಯವಾಗುತ್ತದೆ. ಈ ಹೋದ ಜನ್ಮದ್ದೆಲ್ಲ ಇವರಿಗೆ ನೆನಪಿನಲ್ಲಿರುವುದು ಎಂದರೆ ಹೇಗೆ? ಏಕೆಂದರೆ ನನ್ನಂಥವರಿಗೆ ಅಂಗಡಿಗೆ ದಿನಸಿ ತರಲು ಹೋದರೆ ಮೂರರಲ್ಲಿ ಎರಡು ಮರೆತುಹೋಗಿರುತ್ತದೆ. ಹೆಂಡತಿಗೆ ಕರೆ ಮಾಡಿ ಉಗಿಸಿಕೊಳ್ಳಬೇಕಾಗುತ್ತದೆ. ಮದುವೆಯಾದ ದಿನ, ಮಡದಿಯ ಹುಟ್ಟಿದ ದಿನ- ಬಿಡಿ ನಮ್ಮದೇ ಹುಟ್ಟಿದ ದಿನ ನೆನಪುಳಿಯುವುದಿಲ್ಲ, ಈಗ ಮೊಬೈಲ್ ಮತ್ತು ಸೋಶಿಯಲ್ ಮೀಡಿಯಾ ಬಂದಾಗಿನಿಂದ ಬಚಾವ್. ಇಲ್ಲದಿದ್ದರೆ ಇಂಥ ಕ್ಷಮೆಯೇ ಇಲ್ಲದ ಮರೆವಿನಿಂದಾಗಿ ಅದೆಷ್ಟು ಜನರ ವಿಚ್ಛೇದನ ಆಗಿಹೋಗುತ್ತಿತ್ತೋ?!

ನಮ್ಮೆಲ್ಲರದ್ದೂ ಅಥವಾ ಬಹುತೇಕರದ್ದು ಇದೇ ಕಥೆ. ಏನೇನೋ ನೆನಪಿದ್ದುಬಿಡುತ್ತದೆ. ಅವಶ್ಯವೆನಿಸಿದ್ದು ಮರೆತುಹೋಗಿರುತ್ತದೆ. ಕಾರ್ಯಕ್ರಮದಲ್ಲಿ ಪರಿಚಯವಾದ ವ್ಯಕ್ತಿಯ ಜತೆ ಅರ್ಧಗಂಟೆ ಮಾತನಾಡಿದ ಮೇಲೆ ಅವರೇ ಹೆಸರೇ ಮರೆತುಹೋಗಿರುತ್ತದೆ. ಪುನಃ ಕೇಳುವಂತಿಲ್ಲ- ಫಜೀತಿ. ಆದರೆ ಹೈಸ್ಕೂಲಿಗೆ ಹೋಗುವಾಗಿನ ಕೆಎಸ್‌ಆರ್‌ಟಿಸಿ ಬಸ್ ಸಂಖ್ಯೆ ನೆನಪಿದ್ದುಬಿಡುತ್ತದೆ. ಪ್ರೈಮರಿ ಟೀಚರ್ ಗಂಡನ ಬೈಕ್ ಮಾಡೆಲ್ ನೆನಪಿರುತ್ತದೆ. ಅವರವರಿಗೆ ಮಹತ್ವವಾದದ್ದು ಅವರವರಿಗೆ ನೆನಪಿರುತ್ತದೆ ಎಂಬೊಂದು ಮಾತಿದೆ. ಆದರೆ ಹೀಗೆ ನೆನಪಿರುವ ಕೆಲವಕ್ಕೆ ಅರ್ಥವೇ ಇರುವುದಿಲ್ಲ, ನಮ್ಮ ಕುತೂಹಲ, ಆಸಕ್ತಿಯಿರುವ ಎಲ್ಲವೂ ನೆನಪಿರುವುದಿಲ್ಲ, ಸಹಜ ನೆನಪು ಮತ್ತು ಮರೆವು ಎನ್ನುವುದು ಐಚ್ಛಿಕವಲ್ಲ, ಗಮನವಿಟ್ಟದ್ದು ನೆನಪಿರುತ್ತದೆ ಎಂದರೆ ಅದು ಕೂಡ ಪೂರ್ತಿ ಸತ್ಯವಲ್ಲ, ಗಮನವಿಟ್ಟು ಕೇಳಿದ ನಂತರವೂ ನೆನಪಿಡಲು ಆಗೀಗ ನೆನಪಿಸಿಕೊಳ್ಳಬೇಕು. ನಾನಿಲ್ಲಿ ಹೇಳುತ್ತಿರುವುದು ಬಾಯಿಪಾಠದ ನೆನಪಿನ ಶಕ್ತಿಯ ಬಗ್ಗೆ ಅಲ್ಲ, ಸಾಧಾರಣ, ದಿನನಿತ್ಯದ ಬದುಕಿನ ನೆನಪು ಮರೆವಿನ ಬಗ್ಗೆ. ಬಹುತೇಕರ ಪರಿಸ್ಥಿತಿ ಹೀಗಿರುವಾಗ ಕೆಲವರಿಗೆ ಹೋದ ಜನ್ಮದ್ದೆಲ್ಲ ನೆನಪಿರುತ್ತದೆ ಎಂದರೆ? ನಮ್ಮಲ್ಲಿ ಬಹುತೇಕರ ಆತ್ಮಗಳು ಈ 'ಚೀನಿಯರ ಮರೆವಿನ ಚಹಾ'ವನ್ನು ಸ್ವಲ್ಪ ಜಾಸ್ತಿಯೇ ಕುಡಿದುಬಿಟ್ಟಿರುತ್ತವೆ ಎಂದೆನಿಸುತ್ತದೆ.

ಇಲ್ಲಿ ಹೇಳುತ್ತಿರುವುದು ಮರೆವಿನ ರೋಗ ಅಥವಾ ವಯೋಸಹಜ ಲಕ್ಷಣದ ಬಗ್ಗೆ ಅಲ್ಲ, ನನ್ನ ಸ್ನೇಹಿತನೊಬ್ಬ ನಿದ್ದಾನೆ- ಸಚಿನ್. ಅವನಿಗೆ ನೋಡಿದ ಸಾವಿರಾರು ಚಲನಚಿತ್ರದ ಹೆಸರು-ಕಥೆ ಎಲ್ಲವೂ ನೆನಪಿರುತ್ತದೆ. ಸಿನಿಮಾ ಹಾಡಿನ ಒಂದು ಸಾಲು ಹೇಳಿದರೆ ಇದು ಈ ಸಿನಿಮಾದ್ದು, ಹೀರೋ ಇಂಥವನು, ವಿಲನ್ ಇವನು, ಹೀರೋಯಿನ್, ಅವರಮ್ಮ, ನಿರ್ದೇಶಕ, ಗೀತರಚನಕಾರ ಎಲ್ಲ ಪಟಪಟನೆ ಹೇಳಿಬಿಡುತ್ತಾನೆ. ಅಷ್ಟೇ ಅಲ್ಲ- ಹೀರೋಯಿನ್ ಅಜ್ಜಿಯ ಪಾತ್ರ ಮಾಡಿದವರ ಹೆಸರು, ಹೀರೋ ಮನೆಯ ಕೆಲಸದವಳ ಹೆಸರಿನವರೆಗೆ ನೆನಪಿರುತ್ತದೆ, ಪುಣ್ಯಾತ್ಮನಿಗೆ! ಇನ್ನೊಬ್ಬ ಸ್ನೇಹಿತೆ ತ್ರಿವೇಣಿ ರಾವ್ ಅವರಿಗೆ ಕನ್ನಡ ಸಾಹಿತ್ಯ ಮತ್ತು ಚಲನಚಿತ್ರದ ವಿಷಯದಲ್ಲಿ ಇದೇ ರೀತಿಯ ಅಸಾಧ್ಯ ನೆನಪಿನ ಶಕ್ತಿ. ಇನ್ನೊಬ್ಬ ಸ್ನೇಹಿತ ಹರ್ಷವರ್ಧನನಿಗೆ ಕರ್ನಾಟಕ ಮತ್ತು ಭಾರತದ ರಾಜಕಾರಣದಲ್ಲಿ ಕಳೆದ ಐವತ್ತು ವರ್ಷದಲ್ಲಿ ನಡೆದ ಪ್ರತಿಯೊಂದು ಘಟನೆಯೂ ನೆನಪಿರುತ್ತದೆ. ಮೊನ್ನೆ ಪರೀಕ್ಷಿಸೋಣ ಎಂದು 'ನರೇಂದ್ರ ಮೋದಿ ಪಾಕಿಸ್ತಾನಕ್ಕೆ ಹೋದದ್ದು ಯಾವಾಗ?' ಎಂದು ಕೇಳಿದೆ. 2015ರ ಕ್ರಿಸ್ಮಸ್ ದಿನ ಎಂದು ಥಟ್ಟನೆ ಹೇಳಿಬಿಟ್ಟ. ನನಗೆ ಕೆಲವರ ಆಸಕ್ತಿಯ ಹೊರತಾಗಿ ಅದರಾಚೆಯ ನೆನಪಿನ ಸಾಮರ್ಥ್ಯ ಕಂಡು ಆಶ್ಚರ್ಯವಾಗುತ್ತದೆ. ಇವರೆಲ್ಲರಿಗೂ, ನಮಗೆಲ್ಲರಿಗೂ ಅಷ್ಟೇ, ಕೆಲವೊಂದು ವಿಷಯಗಳಲ್ಲಿ ಅಸಾಮಾನ್ಯವೆನಿಸುವಷ್ಟು ನೆನಪಿನ ಶಕ್ತಿ- ಇನ್ನು ಕೆಲವು ವಿಷಯದಲ್ಲಿ ನಾಚಿಕೆಯಾಗುವಷ್ಟು ಮರೆವು. ಇದು ಹೀಗೆಯೇ ಎಂಬ ವಿವರಣೆ ಕಷ್ಟ.

ನಮ್ಮ ಭಾರತ ಕ್ರಿಕೆಟ್ ತಂಡದ ಕ್ಯಾಪ್ಟನ್ ರೋಹಿತ್ ಶರ್ಮಾ ಮರೆಗುಳಿತನದ ಬಗ್ಗೆ ನೀವು ಕೇಳಿರಬಹುದು. ಮೊಬೈಲ್, ಪರ್ಸ್, ಪಾಸ್‌ಪೋರ್ಟ್ ಇವನ್ನೆಲ್ಲ ರೋಹಿತ್ ಹೋದಹೋದಲ್ಲಿ ಬಿಟ್ಟು ಮರೆತು ಬರುತ್ತಾನಂತೆ. ರೋಹಿತ್ ಮರೆಗುಳಿತನದ ಬಗ್ಗೆ ವಿರಾಟ್ ಕೊಹ್ಲಿ- 'ನಾನು ಅಷ್ಟು ಮರೆವಿನ ಮನುಷ್ಯನನ್ನೇ ನೋಡಿಲ್ಲ' ಎಂದು ಒಂದು ಸಂದರ್ಶನದಲ್ಲಿ ಹೇಳಿದ್ದ. ರೋಹಿತ್ ಪ್ರೆಸ್‌ಮೀಟ್ ಮಾಡುವಾಗ ಆಗೀಗ ನೆನಪಿನ ಶಕ್ತಿ ಕೈಕೊಡುತ್ತದೆ. ಒಂದು ಟೂರ್ನಮೆಂಟಿನಲ್ಲಂತೂ ಫೈನಲ್‌ನಲ್ಲಿ ಗೆದ್ದ ಕಪ್ ಅನ್ನು ರೋಹಿತ್ ಸ್ಟೇಡಿಯಮ್‌ನ ಮೀಡಿಯಾ ರೂಮಿನಲ್ಲೇ ಬಿಟ್ಟು ಬಂದಿದ್ದನಂತೆ. ರೋಹಿತ್ ಬಗ್ಗೆ ಹೀಗೊಂದು ಜೋಕ್ ಇದೆ- 'ಮರೆವು ಒಲಿಂಪಿಕ್ಸ್‌ನಲ್ಲಿದ್ದರೆ ರೋಹಿತ್ ಶರ್ಮಾ ಮೊದಲನೇ ಸ್ಥಾನ ಗೆಲ್ಲುತ್ತಿದ್ದನಂತೆ. ಆದರೆ ಮೆಡಲ್ ಸ್ವೀಕರಿಸಲು ಬರಲು ಮರೆಯುತ್ತಿದ್ದನಂತೆ'. ಈ ರೀತಿ ಅಸಾಮಾನ್ಯ ಸಾಧಕರೆಲ್ಲ ಕೆಲವೊಂದಿಷ್ಟು ವಿಷಯದಲ್ಲಿ ಮಹಾಮರೆಗುಳಿ ಎನ್ನುವುದಕ್ಕೆ ರೋಹಿತ್ ಒಳ್ಳೆಯ ಉದಾಹರಣೆ.

ಉಬರ್ ಕಂಪನಿ ಪ್ರತಿವರ್ಷ ತನ್ನ ಬಾಡಿಗೆ ಕಾರಿನಲ್ಲಿ ಗ್ರಾಹಕರು ಬಿಟ್ಟುಹೋಗುವ ವಸ್ತುಗಳ ಬಗ್ಗೆ ಒಂದಿಷ್ಟು ವರದಿ-ವಿವರಣೆ ನೀಡುತ್ತದೆ. ಆ ವಿವರಣೆ ಮತ್ತು ವಿಶ್ಲೇಷಣೆ ಮಜವಾಗಿರುತ್ತವೆ. ಅದರ ಪ್ರಕಾರ ನ್ಯೂಯಾರ್ಕ್ ನಗರದಲ್ಲಿ ವಸ್ತುಗಳನ್ನು ಮರೆತುಬಿಟ್ಟು ಹೋಗುವುದು ಅತ್ಯಂತ ಹೆಚ್ಚಂತೆ. ಭಾರತದಲ್ಲಿ ಮೊದಲ ಸ್ಥಾನ ಮುಂಬೈಗೆ. ನಾಲ್ಕನೇ ಸ್ಥಾನ ಬೆಂಗಳೂರಿಗೆ. ಹೈದರಾಬಾದ್‌ಗೆ ಮರೆಗುಳಿತನದಲ್ಲಿ ಕೊನೆಯ ಸ್ಥಾನ. ಹಬ್ಬಗಳ ಸಮಯದಲ್ಲಿ ಜನರು ಮರೆತುಬಿಡುವುದು ಗಣನೀಯ ಜಾಸ್ತಿಯಂತೆ. ಬ್ಯಾಕ್ ಪ್ಯಾಕ್, ಇಯರ್‌ಫೋನ್, ಮೊಬೈಲ್, ಕನ್ನಡಕ, ಬಟ್ಟೆ, ಕೀಲಿ ಇವೆಲ್ಲ ಸಾಮಾನ್ಯವಾಗಿ ಬಿಟ್ಟುಹೋಗುವ ವಸ್ತುಗಳು. ಈ ಪಟ್ಟಿಯಲ್ಲಿ ಅರ್ಧ ಕೆಜಿ ಚಿನ್ನದ ಬಿಸ್ಕಿಟ್, ಹತ್ತು ಲಕ್ಷ ಬೆಲೆಯ ಮದುವೆಯ ಸೀರೆ, ತಾಳಿ, ಇಪ್ಪತ್ತೈದು ಕೆ.ಜಿ. ಆಕಳ ತುಪ್ಪ, ವಿಗ್, ಹಾರ್ಮೋನಿಯಂ, ಬೆಕ್ಕಿನ ಮರಿ ಹೀಗೆ- ಜನರು ಇಂಥ ವಸ್ತುಗಳನ್ನೂ ಬಿಟ್ಟುಹೋಗುತ್ತಾರಾ ಎಂದು ಆಶ್ಚರ್ಯವಾಗುತ್ತದೆ.

ಮನುಷ್ಯನ ನೆನಪಿನ ಶಕ್ತಿ ಕಂಪ್ಯೂಟರಿನಂತೆ, ಮೊಬೈಲ್ ಫೋನ್‌ನಂತೆ ಎಂದು ಕೆಲವರು ಭಾವಿಸಿದ್ದಾರೆ. ಕಂಪ್ಯೂಟರಿನಲ್ಲಿ ಒಂದು ಕಡೆ 'ಫೋಲ್ಡರ್' ಮಾಡಿ, ಅದರೊಳಕ್ಕೆ 'ಫೈಲ್' ಮಾಡಿಟ್ಟರೆ ಎಷ್ಟು ಕಾಲ ಹೋದರೂ ವಿಷಯ ಹಾಗೆಯೇ ಇರುತ್ತದೆ. ಮೊಬೈಲ್‌ನಲ್ಲಿ ತೆಗೆದ ಫೋಟೋ ಕಾಲ ಕಳೆದಂತೆ ಮಸುಕಾಗಿ ಮಾಯವಾಗುವುದಿಲ್ಲವಲ್ಲ, ಆದರೆ ಮನುಷ್ಯನ ನೆನಪಿನ ಶಕ್ತಿ ಹಾಗಲ್ಲ, ನಾವು ಒಂದು ವಿಷಯವನ್ನು ನೆನಪಿಡುವ ರೀತಿ ಕಂಪ್ಯೂಟರಿಗಿಂತ ಸಂಪೂರ್ಣ ವಿಭಿನ್ನ.

ಸುಮ್ಮನೆ ಹೀಗೊಂದು ಕಲ್ಪಿಸಿಕೊಳ್ಳಿ. ನೀವು ಜೀವನದ ಸುಮಾರು ಹತ್ತು ವರ್ಷ ಪ್ರತಿನಿತ್ಯ ಬೆಳಗ್ಗೆ ಎದ್ದು ದೋಸೆ ಮತ್ತು ಸಾಂಬಾರ್ ಅನ್ನೇ ತಿಂದಿದ್ದೀರಿ ಎಂದಿಟ್ಟುಕೊಳ್ಳಿ. ಒಂದು ನಿರ್ದಿಷ್ಟ ಸಮಯ ಮತ್ತು ಜಾಗದಲ್ಲಿ ಕುಳಿತು ಪ್ರತಿನಿತ್ಯ ಅದೇ ತಿಂಡಿ. ಈಗ ಆ ಹತ್ತು ವರ್ಷ ಪ್ರತಿದಿನ ದೋಸೆ ತಿಂದ ವಿವರವನ್ನು ಮಿದುಳು ಪ್ರತ್ಯೇಕವಾಗಿ ನೆನಪಿಟ್ಟುಕೊಳ್ಳುವುದಿಲ್ಲ, ಆ ದಿನ ಎಷ್ಟು ಸೌಟು ಸಾಂಬಾರ್ ಬಡಿಸಿಕೊಂಡೆ, ಎಷ್ಟು ದೋಸೆ ತಿಂದೆ ಹೀಗೆ ನಿತ್ಯದ ವಿವರಣೆ ನೆನಪಾಗಿ ಉಳಿಯುವುದಿಲ್ಲ, ಬದಲಿಗೆ ಒಂದು ಸಾರಾಂಶ ಮಾತ್ರ ನೆನಪಿರುತ್ತದೆ. ಬೆಳಗ್ಗೆ ಎದ್ದು ಹೀಗೆ ದೋಸೆ ತಿನ್ನುತ್ತಿದ್ದೆ ಮತ್ತು ಆಗಿನ ನನ್ನ ಅನುಭವ, ಭಾವನೆ ಹೀಗಿರುತ್ತಿತ್ತು ಎಂದಷ್ಟೇ ನೆನಪಿರುತ್ತದೆ. ಆ ವಿಷಯವನ್ನು ಸ್ಮೃತಿಪಟಲದಿಂದ ಮರುಕರೆಯುವಾಗ, ನೆನಪು ಮಾಡಿಕೊಳ್ಳುವಾಗ, ಆ ಘಟನೆಯ ಕೆಲವೊಂದಿಷ್ಟು ವಿಷಯ, ಇಂದ್ರಿಯ ಮತ್ತು ಭಾವನಾತ್ಮಕ ಅನುಭವ ಇವನ್ನೆಲ್ಲ ಸೇರಿಸಿ 'ಮನಸ್ಸು' ಅದನ್ನು ಮರುಸೃಷ್ಟಿಸುತ್ತದೆ. ಪ್ರತಿ ಬಾರಿ ಏನನ್ನೇ ನೆನಪಿಸಿಕೊಂಡಾಗಲೂ ಮನಸ್ಸಿನಲ್ಲಿ ಅದು ಮತ್ತೆ ಸಂಭವಿಸುತ್ತದೆ.

ಹಳೆಯ ಗೆಳೆಯರ ಗುಂಪು ಬಹಳ ಕಾಲದ ನಂತರ ಜತೆ ಸೇರಿದಾಗ ಅವರ ಹಿಂದಿನ, ಜತೆಯಲ್ಲಿ ಕಳೆದ ಅನುಭವವನ್ನು ನೆನಪು ಮಾಡಿಕೊಳ್ಳುವುದು ಸಾಮಾನ್ಯ. ಅಂತಲ್ಲಿ ನೀವು ಇದನ್ನು ಗಮನಿಸಿರಬಹುದು, ಒಂದೇ ಘಟನೆ ಇಬ್ಬರು ಸ್ನೇಹಿತರಿಗೆ ವಿಭಿನ್ನವಾಗಿ ನೆನಪಿರುತ್ತದೆ. ಕೆಲವೊಮ್ಮೆ ಅವರ ಮಧ್ಯೆ ಈ ಕಾರಣಕ್ಕೆ ಚಿಕ್ಕ ವಾದವೂ ಆಗುತ್ತದೆ. ಒಬ್ಬ ಹೇಳುತ್ತಾನೆ 'ನನಗೆ ಸ್ಪಷ್ಟ ನೆನಪಿದೆ- ಈ ಘಟನೆ ಹೀಗೆಯೇ ಆಗಿದ್ದು' ಎಂದು. ಇನ್ನೊಬ್ಬ ಅದಕ್ಕೆ ವಿರುದ್ಧವಾಗಿ- 'ಇಲ್ಲ ಆ ಘಟನೆ ಹಾಗೆ ನಡೆದದ್ದೇ ಅಲ್ಲ, ಆಗಿದ್ದು ಹೀಗೆ' ಎಂದು. ಈ ವ್ಯತ್ಯಾಸಕ್ಕೆ ಕಾರಣ ಅವರು ಆ ಘಟನೆಯನ್ನು ನಡೆದ ನಂತರ ನೆನಪಿಸಿಕೊಳ್ಳುವಾಗ ಮರುಸೃಷ್ಟಿಸುವಲ್ಲಿ ಆಗುವ ವ್ಯತ್ಯಯ.

ಮನೆಯಲ್ಲಿ ಚಿಕ್ಕ ಮಕ್ಕಳು ಬೆಳೆಯುವಾಗ ಇದು ಗಮನಕ್ಕೆ ಬರುತ್ತದೆ. ಹಿರಿಯರು ಮಾತಾಡಿಕೊಂಡ ವಿಷಯವನ್ನು ಮಕ್ಕಳು ಕೇಳಿಸಿಕೊಳ್ಳುತ್ತಾರೆ. ಆ ವಿವರವನ್ನು ಬಳಸಿ ಮಕ್ಕಳು ಆ ಘಟನೆಯನ್ನು ಮನಸ್ಸಿನಲ್ಲಿಯೇ ಮರುಸೃಷ್ಟಿಸಿಕೊಳ್ಳುತ್ತಾರೆ. ಮಕ್ಕಳು ಈ ರೀತಿ ಘಟನೆಯನ್ನು ಮರುಸೃಷ್ಟಿಸುವಾಗ ತಮ್ಮನ್ನು ಅಲ್ಲಿ ವೀಕ್ಷಕರನ್ನಾಗಿ ಇಟ್ಟುಕೊಂಡಿರುತ್ತಾರೆ. ಇದರಿಂದಾಗಿ ವರ್ಷಗಳು ಕಳೆದ ನಂತರ- ಇಂಥ ಕೆಲವೊಂದು ಘಟನೆಗಳು ಅವರೆದುರೇ ನಡೆದಿವೆ ಎಂದೇ ನೆನಪಿನಲ್ಲಿರುತ್ತವೆ. ಅಸಲಿಗೆ ಅವರು ಅದನ್ನು ಕೇಳಿಸಿಕೊಂಡಿರುತ್ತಾರೆ ಮತ್ತು ಪರೋಕ್ಷ ಅನುಭವಿಸಿರುತ್ತಾರೆ.

ತೀರಾ ವಿರಳಾತಿವಿರಳ ಜನರಿಗೆ ಕಂಡದ್ದೆಲ್ಲಾ ನೆನಪುಳಿಯುತ್ತದೆ. ಅದನ್ನು ವೈದ್ಯಕೀಯ ಭಾಷೆಯಲ್ಲಿ ಒಂದು "condition"- ಪರಿಸ್ಥಿತಿ/ಅವಸ್ಥೆ ಎಂದೇ ಸಂಬೋಧಿಸುವುದು. ಅದು ಅಸಹಜ- ಒಂದು ಸಮಸ್ಯೆ. Hyperthymesia ಇರುವವರಿಗೆ ನಿತ್ಯದ ಅತ್ಯಂತ ಚಿಕ್ಕ ವಿವರಣೆ ಕೂಡ ಅನವಶ್ಯ ನೆನಪಿರುತ್ತದೆ. ಹೇಗೆಂದರೆ- ಎಂಟು ವರ್ಷದ ಹಿಂದಿನ ಒಂದು ದಿನಾಂಕ ಹೇಳಿದರೆ, ಆ ದಿನ ಎಷ್ಟು ಗಂಟೆಗೆ ಎದ್ದೆ, ಏನೇನು ಮಾಡಿದೆ, ಏನನ್ನು ಎಲ್ಲಿ ಕಂಡೆ, ಪೇಪರಿನಲ್ಲಿ ಏನು ಹೆಡ್‌ಲೈನ್ ಇತ್ತು, ಯಾರ್‍ಯಾರನ್ನು ಭೇಟಿಯಾದೆ, ಯಾವ ಬಣ್ಣದ ಬಟ್ಟೆ ಧರಿಸಿದ್ದೆ- ಹೀಗೆ ಪ್ರತಿಯೊಂದೂ. ಅಬ್ಬಾ! ನನಗಂತೂ ಅಂಥವರ ಪರಿಸ್ಥಿತಿಯನ್ನು ಊಹೆ ಮಾಡಿಕೊಂಡರೆ ಹೆದರಿಕೆಯಾಗುತ್ತದೆ. ಯಾವುದೂ ಮರೆತುಹೋಗುವುದು ಎನ್ನುವುದೇ ಇಲ್ಲ, ಮರೆಯುವುದನ್ನು ಒಂದು ರೀತಿಯಲ್ಲಿ ನೆನಪನ್ನು ಜೀರ್ಣಿಸಿಕೊಳ್ಳುವ ಕ್ರಿಯೆಗೆ ಹೋಲಿಸಬಹುದು. ಆದರೆ ಹೈಪರ್ ಥಿಮಿಷಿಯ ಇರುವವರಿಗೆ ನೆನಪಿನ ಅಜೀರ್ಣವಾಗಿಬಿಡಬಹುದು. ಅವರ ತಲೆಯೊಳಗಿನ ಪರಪ್ರವೇಶ ಕಲ್ಪನೆಗೆ ನಿಲುಕದ್ದು.

ಈ ಮಾತನ್ನು ನೀವು ಕೇಳಿರಬಹುದು- People will forget what you said, people will forget what you did, but people will never forget how you made them feel.' ನಾವು ನೆನಪಿಟ್ಟುಕೊಳ್ಳುವ ರೀತಿಯೇ ಹಾಗೆ. ನೆನಪೆಂದರೆ ಘಟನೆ ಮಾತ್ರವಲ್ಲ, ಆ ಸಮಯದಲ್ಲಿನ ನಮ್ಮ ಚಿತ್ತಸ್ಥಿತಿ ಕೂಡ ನೆನಪಿನ ಭಾಗವಾಗಿ ಉಳಿಯುತ್ತದೆ. ಸಿಟ್ಟು ಬಂದ ಘಟನೆಯಿದ್ದರೆ ಸಿಟ್ಟಿನ ಅನುಭವ, ನೋವಾದಾಗ ಆಗುವ ವೇದನೆಯ ಅನುಭವ ಹೀಗೆ. ನಾವು ಘಟನೆಯನ್ನು ನೆನಪಿಸಿಕೊಳ್ಳುವಾಗ- ಆ ನೆನಪನ್ನು ಮನಸ್ಸಿನೊಳಗೆ ಮರುಸೃಷ್ಟಿಸಿಕೊಳ್ಳುವಾಗ ಆ ಘಟನೆಯ ಸಂದರ್ಭದ ಚಿತ್ತಸ್ಥಿತಿ ಕೂಡ ಮರುಕಳಿಸುತ್ತದೆ. ನೆನಪು ಭಾವನೆಯನ್ನು ಕದಡುವುದು ಎಂದರೆ ಅದುವೇ. ನೆನಪಿಸಿಕೊಳ್ಳುವಾಗ ಮನಸ್ಸು ಅದೇ ಚಿತ್ತಸ್ಥಿತಿಯನ್ನು ಮರುಸೃಷ್ಟಿಸಿಕೊಳ್ಳುತ್ತದೆ. ಖುಷಿಯ ನೆನಪುಗಳು ಖುಷಿಕೊಡುವುದು, ಕೆಟ್ಟ ನೆನಪುಗಳು ಬೇಸರವನ್ನು ತರುವುದು ಎಂದರೆ ಹಾಗೆ.

ಯಾವುದೇ ಕೆಟ್ಟ ಘಟನೆಯಿರಲಿ, ಕ್ರಮೇಣ ಸೂಕ್ಷ್ಮ ವಿವರಗಳು ಒಂದಿಷ್ಟು ಕಾಲ ಮಾತ್ರ ನೆನಪಿರುತ್ತವೆ. ಉದಾಹರಣೆಗೆ ಕುಟುಂಬದಲ್ಲಾದ ಅಕಾಲಿಕ ಸಾವು, ಅಪಘಾತ, ಶೋಷಣೆ ಇವೆಲ್ಲ ಹಾಗೆ. ಆ ದಿನದ ವಿವರಣೆಗಳಲ್ಲಿ ಕೆಲವೊಂದಿಷ್ಟು ವಿಷಯಗಳು ಕ್ರಮೇಣ ಮರೆಯುತ್ತವೆ. ಆ ಮೂಲಕ ಬೇಸರ ಕೂಡ. ಇದೊಂದು ಸ್ವಾಭಾವಿಕ ಗುಣಪ್ರಕ್ರಿಯೆ. ಇದಾಗಲಿಲ್ಲ, ವ್ಯಕ್ತಿಯು ವಿವರಣೆಗಳನ್ನು ಮರೆಯುವುದೇ ಇಲ್ಲ ಎಂದರೆ ಅದು ಕ್ರಮೇಣ 'ಡಿಪ್ರೆಶನ್'- ಖಿನ್ನತೆಗೆ ಎಡೆಮಾಡಿಕೊಡುತ್ತದೆ. ಕೆಟ್ಟ ಘಟನೆಯನ್ನು ಅದರಷ್ಟಕ್ಕೆ ಬಿಟ್ಟುಬಿಟ್ಟರೆ ಗಾಯದ ನೋವು ಬೇಗ ಮಾಯುತ್ತದೆ. ಅದು ಐಚ್ಛಿಕ. ನೆನಪಿನ ಮರುಸೃಷ್ಟಿ ನೆನಪಿಗೆ ಒಳ್ಳೆಯದಾದರೂ ಅದು ನಂತರದಲ್ಲಿ ಅನವಶ್ಯಕ. ಕೆಟ್ಟದ್ದನ್ನು ನೆನಪಿಸಿಕೊಳ್ಳುತ್ತಿರಬಾರದು ಎಂದರೆ ಮರು ಸೃಷ್ಟಿಸಿಕೊಳ್ಳುತ್ತಿರಬಾರದು. ಆಗ ಮಾತ್ರ ಶಮನ ಸಾಧ್ಯ. ವಿಸ್ಮೃತಿ- ನಾವು ಜೀವನದಲ್ಲಿ ಅನುಭವಿಸಿದ ಯಾವ ಘಟನೆ, ಪಾಠ ಮುಂದಿನ ಬದುಕಿಗೆ ಅವಶ್ಯ ಎಂಬುದನ್ನು ನಿರ್ಧರಿಸುವಲ್ಲಿ ಅತ್ಯಂತ ಮಹತ್ವದ್ದು. ಮರೆಯುವುದು ಏನೋ ಒಂದು ರೋಗ, ಕೊರತೆ ಎಂದೇ ತಿಳಿಯಬೇಕಿಲ್ಲ ಅಥವಾ ಏನೋ ಒಂದನ್ನು ಮರೆಯುವುದು ಅಸಂವೇದಿ ಲಕ್ಷಣವಲ್ಲ.

ಒಮ್ಮೆ ಬುದ್ಧನಲ್ಲಿ ಒಬ್ಬ ಶ್ರೀಮಂತ ವ್ಯಾಪಾರಿ ಬಂದು ತನ್ನ ವ್ಯಾಪಾರವೆಲ್ಲ ನಷ್ಟವಾಗಿ ಬೀದಿಗೆ ಬಂದುಬಿಟ್ಟಿರುವುದಾಗಿ ಅಲವತ್ತುಕೊಂಡ. ಅದನ್ನು ಕೇಳಿದ ಬುದ್ಧ- 'ಇದೆಲ್ಲ ಮುಂದೆ ಕಳೆದುಹೋಗುತ್ತದೆ. ತಲೆಕೆಡಿಸಿಕೊಳ್ಳಬೇಡ, ಹೋಗು' ಎಂದು ಕಳುಹಿಸಿದ. ವರ್ಷಗಳು ಉರುಳಿದವು. ವ್ಯಾಪಾರಿ ಮತ್ತೆ ಕಷ್ಟಪಟ್ಟು ತನ್ನ ವ್ಯವಹಾರವನ್ನು ಕಟ್ಟಿ ನಿಲ್ಲಿಸಿ ಸುಧಾರಿಸಿಕೊಂಡ. ಆಗ ಬುದ್ಧನಲ್ಲಿ ಬಂದು 'ಸ್ವಾಮಿ, ನೀವು ಕಷ್ಟಕಾಲದಲ್ಲಿ ನನಗೆ ಧೈರ್ಯ ತುಂಬಿದಿರಿ. ಈಗ ನೀವು ಹೇಳಿದಂತೆಯೇ ಆಗಿದೆ. ನನ್ನ ಕಷ್ಟಗಳೆಲ್ಲ ಕಳೆದಿವೆ. ನಾನು ಮತ್ತೆ ಐಶ್ವರ್ಯ ಪಡೆದಿದ್ದೇನೆ, ಖುಷಿಯಲ್ಲಿದ್ದೇನೆ' ಎಂದ. ಬುದ್ಧ ಅದಕ್ಕೆ ಪ್ರತ್ಯುತ್ತರವಾಗಿ ಪುನಃ ಅದನ್ನೇ ಅಂದನಂತೆ- 'ಇದೆಲ್ಲ ಮುಂದೆ ಕಳೆದುಹೋಗುತ್ತದೆ. ತಲೆಕೆಡಿಸಿಕೊಳ್ಳಬೇಡ, ಹೋಗು'. ಪರಿಸ್ಥಿತಿ ಒಳ್ಳೆಯದಿರಬಹುದು, ಕೆಟ್ಟದ್ದಿರಬಹುದು- ಯಾವುದೂ ಶಾಶ್ವತವಲ್ಲ, ಅಥವಾ ಎಲ್ಲವೂ ಬದಲಾಗುತ್ತವೆ. ಅಂತೆಯೇ ಒಳ್ಳೆಯ ಅಥವಾ ಕೆಟ್ಟ ಅನುಭವದ ನೆನಪು ಕೂಡ ಹಾಗೆಯೇ. ಅವು ಕ್ರಮೇಣ ಮರೆಯಾಗಬೇಕು. ಮರೆತರಷ್ಟೇ ಮುಂದೆ ಸುಲಭ. ನೆನಪಿನ ಪಾಠ ನೆನಪಿರಬೇಕೇ ವಿನಾ ಅನವಶ್ಯಕವೆನಿಸುವ ನೆನಪುಗಳಲ್ಲ ಎಂಬುದು ಇಲ್ಲಿನ ಸೂಕ್ಷ್ಮ.

ಮುಂದಿನ ಬಾರಿ ಕೀಲಿ, ಮೊಬೈಲ್, ಪಾಸ್‌ವರ್ಡ್, ವಾಹನ ಪಾರ್ಕ್ ಮಾಡಿದ ಜಾಗ, ದಿನಸಿ ಸಾಮಾನಿನ ಲಿಸ್ಟ್ ಹೀಗೆ ಏನೋ ಒಂದು ಮರೆತುಹೋಯಿತೆಂದಿಟ್ಟುಕೊಳ್ಳಿ. ಅದರ ಬಗ್ಗೆ ತೀರಾ ತಲೆಕೆಡಿಸಿಕೊಳ್ಳಬೇಕಿಲ್ಲ. ಹಾಳಾದ ಮರೆವು ಇಂದು ಬೇಸರಿಸಬೇಕಿಲ್ಲ. ಬದಲಿಗೆ ಮರೆವಿನ ಶಕ್ತಿ ಸರಿಯಾಗಿ ಕೆಲಸ ಮಾಡುತ್ತಿದೆ ಎಂದು ಖುಷಿಪಡಬಹುದು. ಈ ವಿಷಯ ಆಗ ನೆನಪಿಗೆ ಬರಬೇಕಷ್ಟೆ!

ಇದೆಲ್ಲದರ ಹೊರತಾಗಿ ನಾವು ನೆನಪಿಟ್ಟುಕೊಳ್ಳಬೇಕಾದ ವಿಷಯ ಯಾವುದೆಂದು ಗುರುತಿಸಿ ಅದನ್ನು ಆಗೀಗ ನೆನಪು ಮಾಡಿಕೊಳ್ಳುವುದು ಒಳ್ಳೆಯದು. ಖುಷಿಯ ಘಟನೆ ಖುಷಿಯನ್ನು ಮರುಕಳಿಸಬಹುದು, ಉಲ್ಲಾಸ ಹುಟ್ಟಿಸಬಹುದು. ಆದರೆ ಕೆಟ್ಟದ್ದನ್ನು ನೆನಪುಮಾಡಿ ಹುಣ್ಣು ಕೆರೆದುಕೊಳ್ಳುವುದನ್ನು ಗಮನಿಸಿದಲ್ಲಿ ನಿಲ್ಲಿಸಬಹುದು. ಮನಸ್ಸು ಏನನ್ನು ಯೋಚಿಸುತ್ತಿದೆ ಎಂಬ ನಿರಂತರ ಅರಿವು ಬೆಳೆಸಿಕೊಂಡರೆ ಯಾವುದನ್ನು ನೆನಪಿಟ್ಟುಕೊಳ್ಳಬೇಕೋ ಅದನ್ನಷ್ಟೇ ನೆನಪಿಟ್ಟುಕೊಳ್ಳಬಹುದು. ಕೆಟ್ಟದ್ದನ್ನು ಮರೆಯಲು ಸಾಧ್ಯವಾಗದಿದ್ದರೂ ನೆನಪಿಸಿ ಹಿಂಸಿಸಿಕೊಳ್ಳುವುದನ್ನು ನಿಲ್ಲಿಸಬಹುದು, ಆ ಮೂಲಕ ಮರೆಯಲು ಅವಕಾಶಮಾಡಿಕೊಳ್ಳಬಹುದು. ಮರೆವು ಒಳ್ಳೆಯದು.

ಭಾರತದ ರಕ್ಷಣೆಗೆ ದೇವರು ಕಳಿಸಿದ ತೆರಿಗೆ ಜಿಎಸ್‌ಟಿ!

ಮನಿ ಮೈಂಡೆಡ್

ಕೇಶವ ಪ್ರಸಾದ್ ಬಿ.

vveditoped@gmail.com

ಈಗ ಬಹುಶಃ ಯಾರೊಬ್ಬರೂ ಜಿಎಸ್‌ಟಿಯನ್ನು 'ಗಬ್ಬರ್ ಸಿಂಗ್ ಟ್ಯಾಕ್ಸ್' ಎಂದು ಕರೆಯುವ ಧೈರ್ಯ ಮಾಡಲಾರರು. ಅಸ್ಸಾಂ ಮುಖ್ಯಮಂತ್ರಿ ಹಿಮಂತ ಬಿಸ್ವಾ ಶರ್ಮಾ ಅವರಂತೂ ಜಿಎಸ್‌ಟಿಯನ್ನು ''ಇದು ದೇವರು ಕಳಿಸಿದ ತೆರಿಗೆ (God-Sent-Tax). ರಫೇಲ್ ಜೆಟ್ ಯುದ್ಧ ವಿಮಾನಗಳು ಮತ್ತು ಎಸ್-400 ಕ್ಷಿಪಣಿ ವ್ಯವಸ್ಥೆಗಳನ್ನು ಸೇನೆಗೆ ಒದಗಿಸಲು ಸಾಧ್ಯವಾಗಿದ್ದೇ ಜಿಎಸ್‌ಟಿಯ ಸಂಪನ್ಮೂಲದಿಂದ'' ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಜಿಎಸ್‌ಟಿಯಿಂದ ನೇರವಾಗಿ ಮಿಲಿಟರಿ ಶಸ್ತ್ರಾಸ್ತ್ರಗಳ ಖರೀದಿಗೆ ಫಂಡ್ ಕೊಡುವುದಿಲ್ಲ. ಮಿಲಿಟರಿ ಶಸ್ತ್ರಾಸ್ತ್ರಗಳ ಖರೀದಿಗೆ ಅವಶ್ಯವಿರುವ ಹಣವನ್ನು ರಕ್ಷಣಾ ಬಜೆಟ್ ಮೂಲಕ ನೀಡಲಾಗುತ್ತದೆ. ಜತೆಗೆ ರಕ್ಷಣಾ ಬಜೆಟ್ ಕೇವಲ ಜಿಎಸ್‌ಟಿ ಆದಾಯವೊಂದನ್ನೇ ಅವಲಂಬಿಸಿಲ್ಲ. ಆದರೆ ಸರಕಾರದ ಒಟ್ಟಾರೆ ಬಜೆಟ್‌ಗೆ ನಿರ್ಣಾಯಕ ಕೊಡುಗೆಯನ್ನು ಜಿಎಸ್‌ಟಿ ಸಲ್ಲಿಸಿದೆ. ಎರಡನೆಯದಾಗಿ ಜಿಎಸ್‌ಟಿಯಲ್ಲಿ ಮಿಲಿಟರಿ ಉಪಕರಣಗಳ ಆಮದು ಮೇಲೆ ನಿರ್ದಿಷ್ಟ ವಿನಾಯಿತಿಯನ್ನು ನೀಡಲಾಗಿದೆ.

2022ರಲ್ಲಿ ಜಿಎಸ್‌ಟಿ ಜಾರಿಯಾಗಿ 5 ವರ್ಷಗಳು ಭರ್ತಿಯಾದಾಗ, ರಾಹುಲ್ ಗಾಂಧಿಯವರು ಅದನ್ನು 'ಗಬ್ಬರ್ ಸಿಂಗ್ ಟ್ಯಾಕ್ಸ್' ಎಂದು ಟೀಕಿಸಿದ್ದರು. ''1826 ದಿನಗಳಲ್ಲಿ 1,000ಕ್ಕೂ ಹೆಚ್ಚು ಬದಲಾವಣೆಗಳು, 6 ತೆರಿಗೆಯ ಸ್ಲ್ಯಾಬ್‌ಗಳು. ಸಣ್ಣ ಉದ್ದಿಮೆದಾರರಿಗೆ ದುಃಸ್ವಪ್ನವಾಗಿ ಕಾಡುತ್ತಿವೆ'' ಎಂದು ಆರೋಪಿಸಿದ್ದರು. ಇದಕ್ಕೆ ಪ್ರತಿಯಾಗಿ ಬಿಜೆಪಿ, 'ಜೆನ್ಯೂನ್ ಸಿಂಪಲ್ ಟ್ಯಾಕ್ಸ್' ಎಂದು ತಿರುಗೇಟು ಕೊಟ್ಟಿತ್ತು.

ಆದರೆ ಪಹಲ್ಗಾಮ್‌ನಲ್ಲಿ ಪಾಕಿಸ್ತಾನದ ಪ್ರಾಯೋಜಕತ್ವದಲ್ಲಿ ಭಯೋತ್ಪಾದಕರು ದಾಳಿ ನಡೆಸಿ 26 ಮಂದಿ ಹಿಂದೂಗಳ ನರಮೇಧ ಮಾಡಿದ ಬಳಿಕ ಚಿತ್ರಣ ಬದಲಾಗಿದೆ. ಇದೇ ಮೊದಲ ಬಾರಿಗೆ ಜಿಎಸ್‌ಟಿಯ ಪ್ರಾಮುಖ್ಯವನ್ನು ಜನ ಅರ್ಥ ಮಾಡಿಕೊಳ್ಳುತ್ತಿದ್ದಾರೆ. ದೇಶದ ಮಿಲಿಟರಿಯ ಶಸ್ತ್ರಾಸ್ತ್ರಗಳು, ಯುದ್ಧ ವಿಮಾನಗಳು, ಡ್ರೋನ್‌ಗಳು, ಕ್ಷಿಪಣಿಗಳ ಮಹತ್ವವನ್ನು 'ಆಪರೇಷನ್ ಸಿಂದೂರ್' ಪ್ರತಿಯೊಬ್ಬರಿಗೂ ಮನವರಿಕೆ ಮಾಡಿಕೊಟ್ಟಿವೆ. ಪಾಕಿಸ್ತಾನದ ಕಡೆಯಿಂದ ರಾತ್ರಿ ನೂರಾರು ಡ್ರೋನ್‌ಗಳ ಸುರಿಮಳೆಯಾಗುತ್ತಿದ್ದರೆ, ಇತ್ತ ಭಾರತದ ಕ್ಷಿಪಣಿಗಳು ಮಿಂಚಿನಂತೆ ಕಾರ್ಯನಿರ್ವಹಿಸಿ ಆಕಾಶಮಾರ್ಗದಲ್ಲೇ ಆ ಡ್ರೋನ್, ಕ್ಷಿಪಣಿಗಳನ್ನು ಚಿಂದಿ ಉಡಾಯಿಸುತ್ತಿತ್ತು. ಜತೆಗೆ ಪಾಕಿಸ್ತಾನದ ನೆಲದಲ್ಲಿದ್ದ 9 ಭಯೋತ್ಪಾದಕ ಶಿಬಿರಗಳನ್ನು, ವೈಮಾನಿಕ ನೆಲೆಗಳನ್ನು ಭಾರತದ ಕ್ಷಿಪಣಿಗಳು ಮತ್ತು ಡ್ರೋನ್‌ಗಳು ಧ್ವಂಸಗೊಳಿಸಿದ ದೃಶ್ಯವನ್ನು ಕಂಡು ಜಗತ್ತೇ ಚಕಿತವಾಗಿದೆ. ಪಾಕಿಸ್ತಾನವಂತೂ ವಿಲವಿಲ ಒದ್ದಾಡಿದೆ. ಪ್ರಧಾನಿ ಮೋದಿಯವರು ಪಾಕಿಸ್ತಾನಕ್ಕೆ ರವಾನಿಸಿದ ಕಠಿಣ ಸಂದೇಶದಲ್ಲಿ ''ಪಾಕಿಸ್ತಾನ ನಮ್ಮನ್ನು ಹೊಡೆಯಲು ಯತ್ನಿಸಿತು, ನಾವು ಅವರ ಹೃದಯಕ್ಕೇ ಹೊಡೆದಿದ್ದೇವೆ'' ಎಂದು ಹೇಳಿದ್ದಾರೆ. ಈ ಮೊದಲು ಹಮಾಸ್ ಉಗ್ರರ ದಾಳಿಯನ್ನು ತಡೆಯಲು ಇಸ್ರೇಲ್ ಅಳವಡಿಸಿಕೊಂಡಿದ್ದ 'ಐರೋನ್ ಡೋಮ್' ವ್ಯವಸ್ಥೆಯ ದೃಶ್ಯ ವೈಭವವನ್ನು ಕಂಡಿದ್ದ ಭಾರತೀಯರು, ನಮಗೂ ಇಂಥದ್ದೊಂದು ಬೇಕು ಎಂದು ಭಾವಿಸಿದ್ದರು. ಆದರೆ ನಮ್ಮಲ್ಲೂ ಬಲಾಢ್ಯ 'ಎಸ್-400' ಮತ್ತು 'ಆಕಾಶ್' ಕ್ಷಿಪಣಿ ವ್ಯವಸ್ಥೆಗಳು ಕಟ್ಟಿಕೊಟ್ಟಿರುವ ರಕ್ಷಣಾ ವ್ಯವಸ್ಥೆಯ ಅದ್ಭುತ ಕಾರ್ಯವೈಖರಿಯನ್ನು ಕಂಡು ರೋಮಾಂಚನಗೊಂಡಿದ್ದಾರೆ. ಹೀಗಾಗಿಯೇ ಭಾರತೀಯರು ಜಿಎಸ್‌ಟಿ ಕಟ್ಟಿದ್ದು ಸಾರ್ಥಕವಾಯಿತು ಎಂದು ಹೆಮ್ಮೆಯಿಂದ, ಗರ್ವದಿಂದ ಹೇಳುತ್ತಿದ್ದಾರೆ. ಕೋಟಿ ಕೋಟಿ ಜನರ ಭಾವನೆಗಳನ್ನು ಅಸ್ಸಾಂ ಮುಖ್ಯಮಂತ್ರಿ ಗುರುತಿಸಿ ಹೇಳಿದ್ದಾರೆ. ಜತೆಗೆ ತೆರಿಗೆದಾರರನ್ನು ದೇವರು ಎಂದು ಕರೆದು ಗೌರವಿಸಿದ್ದಾರೆ.

ಸ್ವತಂತ್ರ ಭಾರತದ ಅತಿ ದೊಡ್ಡ ಪರೋಕ್ಷ ಸುಧಾರಣೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಜಿಎಸ್‌ಟಿ ಬಗ್ಗೆ ಪರ-ವಿರೋಧ ಚರ್ಚೆಗಳೂ ಸದಾ ನಡೆಯುತ್ತಿವೆ. ದೇಶದ ಆರ್ಥಿಕ ಚರಿತೆಯಲ್ಲಿ ಕೆಲವೇ ಕೆಲವು ಕ್ರಾಂತಿಕಾರಕ ಸುಧಾರಣೆಗಳು ಜರುಗಿವೆ. ಅವುಗಳ ಪೈಕಿ ಜಿಎಸ್‌ಟಿಯೂ ಒಂದು. ನಿಜವಾದ 'ಗಬ್ಬರ್ ಸಿಂಗ್ ಟ್ಯಾಕ್ಸ್' ಎನ್ನುವುದು ಜಿಎಸ್‌ಟಿ ಬರುವುದಕ್ಕಿಂತ ಮೊದಲು ಇತ್ತು. ತರಹೇವಾರಿ ಪರೋಕ್ಷ ತೆರಿಗೆಗಳು ಜನರನ್ನು ಗೊತ್ತಾಗದಂತೆಯೇ ಹಿಂಡಿದ್ದವು. ರಾಜ್ಯಗಳ ವ್ಯಾಟ್, ಸೆಂಟ್ರಲ್ ಸೇಲ್ಸ್ ಟ್ಯಾಕ್ಸ್, ಲಕ್ಸುರಿ ಟ್ಯಾಕ್ಸ್, ಎಂಟ್ರಿ ಟ್ಯಾಕ್ಸ್, ಪರ್ಚೇಸ್ ಟ್ಯಾಕ್ಸ್, ಬೆಟ್ಟಿಂಗ್ ಟ್ಯಾಕ್ಸ್, ಜಾಹೀರಾತು ತೆರಿಗೆ ಹೀಗೆ ಹತ್ತಾರು ಪರೋಕ್ಷ ತೆರಿಗೆಗಳು ಇದ್ದವು. ಟ್ರಕ್ಕುಗಳು ಚೆಕ್‌ಪೋಸ್ಟ್‌ಗಳ ಬಳಿ ಗಂಟೆಗಟ್ಟಲೆ ನಿಲ್ಲುತ್ತಿದ್ದವು. ಇದರಿಂದಾಗಿ ಒಂದು ಕಡೆ ಲಾರಿ ಮಾಲೀಕರಿಗೂ ಹೆಚ್ಚು ನಷ್ಟವಾಗುತ್ತಿತ್ತು. ಮತ್ತೊಂದು ಕಡೆ ಗ್ರಾಹಕರಿಗೂ ವಸ್ತುಗಳ ಬೆಲೆ ಏರಿಕೆಯ ಅನವಶ್ಯಕ/ಹೆಚ್ಚುವರಿ ಹೊಡೆತ ಬೀಳುತ್ತಿತ್ತು. ಲಂಚ ಮತ್ತು ಬ್ಯೂರೊಕ್ರಸಿಯ ಹಾವಳಿಗೆ ಬಿಸಿನೆಸ್ ನಲುಗಿತ್ತು. ಜಿಎಸ್‌ಟಿ ಬಳಿಕ ದೇಶದಲ್ಲಿ ಲಾಜಿಸ್ಟಿಕ್ಸ್ ವೆಚ್ಚದಲ್ಲಿ ಶೇ.30ರಷ್ಟು ಇಳಿಕೆಯಾಗಿದೆ. ಈಗ ಲಾರಿಗಳು ಒಂದು ರಾಜ್ಯದಿಂದ ಮತ್ತೊಂದು ರಾಜ್ಯಕ್ಕೆ ಹೋಗುವಾಗ ಚೆಕ್‌ಪೋಸ್ಟ್ ಬಳಿ ಗಂಟೆಗಟ್ಟಲೆ ಕಾಯುವ ಪರಿಸ್ಥಿತಿ ಇಲ್ಲ. ಈಗಲೂ ಇದು ಪರಿಪೂರ್ಣ ಎಂದೇನಲ್ಲ. ಜಿಎಸ್‌ಟಿ ಟ್ಯಾಕ್ಸ್ ಶ್ರೇಣಿ ಮತ್ತು ಕೆಲ ಉತ್ಪನ್ನಗಳಿಗೆ ತೆರಿಗೆ ಇಳಿಕೆ ಆಗಬೇಕಿದೆ. ಉದಾಹರಣೆಗೆ ಸಿಮೆಂಟ್‌ಗೆ 28 ಪರ್ಸೆಂಟ್ ಜಿಎಸ್‌ಟಿ ಸಮಂಜಸವಲ್ಲ. ಕಬ್ಬಿಣ, ಉಕ್ಕಿಗೂ ಶೇ.18ರ ತೆರಿಗೆ ಇಳಿದರೆ ಒಳ್ಳೆಯದು.

ಜಿಎಸ್‌ಟಿ ಬಗ್ಗೆ ಒಂದು ಮಿಥ್ಯೆ ಇದೆ. ಇದರಿಂದಾಗಿ ಪ್ರತಿ ವ್ಯಕ್ತಿಯ ಮೇಲೆ ಸರಾಸರಿ ತೆರಿಗೆ ಹೊರೆ ಹೆಚ್ಚಾಗಿದೆ ಎಂಬುದು. ವಾಸ್ತವವಾಗಿ ಭಾರತದ ಇತಿಹಾಸದಲ್ಲೇ ಮೊದಲ ಬಾರಿಗೆ ನಿತ್ಯಬಳಕೆಯ ಹಲವು ವಸ್ತುಗಳ ಮೇಲಿನ ಪರೋಕ್ಷ ತೆರಿಗೆಯನ್ನು ರದ್ದುಪಡಿಸಲಾಗಿದೆ. ಹಲವು ವಸ್ತುಗಳ ತೆರಿಗೆ ಶೇ. 5ಕ್ಕಿಂತ ಕೆಳಗಿದೆ. ಸಂಬಾರ ಪದಾರ್ಥಗಳಿಗೆ ಈ ಹಿಂದೆ ಇದ್ದ ತೆರಿಗೆ ಶೇ. 6ರಿಂದ 5ಕ್ಕೆ ಇಳಿದಿದೆ. ಜಿಎಸ್‌ಟಿಗೆ ಮೊದಲು ಅಕ್ಕಿಗೆ 2.75 ಮತ್ತು ಗೋಧಿಗೆ 2.5 ಪರ್ಸೆಂಟ್ ಟ್ಯಾಕ್ಸ್ ಇತ್ತು, ಈಗ ಎರಡನ್ನೂ ತೆರಿಗೆ ಮುಕ್ತಗೊಳಿಸಲಾಗಿದೆ. ಚಹಾ, ಹಾಲಿನ ಪುಡಿ, ಸಕ್ಕರೆ, ಖಾದ್ಯ ತೈಲಕ್ಕೀಗ ಕೇವಲ ಶೇ. 5ರ ತೆರಿಗೆ ಇದೆ. ದಿನ ಬಳಕೆಯ ಹೇರ್ ಆಯಿಲ್, ಟೂತ್ ಪೌಡರ್ ಮೇಲೆ ತೆರಿಗೆ ಕಡಿಮೆ. ಗೃಹೋಪಕರಣಗಳ ಮೇಲಿನ ತೆರಿಗೆ ಶೇ. 30ರಿಂದ 18ಕ್ಕೆ ಇಳಿದಿದೆ. 32 ಇಂಚು ಮೇಲ್ಪಟ್ಟ ಟಿವಿ, ರೆಫ್ರಿಜರೇಟರ್, ವಾಷಿಂಗ್ ಮಷೀನ್‌ಗೆ ತಲಾ 31.3 ಪರ್ಸೆಂಟ್ ತೆರಿಗೆ ಇತ್ತು. ಈಗ 18 ಪರ್ಸೆಂಟ್‌ಗೆ ತಗ್ಗಿದೆ. ಕೃಷಿ ಉತ್ಪನ್ನಗಳು, ಕಲ್ಲಿದ್ದಲು, ರಸಗೊಬ್ಬರ, ಟ್ರ್ಯಾಕ್ಟರ್‌ಗಳ ಮೇಲಿನ ತೆರಿಗೆಯನ್ನು ಕಡಿತಗೊಳಿಸಲಾಗಿದೆ. 1,200 ಸಿಸಿಗಿಂತ ಕಡಿಮೆ ಸಾಮರ್ಥ್ಯದ ಸಣ್ಣ ಕಾರುಗಳಿಗೆ ತೆರಿಗೆಯನ್ನು 28ರಿಂದ 18 ಪರ್ಸೆಂಟ್ಗೆ ಕಡಿತಗೊಳಿಸಲಾಗಿದೆ.

ಜಿಎಸ್‌ಟಿಯು ಹಲವಾರು ವಲಯಗಳ ಮೇಲೆ ಸಕಾರಾತ್ಮಕ ಪ್ರಭಾವ ಬೀರಿದೆ. ಉದಾಹರಣೆಗೆ ಇಲೆಕ್ಟ್ರಿಕ್ ವಾಹನಗಳು ಮತ್ತು ಸೋಲಾರ್ ಪ್ಯಾನೆಲ್‌ಗಳ ಮೇಲಿನ ಜಿಎಸ್‌ಟಿಯನ್ನು ಶೇ. 5ಕ್ಕೆ ಇಳಿಸಲಾಗಿದೆ. ಇದರಿಂದ ನವೀಕರಿಸಬಹುದಾದ ಇಂಧನ ವಲಯಕ್ಕೆ ಉತ್ತೇಜನ ನೀಡಿದಂತಾಗಿದೆ.

2024ರಲ್ಲಿ 21 ಲಕ್ಷದ 36 ಸಾವಿರ ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ. 2017ರಿಂದೀಚೆಗಿನ ಗರಿಷ್ಠ ವಾರ್ಷಿಕ ಕಲೆಕ್ಷನ್ ಇದಾಗಿದೆ. ದೇಶದ ಆರ್ಥಿಕ ಬೆಳವಣಿಗೆ, ತೆರಿಗೆ ನೆಲೆಯ ವಿಸ್ತರಣೆ, ಮೇಕ್ ಇನ್ ಇಂಡಿಯಾ, ಆತ್ಮನಿರ್ಭರ್ ಭಾರತ್ ಅಭಿಯಾನ, ದೇಶೀಯ ಹಣಕಾಸು ವರ್ಗಾವಣೆಗಳ ಹೆಚ್ಚಳ, ಇ-ಕಾಮರ್ಸ್, ಡಿಜಿಟಲ್ ಸೇವೆಗಳ ವ್ಯಾಪಕ ಬಳಕೆಯಿಂದ ತೆರಿಗೆ ಸಂಗ್ರಹದಲ್ಲಿ ಹೆಚ್ಚಳವಾಗಿದೆ.

ನಿಮಗೆ ನೆನಪಿರಬಹುದು- 1962ರ ಚೀನಾ-ಭಾರತ ಯುದ್ಧದ ಸಂದರ್ಭ ಭಾರತೀಯ ಸೇನೆಗೆ ಶಸ್ತ್ರಾಸ್ತ್ರಗಳ ತೀವ್ರ ಕೊರತೆ ಉಂಟಾಗಿತ್ತು. ಹಿಮಾಲಯದಲ್ಲಿ ಭಾರಿ ಚಳಿಯನ್ನು ಎದುರಿಸಲು ಸೈನಿಕರಿಗೆ ಅವಶ್ಯವಿರುವ ಬಟ್ಟೆಬರೆಗಳು, ಶೂಗಳನ್ನು ಖರೀದಿಸಲು ಕೂಡ ಸಾಧ್ಯವಾಗಿರಲಿಲ್ಲ ಎಂಬುದು ದುರ್ದೈವದ ಸಂಗತಿ. ಇದಕ್ಕೆ ಕಾರಣವೇನು? ಕೆಲವರ ಪ್ರಕಾರ ನೆಹರು ನಾಯಕತ್ವದಲ್ಲಿ ಪೂರ್ವ ಸಿದ್ಧತೆಯ ಕೊರತೆ, ಮತ್ತೆ ಕೆಲವರ ಪ್ರಕಾರ ಸಂಪನ್ಮೂಲದ ಅಭಾವ ಮತ್ತು ವ್ಯೂಹಾತ್ಮಕ ಕಾರ್ಯತಂತ್ರ ಇಲ್ಲದಿದ್ದುದು. ಆದರೆ ನೇರ ಮತ್ತು ಪರೋಕ್ಷ ತೆರಿಗೆ ಸಂಗ್ರಹದ ಏರಿಕೆಯಿಂದ ರಕ್ಷಣಾ ಬಜೆಟ್ ಅನ್ನು ಹೆಚ್ಚಿಸಲು ಅನುಕೂಲ ಆಗಿರುವುದು ವಾಸ್ತವ. ಮತ್ತೊಂದು ಕಡೆ ಕೇಂದ್ರ ನಾಯಕತ್ವವೂ ರಕ್ಷಣಾ ಬಜೆಟ್‌ಗೆ ಯಾವುದೇ ಕೊರತೆ ಆಗದಂತೆ ನೋಡಿಕೊಳ್ಳುತ್ತಿದೆ. 2014ರಲ್ಲಿ 2.53 ಲಕ್ಷ ಕೋಟಿ ರುಪಾಯಿಯಷ್ಟಿದ್ದ ರಕ್ಷಣಾ ಆಯವ್ಯಯ 2024ರ ವೇಳೆಗೆ 6.81 ಲಕ್ಷ ಕೋಟಿ ರುಪಾಯಿಗೆ ವೃದ್ಧಿಸಿದೆ. ಕೇಂದ್ರ ಬಜೆಟ್‌ನಲ್ಲಿ ಶೇ.13.45ರಷ್ಟು ರಕ್ಷಣಾ ಆಯವ್ಯಯ ಇದೆ. ಈ ಸಲದ ಮಂಜೂರಾತಿಯು ಅಂದಾಜಿಗಿಂತ ಶೇ. 9.53ರಷ್ಟು ಹೆಚ್ಚು. ಎಲ್ಲ ಇಲಾಖೆಗಿಂತ ಅಧಿಕ ಮೊತ್ತವನ್ನು ರಕ್ಷಣಾ ಇಲಾಖೆಗೆ ನೀಡಲಾಗಿದೆ.

ಭಾರತದ ರಕ್ಷಣಾ ಉತ್ಪಾದನೆ 2023-24ರಲ್ಲಿ 1 ಲಕ್ಷದ 27 ಸಾವಿರ ಕೋಟಿ ರುಪಾಯಿಗೆ ಏರಿಕೆಯಾಗಿದೆ. 2014-15ರಿಂದ ಶೇ.174ರಷ್ಟು ವೃದ್ಧಿಸಿದೆ. ರಕ್ಷಣಾ ಸಚಿವಾಲಯವು ದಾಖಲೆಯ 193 ಗುತ್ತಿಗೆಗಳಿಗೆ ಸಹಿ ಹಾಕಿದ್ದು, ಇದರ ಮೌಲ್ಯ 2 ಲಕ್ಷ ಕೋಟಿ ರುಪಾಯಿಗೂ ಹೆಚ್ಚು. ವಿಶೇಷವೇನೆಂದರೆ 2023-24ರಲ್ಲಿ ಭಾರತವು 21,083 ಕೋಟಿ ರುಪಾಯಿ ಬೆಲೆ ಬಾಳುವ ಶಸ್ತ್ರಾಸ್ತ್ರಗಳನ್ನು 100ಕ್ಕೂ ಹೆಚ್ಚು ರಾಷ್ಟ್ರಗಳಿಗೆ ರಫ್ತು ಮಾಡಿದೆ. ಇದು ಕಳೆದ ಹತ್ತು ವರ್ಷಗಳಲ್ಲಿ 30 ಪಟ್ಟು ಹೆಚ್ಚು. 2029ರ ವೇಳೆಗೆ ಉತ್ಪಾದನೆಯನ್ನು 3 ಲಕ್ಷ ಕೋಟಿಗೂ, ರಫ್ತನ್ನು 50,000 ಕೋಟಿಗೂ ಹೆಚ್ಚಿಸುವ ಗುರಿಯನ್ನು ಭಾರತ ಹೊಂದಿದೆ! ಇದೇ ಕಾರಣಕ್ಕಾಗಿ ಇವತ್ತು ಬೆಂಗಳೂರಿನ ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್), ಬಿಇಎಲ್ ಮುಂತಾದ ರಕ್ಷಣಾ ವಲಯದ ಸಾರ್ವಜನಿಕ ಕಂಪನಿಗಳ ಷೇರು ದರಗಳು ಗಣನೀಯ ಏರಿಕೆ ದಾಖಲಿಸಿ ಹೂಡಿಕೆದಾರರಿಗೆ ಲಾಭದಾಯಕವಾಗಿದೆ. ಜಿಎಸ್‌ಟಿಯಂಥ ಪರೋಕ್ಷ ತೆರಿಗೆ ಪದ್ಧತಿಯ ಸುಧಾರಣಾ ಕ್ರಮ ಇವತ್ತು ಇಡೀ ದೇಶದ ಭದ್ರತೆ, ಆರ್ಥಿಕ ಬೆಳವಣಿಗೆಗೆ ಹೇಗೆ ನೆರವಾಗಿದೆ ಎಂಬುದು ಅಧ್ಯಯನ ಯೋಗ್ಯ ಮತ್ತು ಸಕಾಲಿಕ.

ಭಟ್ಟರ್ ಸ್ಕಾಚ್

- **ರಾಜು ಪಠಾಣ, ಬೆಳಗಾವಿ**
  ಭಟ್ರೇ, ಮೂರ್ಖರ ಜತೆ ವಾದ ಮಾಡಬಾರದು ಅಂತಾರಲ್ಲ?
  – **ಅವರು ನಿನ್ನನ್ನು ಅವರ ಲೆವೆಲ್ಲಿಗೆ ಇಳಿಸಿ ತಮ್ಮ ಮೂರ್ಖತನದಿಂದ ನಿನ್ನನ್ನು ಹಣಿಯುತ್ತಾರೆ!**

- **ನಾಗರಾಜ ಕೆ.ವೈದ್ಯ, ಶಿವಮೊಗ್ಗ**
  ಭಟ್ರೇ, ಶಬ್ದಕ್ಕಿಂತ ಬೆಳಕು ವೇಗವಾಗಿ ಚಲಿಸುವುದೆಂದು ಹೇಳುತ್ತಾರಲ್ಲ?
  – **ಅದಕ್ಕಾಗಿಯೇ ಕೆಲವರು ತಾವು ಮಾತಾಡುವುದಕ್ಕಿಂತ ಮುನ್ನ ಕಾಂತಿಯುತವಾಗಿ ಕಾಣುತ್ತಾರೆ!**

- **ಸಿ.ಚಂದ್ರು, ಬೆಂಗಳೂರು**
  ಭಟ್ರೇ, ರಾಜಕಾರಣಿಗಳು ಮತ್ತು ಡಯಪರ್‌ನ್ನು ಆಗಾಗ ಬದಲಿಸಬೇಕು ಅಂತಾರಲ್ಲ?
  – **ಹೂಂ.. ಅದೂ ಒಂದೇ ಕಾರಣಕ್ಕೆ!**

- **ಗೀತಾ ಭಾರಧ್ವಾಜ, ದೊಡ್ಡಬಳ್ಳಾಪುರ**
  ಭಟ್ರೇ, ಇಂದು ನಾಳೆ ಅಂತ ಅನಿಸುವುದು ಯಾವಾಗ?
  – **ನಿನ್ನೆಯ ಬಗ್ಗೆ ಚಿಂತಿಸಿದಾಗ!**

- **ವಸಂತ ಕಾಳಗಿ, (ಇಮೇಲ್ ಮೂಲಕ)**
  ಭಟ್ರೇ, ವಯಸ್ಸಾದ ಬಳಿಕ ಮೂರು ಬದಲಾವಣೆಗಳು ಆಗುತ್ತವಂತೆ, ಮೊದಲನೆಯದು ನೆನಪು ಕೈಕೊಡುವುದು, ಉಳಿದೆರಡು?
  – **ಮರೆತು ಹೋಗಿದೆಯಪ್ಪಾ!**

- **ಪ್ರಸಾದ, (ಇಮೇಲ್ ಮೂಲಕ)**
  ಭಟ್ರೇ, ಕೆಲವರು ಯೋಚನೆಯಲ್ಲಿ ಮುಳುಗಿಹೋಗ್ತಾರಲ್ಲ?
  – **ಹೂಂ... ಅದು ಅವರಿಗೆ ಅಪರಿಚಿತ ತಾಣ ಆಗಿರುತ್ತದಲ್ಲ?!**

- **ಸಿದ್ದೇಶ ಹಣಜಿ, (ಇಮೇಲ್ ಮೂಲಕ)**
  ಭಟ್ರೇ, ಇಂದೇ ಜಗತ್ತಿನ ಕೊನೆ ಅಂತಾದರೆ?
  – **ಚಿಂತಿಸಬೇಡ, ಆಗಲೇ ಆಸ್ಟ್ರೇಲಿಯಾದಲ್ಲಿ ನಾಳೆ ಆಗಿರುತ್ತದೆ!**

- **ಚೇತನ್ ಕೆ.ಸಿ., (ಇಮೇಲ್ ಮೂಲಕ)**
  ಭಟ್ರೇ, ನನಗೆ ಅನೇಕ ವೈರಿಗಳಿದ್ದಾರೆ, ಓಕೆನಾ?
  – **ಪರವಾಗಿಲ್ಲ... ನಿನಗೆ ಉಜ್ವಲವಾದ ಭವಿಷ್ಯವಿದೆ!**

- **ಪಿ.ಸುದೇಶ, (ಇಮೇಲ್ ಮೂಲಕ)**
  ಭಟ್ರೇ, ನನ್ನನ್ನು ನೋಡಿ ನನಗೆ ನಗಲು ಸಾಧ್ಯವಾಗುತ್ತಿಲ್ಲ, ಏನು ಮಾಡಲಿ?
  – **ಆ ಕೆಲಸವನ್ನು ನಾನು ಮಾಡುತ್ತೇನೆ!**

- **ಜಗ್ಗು, ಶಿರಾ**
  ಭಟ್ರೇ, ತನ್ನ ದೇಶವನ್ನು ರಕ್ಷಿಸುವುದು ದೇಶಭಕ್ತನ ಕರ್ತವ್ಯ ಅಂತಾರಲ್ಲ?
  – **ಹೌದು, ತನ್ನ ದೇಶದ ಜನರಿಂದ!**

ಹಣ್ಣಿನಲ್ಲೂ ಇದೆ ಕೊಬ್ಬರಿ ಕಾಯಿ ರುಚಿ!

ಕಡಿಮೆ ಮಳೆ ಬರುವ ಬಯಲುಸೀಮೆಯ ಹಣ್ಣುಗಳ ರುಚಿ ಜಾಸ್ತಿ, ಸಿಹಿಯೂ ಜಾಸ್ತಿ – ಇದು ಅನುಭವಜನ್ಯ ಅಭಿಪ್ರಾಯ. ಹಲಸಿನ ಹಣ್ಣುಗಳ ಮಟ್ಟಿಗೆ ಹೇಳುವುದಾದರೆ, ಸಖರಾಯಪಟ್ಟಣದ ಸುತ್ತಮುತ್ತಲಿನ ಕೆಲವು ತಳಿಯ ಹಲಸಿನಲ್ಲಿ ವಿಶೇಷ ರುಚಿಯ ಹಣ್ಣುಗಳು ಸಿಗುತ್ತವೆ. ಅದೇ ರೀತಿ, ಹಾಸನ, ಚನ್ನರಾಯಪಟ್ಟಣದ ಸುತ್ತಮುತ್ತಲೂ ಉತ್ತಮ ರುಚಿಯ ಹಲಸು ದೊರೆಯುತ್ತದೆ. ಅರಕಲಗೂಡು ತಾಲೂಕಿನಲ್ಲಿ 'ಮುತ್ತಿಗೆ' ಎಂಬ ಹಳ್ಳಿಯಿದೆ. ಈ ಸುತ್ತಲೂ ಬೆಳೆಯುವ ಹಲಸಿನ ಹಣ್ಣುಗಳು ಮೈಸೂರು ಅರಸರ ಅರಮನೆಗೆ ಸರಬರಾಜು ಆಗುತ್ತಿದ್ದವಂತೆ!

ಶಶಾಂಕಣ
ಶಶಿಧರ ಹಾಲಾಡಿ
vveditoped@gmail.com

ಬೇಸಗೆಯ ಬಿರುಬಿಸಿಲಿನ ದಿನಗಳಿಗೂ, ಜಾತ್ರೆಗಳಿಗೂ ಅಪೂರ್ವ ಮತ್ತು ಆಪ್ತ ಎನ್ನುವ ಸಂಬಂಧವೊಂದನ್ನು ಗುರುತಿಸಬಹುದು. ನಮ್ಮೂರಿನ ಜಾತ್ರೆ ನಡೆಯುವುದು ಬಿರುಬಿಸಿಲಿನ ಮೇ ತಿಂಗಳಿನಲ್ಲಿ; ಪ್ರತಿ ವರ್ಷ ನರಸಿಂಹ ಜಯಂತಿಯಂದು ನಡೆಯುವ ಆ ಜಾತ್ರೆಗೆ ಹೋಗಿ ಬರುವುದೆಂದರೆ, ಬಿಸಿಲಿನಲ್ಲಿ ಸ್ನಾನ ಮಾಡಿದಂತೆ. ಆ ಜಾತ್ರೆಯ ಅನುಭವಗಳಲ್ಲಿ, ಬೆವರು, ಬೆವರುಸಾಲೆ, ತುರಿಕೆ, ಸುಸ್ತು ಇವೆಲ್ಲವೂ ತೀರಾ ಸಾಮಾನ್ಯ.

ಇವುಗಳ ನಡುವೆ, ಆ ಜಾತ್ರೆಯಲ್ಲೊಂದು ವಿಶೇಷ ಇದೆ. ಅದೇನೆಂದರೆ, ಹಲಸಿನ ಹಣ್ಣುಗಳ ಮೇಳ! ನಿಜ, ಹಲವು ದಶಕಗಳ ಹಿಂದೆ ಆ ಜಾತ್ರೆಯಲ್ಲಿ ಹಲಸಿನ ಹಣ್ಣುಗಳನ್ನು ಸಾಲುಸಾಲಾಗಿ ಪೇರಿಸಿಟ್ಟುಕೊಂಡು ಮಾರುತ್ತಿದ್ದರು. ಅಂದು ವಾಣಿಜ್ಯಕವಾಗಿ ಹಲಸಿನ ಮೇಳಗಳು ಇನ್ನೂ ಆರಂಭವಾಗಿರಲಿಲ್ಲ. ನರಸಿಂಹ ಜಯಂತಿಯಂದು ನಡೆಯುವ ಜಾತ್ರೆಯೇ ಹಲಸಿನ ಹಣ್ಣಿನ ಹಬ್ಬವಾಗಿ ನಮ್ಮೂರಿನ ಜನರ ನಾಲಗೆಯನ್ನು ತಣಿಸುತ್ತಿತ್ತು.

ಹಲಸಿನ ಹಣ್ಣಿನ ಕುರಿತಾಗಿ ಬರೆಯುವುದು ಸಾಕಷ್ಟಿದೆ. ನಮ್ಮ ಹಳ್ಳಿಯಲ್ಲಿ ಎಲ್ಲಿ ಕಂಡರೂ ಹಲಸಿನ ಮರಗಳಿದ್ದವು; ಈಗಲೂ ಸಾಕಷ್ಟು ಉಳಿದುಕೊಂಡಿವೆ. ಆದ್ದರಿಂದ, ಹಲಸು ಎಂದರೆ ನಮಗೆ ತೀರಾ ಸಾಮಾನ್ಯ ಎನಿಸುವ ಹಣ್ಣು ಮತ್ತು ಬಹೂಪಯೋಗಿ ತರಕಾರಿ! ಏನು, ತರಕಾರಿ ಹೇಗೆ ಎಂದು ಕೇಳಿದಿರಾ? ನಮ್ಮ ಹಳ್ಳಿಯವರು ಹಲಸಿನ ಮೇಲೆ ನಡೆಸುತ್ತಿದ್ದ ಪ್ರಯೋಗಗಳಿಗೆ ಲೆಕ್ಕವೇ ಇಲ್ಲ ಎನ್ನಬಹುದು. ಅದರ ಕುರಿತು ನಂತರ ಬರುತ್ತೇನೆ. ಹಲಸಿನ ಹಣ್ಣಿನ ರುಚಿಯ ಕುರಿತು, ನಾವು ಹಳ್ಳಿಯವರು ಒಂದು ರೀತಿಯಲ್ಲಿ ಕೂಪ ಮಂಡೂಕಗಳಾಗಿದ್ದೆವು ಎಂದು ನಾನು ತಪ್ಪೊಪ್ಪಿಕೊಳ್ಳಲೇಬೇಕು.

ನಮ್ಮ ಮನೆಯಿಂದ ಸುಮಾರು ಆರು ಕಿ.ಮೀ. ನಡಿಗೆ ದಾರಿಯಷ್ಟು ದೂರದಲ್ಲಿದ್ದ ಅಬ್ಲಿಕಟ್ಟೆ ಎಂಬಲ್ಲಿನ ನಮ್ಮ ದೊಡ್ಡಮ್ಮನ ಮನೆ ಹಿಂಭಾಗದಲ್ಲಿದ್ದ 'ಬಿಳಿ ಬಕ್ಕೆ' ಮರದಲ್ಲಿ ಪ್ರತಿವರ್ಷ ಹೇರಳವಾಗಿ ಆಗುವ ಹಲಸಿನ ಹಣ್ಣಿನ ರುಚಿ ಈ ಜಗತ್ತಿನಲ್ಲಿ ಶ್ರೇಷ್ಠ ಎಂಬ ಭಾವನೆ ನನ್ನಲ್ಲಿ ಬಹಳ ವರ್ಷದ ತನಕ ಇತ್ತು. ಮಿದುವಾದ ತೊಳೆ, ಬಿಳಿಯದಾದ ತುಸು ಗುಲಾಬಿ ಮಿಶ್ರಿತ ಬಣ್ಣ, ಹದವಾದ ಗಾತ್ರ, ಅಪರೂಪದ ರುಚಿ. ನನ್ನ ಬಾಲ್ಯದಿಂದಾರಂಭಿಸಿ, ಪ್ರತಿವರ್ಷ ಶಾಲೆಗಳಿಗೆ ಬೇಸಗೆ ರಜೆಗಳ ಸಮಯದಲ್ಲಿ ಆ ದೊಡ್ಡಮ್ಮನ ಮನೆಯಲ್ಲಿ ನನ್ನದು ಒಂದೆರಡು ವಾರ ಠಿಕಾಣಿ ಇದ್ದದ್ದೇ. ಕಾಲೇಜು ಅಧ್ಯಯನ ಮುಗಿಯುವ ತನಕ ಪ್ರತಿ ಬೇಸಗೆ ರಜೆಯಲ್ಲಿ ಅಲ್ಲಿ ನಾನು ತಿಂದ ಹಲಸಿನ ಹಣ್ಣುಗಳ ವೈವಿಧ್ಯ ಅಪಾರ. ಅತಿ ರುಚಿ ಎನಿಸುವ ಬಿಳಿ ಬಕ್ಕೆ ಹಣ್ಣಿನ ಜತೆಯಲ್ಲೇ, ಅಲ್ಲೇ ಬೆಳೆದಿದ್ದ ಇತರ ಹಲವು ಬಕ್ಕೆ ಹಣ್ಣುಗಳು, ಇಂಬ ಹಣ್ಣುಗಳನ್ನೂ ಮೆದ್ದು, ಅವುಗಳಿಂದ ತಯಾರಿಸಿದ ವಿವಿಧ ತಿನಿಸುಗಳನ್ನು ತಿಂದದ್ದೇ ತಿಂದದ್ದು. ಜತೆಗೆ, ಮರಗಿಡಗಳ ನಡುವೆಯೇ ಇದ್ದ ನಮ್ಮ ಹಳ್ಳಿ ಮನೆಯ ಸುತ್ತಲೂ ಬೆಳೆದಿದ್ದ ಮರಗಳಲ್ಲಿ ಬಿಡುತ್ತಿದ್ದ ಹಲಸನ್ನೂ ತಿಂದಿದ್ದೆ. ಏಪ್ರಿಲ್ ನಿಂದಾರಂಭಿಸಿ, ಜುಲೈ ತನಕ ಹಲಸಿನ ಹಣ್ಣನ್ನು ತಿನ್ನುವ ನಮ್ಮ ಚಟುವಟಿಕೆ ಅದೆಷ್ಟು ತೀವ್ರತರದ್ದೆಂದರೆ, ಕೊನೆ ಕೊನೆಗೆ ಹಲಸಿನ ಹಣ್ಣಿನ ವಾಸನೆ ಬಂದ ತಕ್ಷಣ, ಸಣ್ಣಗೆ ವಾಕರಿಕೆ ಬರುವಂತಾಗುವಷ್ಟು! ಇಷ್ಟರ ನಡುವೆಯೂ, ಅಬ್ಲಿಕಟ್ಟೆಯ 'ಬಿಳಿ ಬಕ್ಕೆ' ಹಣ್ಣನ್ನು ತರಿಸಿಕೊಂಡು ತಿನ್ನುತ್ತಿದ್ದೆವು. ಆ ಮರದ ಹಲಸು ಅಷ್ಟು ರುಚಿಕರ! ಆದ್ದರಿಂದಲೇ, ಇಡೀ ಜಗತ್ತಿನಲ್ಲಿ 'ಬಿಳಿ ಬಕ್ಕೆ'ಯ ಹಲಸಿನಷ್ಟು ರುಚಿಕರ ತೊಳೆಗಳು ಇನ್ನೆಲ್ಲೂ ಇಲ್ಲ ಎಂದು ನಮ್ಮ ಹಳ್ಳಿಯವರು ನಂಬಿಕೊಂಡು ಬಂದಿದ್ದೆವು.

ಕಾಲೇಜು ಶಿಕ್ಷಣ ಮುಗಿಸಿ, ವೃತ್ತಿಯನ್ನರಸುತ್ತಾ ನಮ್ಮ ರಾಜ್ಯದ ಬಯಲುಸೀಮೆಯ ಹೃದಯಭಾಗದಲ್ಲಿರುವ ಒಂದು ಹಳ್ಳಿಯನ್ನು ಸೇರಿಕೊಂಡೆ. ವರ್ಷಕ್ಕೆ ನಾಲ್ಕಾರು ದಿನ ಮಾತ್ರ ಮಳೆಬರುವ ಪ್ರದೇಶವದು. ಮರಗಿಡಗಳೂ ಕಡಿಮೆ. ತೆಂಗಿನ ಸೀಮೆ. ಊರಿಂದಾಚೆಯ ತೋಟದ ನಡುವೆ ಅಲ್ಲಲ್ಲಿ ಒಂದೊಂದು ಹಲಸಿನ ಮರಗಳಿದ್ದವು. ಅಂಥ ಒಂದು ಮರದಲ್ಲಿ ಬಿಟ್ಟ ಹಲಸಿನ ಹಣ್ಣಿನ ಕೆಲವು ತೊಳೆಗಳನ್ನು ಹಳ್ಳಿಯ ಸ್ಥಳೀಯ ಗೆಳೆಯರು ತಂದುಕೊಟ್ಟರು. ಅದನ್ನು ತಿಂದ ತಕ್ಷಣ, ನಮ್ಮೂರಿನ 'ಬಿಳಿ ಬಕ್ಕೆ' ಹಣ್ಣು ನೆನಪಾಯಿತು! ಅಷ್ಟು ರುಚಿ. 'ಇದೇನು ಮಹಾ, ನೀವು ಸಖರಾಯಪಟ್ಟಣದ ಹಲಸಿನ ಹಣ್ಣನ್ನು ತಿನ್ನಬೇಕು, ಅದಿನ್ನೂ ರುಚಿ' ಎಂದರು ಆ ಹಳ್ಳಿಯ ಯುವಕರು. ನಮ್ಮ ಹಳ್ಳಿಯ ಹಲಸಿನ ಹಣ್ಣೇ ಶ್ರೇಷ್ಠ ಎಂದು ತಿಳಿದಿದ್ದ ನಾನು, ಬಯಲುಸೀಮೆಯ ಹಲಸನ್ನು ತಿಂದು, ಆ ಅಭಿಪ್ರಾಯವನ್ನು ಬದಲಿಸಿಕೊಳ್ಳಬೇಕಾಯಿತು.

ಕಡಿಮೆ ಮಳೆ ಬರುವ ಬಯಲುಸೀಮೆಯ ಹಣ್ಣುಗಳ ರುಚಿ ಜಾಸ್ತಿ, ಸಿಹಿಯೂ ಜಾಸ್ತಿ– ಇದು ಅನುಭವಜನ್ಯ ಅಭಿಪ್ರಾಯ. ಹಲಸಿನ ಹಣ್ಣುಗಳ ಮಟ್ಟಿಗೆ ಹೇಳುವುದಾದರೆ, ಸಖರಾಯಪಟ್ಟಣದ ಸುತ್ತಮುತ್ತಲಿನ ಕೆಲವು ತಳಿಯ ಹಲಸಿನಲ್ಲಿ ವಿಶೇಷ ರುಚಿಯ ಹಣ್ಣುಗಳು ಸಿಗುತ್ತವೆ. ಅದೇ ರೀತಿ, ಹಾಸನ, ಚನ್ನರಾಯಪಟ್ಟಣದ ಸುತ್ತಮುತ್ತಲೂ ಉತ್ತಮ ರುಚಿಯ ಹಲಸು ದೊರೆಯುತ್ತದೆ. ಅರಕಲಗೂಡು ತಾಲೂಕಿನಲ್ಲಿ 'ಮುತ್ತಿಗೆ' ಎಂಬ ಹಳ್ಳಿಯಿದೆ. ಈ ಸುತ್ತಲೂ ಬೆಳೆಯುವ ಹಲಸಿನ ಹಣ್ಣುಗಳು ಮೈಸೂರು ಅರಸರ ಅರಮನೆಗೆ ಸರಬರಾಜು ಆಗುತ್ತಿದ್ದವಂತೆ! ಅಷ್ಟು ರುಚಿ. ಇತ್ತ ಕನಕಪುರ, ಚನ್ನಪಟ್ಟಣ ಮೊದಲಾದ ಕಡೆಯಲ್ಲೂ ವಿಶೇಷ ರುಚಿಯ ಹಲಸು ಲಭ್ಯ. ಕರಾವಳಿ ಮತ್ತು ಮಲೆನಾಡಿನಲ್ಲಿ, ಮಳೆ ಆರಂಭವಾದ ಕೂಡಲೆ, ವಿಪರೀತ ನೆನೆಯುವ ಹಲಸಿನ ಕಾಯಿಗಳು ರುಚಿಕಳೆದುಕೊಂಡು, ಹಣ್ಣಾದಾಗ ತುಸು ಸಪ್ಪೆಯಾಗುತ್ತವೆ. ಅವು ಎಷ್ಟರ ಮಟ್ಟಿಗೆ ನೆನೆಯುತ್ತವೆಂದರೆ, ಮಳೆಗಾಲದಲ್ಲಿ ಹಲಸಿನ ಹಣ್ಣನ್ನು ಬಿಡಿಸಿದರೆ, ಕೆಲವು ತೊಳೆಗಳಲ್ಲಿ ಆದಾಗಲೇ ಬೇರುಗಳು ಮೂಡಿರುತ್ತವೆ! ಬಾಲ್ಯಕಾಲದಲ್ಲಿ ಅಂಥ ಹಣ್ಣುಗಳನ್ನು, ತೊಳೆಗಳನ್ನು ಚಪ್ಪರಿಸಿಕೊಂಡು ತಿಂದಿದ್ದೆನಾದರೂ, ಈಗ ಹಲಸಿನ ತೊಳೆಗಳ ಆಯ್ಕೆಯಲ್ಲಿ ವಿಶೇಷ ಕಾಳಜಿ ವಹಿಸುತ್ತೇನೆ. ಅದೇಕೋ, ಕೆಲವು ಹಣ್ಣಿನ ತೊಳೆಗಳನ್ನು ತಿಂದರೆ, 'ಆ್ಯಸಿಡಿಟಿ' ಎಂಬ, ಸರಿಯಾಗಿ ವರ್ಣಿಸಲಾಗದ ಹೊಟ್ಟೆಯ ಸಮಸ್ಯೆ ತೋರುತ್ತದೆ! ಬೆಂಗಳೂರಿನ ಕೆಲವು ಮಕ್ಕಳಿಗೆ ಹಲಸಿನ ಹಣ್ಣು ಆಗಿಬರುವುದಿಲ್ಲವಂತೆ. 'ಹಲಸಿನ ತೊಳೆ ತಿಂದರೆ ನಮ್ಮ ಮಕ್ಕಳ ಹೊಟ್ಟೆಯಲ್ಲಿ ಅದು ಜೀರ್ಣವಾಗುವುದಿಲ್ಲ' ಎಂದು ಅವರ ಅಮ್ಮಂದಿರು ಮೊದಲೇ ಘೋಷಿಸಿಬಿಡುವುದುಂಟು! ಕೆಲವು ಮರದ ಹಲಸಿನ ತೊಳೆಗಳು ನಾರು ಜಾಸ್ತಿ ಇರುವುದರಿಂದಲೋ, ಬೇರಾವುದೋ ಕಾರಣದಿಂದಲೋ ಅಂಥ ಹಣ್ಣುಗಳು ಹೊಟ್ಟೆ ಸಮಸ್ಯೆ ತರುವ ಸಾಧ್ಯತೆಯೂ ಇದೆ. ಆದರೆ, ಅತಿ ರುಚಿಕರ ಎನಿಸುವ, ಬೆಂಗಳೂರು ಸೀಮೆಯವರು 'ಕೊಬ್ಬರಿ ಕಾಯಿ' ಎಂದು ಕರೆಯುವ ಹಲಸಿನ ತೊಳೆಯನ್ನು ತಿನ್ನದವರು,

ಅಂಥ ಒಂದು ಅಪರೂಪದ ರುಚಿಕರ ಹಣ್ಣನ್ನು ತಿನ್ನುವ ಭಾಗ್ಯದಿಂದ ವಂಚಿತರೆಂದೇ ಹೇಳಬಹುದು.

ಬೆಂಗಳೂರಿನ ಒಂದು ರಸ್ತೆಬದಿಯಲ್ಲಿ ಕಳೆದ ವಾರ, ಯುವಕನೊಬ್ಬ ಹಲಸಿನ ಹಣ್ಣನ್ನು ಮಾರುತ್ತಾ ನಿಂತಿದ್ದ. 'ರುಚಿ ಹೇಗಿದೆ, ಕೊಂಡೊಯ್ದರೆ ಮೋಸ ಇಲ್ಲ ತಾನೆ?' ಎಂದು ಕೇಳಿದೆ. 'ಸಾರ್, ಇದು ಕೊಬ್ರಿ ಕಾಯಿ.. ತಿಂದು ನೋಡಿ. ಕಾಯಿ ತುಂಬಾ ತೊಳೆಗಳು' ಎಂದು ವರ್ಣಿಸಿ, ಒಂದು ಹಲಸಿನ ಹಣ್ಣನ್ನು ಕೊಟ್ಟ. 'ಕೊಬ್ರಿ ಕಾಯಿ' ಎಂದು ಅವನು ಹಲಸಿನ ತೊಳೆಯನ್ನು ವರ್ಣಿಸಿದ ರೀತಿ ವಿಶೇಷ. ಕೊಬ್ಬರಿಯಂತೆ ಸಿಹಿ ಸಿಹಿಯಾಗಿರುತ್ತದೆ ಎಂದೋ, ಮಿದುವಾಗಿರುತ್ತದೆ ಎಂದೋ, ನೋಡಲು ಕೊಬ್ಬರಿಯಂತೆ ದಪ್ಪನೆಯ ತೊಳೆಗಳು ಎಂತಲೋ ಹೇಗೆ ಬೇಕಾದರೂ ತಿಳಿಯಬಹುದು. ಮನೆಗೆ ಬಂದು, ವಿಶೇಷ ಪರಿಶ್ರಮವಹಿಸಿ ಆ ಹಣ್ಣನ್ನು ಕತ್ತರಿಸಿ, ತೊಳೆಗಳನ್ನು ಬೇರ್ಪಡಿಸಿ ತಿಂದಾಗ ತೃಪ್ತಿಯಾಯಿತು. 'ಕೊಬ್ಬರಿ ಕಾಯಿ' ಅಲ್ಲದೇ ಇದ್ದರೂ, ಸಾಕಷ್ಟು ರುಚಿಯಿತ್ತು.

ಕೊಬ್ಬರಿ ಕಾಯಿ ಎಂದು ವರ್ಣಿಸಿಕೊಳ್ಳುವ ಹಲಸಿನ ತೊಳೆಯ ರುಚಿಯನ್ನು ಸವಿಯುವ ಅವಕಾಶವೂ ಇತ್ತೀಚೆಗೆ ದೊರಕಿತು. ಬೆಂಗಳೂರಿನ ಸರಹದ್ದಿನ ಹಳ್ಳಿಯೊಂದರಲ್ಲಿ ಬೆಳೆದ ಹಲಸಿನ ತೊಳೆಗಳನ್ನು ಸಹೋದ್ಯೋಗಿಯೊಬ್ಬರು ತಂದಿದ್ದರು. ಮೊದಲಿಗೆ ಒಂದೆರಡು ತೊಳೆ ಸಾಕು ಎಂದು ತಿನ್ನಲು ಆರಂಭಿಸಿ, ಕೊನೆಗೆ ನಾಲ್ಕಾರು ತೊಳೆ ತಿಂದರೂ ಬೇಸರವಿಲ್ಲ! ಬಂಗಾರದ ಬಣ್ಣ, ಹದವಾದ ಗಾತ್ರ, ಮಿದುವಾದ ತೊಳೆ, ರುಚಿಯಂತೂ ಅದ್ಭುತ! ಕಳೆದ ಹತ್ತಾರು ವರ್ಷಗಳಲ್ಲಿ ನಾನು ಅಷ್ಟು ರುಚಿಯ ಹಲಸಿನ ತೊಳೆಯನ್ನೇ ತಿಂದಿರಲಿಲ್ಲ! ಒಂದು ತೊಳೆ ತಿಂದರೆ, ಇನ್ನೊಂದು ಬೇಕು ಎನಿಸುವ ರುಚಿ. ಹಲಸಿನ ತೊಳೆಯನ್ನು 'ಕೊಬ್ಬರಿ ಕಾಯಿ'ಯಂತಿದೆ ಎಂದು ವರ್ಣಿಸಲು ಪರಿಪೂರ್ಣ ಎನಿಸುವ ಹಲಸಿನ ಹಣ್ಣು ಅದು. ಆ ಹಲಸಿನ ರುಚಿ ಅದೆಷ್ಟು ಮಧುರ ಎನಿಸಿತು ಎಂದರೆ, ಅದೇ ಮರದ ಇನ್ನಷ್ಟು ತೊಳೆಗಳನ್ನು ಇನ್ನೊಮ್ಮೆ ತಂದುಕೊಡಿ ಎಂದು ಆ ಸಹೋದ್ಯೋಗಿಯವರನ್ನು ವಿನಂತಿಸಬೇಕು ಎಂದುಕೊಂಡಿರುವೆ!

ಹಲಸಿನ ಹಣ್ಣಿನ ರುಚಿಯಲ್ಲಿ ಬಯಲುಸೀಮೆಯ ಹಲಸಿನ ಮರಗಳಿಗೆ ಸಾಟಿ ಇಲ್ಲ ಎಂದು ಹೇಳಿದೆನಷ್ಟೇ. ಆದರೆ, ಹಲಸಿನ ಕಾಯಿ ಮತ್ತು ಹಣ್ಣುಗಳನ್ನು ವಿವಿಧ ಪಾಕಪ್ರಯೋಗಗಳಿಗೆ ಒಳಪಡಿಸುವಲ್ಲಿ, ಮಲೆನಾಡು ಮತ್ತು ಕರಾವಳಿಯ ಗೃಹಿಣಿಯರನ್ನು ಮೀರಿಸುವವರು ಯಾರೂ ಇಲ್ಲ. ಅದೇಕೆ ಬಯಲುಸೀಮೆಯವರು ಹಲಸಿನ ಕಾಯಿಯನ್ನು, ಹಣ್ಣನ್ನು ಜಾಸ್ತಿ ಅಡುಗೆ ಮನೆಯೊಳಗೆ ಸೇರಿಸಿಲ್ಲ ಎಂದು ಇಂದಿಗೂ ನನಗೆ ಅಚ್ಚರಿ. ಏಕೆಂದರೆ, ಅತಿ ಕಡಿಮೆ ಬೆಲೆಯ ತರಕಾರಿಯ ರೂಪದಲ್ಲಿ ಸಿಗುವ ಹಲಸಿನ ಕಾಯಿಯನ್ನು ಕರಾವಳಿಯವರು, ಮಲೆನಾಡಿನವರು ಬಳಸುವ ರೀತಿಯನ್ನು ಕಂಡು ಯಾರೇ ಆದರೂ ನಿಬ್ಬೆರಗಾಗಲೇಬೇಕು.

ನಮ್ಮ ಹಳ್ಳಿಯಲ್ಲಿ ಹಲಸಿನ ಕಾಯಿಯನ್ನು ದೀರ್ಘಕಾಲ ಉಳಿಸಿಕೊಳ್ಳುವ ಹಲವು ವಿಧಾನಗಳಿವೆ. ಅವುಗಳಲ್ಲಿ, ಹಲಸಿನ ಕಾಯಿಯ ಹಪ್ಪಳವೂ ಒಂದು! ಮಳೆಗಾಲದಲ್ಲಿ ಬೆಳಗಿನ ಉಪಾಹಾರದ ರೂಪದಲ್ಲಿ ಒಂದೆರಡು ಹಲಸಿನ ಹಪ್ಪಳಗಳನ್ನು ಸುಟ್ಟು ತಿನ್ನುವ ಪರಿಪಾಠವಿತ್ತು! ಬೇಸಗೆ ಆರಂಭವಾಗುತ್ತಿದ್ದಂತೆಯೇ, ಮನೆ ಸುತ್ತಲಿನ ಯಾವ ಹಲಸಿನ ಮರದಲ್ಲಿ ಬಲಿತ ಹಲಸಿನಕಾಯಿ ಇದೆ ಎಂದು ಹುಡುಕಿ, ಅದರ ತೊಳೆಗಳನ್ನು ಬೇರ್ಪಡಿಸಿ, ಅಟ್ಟದಲ್ಲಿ ಬೇಯಿಸಿ, ಒನಕೆ ಬಳಸಿ ಒರಳಿನಲ್ಲಿ ಕುಟ್ಟಿ ಹಿಟ್ಟು ಮಾಡುವುದು ಮೊದಲ ಹಂತ. ಎರಡು ಮಣೆಗಳ ಮಧ್ಯೆ, ಬಾಳೆಲೆ ಅಥವಾ ಪ್ಲಾಸ್ಟಿಕ್ ಹಾಳೆಗಳ ನಡುವೆ, ಬೇಯಿಸಿದ ಹಿಟ್ಟನ್ನು ಉಂಡೆ ಮಾಡಿಟ್ಟು, ಒತ್ತಿ ಹಪ್ಪಳ ಮಾಡಿ, ಚೆನ್ನಾಗಿ ಒಣಗಿಸಿ ಇಟ್ಟುಕೊಂಡರೆ, ಹಲಸಿನ ಹಪ್ಪಳವು ತಿನಿಸಾಗಿಯೂ ಹಲವು ತಿಂಗಳುಗಳ ಕಾಲ ಬಾಳಿಕೆ ಬರಬಲ್ಲದು, ತುರ್ತು ಸಂದರ್ಭದಲ್ಲಿ ಬೆಳಗಿನ ಉಪಾಹಾರಕ್ಕೂ ಒದಗಿಬರಬಲ್ಲದು. ಆದರೆ, ಇತ್ತೀಚಿಗಿನ ದಿನಗಳಲ್ಲಿ ನಮ್ಮ ಹಳ್ಳಿಯವರು ಮನೆಯಲ್ಲಿ ಹಲಸಿನ ಹಪ್ಪಳ ಮಾಡುವ ಸಂಪ್ರದಾಯವನ್ನು ಬಹುತೇಕ ತ್ಯಜಿಸಿದ್ದಾರೆ! ಎಲ್ಲೋ ಕೆಲವು ಮನೆಯವರು ಮಾತ್ರ ಮಾಡುತ್ತಾರೆ. ಮೊದಲು ಮನೆ ತುಂಬಾ ಜನ, ಮಕ್ಕಳು ಇದ್ದರು, ಎಲ್ಲರೂ ಸೇರಿ ಹಪ್ಪಳ ಮಾಡುತ್ತಿದ್ದರು. ಇಂದು ನಮ್ಮ ಹಳ್ಳಿಯ ಹೆಚ್ಚಿನ ಮನೆಗಳಲ್ಲಿ ಜನ ಕಡಿಮೆಯಾಗಿದ್ದಾರೆ, ಮಕ್ಕಳ ಸಂಖ್ಯೆಯೂ ಕಡಿಮೆಯಾಗಿದೆ; ಮನೆಯಲ್ಲಿರುವವರಿಗೆ, ಭಾರಿ ಶ್ರಮ ಬೇಡುವ ಹಲಸಿನ ಹಪ್ಪಳದ ತಯಾರಿಕೆಯಲ್ಲಿ ಆಸಕ್ತಿ ಇಲ್ಲ! ಆಧುನಿಕತೆಯ ಬಿರುಗಾಳಿಗೆ ಕೊಚ್ಚಿ ಹೋಗುತ್ತಿರುವ ಹಲವು ರುಚಿಕರ ತಿನಿಸುಗಳಲ್ಲಿ, ಮನೆಯಲ್ಲೇ ತಯಾರಿಸುವ ಹಲಸಿನ ಹಪ್ಪಳವೂ ಒಂದು!

ನಮ್ಮ ಹಳ್ಳಿಯವರು ಹಲಸಿನ ಕಾಯಿಯನ್ನು ಕೊಚ್ಚಿ, ಪಲ್ಯ ತಯಾರಿಸುವುದು ಮಾಮೂಲು. ಇದು ಇಂದಿಗೂ ಜನಪ್ರಿಯ. ಹಲಸಿನ ತೊಳೆಯ ಸಾಂಬಾರು, ಸಾರೆ ಸೇರಿಸಿ ಸಾಂಬಾರು, ಪಲ್ಯ ಉಳಿದುಕೊಂಡು ಬಂದಿವೆ. ಆದರೆ, ಹಲಸಿನಕಾಯಿಯ ಉಪ್ಪಿನಕಾಯಿ ಮಾಡುವ ಪದ್ಧತಿ ಮರೆಯಾಗಿದೆ. ಮಾವಿನಕಾಯಿ ಬೆರೆಸಿ ತಯಾರಿಸುವ ಎಳೆ ಹಲಸಿನ ಕಾಯಿಯ ಉಪ್ಪಿನಕಾಯಿಯ ರುಚಿಯನ್ನು ಬಲ್ಲವರು, ಮತ್ತೊಮ್ಮೆ ಹಾಕಿಸಿಕೊಂಡು ತಿನ್ನುವುದಂತೂ ಖಚಿತ. ಈ ಉಪ್ಪಿನಕಾಯಿಯ ಒಂದು ಕೊರತೆ ಎಂದರೆ, ಇದು ಬಹುಕಾಲ ಬಾಳಿಕೆ ಬರದು. ತಯಾರಿಸಿದ ಒಂದೆರಡು ತಿಂಗಳಿನಲ್ಲೇ ಖಾಲಿ ಮಾಡಬೇಕು. ಹಲಸಿನ ತೊಳೆಯ ಚಿಪ್ಸ್ ಮಾಡುವ ಪದ್ಧತಿ ಈಚಿನ ವರ್ಷಗಳಲ್ಲಿ ವಾಣಿಜ್ಯಕವಾಗಿ ಹೆಚ್ಚು ಪ್ರಚಾರ ಪಡೆದಿದ್ದು, ಅಂಗಡಿಗಳಲ್ಲಿ ಅಂಥ ಚಿಪ್ಸ್‌ನ ಪ್ಯಾಕೆಟ್‌ಗಳು ಕಾಣಸಿಗುತ್ತಿವೆ.

ಹಲಸಿನ ಹಣ್ಣಿನಿಂದ ಪಾಯಸ, ಕಡುಬು, ಮುಳುಕ ತಯಾರಿಸುವುದು ಇಂದಿಗೂ ಕರಾವಳಿ ಮತ್ತು ಮಲೆನಾಡಿನಲ್ಲಿ ಜನಪ್ರಿಯ. ಮುಳುಕ (ಬೋಂಡ) ತಯಾರಿಸಿದರೆ, ಅದರ ಜತೆ ಜೇನುತುಪ್ಪ ಬೆರೆಸಿ ಸೇವಿಸುವುದುಂಟು. ಹಲಸಿನ ಕಾಯಿಯ ತೊಳೆಗಳನ್ನು ಉಪ್ಪು ನೀರಿಗೆ ಬೆರೆಸಿಟ್ಟರೆ, ಹಲವು ತಿಂಗಳುಗಳ ಕಾಲ ಕಾಪಿಡಬಹುದು.

ಇವೆಲ್ಲವನ್ನೂ ಈಗೇಕೆ ವರ್ಣಿಸಿದೆನೆಂದರೆ, 'ಕೊಬ್ಬರಿ ಕಾಯಿ'ಯ ರುಚಿ ಇದೆ ಎಂದು ಹಲಸಿನ ಹಣ್ಣಿನ ತೊಳೆಗಳನ್ನು ಚಪ್ಪರಿಸಿ ತಿನ್ನುವ ನಮ್ಮ ರಾಜ್ಯದ ಬಯಲುಸೀಮೆಯ ಜನಪದರು, ಅದೇಕೆ ಹಲಸಿನ ಕಾಯಿ ಮತ್ತು ಹಣ್ಣುಗಳನ್ನು ಅಡುಗೆ ಮನೆಯ ಪ್ರಯೋಗಗಳಿಗೆ ಒಳಪಡಿಸಿಲ್ಲ? ಈ ಒಂದು ಪ್ರಶ್ನೆ ನನ್ನನ್ನು ಸದಾ ಕಾಡುತ್ತಿದೆ!

ಬೆನ್ನಿಗಿರಿಯಲು ಬಂದ ಟರ್ಕಿಗೆ 'ಮೈಸೂರ್ ಗುನ್ನ'

ಯಗಟಿ ರಘು ನಾಡಿಗ್

ಪಹಲ್ಗಾಮ್‌ನಲ್ಲಿ ಪಾಕ್-ಕೃಪಾಪೋಷಿತ ಉಗ್ರರು ನಡೆಸಿದ ಪೈಶಾಚಿಕ ಕೃತ್ಯಕ್ಕೆ ಭಾರತವು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯ ಹೆಸರಿನಲ್ಲಿ ತಡವರಿಸಿಕೊಳ್ಳುವಂಥ ಏಟು ನೀಡಿದ್ದು ಸರಿಯಷ್ಟೇ? ಆದರೆ ಈ ಕಾರ್ಯಾಚರಣೆಗೆ ಪ್ರತಿಯಾಗಿ ಪಾಕಿಸ್ತಾನ ನಡೆಸಿದ ದಾಳಿಯಲ್ಲಿ 'ಟರ್ಕಿ' ಎಂಬ ವಿಶ್ವಾಸಘಾತುಕ ರಾಷ್ಟ್ರವೂ ಕೈಜೋಡಿಸಿತ್ತು ಎಂಬ ಸಂಗತಿಯೀಗ ಬಯಲಾಗಿದೆ. 'ಅಯ್ಯೋ ಪಾಪ ಅಂದ್ರೆ ಅರ್ಧ ಆಯಸ್ಸು'! ಎಂಬ ಮಾತಿಗೆ ಈಗ ಪುಷ್ಟಿ ಸಿಕ್ಕಂತಾಗಿದೆ

ನಂಬಿಕೆದ್ರೋಹಿ ಟರ್ಕಿ

ಪಹಲ್ಗಾಮ್ ದಾಳಿಯ ಸಂಬಂಧ ಭಾರತ ಮತ್ತು ಪಾಕಿಸ್ತಾನದ ನಡುವೆ ಉದ್ವಿಗ್ನ ಪರಿಸ್ಥಿತಿ ರೂಪುಗೊಂಡಾಗ, ಟರ್ಕಿಯ ವಿಮಾನವೊಂದು ಒಂದಷ್ಟು 'ಅಗತ್ಯ ಯುದ್ಧ ಸಾಮಗ್ರಿಗಳನ್ನು' ಹೊತ್ತು ಪಾಕಿಸ್ತಾನದಲ್ಲಿ ಇಳಿದ ಬಗ್ಗೆ ಸುದ್ದಿಯಾಗಿತ್ತು. ಆದರೆ, 'ಕೇವಲ ಇಂಧನ ತುಂಬಿಸಿಕೊಳ್ಳಲೆಂದು ಪಾಕಿಸ್ತಾನದಲ್ಲಿ ವಿಮಾನವನ್ನು ಇಳಿಸಲಾಗಿತ್ತಷ್ಟೇ' ಎಂದು ಟರ್ಕಿಯ ವಕ್ತಾರರು ತೇಪೆ ಹಚ್ಚಿ ನುಣುಚಿಕೊಂಡಿದ್ದರು. ಆದರೀಗ ಟರ್ಕಿ ಮೆರೆದಿರುವ ವಿಶ್ವಾಸಘಾತುಕತನವನ್ನು ಕಂಡು ಅದರ ನಡೆಯನ್ನು ಅನುಮಾನದ ಕಂಗಳಿಂದ ನೋಡುವಂತಾಗಿದೆ. ಏಕೆಂದರೆ ತನ್ನ ಸಂಕಷ್ಟದ ಸಮಯದಲ್ಲಿ ಎರಡೂ ಕೈಗಳಿಂದ ಭಾರತದ ನೆರವನ್ನು ಬಾಚಿಕೊಂಡಿದ್ದ ಟರ್ಕಿ, ಭಾರತದ ಮೇಲಿನ ಪಾಕಿಸ್ತಾನದ ಪ್ರತಿದಾಳಿಯಲ್ಲಿ ಅದೇ ಎರಡು ಕೈಗಳಿಂದ ಡ್ರೋನ್ ಬಾಂಬ್‌ಗಳನ್ನು ಎಸೆಯುವ ಮೂಲಕ ಬೆನ್ನಿಗಿರಿಯುವ ಕೆಲಸಮಾಡಿದೆ.

ಮರೆಗುಳಿ ಟರ್ಕಿ

ಟರ್ಕಿಗೆ ಸವಾಲು-ಸಂಕಷ್ಟ ಎದುರಾದಾಗಲೆಲ್ಲ, ಯಾವ ಭೂರಾಜಕೀಯ ಅಥವಾ ರಾಜತಂತ್ರದ ಲೆಕ್ಕಾಚಾರಕ್ಕೂ ಮುಂದಾಗದೆ, ಹಿಂದೆ-ಮುಂದೆ ನೋಡದೆ ಸಹಾಯಹಸ್ತ ಚಾಚಿದ ರಾಷ್ಟ್ರ ಭಾರತ. 2023ರಲ್ಲಿ ಟರ್ಕಿಯಲ್ಲಿ ಭೀಕರ ಭೂಕಂಪ ಸಂಭವಿಸಿದಾಗ, 'ಆಪರೇಷನ್ ದೋಸ್ತ್' ಎಂಬ ಹಣೆಪಟ್ಟಿಯಡಿ ಸಂಪನ್ಮೂಲ ಮತ್ತು ವೈದ್ಯಕೀಯ ನೆರವನ್ನು ಮೊಗೆಮೊಗೆದು ಕೊಟ್ಟ ರಾಷ್ಟ್ರ ಭಾರತ. ಆದರೆ, 'ಆಪತ್ತಿಗಾದವನೇ ನೆಂಟ' ಎಂಬ ಕೃತಜ್ಞತೆಯನ್ನು ತೋರುವ ಬದಲಿಗೆ, ಭಾರತದ ಮೇಲಿನ ಪಾಕಿಸ್ತಾನದ ದಾಳಿಗೆ ತನ್ನ ಕ್ಷಿಪಣಿ ಮತ್ತು ಡ್ರೋನ್‌ಗಳನ್ನು ಕೊಡುಗೆಯಾಗಿತ್ತು ಟರ್ಕಿ! ಈ ಬೆನ್ನಿಗಿರಿತದ ನಡೆಯೇ ಈಗ ಜಾಗತಿಕ ಸಮುದಾಯದಲ್ಲಿ ಚರ್ಚೆಗೆ ಒಳಗಾಗಿದೆ.

ವಾಸನೆ ಹೊಡೆದಿತ್ತು

ಹಾಗೆ ನೋಡಿದರೆ, ಪಾಕಿಸ್ತಾನಕ್ಕೆ ಒತ್ತಾಸೆಯಾಗಿ ನಿಂತ ಟರ್ಕಿ, ಡ್ರೋನ್ ಸೇರಿದಂತೆ ಹಲವು ಬಗೆಯ ಶಸ್ತ್ರಾಸ್ತ್ರಗಳನ್ನು ಅದಕ್ಕೆ ನೀಡಿರುವುದರ ಬಗ್ಗೆ ಭಾರತೀಯ ಸೇನಾಪಡೆಗಳಿಗೆ ವಾಸನೆ ಹೊಡೆದಿತ್ತು. ಈಗ ವಿಷಯದ ಆಳಕ್ಕಿಳಿದಂತೆ, ಭಾರತದ ವಿರುದ್ಧದ ದಾಳಿಗೆ ಅದು ಡ್ರೋನ್‌ಗಳನ್ನು ಒದಗಿಸಿದ್ದರ ಜತೆಗೆ, ಮಿಲಿಟರಿ ವಲಯದಲ್ಲಿ ಕಾರ್ಯ ನಿರ್ವಹಿಸುವ ತನ್ನ ಡ್ರೋನ್ ನಿರ್ವಾಹಕರನ್ನೂ ಒದಗಿಸಿರುವುದು ಅರಿವಾಗಿದೆ. ಟರ್ಕಿ ನಿರ್ಮಿತ ಡ್ರೋನ್‌ಗಳ ನೆರವಿನಿಂದ ಲೇಹ್‌ನಿಂದ ಶುರುವಾಗಿ ಸರ್ ಕ್ರೀಕ್‌ವರೆಗಿನ 36 ಭಾರತೀಯ ಸೇನಾನೆಲೆಗಳನ್ನು

ಗುರಿಯಾಗಿಸಿಕೊಂಡು ದಾಳಿಗೆ ಪಾಕಿಸ್ತಾನ ಯತ್ನಿಸಿತ್ತು. ಪಾಕ್‌ನ ದಾಳಿಗೆ ಭಾರತ ನೀಡಿದ ಮಾರುತ್ತರಕ್ಕೆ ಟರ್ಕಿಯ ಇಬ್ಬರು ಯೋಧರು ಸತ್ತಿದ್ದು, ಇದು ಹಣಾಹಣಿಯಲ್ಲಿ ವಿಶ್ವಾಸದ್ರೋಹಿ ಟರ್ಕಿಯ ನೇರಭಾಗಿತ್ವಕ್ಕೆ ಸಾಕ್ಷಿಯಾಗಿದೆ. ಜತೆಗೆ, ಟರ್ಕಿಯ ಸಲಹೆಗಾರರು ಸದರಿ ಡ್ರೋನ್ ದಾಳಿಯ ಸಮನ್ವಯಕಾರರಾಗಿ ಕಾರ್ಯನಿರ್ವಹಿಸಿದ ಸಂಗತಿಯೂ ಬಯಲಾಗಿದೆ.

ಶುರುವಾಗಿದೆ 'ಪೋಸ್ಟ್ ಮಾರ್ಟಮ್'!

ಭಾರತದ ಉತ್ತರ ಹಾಗೂ ಪಶ್ಚಿಮ ಭಾಗಗಳಲ್ಲಿ ನೆಲೆಗೊಂಡಿರುವ ವಿವಿಧ ಸ್ತರದ ಸೇನಾನೆಲೆಗಳ ಮೇಲೆ ದಾಳಿ ಮಾಡಲೆಂದು ಪಾಕಿಸ್ತಾನವು 350ಕ್ಕೂ ಹೆಚ್ಚು ಡ್ರೋನ್‌ಗಳನ್ನು ಬಳಸಿದ್ದುಂಟು. ಇವೆಲ್ಲ ಟರ್ಕಿ ಮೂಲದವು ಎನ್ನಲಾಗಿದ್ದು, ಅವುಗಳ ಅವಶೇಷಗಳನ್ನೆಲ್ಲ ವಿಧಿ ವಿಜ್ಞಾನ ಇಲಾಖೆಯು ಹೆಕ್ಕಿ ಹೆಕ್ಕಿ ತೆಗೆದು ಕೂಲಂಕಷ ಪರೀಕ್ಷೆಯನ್ನು ಕೈಗೊಂಡಿದೆ. ಲಭ್ಯ ಸ್ಥೂಲ ಮಾಹಿತಿಯಂತೆ, ಇವು 'ಟರ್ಕಿಶ್ ಆಸಿಸ್‌ಗಾರ್ಡ್ ಸೋನ್‌ಗರ್ ಡ್ರೋನ್' ಪ್ರಭೇದಕ್ಕೆ ಸೇರಿದವಾಗಿದ್ದು, ರೋಟರ್‌ನಿಂದ ರೋಟರ್‌ವರೆಗೆ 140 ಸೆಂ.ಮೀ.ನಷ್ಟು ಅಗಲವನ್ನು ಹೊಂದಿರುತ್ತವೆ ಮತ್ತು 45 ಕೆ.ಜಿ.ಯಷ್ಟು ಸ್ಫೋಟಕ ಸಾಮಗ್ರಿಯನ್ನು ಹೊತ್ತು ಹಾರಬಲ್ಲವಾಗಿರುತ್ತವೆ.

ದ್ವಿಪಕ್ಷೀಯ ಬಾಂಧವ್ಯಕ್ಕೆ ಪೆಟ್ಟು

ಟರ್ಕಿಯ ಹೆಗಲ ಮೇಲೆ ಬಂದೂಕವನ್ನಿಟ್ಟು ಭಾರತದೆಡೆಗೆ ಗುರಿಮಾಡುವ ಮೂಲಕ ಪಾಕಿಸ್ತಾನವು ಭಾರತದ ಜತೆಗಿನ ಹಣಾಹಣಿಯಲ್ಲಿ ಇದೇ ಮೊದಲ ಬಾರಿಗೆ ವಿದೇಶವೊಂದರ ಸೇನಾಪಡೆಯ ನೇರ ಬೆಂಬಲವನ್ನು ಪಡೆದಂತಾಗಿದೆ. ಆದರೆ, ಈ 'ಬುಗುರಿ ಆಟ'ದಲ್ಲಿ ತನಗೆ ಭಾರತ ಕಡೆಯಿಂದ 'ಮೈಸೂರ್ ಗುನ್ನ' ಬೀಳಲಿದೆ ಎಂಬುದು ಟರ್ಕಿಗೆ ಇನ್ನೂ ಅರಿವಾದಂತಿಲ್ಲ. ಏಕೆಂದರೆ, ಟರ್ಕಿಯ ಈ ವಿಶ್ವಾಸಘಾತುಕತನದಿಂದಾಗಿ ಭಾರತದ ಜತೆಗಿನ ಅದರ ದ್ವಿಪಕ್ಷೀಯ ಸಂಬಂಧಕ್ಕೆ ಭಾರಿ ಹೊಡೆತ ಬೀಳಲಿದೆ ಎನ್ನುತ್ತಿದ್ದಾರೆ ವಿಶ್ಲೇಷಕರು. ಇದರ ಮೊದಲ 'ಗುನ್ನ'ವಾಗಿ ಭಾರತವು 'ಎಕ್ಸ್' (ಟ್ವಿಟರ್) ಸಾಮಾಜಿಕ ಮಾಧ್ಯಮದಲ್ಲಿ ಟರ್ಕಿಶ್ ಸುದ್ದಿ ಪ್ರಸಾರಕ 'ಟಿಆರ್‌ಟಿ ವರ್ಲ್ಡ್'ನ ಖಾತೆಯ ಪ್ರವೇಶಕ್ಕೆ ನಿರ್ಬಂಧವನ್ನು ವಿಧಿಸಿದೆ.

ಹೊತ್ತಿಕೊಂಡಿತು ಸುರ್‌ಸುರ್ ಬತ್ತಿ!

ಭಾರತದ ಮೇಲಿನ ಪ್ರತಿದಾಳಿಗೆ ಪಾಕಿಸ್ತಾನ ಬಳಸಿದ್ದು ಟರ್ಕಿ ನಿರ್ಮಿತ ಡ್ರೋನ್ ಎಂಬ ಸಂಗತಿ ಹೊರಬೀಳುತ್ತಿದ್ದಂತೆ ದೇಶದ ವಿವಿಧೆಡೆ ಆಕ್ರೋಶ-ಅಸಮಾಧಾನಗಳ ಅಲೆಯೆದ್ದಿದೆ. ಸುಮ್ಮನಿರಲಾರದೆ ಇರುವೆ ಬಿಟ್ಟುಕೊಂಡ ಟರ್ಕಿ, ಅದಕ್ಕೀಗ ಭಾರಿ ಬೆಲೆಯನ್ನು ತೆರಬೇಕಾಗಿ ಬಂದಿದ್ದು, ಅದರ ಒಂದಿಷ್ಟು ಝಲಕ್ ಇಲ್ಲಿವೆ:

- ಟರ್ಕಿಯಿಂದ ಭಾರತಕ್ಕೆ ಆಮದಾಗುವ ವಸ್ತುಗಳ ಮೇಲೆ ಕೇಂದ್ರ ಸರಕಾರವು ನಿಷೇಧ ಹೇರಬೇಕು ಎಂಬ ಆಗ್ರಹ ತೀವ್ರವಾಗುತ್ತಿದೆ.
- ರಾಜಸ್ಥಾನ ರಾಜ್ಯದ ಉದಯಪುರದ ಅಮೃತಶಿಲೆ (ಮಾರ್ಬಲ್ ಮತ್ತಿತರ ದುಬಾರಿ ಮತ್ತು ಅಲಂಕಾರಿಕ ಕಲ್ಲುಗಳ) ಮಾರಾಟಗಾರರು ಟರ್ಕಿ ದೇಶದ ಮಾರ್ಬಲ್‌ಗಳ ಹಂಚಿಕೆ/ವಿತರಣೆಯನ್ನು ನಿಲ್ಲಿಸಿದ್ದಾರೆ. ಅಲ್ಲಿನ ಮಾರ್ಬಲ್ ಸಂಸ್ಕರಣೆಗಾರರ ಸಂಘವು ಟರ್ಕಿಯ ಅಮೃತಶಿಲೆಯ ಆಮದನ್ನು ಈಗಾಗಲೇ ಸ್ಥಗಿತಗೊಳಿಸಿದೆ.
- ಮಹಾರಾಷ್ಟ್ರದ ಪುಣೆಯ ಹಣ್ಣಿನ ವ್ಯಾಪಾರಸ್ಥರು ಟರ್ಕಿ ಮೂಲದ ಸೇಬು ಹಣ್ಣಿನ ಮಾರಾಟಕ್ಕೆ 'ತಾರಮ್ಮಯ್ಯ' ಎಂದಿದ್ದಾರೆ.
- ದೇಶದ ವಿವಿಧೆಡೆಯ ಟ್ರಾವೆಲ್ ಏಜೆಂಟರುಗಳು ಟರ್ಕಿ ದೇಶದೆಡೆಗಿನ ಪ್ರವಾಸದ ಪ್ರಸ್ತಾವಗಳನ್ನು ಈಗಾಗಲೇ ನಿಲ್ಲಿಸಿದ್ದಾರೆ. 'ಈಸ್ ಮೈ ಟ್ರಿಪ್' ಮತ್ತು 'ಇಕ್ಸಿಗೊ' ದಂಥ ಆನ್‌ಲೈನ್ ಪ್ರಯಾಣ/ಪ್ರವಾಸ ವೇದಿಕೆಗಳು, ಟರ್ಕಿ ಮತ್ತು ಅಜರ್‌ಬೈಜಾನ್‌ನಂಥ ತಾಣಗಳಿಗೆ ಪ್ರಯಾಣಿಸದಂತೆ ಮುನ್ನೆಚ್ಚರಿಕೆ ನೀಡುತ್ತಿವೆ.
- ಟರ್ಕಿ ಮತ್ತು ಅಜರ್‌ಬೈಜಾನ್ ದೇಶಗಳಿಗೆ ಈಗಾಗಲೇ ಪ್ರವಾಸಕ್ಕೆ ಕಾದಿರಿಸಿದ್ದವರು ಭಾರಿ ಪ್ರಮಾಣದಲ್ಲಿ ಅದನ್ನು ರದ್ದುಗೊಳಿಸಿದ್ದಾರೆ. ಜತೆಗೆ, ಈ ಎರಡೂ ದೇಶಗಳಲ್ಲಿ ಯಾವುದೇ ಚಲನಚಿತ್ರಗಳ ಚಿತ್ರೀಕರಣಕ್ಕೆ ಯೋಜಿಸಬಾರದು ಎಂಬುದಾಗಿ ಭಾರತೀಯ ಚಲನಚಿತ್ರ ಕಲಾವಿದರ ಸಂಘಟನೆಯು ದೇಶದ ವಿವಿಧೆಡೆಗಳ ಚಿತ್ರನಿರ್ಮಾತೃಗಳನ್ನು ಕೋರಿದೆ.
- 'ಟರ್ಕಿಯಲ್ಲಿ ಡೆಸ್ಟಿನೇಷನ್ ಮದುವೆ ಏರ್ಪಡಿಸುವ ಗೋಜಿಗೆ ಹೋಗಬೇಡಿ' ಎಂದು ಕಾಂಗ್ರೆಸ್ ನಾಯಕ ರಾಜೀವ್ ಶುಕ್ಲಾ ಮತ್ತು ಶಿವಸೇನೆ ಪಕ್ಷದ ಉದ್ಧವ್ ಬಣದ ಸಂಸದೆ ಪ್ರಿಯಾಂಕಾ ಚತುರ್ವೇದಿ ಕರೆ ನೀಡಿದ್ದಾರೆ.

''ಭಾರತವು ವಾರ್ಷಿಕ ಸುಮಾರು 18 ಲಕ್ಷ ಟನ್‌ಗಳಷ್ಟು ಅಮೃತಶಿಲೆಯನ್ನು ಆಮದುಮಾಡಿಕೊಳ್ಳುತ್ತಿದ್ದು ಇದರಲ್ಲಿ ಟರ್ಕಿ ದೇಶದ್ದೇ ಸಿಂಹಪಾಲು (ಶೇ.70ರಷ್ಟು) ಇದೆ ಮತ್ತು ಈ ವಹಿವಾಟಿನ ಮೌಲ್ಯ ಸುಮಾರು 3,000 ಕೋಟಿ ರುಪಾಯಿಗಳವರೆಗಿದೆ. ಆದರೆ, ಯಾವುದೇ ವ್ಯಾಪಾರ ಅಥವಾ ಉದ್ಯಮವು ರಾಷ್ಟ್ರೀಯ ಹಿತಾಸಕ್ತಿಗಿಂತ ದೊಡ್ಡದೇನಲ್ಲ. ದೇಶದ ವ್ಯಾಪಾರ ಸಂಘಟನೆಗಳು ಒಗ್ಗಟ್ಟಾಗಿ ನಿಂತು ಟರ್ಕಿಯಿಂದಾಗುವ ಸರಕುಗಳ ಆಮದಿನ ವಿರುದ್ಧ ದನಿಯೆತ್ತಿದರೆ, ಅದುವೇ ರಾಷ್ಟ್ರೀಯ ಏಕತೆಯ ಸದೃಢ ಸಂಕೇತವಾಗುತ್ತದೆ. ಈ ಪರಿಪಾಠದಿಂದಾಗಿ 'ಭಾರತೀಯ ಉದ್ಯಮಗಳು ಸಂಕಷ್ಟದ ಸಮಯದಲ್ಲಿ ಸರಕಾರವನ್ನು ಬೆಂಬಲಿಸುತ್ತವೆ' ಎಂಬ ಸಂದೇಶವು ವಿಶ್ವಕ್ಕೆ ರವಾನೆಯಾದಂತಾಗುತ್ತದೆ''

– ಕಪಿಲ್ ಸುರಾನಾ (ಅಧ್ಯಕ್ಷರು) ಮತ್ತು ಹಿತೇಶ್ ಪಟೇಲ್ (ಕಾರ್ಯದರ್ಶಿ), ಉದಯಪುರ ಮಾರ್ಬಲ್ ಪ್ರೊಸೆಸರ್ಸ್ ಅಸೋಸಿಯೇಷನ್

ವಹಿವಾಟಿನ ಪಕ್ಷಿನೋಟ

ಭಾರತವು ಟರ್ಕಿ ದೇಶಕ್ಕೆ ಇಂಧನ, ಖನಿಜ, ಸಾವಯವ ರಾಸಾಯನಿಕಗಳು, ಕಬ್ಬಿಣ ಮತ್ತು ಉಕ್ಕು, ಔಷಧೋತ್ಪನ್ನಗಳು, ಟ್ಯಾನಿಂಗ್ ಮತ್ತು ಡೈಯಿಂಗ್ ಸಾಮಗ್ರಿಗಳು, ಪ್ಲಾಸ್ಟಿಕ್, ರಬ್ಬರ್, ಹತ್ತಿ, ನಾರಿನ ಉತ್ಪನ್ನಗಳು, ವಿದ್ಯುತ್ ಸಾಧನ-ಸಲಕರಣೆಗಳು, ವಾಹನಗಳು ಮತ್ತು ಅದರ ಬಿಡಿಭಾಗಗಳು ಹೀಗೆ ವೈವಿಧ್ಯಮಯ ವಸ್ತುಗಳನ್ನು ರಫ್ತುಮಾಡುತ್ತದೆ. ಈ ಪ್ರಮಾಣವು ಭಾರತದ ಒಟ್ಟು ರಫ್ತಿನಲ್ಲಿ ಶೇ.1.5ರಷ್ಟು ಭಾಗವನ್ನು ಪ್ರತಿನಿಧಿಸುತ್ತದೆ. ಮತ್ತೊಂದೆಡೆ, ಬ್ಲಾಕ್‌ಗಳು ಮತ್ತು ಚಪ್ಪಡಿಗಳು ಸೇರಿದಂತೆ ವಿವಿಧ ಸ್ವರೂಪ ಮತ್ತು ಪ್ರಭೇದದ ಅಮೃತಶಿಲೆಗಳು, ಸೇಬುಹಣ್ಣು, ಸುಣ್ಣ ಮತ್ತು ಸಿಮೆಂಟ್, ಖನಿಜ ತೈಲ ಮುಂತಾದವನ್ನು ಟರ್ಕಿಯಿಂದ ಭಾರತ ಆಮದು ಮಾಡಿಕೊಳ್ಳುತ್ತದೆ. ಇನ್ನು ಅಜರ್‌ಬೈಜಾನ್‌ಗೆ ಭಾರತದಿಂದ ತಂಬಾಕು ಮತ್ತು ತಂಬಾಕಿನ ಉತ್ಪನ್ನಗಳು, ಸೆರಾಮಿಕ್ ಉತ್ಪನ್ನಗಳು, ಚಹಾ-ಕಾಫಿ, ಧಾನ್ಯ, ಕಾಗದ ಮತ್ತು ಕಾಗದದ ಬೋರ್ಡ್ ಮುಂತಾದವು ರಫ್ತಾದರೆ, ಅಲ್ಲಿಂದ ಭಾರತಕ್ಕೆ ಸುಗಂಧ ದ್ರವ್ಯಗಳು, ಕಚ್ಚಾ ಚರ್ಮ ಮತ್ತು ಚರ್ಮದ ಉತ್ಪನ್ನಗಳು, ಪಶು ಆಹಾರ ಮುಂತಾದವು ಆಮದಾಗುತ್ತವೆ. ಭಾರತದ ಮೇಲೆ ಪಾಕಿಸ್ತಾನ ಕೈಗೊಂಡ ಪ್ರತಿದಾಳಿಯಲ್ಲಿ ಟರ್ಕಿ ಮತ್ತು ಅಜರ್‌ಬೈಜಾನ್ ಕೈಜೋಡಿಸಿದ್ದರ ಫಲವಾಗಿ ಮೇಲೆ ಉಲ್ಲೇಖಿಸಿರುವ ಆಮದು-ರಫ್ತುಗಳಿಗೆ ಕತ್ತರಿ ಬೀಳುವ ನಿರೀಕ್ಷೆಯಿದೆ.

ಮಾಲ್ಡೀವ್ಸ್‌ಗೂ ಮಾಂಜಾ!

ಹಿಂದೊಮ್ಮೆ ಬೇರೊಂದು ಕಾರಣಕ್ಕೆ ಹೀಗೆಯೇ ಕೊಬ್ಬು ತೋರಿಸಿ ಗುನ್ನಾ ಹೊಡೆಸಿಕೊಂಡಿತ್ತು ಮಾಲ್ಡೀವ್ಸ್. ಭಾರತ ಸೇರಿದಂತೆ ವಿವಿಧ ದೇಶಗಳಿಂದ ಬರುವ ಪ್ರವಾಸಿಗರನ್ನೇ ನೆಚ್ಚಿಕೊಂಡಿರುವಂಥದ್ದು ಮಾಲ್ಡೀವ್ಸ್‌ನ ಪ್ರವಾಸೋದ್ಯಮ. ಆದರೆ ಅಲ್ಲಿನ ಸಚಿವರೊಬ್ಬರು ಭಾರತದ ಪ್ರಧಾನಿ ಮೋದಿಯವರ ವಿರುದ್ಧವೇ ಕಾರಣವಲ್ಲದ ಕಾರಣಕ್ಕೆ ಟೀಕಿಸಿದ್ದರು ಮತ್ತು ಅಲ್ಲಿನ ಸರಕಾರವೂ ಅದಕ್ಕೆ ಗಾಳಿಹಾಕಿತ್ತು. ಇದಕ್ಕೆ ಪ್ರತಿಯಾಗಿ ಮಾಲ್ಡೀವ್ಸ್ ವಿರುದ್ಧ ಒಂದಿಷ್ಟು 'ರಾಜತಾಂತ್ರಿಕ ಗೂಸಾ' ನೀಡಲು ಭಾರತ ಮುಂದಾಗಿದ್ದಕ್ಕೆ ಸ್ಪಂದಿಸಿದ ಭಾರತೀಯರು ತಮ್ಮ ಪ್ರವಾಸ/ಹೋಟೆಲ್ ಕಾದಿರಿಸುವಿಕೆ ಇತ್ಯಾದಿಗಳನ್ನು ರದ್ದುಗೊಳಿಸಿದ್ದರು. ಇದರಿಂದಾಗಿ ತನ್ನ ಆರ್ಥಿಕತೆಗೆ ಪೆಟ್ಟುಬಿದ್ದಾಗ ಮಾಲ್ಡೀವ್ಸ್‌ಗೆ ಬುದ್ಧಿ ಬಂದು ಭಾರತದ ಮುಂದೆ ಮಂಡಿಯೂರಿ ಕ್ಷಮೆ ಕೇಳಿತ್ತು. ಪ್ರಾಯಶಃ, ಟರ್ಕಿ-ಅಜರ್‌ಬೈಜಾನ್‌ಗಳಿಗೂ ಇದೇ ಗತಿ ಒದಗುವ ಸಾಧ್ಯತೆಯಿದೆ!

ನಾರದ ಸಂಚಾರ

ಕಲಹಪ್ರಿಯ
naadigru@gmail.com

ಆ್ಯಕ್ಷನ್ ವರ್ಸಸ್ ಫ್ಯಾಕ್ಷನ್...!

ರಾಜಕೀಯ ರಂಗವೆಂಬುದು ಒಂಥರಾ 'ನವರಂಗಿ ದುನಿಯಾ' ಇದ್ದಂತೆ. ಇಲ್ಲಿ ನಡೆಯುವ ಒಂದೊಂದು ಚಟುವಟಿಕೆಗೂ ಅದರದ್ದೇ ಆದ ಗಮ್ಮತ್ತಿರುತ್ತದೆ ಎಂಬುದನ್ನು ಬಿಡಿಸಿ ಹೇಳಬೇಕಿಲ್ಲ. ಅಂಥದೊಂದು ಸುದ್ದಿಯು ಕೇರಳದಿಂದ ವರದಿಯಾಗಿದೆ.

ಅಲ್ಲಿನ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಇತ್ತೀಚೆಗೆ ಸಂಭ್ರಮದ ವಾತಾವರಣ ಮನೆಮಾಡಿತ್ತು. ಅದಕ್ಕೆ ಕಾರಣ, ತಿರುವನಂತಪುರಂನಲ್ಲಿರುವ ಪಕ್ಷದ ಪ್ರಧಾನ ಕಚೇರಿಯಲ್ಲಿ, ಹೊಸ ನಾಯಕತ್ವವನ್ನು ಸಂಭ್ರಮದಿಂದ ಬರಮಾಡಿಕೊಂಡಿದ್ದು. ಕೇರಳ ವಿಧಾನಸಭೆಯ ವಿರೋಧ ಪಕ್ಷದ ನಾಯಕರಾದ ವಿ.ಡಿ.ಸತೀಶನ್ ಅವರು ಈ ಸಂದರ್ಭದಲ್ಲಿ ಆಡಿದ ಒಂದು ಮಾತು ಅಲ್ಲಿ ಸಾಕಷ್ಟು ಸಂಚಲನವನ್ನು ಸೃಷ್ಟಿಸಿತಂತೆ. ''ಮುಂಬರುವ ವಿಧಾನಸಭಾ ಚುನಾವಣೆಯನ್ನು ಪಕ್ಷವು ಸಂಪೂರ್ಣ ಒಗ್ಗಟ್ಟಿನಿಂದ ಎದುರಿಸಲಿದೆ ಮತ್ತು 100ಕ್ಕೂ ಹೆಚ್ಚು ಸ್ಥಾನಗಳನ್ನು ಪಕ್ಷವು ಗಳಿಸಲಿದೆ'' ಎಂಬುದಾಗಿ ಸತೀಶನ್ ಅವರು ಈ ವೇಳೆ ಘೋಷಿಸಿಬಿಟ್ಟರಂತೆ. ಯಾವುದೇ ರಾಜ್ಯದ, ಯಾವುದೇ ರಾಜಕೀಯ ಪಕ್ಷದ ಕಚೇರಿಯಲ್ಲಿ ಇಂಥ ಘೋಷಣೆಗಳು, ಆತ್ಮವಿಶ್ವಾಸದ ಮಾತುಗಳು ಸಹಜವೇ ಅಲ್ಲವಾ, ನಿರೀಕ್ಷಿತವೇ ಅಲ್ಲವಾ? ಎಂದು ನೀವು ಕೇಳಬಹುದು. ಆದರೆ, ಬಣ ರಾಜಕೀಯಕ್ಕೆ ಅಥವಾ ಬಣ ಕಲಹಕ್ಕೆ ಸಂಬಂಧಿಸಿ ಭರ್ಜರಿ ಇತಿಹಾಸವನ್ನೇ ಹೊಂದಿರುವ ಕೇರಳ ಕಾಂಗ್ರೆಸ್‌ನ ವಿಷಯದಲ್ಲಿ ಇದು ನಿಜಕ್ಕೂ ಒಂದು ಮಹತ್ವಾಕಾಂಕ್ಷಿ ಯೋಜನೆಯೇ ಎಂದಿಲ್ಲಿ ಉತ್ತರಿಸಬೇಕಾಗುತ್ತದೆ. ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಪದವಿಯಿಂದ ನಿರ್ಗಮಿಸುತ್ತಿರುವ ಕೆ.ಸುಧಾಕರನ್ ಅವರು, ''ಪಕ್ಷದಲ್ಲಿ ರೂಪುಗೊಂಡಿರುವ ಬಣಗಳು ನನ್ನನ್ನು ಕಡೆಗಣಿಸಲು/ಮೂಲೆಗುಂಪು ಮಾಡಲು ಇನ್ನಿಲ್ಲದಂತೆ ಪ್ರಯತ್ನಿಸುತ್ತಿವೆ'' ಎಂದು ಹಿಂದೆ ಅಲವತ್ತುಕೊಂಡಿದ್ದು ಈ ಮಾತಿಗೆ ಸಾಕ್ಷಿ.

ಇದಕ್ಕಿಂತ ಕುತೂಹಲಕರ ಸಂಗತಿಯೆಂದರೆ, ಕೇರಳ ಪ್ರದೇಶ ಕಾಂಗ್ರೆಸ್ ಸಮಿತಿಯ ಮತ್ತೋರ್ವ ಮಾಜಿ ಅಧ್ಯಕ್ಷ ಕೆ.ಮುರಳೀಧರನ್ ಅವರು ಅಂದು ಅತೀವ ಚಾತುರ್ಯದ ಹೇಳಿಕೆಯನ್ನು ನೀಡಿದ್ದು. ''ಸಂಪೂರ್ಣ ಒಗ್ಗಟ್ಟಿನಿಂದ, ಸಂಪೂರ್ಣ ಒಗ್ಗಟ್ಟಿನಿಂದ ಎಂಬ ಮಾತನ್ನು ಪದೇ ಪದೆ ಉಚ್ಚರಿಸುವ ಅಗತ್ಯವಿಲ್ಲ. ಇಂಥ ಮಾತನ್ನು ಜನರು ಹೆಚ್ಚೆಚ್ಚು ಕೇಳುತ್ತಲೇ ಇದ್ದರೆ, ಪಕ್ಷದಲ್ಲಿ ನಿಜಕ್ಕೂ ಒಗ್ಗಟ್ಟು ಇದೆಯೋ ಇಲ್ಲವೋ ಎಂಬ ಕುರಿತೇ ಅವರು ಅನುಮಾನಿಸಲು ಶುರುಹಚ್ಚಿಕೊಳ್ಳುತ್ತಾರೆ. ಹೀಗಾಗಿ, ಈ ಮಾತನ್ನು ಪಕ್ಕಕ್ಕಿಟ್ಟು, ನಮ್ಮ ನಮ್ಮ ಪಾಲಿನ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ನಾವು ಒಗ್ಗಟ್ಟನ್ನು ಸಾಬೀತುಪಡಿಸಬೇಕಿದೆ'' ಎಂದುಬಿಟ್ಟರಂತೆ ಮುರಳೀಧರನ್! ಕಾರ್ಯಕರ್ತರ ವಿವಿಧ ಬಣಗಳು ಸೇರಿಕೊಂಡು ಒಂದು ರಾಜಕೀಯ ಪಕ್ಷವಾಗುವುದೋ ಅಥವಾ ಒಂದು ರಾಜಕೀಯ ಪಕ್ಷದ ಅಸ್ತಿತ್ವದಿಂದಾಗಿಯೇ ವಿವಿಧ ಬಣಗಳು ಹುಟ್ಟಿಕೊಳ್ಳುತ್ತವೋ? ಎಂಬ ಪ್ರಶ್ನೆಯನ್ನೀಗ 'ಕಲಹಪ್ರಿಯ' ನಾರದರು ನಿಮ್ಮ ತಲೆಯೊಳಗೆ ಹುಳುವಿನ ರೂಪದಲ್ಲಿ ಬಿಡುತ್ತಿದ್ದಾರೆ. ಸಾಧ್ಯವಾದರೆ ಅದಕ್ಕೆ ಉತ್ತರಿಸಿ!

ನಾರಾಯಣ ನಾರಾಯಣ!

ಭಾರತೀಯ ಸೇನೆಯು ಕೆಲ ವರ್ಷದ ಹಿಂದೆ ತನಗೆ ಮುಟ್ಟಿಕೊಳ್ಳುವಂಥ ತಪರಾಕಿಯನ್ನು ನೀಡಿದ್ದರೂ ಚೀನಾಕ್ಕೆ ಬುದ್ಧಿ ಬಂದಂತಿಲ್ಲ. ಭಾರತದ ಅರುಣಾಚಲ ಪ್ರದೇಶದ ಮೇಲೆ ಹಕ್ಕು ಸಾಧಿಸುವ ತನ್ನ ಕಿತಾಪತಿಯನ್ನು ಅದು ಮತ್ತೆ ಶುರುಹಚ್ಚಿಕೊಂಡಿರುವುದೇ ಇದಕ್ಕೆ ಸಾಕ್ಷಿ. ಕೆಲ ಕಾಲ, ಬಾಲ ಸುಟ್ಟುಕೊಂಡ ಬೆಕ್ಕಿನಂತೆ ತೆಪ್ಪಗಿದ್ದ ಚೀನಾ, ಈಗ ಇದ್ದಕ್ಕಿದ್ದಂತೆ ಹೀಗೆ ಬಾಲ ಬಿಚ್ಚಿ ಚಿಗಿತುಕೊಂಡಿರುವುದೇಕೆ? ಎಂದು ಪ್ರಶ್ನಿಸಿದರೆ, ಬಹುತೇಕರ ಬೆರಳುಗಳು ಪಾಕಿಸ್ತಾನದ ಕಡೆಗೇ ತಿರುಗುತ್ತವೆ. ಭಾರತವನ್ನು ಸುಖಾಸುಮ್ಮನೆ ಕೆಣಕಿ ಪ್ರಸ್ತುತ ಬರೆ ಹಾಕಿಸಿಕೊಂಡಿರುವ ಪಾಕಿಸ್ತಾನದೊಂದಿಗೆ ಚೀನಾಕ್ಕೆ ಗಳಸ್ಯ-ಕಂಠಸ್ಯ. ಈ 'ಸಹವಾಸ ದೋಷ'ದಿಂದಾಗಿಯೇ ಚೀನಾ ಹೀಗೆ ಬಾಲ ಬಿಚ್ಚಿದೆ ಎನ್ನುತ್ತರೆ ಬಹುತೇಕರು. ನೀವೇನಂತೀರಿ?!

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942
Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:10, Issue:122

ಸಮಾಚಾರ ಸಣ್ಣದಲ್ಲ

ಹೈದರಾಬಾದ್: ಬಸ್‌ಗೆ ಬೆಂಕಿ, 5 ಸಜೀವದಹನ

ಹೈದರಾಬಾದ್: ತೆಲಂಗಾಣದ ಹೈದರಾಬಾದ್‌ನ ಮೋಹನಲಾಲ್ ಗಂಜ್ ಪ್ರದೇಶದಲ್ಲಿ ಚಲಿಸುತ್ತಿದ್ದ ಖಾಸಗಿ ಬಸ್ ಗುರುವಾರ ಬೆಳಗ್ಗೆ 5 ಗಂಟೆಯಲ್ಲಿ

ಹಠಾತ್ತನೆ ಹೊತ್ತಿ ಉರಿದು ಭಸ್ಮವಾಗಿದೆ. ದುರ್ಘಟನೆಯಲ್ಲಿ ಇಬ್ಬರು ಮಕ್ಕಳು, ಇಬ್ಬರು ಮಹಿಳೆಯರು, ಒಬ್ಬ ಪುರುಷ ಪ್ರಯಾಣಿಕ ಸಜೀವ ದಹನವಾಗಿದ್ದಾರೆ. ಹಲವು ಪ್ರಯಾಣಿಕರು ಗಾಯಗೊಂಡಿದ್ದಾರೆ. ಖಾಸಗಿ ಬಸ್ ಬಿಹಾರದ ಬೇಗುಸರೈನಿಂದ ಹೊರಟು ದೆಹಲಿಗೆ ತೆರಳುತ್ತಿತ್ತು. ಬೆಂಕಿ ಅವಘಡಕ್ಕೆ ಶಾರ್ಟ್ ಸರ್ಕಿಟ್ ಕಾರಣವಾಗಿದೆ ಎನ್ನಲಾಗಿದೆ. ಬಸ್‌ಗೆ ಬೆಂಕಿ ಹೊತ್ತಿಕೊಂಡಾಗ ಪ್ರಯಾಣಿಕರೆಲ್ಲರೂ ಮುಂಜಾನೆಯ ನಿದ್ರೆಯಲ್ಲಿದ್ದರು. ಹಾಗಾಗಿ ಐವರು ಸಾವಿಗೀಡಾಗಿ, ಹೆಚ್ಚಿನ ಸಂಖ್ಯೆ ಪ್ರಯಾಣಿಕರು ಗಾಯಗೊಳ್ಳಲು ಕಾರಣವಾಗಿದೆ ಎನ್ನಲಾಗಿದೆ.

ಪೋಕ್ಸೊ ಕೋರ್ಟ್ ಸ್ಥಾಪನೆ: ಸುಪ್ರೀಂ

ದೆಹಲಿ: ಮಕ್ಕಳ ಮೇಲಾಗುವ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ತ್ವರಿತಗತಿಯಲ್ಲಿ ಹಾಗೂ ಪ್ರತ್ಯೇಕವಾಗಿ ವಿಚಾರಣೆ ನಡೆಸಲು ದೇಶದಲ್ಲಿ ಪೋಕ್ಸೊ

ನ್ಯಾಯಾಲಯಗಳ ಕೊರತೆ ಇದೆ. ಹಾಗಾಗಿ, ನಿಗದಿತ ಸಮಯ ಮಿತಿಯಲ್ಲಿ ವಿಚಾರಣೆ ಪೂರ್ಣಗೊಳಿಸುವುದು ಅಸಾಧ್ಯವಾಗಿದೆ. ಆದ್ದರಿಂದ ದೇಶದಲ್ಲಿ ಅಗತ್ಯವಿರುವೆಡೆ ಪೋಕ್ಸೊ ನ್ಯಾಯಾಲಯಗಳನ್ನು ಆದ್ಯತೆಯ ಮೇರೆಗೆ ಸ್ಥಾಪನೆ ಮಾಡಿ ಎಂದು ಕೇಂದ್ರ ಸರಕಾರಕ್ಕೆ ಸುಪ್ರೀಂ ಕೋರ್ಟ್ ಗುರುವಾರ ನಿರ್ದೇಶನ ನೀಡಿದೆ. ನ್ಯಾಯಮೂರ್ತಿ ಬೇಲಾ ಎಂ.ತ್ರಿವೇದಿ ಮತ್ತು ನ್ಯಾ.ಪಿ.ಬಿ.ವರಾಳೆ ಅವರ ದ್ವಿಸದಸ್ಯ ಪೀಠ ನಿರ್ದೇಶನ ನೀಡಿದೆ.

ಮಣಿಪುರ ಚಂದೇಲ್: ಹತ್ತು ಉಗ್ರರು ಹತ

ಇಂಫಾಲ: ಮಣಿಪುರದ ಚಂದೇಲ್ ಜಿಲ್ಲೆಯಲ್ಲಿ ಉಗ್ರರು ಮತ್ತು ಅಸ್ಸಾಂ ರೈಫಲ್ಸ್ ಘಟಕದ ನಡುವೆ ನಡೆದ ಗುಂಡಿನ ಚಕಮಕಿಯಲ್ಲಿ 10 ಉಗ್ರರು ಹತರಾದರು. ಭಾರತ-ಮ್ಯಾನ್ಮಾರ್ ಗಡಿ ಸಮೀಪದ ಚಂದೇಲ್ ಜಿಲ್ಲೆಯ ಖೆಂಗ್ಜಾಯ್ ತಾಲೂಕಿನ ನ್ಯೂಸಮ್ತಾಲ್ ಗ್ರಾಮ ಬಳಿ ನಿಷೇಧಿತ ಸಂಘಟನೆಯ ಉಗ್ರರ ಚಲನವಲನ ಇರುವ ಬಗ್ಗೆ ಗುಪ್ತಚರ ಅಧಿಕಾರಿಗಳು ಖಚಿತ ಮಾಹಿತಿ ನೀಡಿದ್ದು, ಅಸ್ಸಾಂ ರೈಫಲ್ಸ್ ಘಟಕ ಬುಧವಾರ ಕಾರ್ಯಾಚರಣೆ ಪ್ರಾರಂಭಿಸಿದ್ದು, 10 ಉಗ್ರರು ಹತರಾದರು. ಸ್ಥಳದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡು ವಶಪಡಿಸಿಕೊಳ್ಳಲಾಗಿದೆ. ಕಾರ್ಯಾಚರಣೆ ಗುರುವಾರವೂ ಮುಂದುವರಿದಿದೆ ಎಂದು ಸೇನೆಯ ಪೂರ್ವ ಕಮಾಂಡ್ 'ಎಕ್ಸ್'ನಲ್ಲಿ ಮಾಹಿತಿ ಹಂಚಿಕೊಂಡಿದೆ.

15 ರಾಜ್ಯಗಳಲ್ಲಿ ಜೈ ಹಿಂದ್ ಸಭೆ: ಕಾಂಗ್ರೆಸ್

ದೆಹಲಿ: ಕಾಂಗ್ರೆಸ್ ಪಕ್ಷ 15 ರಾಜ್ಯಗಳಲ್ಲಿ 'ಜೈಹಿಂದ್ ಸಭೆ'ಗಳನ್ನು ಆಯೋಜಿಸುತ್ತಿದ್ದು, ಪ್ರಮುಖ ನಗರಗಳಲ್ಲಿ 10 ದಿನಗಳ ಕಾಲ ಸರಣಿ ಸಭೆ ನಡೆಸಲು ಯೋಜಿಸಿದೆ. ಪಾಕಿಸ್ತಾನ ವಿರುದ್ಧದ 4 ದಿನಗಳ ಸಮರದಲ್ಲಿ ಭಾರತೀಯ ಸೇನಾಪಡೆಗಳು ಬಲವಾದ

ಶಕ್ತಿ-ಸಾಮರ್ಥ್ಯವನ್ನು ಪ್ರದರ್ಶಿಸಿ ಶತ್ರುದೇಶಕ್ಕೆ ತಕ್ಕ ಪಾಠ ಕಲಿಸಿದ ಹಿನ್ನೆಲೆ ಭಾರತೀಯ ಜನತಾ ಪಕ್ಷ (ಬಿಜೆಪಿ) ದೇಶಾದ್ಯಂತ 'ತಿರಂಗಾ ಯಾತ್ರೆ' ಹಮ್ಮಿಕೊಂಡಿದೆ. ಇದರಿಂದ ಎಚ್ಚೆತ್ತ ಕಾಂಗ್ರೆಸ್, ಪಕ್ಷದ ಕಾರ್ಯಕರ್ತರನ್ನು ಬಡಿದೆಬ್ಬಿಸಿ 15 ರಾಜ್ಯಗಳಲ್ಲಿ 'ಜೈಹಿಂದ್' ಘೋಷಣೆ ಮೊಳಗಿಸಿ ಸಭೆಗಳನ್ನು ನಡೆಸಲು ಮುಂದಾಗಿದೆ. ಮೇ 20ರಿಂದ 30ರವರೆಗೆ ಜೈಹಿಂದ್ ಸಭೆ ಹಮ್ಮಿಕೊಳ್ಳಲಾಗಿದೆ. ಈ ಸಭೆಗಳಲ್ಲಿ ಸಶಸ್ತ್ರ ಪಡೆಗಳ ಶೌರ್ಯ-ಬಲಶಾಲಿ ಹೋರಾಟವನ್ನು ಶ್ಲಾಘಿಸಿ ಸೇನಾಪಡೆಗಳ ನೈತಿಕ ಸ್ಥೈರ್ಯ ಹೆಚ್ಚಿಸಲಾಗುವುದು. ಸಭೆಗಳಲ್ಲಿ ನಿವೃತ್ತ ಸೈನಿಕರು, ಪಕ್ಷದ ನಾಯಕರು, ಸಾರ್ವಜನಿಕರು ಭಾಗವಹಿಸಲಿದ್ದಾರೆ ಎಂದು ಪಕ್ಷದ ಪ್ರಧಾನ ಕಾಯದರ್ಶಿ ಕೆ.ಸಿ.ವೇಣು ಗೋಪಾಲ್ ಗುರುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. ಬೆಂಗಳೂರು, ಕೊಚ್ಚಿ, ಹೈದರಾಬಾದ್, ಪುಣೆ, ದೆಹಲಿ, ಬಾರ್ಮರ್, ಶಿಮ್ಲಾ, ಹಲ್ದ್ವಾನಿ, ಪಟನಾ, ಜಬಲ್‌ಪುರ, ಗೋವಾ, ಗುವಾಹಟಿ, ಕೋಲ್ಕತ್ತ, ಭುವನೇಶ್ವರ, ಪಠಾಣ್‌ಕೋಟ್‌ಗಳಲ್ಲಿ ಸಭೆ ಜರುಗಲಿದೆ ಎಂದು ವಿವರಿಸಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

ರಾಹುಲ್ ಗಾಂಧಿ ಪ್ರತಿಪಕ್ಷ ನಾಯಕ

ಅವಕಾಶ ವಂಚಿತ ಜನಾಂಗ, ಸಮುದಾಯಗಳ ಹಿತದೃಷ್ಟಿಯಿಂದ ಜಾತಿಗಣತಿಗೆ ಪ್ರತಿಪಕ್ಷಗಳು ಒತ್ತಾಯಿಸಿದ್ದವು. ಸಂವಿಧಾನವನ್ನು ನೀವು ಹಣೆಗೊತ್ತಿಕೊಂಡು ದೇಶಾದ್ಯಂತ ಜಾತಿ ಗಣತಿ ನಡೆಸಲೇಬೇಕು. ಇಲ್ಲವಾದರೆ ಜನತೆ ಸಿಟ್ಟಿಗೇಳುವರು ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳಿದೆವು. ಅವರು ಭಯಗೊಂಡು ಕಡೆಗೂ ಜಾತಿ ಗಣತಿ ನಡೆಸುವುದಕ್ಕೆ ಒಪ್ಪಿದ್ದಾರೆ.

ಆಪರೇಷನ್ ಸಿಂದೂರ ಬಳಿಕವೂ ಉಗ್ರಪೀಡೆ | ಮಂಗಳವಾರ-ಬುಧವಾರ 6 ಉಗ್ರರ ಅಂತ್ಯ

ಕೊನೆಗೊಳ್ಳದ ಕಾಶ್ಮೀರ ಉಗ್ರವಾದ: ಪುಲ್ವಾಮಾದಲ್ಲಿ 3 ಉಗ್ರರು ಹತ

ಶ್ರೀನಗರ: ಜಮ್ಮು-ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಭಾರತದ ಜಂಟಿ ಭದ್ರತಾ ಪಡೆ ತೀವ್ರ ಸ್ವರೂಪದ ಕಾರ್ಯಾಚರಣೆ ನಡೆಸಿ ಜೈಷ್-ಎ-ಮೊಹಮ್ಮದ್ ಉಗ್ರ ಸಂಘಟನೆಯ ಮೂವರು ಉಗ್ರರನ್ನು ಹೊಡೆದುರುಳಿಸಿದೆ ಎಂದು ಭದ್ರತಾ ಪಡೆಗಳ ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ಅವಂತಿಪೋರಾದ ನಾದೇರ್‌ನ ಟ್ರಾಲ್ ಪ್ರದೇಶದಲ್ಲಿ ಮನೆಯೊಂದರಲ್ಲಿ ಉಗ್ರರು ಅಡಗಿರುವ ಕುರಿತು ಖಚಿತ ಮಾಹಿತಿ ಲಭ್ಯವಾಯಿತು. ತಕ್ಷಣವೇ ಸ್ಥಳಕ್ಕೆ ತೆರಳಿದ ಭದ್ರತಾ ಪಡೆಗಳು ಕಾರ್ಯಾಚರಣೆಗಿಳಿದವು. ಉಗ್ರರು ಮನೆಯೊಳಗಿನಿಂದಲೇ ಭದ್ರತಾ ಪಡೆಗಳತ್ತ ಗುಂಡು ಹಾರಿಸಲಾರಂಭಿಸಿದರು. ಈ ವೇಳೆ ಭದ್ರತಾ ಪಡೆ ಯೋಧರು, ಉಗ್ರರು ಅಡಗಿದ್ದ ಮನೆಯನ್ನು ನಾಲ್ಕೂ ದಿಕ್ಕುಗಳಿಂದಲೂ ಸುತ್ತುವರೆದು ಕಾರ್ಯಾಚರಣೆಯನ್ನು ತೀವ್ರಗೊಳಿಸಿದರು. ಬುಧವಾರ ರಾತ್ರಿ ವೇಳೆಗೆ ಮೂವರು ಉಗ್ರರನ್ನು ಹೊಡೆದುರುಳಿಸಿದರು ಎಂದು ಅಧಿಕಾರಿ ವಿವರಿಸಿದ್ದಾರೆ.

ಗುರುವಾರ ಬೆಳಗ್ಗೆ ಕೂಡಾ ಸ್ಥಳದಲ್ಲಿ ಉಗ್ರರು-ಭದ್ರತಾ ಪಡೆಗಳ ನಡುವೆ ಗುಂಡಿನ ಚಕಮಕಿ ಮುಂದುವರಿದಿತ್ತುಎಂದು ತಿಳಿದುಬಂದಿದೆ.

ಹತರಾದ ಮೂವರು ಉಗ್ರರನ್ನು ಆಮಿರ್ ನಜೀರ್ ವಾನಿ, ಆಸಿಫ್ ಅಹ್ಮದ್ ಶೇಖ್ ಮತ್ತು ಯಾವರ್ ಅಹ್ಮದ್ ಭಟ್ ಎಂದು ಗುರುತಿಸಲಾಗಿದೆ. ಮೂವರೂ ಪುಲ್ವಾಮಾ ನಿವಾಸಿಗಳು, ಜೈಶ್-ಎ-ಮೊಹಮ್ಮದ್ ಉಗ್ರ ಸಂಘಟನೆಗೆ ಸೇರಿದವರಾಗಿದ್ದಾರೆ.

ಭದ್ರತಾ ಪಡೆಗಳು ಮೂವರೂ ಉಗ್ರರಿಗೆ ಶರಣಾಗಲು ಹೇಳಿದರು. ಸಾಕಷ್ಟು ಸಮಯಾವಕಾಶವನ್ನೂ ನೀಡಿದ್ದರು. ಶಸ್ತ್ರಾಸ್ತ್ರ ಕೆಳಗಿಟ್ಟು ಮುಖ್ಯವಾಹಿನಿಗೆ ಮರಳುವಂತೆ ಸೇನೆ ಬುದ್ಧಿಮಾತು ಹೇಳಿತು. ಆದರೆ, ಉಗ್ರರು ಮನೆಯೊಳಗಿಂದಲೇ ಭದ್ರತಾ ಪಡೆಗಳತ್ತ ಗುಂಡು ಹಾರಿಸುವ ಮೂಲಕ ತಮ್ಮ ನಿಲುವು ಸ್ಪಷ್ಟಪಡಿಸಿದರು.

2 ದಿನಕ್ಕೆ 6 ಉಗ್ರರು: ಶೋಪಿಯಾನ್‌ನಲ್ಲಿ 'ಆಪರೇಷನ್ ಕೆಲ್ಲರ್' ಮಂಗಳವಾರ ಬೆಳಗ್ಗೆ ಮೂವರು ಲಷ್ಕರ್ ಎ ತಯ್ಯಬಾ ಉಗ್ರರನ್ನು ಭದ್ರತಾ ಪಡೆಗಳು ಹೊಡೆದುರುಳಿಸಿವೆ. ಮಂಗಳವಾರ-ಬುಧವಾರ ಪ್ರತ್ಯೇಕ ಸ್ಥಳಗಳಲ್ಲಿ ನಡೆದ 2 ಕಾರ್ಯಾಚರಣೆಗಳಲ್ಲಿ ಒಟ್ಟು 6 ಉಗ್ರರನ್ನು ಕೊಲ್ಲಲಾಗಿದೆ. ಮಂಗಳವಾರ ಶೋಪಿಯಾನ್ ಕಾರ್ಯಾಚರಣೆಯಲ್ಲಿ ಹತರಾದ ಮೂವರು ಲಷ್ಕರೆ ಉಗ್ರರಲ್ಲಿ ಇಬ್ಬರು ಸ್ಥಳೀಯರೇ ಆಗಿದ್ದಾರೆ. ಅವರನ್ನು ಶಾಹಿದ್ ಕುಟ್ಟಾಯ್ ಮತ್ತು ಅದ್ನಾನ್ ಶಫಿ ದರ್ ಎಂದು ಗುರುತಿಸಲಾಗಿದೆ. ಇವರಿಬ್ಬರ ಕುಟುಂಬದ ಮನೆಗಳನ್ನು ಏ.22ರ ದಾಳಿ ನಂತರ ನಡೆಸಲಾದ ಕಾರ್ಯಾಚರಣೆಯಲ್ಲಿ ನೆಲಸಮಗೊಳಿಸಲಾಗಿದೆ.



ಕಣಿವೆಯಲ್ಲಿ ಅದೆಷ್ಟು ಉಗ್ರರು?!

ಭಾರತ-ಪಾಕಿಸ್ತಾನ ನಡುವಿನ ಕದನಕ್ಕೆ ಮೇ 10ರ ಸಂಜೆ 5 ಗಂಟೆಗೆ ವಿರಾಮ ಘೋಷಣೆಯಾಗಿ 4 ದಿನಗಳ ಯುದ್ಧ ಕೊನೆಗೊಂಡಿತು. ಆದರೆ, ಆ ಬಳಿಕವೂ ಪಾಕ್ ಮೂಲದ ಉಗ್ರ ಸಂಘಟನೆಗಳಾದ ಲಷ್ಕರ್ ಎ ತಯ್ಯಬಾ, ಜೈಶ್ ಎ ಮೊಹಮ್ಮದ್ ಸಂಘಟನೆಗಳ ಉಗ್ರರು ಮಾತ್ರ ಜಮ್ಮು-ಕಾಶ್ಮೀರದಲ್ಲಿ ಕಾರ್ಯಾಚರಣೆ ಮುಂದುವರಿಸಿಯೇ ಇದ್ದಾರೆ. ಮೇ 13ರಂದು ಶೋಪಿಯಾನ್‌ನಲ್ಲಿ 3 ಲಷ್ಕರೆ ಉಗ್ರರು, ಈಗ ಮೇ 14ರಂದು ಪುಲ್ವಾಮಾದಲ್ಲಿ 3 ಜೈಶ್ ಎ ಮೊಹಮ್ಮದ್ ಉಗ್ರರು ಹತರಾಗಿದ್ದಾರೆ. ಜಮ್ಮು-ಕಾಶ್ಮೀರದ ಕಣಿವೆಗಳಲ್ಲಿ ಇನ್ನೂ ಅದೆಷ್ಟು ಉಗ್ರರು ಅಡಗಿಕೊಂಡಿದ್ದಾರೆಯೋ? ಪಾಕ್ ಮೂಲದ ಉಗ್ರ ಸಂಘಟನೆಗಳು ಬೇರುಗಳು ಕಣಿವೆಯಲ್ಲಿ ಎಲ್ಲೆಲ್ಲಿ ಎಷ್ಟೆಲ್ಲಾ ಆಳ-ಅಗಲದವರೆಗೂ ಹರಡಿಕೊಂಡಿವೆಯೋ? ಅದೆಲ್ಲವನ್ನೂ ಬುಡಸಮೇತ ಕಿತ್ತು ನಾಶಪಡಿಸುವವರೆಗೂ ಸೇಬು ಬೆಳೆಯ, ಪಶ್ಮಿನಾ ಶಾಲಿನ, ಶ್ರೇಷ್ಠ ದರ್ಜೆ ಕೇಸರಿ ದಳಗಳ, ಪ್ರವಾಸಿಗರ ಅಚ್ಚುಮೆಚ್ಚಿನ ತಾಣ ಜಮ್ಮು-ಕಾಶ್ಮೀರಕ್ಕೆ ಶಾಂತಿ ಎಂಬುದು ತುಸು ದೂರದ ಮಾತೇ ಸರಿ.

ಶರಣಾಗು ಎಂದ ಅಮ್ಮನ ಕರೆಗೆ ಓಗೊಡದ ಉಗ್ರ ಆಮಿರ್ ವಾನಿ

ಜಮ್ಮು-ಕಾಶ್ಮೀರದ ದಕ್ಷಿಣ ಭಾಗ ಪುಲ್ವಾಮಾದಲ್ಲಿನ ನಾದಿರ್ ಟ್ರಾಲ್ ಪ್ರದೇಶದ ಮನೆಯೊಂದರಲ್ಲಿ ಅಡಗಿದ್ದು, ಬುಧವಾರ-ಗುರುವಾರ ಭಾರತೀಯ ಸೇನೆ ಮತ್ತು ರಾಜ್ಯ ಪೊಲೀಸರ ಜಂಟಿ ತಂಡ ನಡೆಸಿದ ಕಾರ್ಯಾಚರಣೆಯಲ್ಲಿ ಹತನಾದ 3 ಜೈಶ್ ಎ ಮೊಹಮ್ಮದ್ ಉಗ್ರರಲ್ಲಿ ಒಬ್ಬನಾದ ಆಮೀರ್ ನಜೀರ್ ವಾನಿ ಪಾಕಿಸ್ತಾದಿಂದಲೇ ತರಬೇತಿ ಪಡೆ ದಿದ್ದ ಎಂಬುದು ದೃಢಪಟ್ಟಿದೆ. ಈತ ಸೇನೆಯಿಂದ ಹತನಾಗುವುದಕ್ಕೂ ಸ್ವಲ್ಪವೇ ಮೊದಲು ತಾಯಿಗೆ



ಅಡಗಿದ್ದ ಮನೆಯಿಂದಲೇ ಉಗ್ರ ಆಮೀರ್‌ನಿಂದ ತಾಯಿಗೆ ವಿಡಿಯೊ ಕರೆ

ವಿಡಿಯೊ ಕರೆ ಮಾಡಿ ಮಾತನಾಡಿದ್ದಾನೆ. ಈ ಸಂದರ್ಭ ತಾಯಿ ಮಗನಿಗೆ ತಿಳಿಹೇಳುತ್ತಾರೆ. ಉಗ್ರವಾದ ಬಿಟ್ಟು ಭದ್ರತಾಪಡೆಗಳಿಗೆ ಶರಣಾಗುವಂತೆ ಬುದ್ಧಿಮಾತು ಹೇಳುತ್ತಾರೆ. ಅದರೆ ಅದಕ್ಕೆ ಕಿವಿಗೊಡದ ಆಮೀರ್ ವಾನಿ, ಸೇನೆ ಬಂದರೆ ನಾನೇ ನೋಡಿಕೊಳ್ಳುವೆ(ಅವರನ್ನೇ ಕೊಲ್ಲುವೆ) ಎಂದು ದುರಹಂಕಾರದ ಉತ್ತರ ನೀಡುತ್ತಾನೆ. ತಾಯಿ ಎಷ್ಟೇ ಗೋಗರೆದರೂ, ಕಣ್ಣೀರು ಹಾಕಿ ಮನವಿ ಮಾಡಿದರೂ ಆತನ ಮನಸ್ಸು ಕರಗಿಲ್ಲ. ಅದಾದ ಬಳಿಕ ಕೆಲವೇ ಗಂಟೆಗಳಲ್ಲಿ ಸೇನೆಯ ಗುಂಡಿನಿಂದ ಹತನಾಗಿದ್ದಾನೆ. ತಾಯಿ-ಮಗನ ವಿಡಿಯೊ ಸಂಭಾಷಣೆಯ 23 ಸೆಕೆಂಡ್‌ಗಳ ತುಣುಕನ್ನು ಆದಿತ್ಯ ರಾಜ್ ಕೌಲ್ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಯುದ್ಧದಲ್ಲಿ ಪಾಕ್‌ಗೆ ನೆರವಾಗಿದ್ದಕ್ಕೆ ಟರ್ಕಿಗೆ ಕಷ್ಟ

ಬಾಯ್ಕಾಟ್ ಟರ್ಕಿ ಟ್ರೆಂಡಿಂಗ್

ದೆಹಲಿ: ಭಾರತ-ಪಾಕ್ ಸೇನಾ ಸಂಘರ್ಷ ವೇಳೆ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಕೊಟ್ಟು, ಸೈನಿಕರನ್ನು ಕಳುಹಿಸಿ ನೆರವಾದ 'ಟರ್ಕಿ' ದೇಶದ ವಿರುದ್ಧ ಭಾರತದಲ್ಲಿ ಆಕ್ರೋಶ ವ್ಯಕ್ತವಾಗುತ್ತಿದೆ. 'ಬಾಯ್ಕಾಟ್ ಟರ್ಕಿ' (ಟರ್ಕಿ ಬಹಿಷ್ಕರಿಸಿ) ಅಭಿಯಾನವೂ ಶುರುವಾಗಿದೆ.

ಪಾಕ್ ಜತೆ ಕೈಜೋಡಿಸಿ ಭಾರತದ ಮೇಲೆ ಡ್ರೋನ್ ದಾಳಿ ಮಾಡಿದ ಟರ್ಕಿ ವಿರುದ್ಧ ಭಾರತ ಕಠಿಣ ಕ್ರಮಗಳನ್ನು ಕೈಗೊಳ್ಳಲು ಮುಂದಾಗಿದೆ.

ಭಾರತ ವಿರೋಧಿ ಸುದ್ದಿ ಪ್ರಸಾರ ಮಾಡುತ್ತಿದ್ದ ಟರ್ಕಿಯ 'ಟಿಆರ್‌ಟಿ ವರ್ಡ್' ಮಾಧ್ಯಮದ 'ಎಕ್ಸ್' ಖಾತೆಯನ್ನು ಭಾರತದಲ್ಲಿ ನಿರ್ಬಂಧಿಸಲಾಗಿದೆ. ಟರ್ಕಿ, ಅಜರ್ ಬೈಜಾನ್ ಪ್ರವಾಸ ಕೈಬಿಡುವಂತೆ ಭಾರತೀಯರಲ್ಲಿ ಜಾಗೃತಿ ಮೂಡಿಸುವ ಅಭಿಯಾನವೂ ಜಾಲತಾಣದಲ್ಲಿ ನಡೆದಿದೆ.

ಭೂಕಂಪದಲ್ಲಿ ನೂರಾರು ಜನರನ್ನು ಕಳೆದುಕೊಂಡು, ಅಪಾರ ನಷ್ಟ ಅನುಭವಿಸಿ ಕಷ್ಟದಲ್ಲಿದ್ದ ಟರ್ಕಿಗೆ ಭಾರತ ಮಾನವೀಯ ದೃಷ್ಟಿಯಿಂದ ನೆರವು ನೀಡಿದ್ದನ್ನೇ ಟರ್ಕಿ ಮತ್ತು ಅಜರ್‌ಬೈಜಾನ್ ಮರೆತಿವೆ. ಆ ದೇಶಗಳ ಜತೆಗಿನ ಸಂಬಂಧ ಕಡಿತಗೊಳಿಸಬೇಕೆಂಬ ಕೂಗು ಕೇಳಿಬರುತ್ತಿದೆ. 'ಬಾಯ್ಕಾಟ್ ಟರ್ಕಿ' ತೀವ್ರಗೊಳ್ಳುತ್ತಿದೆ. ಭಾರತೀಯರು ಟರ್ಕಿ ಪ್ರವಾಸ ರದ್ದು ಮಾಡುತ್ತಿದ್ದಾರೆ. ಟರ್ಕಿ ಒಣಹಣ್ಣು, ಅಮೃತಶಿಲೆ ಆಮದು ಸ್ಥಗಿತಗೊಳಿಸುತ್ತಿದ್ದಾರೆ. ಸಿನಿಮಾ ಚಿತ್ರೀಕರಣವನ್ನೂ ಕೈಬಿಡುತ್ತಿದ್ದಾರೆ.

350 ಡ್ರೋನ್, ತಜ್ಞರ ನೆರವು

ಭಾರತದ ಆಪರೇಷನ್ ಸಿಂದೂರ ಕಾರ್ಯಾಚರಣೆಗೆ ಪ್ರತಿಯಾಗಿ ಪಾಕಿಸ್ತಾನ ನಡೆಸಿದ ಡ್ರೋನ್, ಕ್ಷಿಪಣಿ ದಾಳಿಗಳಲ್ಲಿ ಟರ್ಕಿ ದೇಶವೂ ಭಾಗಿಯಾಗಿತ್ತು. ಪಾಕ್ ಸೇನೆಗೆ 350 ಡ್ರೋನ್ ಸೇರಿದಂತೆ ಶಸ್ತಾಸ್ತ್ರಗಳನ್ನು, ಡ್ರೋನ್ ನಿರ್ವಹಣೆಗೆ ತಜ್ಞರನ್ನೂ ಒದಗಿಸಿತ್ತು. ಅವರಲ್ಲಿ ಇಬ್ಬರು ಡ್ರೋನ್ ತಜ್ಞರು ಭಾರತದ ದಾಳಿಗೆ ಸಿಕ್ಕಿ ಹತರಾದರು ಎಂಬ ವಿಷಯ ದೃಢಪಟ್ಟಿದೆ.

ವಿಮಾನಯಾನ ಸಚಿವ ಕಾಶ್ಮೀರಕ್ಕೆ

ಶ್ರೀನಗರ: ಪಹಲ್ಗಾಮ್‌ನಲ್ಲಿ ಏ.22ರಂದು ಭಯೋತ್ಪಾದಕರು ದಾಳಿ ನಡೆಸಿ 26 ಜನರನ್ನು ಬರ್ಬರವಾಗಿ ಹತ್ಯೆ ಮಾಡಿದ ಬಳಿಕ ಭಾರತದ ಸೇನಾಪಡೆಗಳು ಆಪರೇಷನ್ ಸಿಂದೂರ

ಆರಂಭಿಸಿದಾಗ ದೇಶದ ಪಶ್ಚಿಮ ಮತ್ತು ಉತ್ತರ ಭಾಗದಲ್ಲಿನ 32 ವಿಮಾನ ನಿಲ್ದಾಣಗಳನ್ನು ತಾತ್ಕಾಲಿಕವಾಗಿ ಬಂದ್ ಮಾಡಿಸಿ ವಿಮಾನ ಸಂಚಾರವನ್ನೂ ಸ್ಥಗಿತಗೊಳಿಸಲಾಗಿತ್ತು. ಕದನ ವಿರಾಮ ಒಪ್ಪಂದವಾದ ಬಳಿಕ ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ(ಡಿಜಿಸಿಎ) 32 ವಿಮಾನ ನಿಲ್ದಾಣಗಳು ಮರಳಿ ಚಟುವಟಿಕೆ ಆರಂಭಿಸುವಂತೆ ಸೂಚನೆ ನೀಡಿತ್ತು. ಈ ಹಿನ್ನೆಲೆಯಲ್ಲಿ ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ ನಾಯ್ಡು ಜಮ್ಮು-ಕಾಶ್ಮೀರಕ್ಕೆ ಗುರುವಾರ ಭೇಟಿ ನೀಡಿ ಶ್ರೀನಗರ, ಜಮ್ಮು ವಿಮಾನ ನಿಲ್ದಾಣಗಳು ಮತ್ತು ಭದ್ರತಾ ವಿಭಾಗದ ಅಧಿಕಾರಿಗಳ ಜತೆ ಸಭೆ ನಡೆಸಿದರು.

ಶಾಲೆ ಪುನಾರಂಭ: ಭಾರತ-ಪಾಕಿಸ್ತಾನ ನಡುವಿನ ಸೇನಾ ಕಾರ್ಯಾಚರಣೆ ಹಿನ್ನೆಲೆ ಬಂದ್ ಮಾಡಲಾಗಿದ್ದ ಜಮ್ಮು ಗಡಿ ಭಾಗದಲ್ಲಿನ 5 ಜಿಲ್ಲೆಗಳಲ್ಲಿ(ಜಮ್ಮು, ಸಾಂಬಾ, ಕಥುವಾ, ರಜೌರಿ, ಪೂಂಚ್) ಶಾಲೆಗಳನ್ನು ಮರಳಿ ಗುರುವಾರದಿಂದ ಆರಂಭಿಸಲಾಗಿದೆ.

ಸುಪ್ರೀಂ ಕೋರ್ಟ್‌ಗೆ ದ್ರೌಪದಿ ಮುರ್ಮು 14 ಪ್ರಶ್ನೆ

ರಾಷ್ಟ್ರಪತಿಗೇ ಗಡುವು ಎಷ್ಟು ಸರಿ?

ದೆಹಲಿ: ರಾಜ್ಯಗಳ ಶಾಸನಸಭೆಗಳು ಅಂಗೀಕರಿಸಿದ ವಿಧೇಯಕಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಷ್ಟ್ರಪತಿ ಮತ್ತು ರಾಜ್ಯಪಾಲರು ನಿರ್ಧಾರ ತೆಗೆದುಕೊಳ್ಳುವುದಕ್ಕೆ ಗಡುವು ನಿಗದಿಪಡಿಸಿದ ಸುಪ್ರೀಂಕೋರ್ಟ್ ತೀರ್ಪಿನ ಬಗ್ಗೆ

ರಾಷ್ಟ್ರಪತಿ ಭವನ ತೀಕ್ಷ್ಣ ಪ್ರತಿಕ್ರಿಯೆ ನೀಡಿದೆ.

ಸಂವಿಧಾನದಲ್ಲೇ ಈ ಬಗ್ಗೆ ಯಾವುದೇ ಗಡುವು, ಷರತ್ತು ಇಲ್ಲದೇ ಇರುವಾಗ ಸುಪ್ರೀಂಕೋರ್ಟ್ ಈ ಬಗೆಯ ತೀರ್ಪು ನೀಡಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿರುವ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಸಂವಿಧಾನದ ವಿಧಿ 200 ಮತ್ತು 201 ಸೇರಿದಂತೆ ವಿವಿಧ ವಿಧಿನಿಯಮಗಳನ್ನು ಉಲ್ಲೇಖಿಸಿ ಸುಪ್ರೀಂಕೋರ್ಟ್‌ಗೆ 14 ಪ್ರಶ್ನೆಗಳನ್ನು ಕೇಳಿದ್ದಾರೆ.

ಸುಪ್ರೀಂ ಕೋರ್ಟ್ ನಡಾವಳಿ ಸಾಂವಿಧಾನಿಕ ಮೌಲ್ಯಗಳಿಗೆ ಪೂರ್ಣ ವಿರುದ್ಧವಾಗಿದೆ. ಸಾಂವಿಧಾನಿಕ ಮಿತಿಯ ಉಲ್ಲಂಘನೆಯಾಗಿದೆ. ರಾಜ್ಯಪಾಲರು ಮತ್ತು ರಾಷ್ಟ್ರಪತಿಗಳ ವಿವೇಚನಾ ಅಧಿಕಾರದಲ್ಲಿ ನ್ಯಾಯಾಂಗ ಮಧ್ಯಪ್ರವೇಶಿಸಿ ಗಡುವು ವಿಧಿಸಲು ಹೇಗೆ ಸಾಧ್ಯ? ಎಂದು ಪ್ರಶ್ನಿಸಿದ್ದಾರೆ. ಸಂವಿಧಾನದ ವಿಧಿ 200 ಮತ್ತು 201 ರಾಜ್ಯಪಾಲರು ಮತ್ತು ರಾಷ್ಟ್ರಪತಿ ಕಾರ್ಯಚಟುವಟಿಕೆಗೆ ಸಂಬಂಧಿಸಿದೆ. ವಿಧಾನಸಭೆ ಅಂಗೀಕರಿಸಿದ ವಿಧೇಯಕಗಳಿಗೆ ಒಪ್ಪಿಗೆ ನೀಡುವ ಅಥವಾ ತಿರಸ್ಕರಿಸುವ ವಿಚಾರದಲ್ಲಿ ಯಾವುದೇ ಸಮಯಮಿತಿ ಈ 2 ವಿಧಿಗಳಲ್ಲಿ ಉಲ್ಲೇಖವಾಗಿಲ್ಲ ಎಂದಿದ್ದಾರೆ.

ಪ್ರಶ್ನೆಗಳು: ವಿಧಿ 200ರಡಿ ವಿಧೇಯಕಗಳಿಗೆ ಅಂಕಿತ ಹಾಕುವ ವಿಚಾರದಲ್ಲಿ ರಾಜ್ಯಪಾಲರಿಗೆ ಇರುವ ಸಾಂವಿಧಾನಿಕ ಆಯ್ಕೆಗಳು ಯಾವುವು?

ರಾಜ್ಯಪಾಲರು ಲಭ್ಯ ಆಯ್ಕೆಗಳನ್ನು ಬಳಸಿಕೊಂಡು ಸಚಿವ ಸಂಪುಟ ನೀಡುವ ಸಲಹೆಗೆ ಬದ್ಧರಾಗಿದ್ದಾರೆಯೇ?

ವಿಧಿ 200ರಡಿ ರಾಜ್ಯಪಾಲರ ಸಾಂವಿಧಾನಿಕ ವಿವೇಚನೆಯು ನ್ಯಾಯಸಮ್ಮತವೇ? ವಿಧಿ 200ರಡಿ ರಾಜ್ಯಪಾಲರ ಕ್ರಮಗಳಿಗೆ ಸಂಬಂಧಿಸಿ ನ್ಯಾಯಾಂಗ ಪರಿಶೀಲನೆಗೆ ವಿಧಿ 361 ಪೂರ್ಣ ನಿರ್ಬಂಧವಾಗಿದೆಯೇ? ಸಾಂವಿಧಾನಿಕವಾಗಿ ನಿಗದಿಪಡಿಸಿದ ಸಮಯ ಮಿತಿ ಮತ್ತು ರಾಜ್ಯಪಾಲರು ಅಧಿಕಾರಗಳನ್ನು ಚಲಾಯಿಸುವ ವಿಧಾನದ ಅನುಪಸ್ಥಿತಿಯಲ್ಲಿ, ರಾಜ್ಯಪಾಲರು ವಿಧಿ 200ರಡಿ ಎಲ್ಲಾ ಅಧಿಕಾರಗಳನ್ನು ಚಲಾಯಿಸುವ ಉದ್ದೇಶಕ್ಕಾಗಿ ನ್ಯಾಯಾಂಗ ಆದೇಶಗಳ ಮೂಲಕ ಸಮಯಸೂಚಿಯನ್ನು ವಿಧಿಸಬಹುದೇ ಮತ್ತು ವ್ಯಾಯಾಮದ ವಿಧಾನವನ್ನು ಸೂಚಿಸಬಹುದೇ?

ವಿಧಿ 201ರಡಿ ರಾಷ್ಟ್ರಪತಿಗಳು ಸಾಂವಿಧಾನಿಕ ವಿವೇಚನೆ ಚಲಾಯಿಸುವುದು ನ್ಯಾಯಸಮ್ಮತವೇ?

ಸಂವಿಧಾನಾತ್ಮಕವಾಗಿ ನಿಗದಿಪಡಿಸಿದ ಕಾಲಮಿತಿ ಮತ್ತು ರಾಷ್ಟ್ರಪತಿ ಅಧಿಕಾರ ಚಲಾಯಿಸುವ ವಿಧಾನದ ಅನುಪಸ್ಥಿತಿಯಲ್ಲಿ ವಿಧಿ 201ರಡಿ ವಿವೇಚನೆ ಬಳಸುವ ವಿಚಾರದಲ್ಲಿ ನ್ಯಾಯಾಂಗ ಗಡುವು ವಿಧಿಸಬಹುದೇ?

ರಾಜ್ಯಪಾಲರು ವಿಧೇಯಕವನ್ನು ರಾಷ್ಟ್ರಪತಿ ಅನುಮೋದನೆ ಅಥವಾ ಅಭಿಪ್ರಾಯ ಪಡೆಯುವುದಕ್ಕಾಗಿ ಕಾಯ್ದಿರಿಸಿದಾಗ ರಾಷ್ಟ್ರಪತಿಗಳು ವಿಧಿ 143ರ ಉಲ್ಲೇಖ ಮೂಲಕ ಸುಪ್ರೀಂ ಕೋರ್ಟ್ ಸಲಹೆ ಪಡೆಯಬೇಕೇ? ಅಥವಾ ಬೇರೆ ರೀತಿಯಲ್ಲಿ ಸುಪ್ರೀಂ ಕೋರ್ಟ್ ಅಭಿಪ್ರಾಯ ತೆಗೆದುಕೊಳ್ಳಬೇಕೇ? ಯಾವುದೇ ವಿಧೇಯಕ ರಾಜ್ಯಪಾಲರು ಅಥವಾ ರಾಷ್ಟ್ರಪತಿಗಳ ಅಂಕಿತ ಪಡೆದು ಕಾನೂನಾಗಿ ಜಾರಿಯಾಗುವುದಕ್ಕೂ ಮುನ್ನವೇ ಅದರ ವಿಷಯವಾಗಿ ಬಗ್ಗೆ ನ್ಯಾಯಾಲಯ ಯಾವ ರೀತಿ ತೀರ್ಪು ನೀಡಲು ಅವಕಾಶವಿದೆ? ರಾಷ್ಟ್ರಪತಿ/ರಾಜ್ಯಪಾಲರ ಸಾಂವಿಧಾನಿಕ ಅಧಿಕಾರಗಳು ಮತ್ತು ಆದೇಶಗಳ ಚಲಾವಣೆಯನ್ನು ವಿಧಿ 142ರಡಿ ಕೋರ್ಟ್ ಯಾವುದೇ ರೀತಿಯಲ್ಲಾದರೂ ಬದಲಿಸಬಹುದೇ? ರಾಜ್ಯದ ಶಾಸನಸಭೆಗಳು ಅಂಗೀಕರಿಸಿದ ವಿಧೇಯಕಗಳು ರಾಜ್ಯಪಾಲರ ಅಂಕಿತವೇ ಇಲ್ಲದೇ ಜಾರಿಯಾಗಬಹುದಾದ ಕಾನೂನೇ?

14 ಪ್ರಶ್ನೆಗಳೇಕೆ?

ವಿಧಾನಸಭೆ ಅಂಗೀಕರಿಸಿದ 10 ವಿಧೇಯಕಗಳಿಗೆ ರಾಜ್ಯಪಾಲರು ಅಂಕಿತ ಹಾಕದೇ ಇರುವುದನ್ನು ಪ್ರಶ್ನಿಸಿ ತಮಿಳುನಾಡು ಸರಕಾರ 2023ರ ನವೆಂಬರ್‌ನಲ್ಲಿ ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು. ನ್ಯಾ.ಜೆ.ಬಿ.ಪರದಿವಾಲಾ ಮತ್ತು ನ್ಯಾ.ಆರ್.ಮಹಾದೇವನ್ ಅವರ ದ್ವಿಸದಸ್ಯ ಪೀಠ 2025ರ ಏಪ್ರಿಲ್‌ನಲ್ಲಿ ಅರ್ಜಿ ವಿಚಾರಣೆ ವೇಳೆ, ರಾಜ್ಯಗಳ ಶಾಸನಸಭೆಯ ವಿಧೇಯಕಗಳಿಗೆ ರಾಜ್ಯಪಾಲರು ಅಂಕಿತ ಹಾಕಲು ವಿಳಂಬ ಮಾಡಿದರೆ ನ್ಯಾಯಾಂಗ ಮಧ್ಯಪ್ರವೇಶಿಸಲು ಅವಕಾಶವಿದೆ. ರಾಜ್ಯಪಾಲರು ಕಳುಹಿಸಿಕೊಟ್ಟ ವಿಧೇಯಕಗಳಿಗೆ ರಾಷ್ಟ್ರಪತಿಗಳು 3 ತಿಂಗಳೊಳಗೆ ತಮ್ಮ ಅಭಿಪ್ರಾಯ ತಿಳಿಸಬೇಕು. ಇಲ್ಲವಾದರೆ ಅದಕ್ಕೆ ಕಾರಣ ತಿಳಿಸಬೇಕು ಸಮಯಮಿತಿ ಉಲ್ಲೇಖಿಸಿ ತೀರ್ಪು ನೀಡಿತ್ತು. ಇದು ದೇಶದಲ್ಲಿ ಭಾರೀ ಚರ್ಚೆಗೆ ಕಾರಣವಾಗಿತ್ತು. ಸುಪ್ರೀಂ ತೀರ್ಪಿಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಆಕ್ಷೇಪ ವ್ಯಕ್ತಪಡಿಸಿದ್ದರು.

ಯುದ್ಧಕ್ಕೆ 20 ತಿಂಗಳು | ಗಾಜಾದಲ್ಲಿ ಒಟ್ಟು ಸಾವು 52928

ಇಸ್ರೇಲ್ ಬಾಂಬ್ ದಾಳಿ: ಗಾಜಾ 82 ಸಾವು

ಟೆಲ್‌ಅವೀವ್: ಗಾಜಾದಲ್ಲಿನ ಹಮಾಸ್ ಉಗ್ರ ಸಂಘಟನೆ ಸರ್ವನಾಶಕ್ಕೆ ಪಣ ತೊಟ್ಟಿರುವ ಇಸ್ರೇಲ್ ಸೇನಾಪಡೆ, ಗಾಜಾ ಸ್ಟ್ರಿಪ್ ಮೇಲಿನ ದಾಳಿಯನ್ನು ಮುಂದುವರೆಸಿದೆ. ಉತ್ತರ ಗಾಜಾದ ಜಬಾಲಿಯಾ ಪ್ರದೇಶದಲ್ಲಿನ ಹಲವು ಕಟ್ಟಡಗಳ ಮೇಲೆ ಬುಧವಾರ ಕ್ಷಿಪಣಿ ದಾಳಿ ನಡೆಸಿದ್ದರಿಂದ ಹಲವು ಕಟ್ಟಡಗಳು ಧ್ವಂಸವಾಗಿವೆ. ಪರಿಣಾಮ 22 ಮಕ್ಕಳ ಸೇರಿದಂತೆ 82 ಜನರು ಸಾವಿಗೀಡಾಗಿದ್ದಾರೆ.

ಹಮಾಸ್ ಉಗ್ರರನ್ನು ಬುಡಸಮೇತ ಕಿತ್ತೆಸೆಯುವವರೆಗೂ ಇಸ್ರೇಲ್ ದಾಳಿ ನಿಲ್ಲುವುದಿಲ್ಲ ಎಂದು ಪ್ರಧಾನಿ ಬೆಂಜಮಿನ್ ನೆತನ್ಯಾಹು ಹೇಳಿದ ಬೆನ್ನಲ್ಲೇ ಈ ಮಾರಣಾಂತಿಕ ದಾಳಿ ನಡೆದಿದೆ. ಇಸ್ರೇಲ್ ಬೆನ್ನಿಗೆ ಬಲವಾಗಿ ನಿಂತಿರುವ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ಸದ್ಯ ಕೊಲ್ಲಿ ರಾಷ್ಟ್ರಗಳ ಪ್ರವಾಸದಲ್ಲಿದ್ದಾರೆ. ಈ ಸಂದರ್ಭದಲ್ಲೇ ಇಸ್ರೇಲ್ ಸೇನೆ ಗಾಜಾ ಮೇಲೆ ದೊಡ್ಡ ಮಟ್ಟದಲ್ಲಿ ಬಾಂಬ್ ದಾಳಿ ನಡೆಸಿರುವುದು ಗಮನಾರ್ಹ.

ಯುದ್ಧಕ್ಕೆ 20 ಮಾಸ: ಹಮಾಸ್ ಉಗ್ರರು 2023ರ ಅ.7ರಂದು ಇಸ್ರೇಲ್‌ನ ದಕ್ಷಿಣ ಭಾಗದಲ್ಲಿ ನಡೆದಿದ್ದ ಸಂಗೀತ ಕಾರ್ಯಕ್ರಮದ ಮೇಲೆ ಭಯೋತ್ಪಾದಕ ದಾಳಿ ನಡೆಸಿ ಇಸ್ರೇಲ್ ಮಾತ್ರವಲ್ಲದೇ ವಿವಿಧ ದೇಶಗಳ 1200ಕ್ಕೂ ಅಧಿಕ ಜನರನ್ನು ಅಟ್ಟಾಡಿಸಿ ಕೊಂದ ಬಳಿಕ ಇಸ್ರೇಲ್ ಸೇನೆ ಗಾಜಾ ಮೇಲೆ ಯುದ್ಧ ಸಾರಿತು. ನಂತರದ 20 ತಿಂಗಳುಗಳಲ್ಲಿ ಇಸ್ರೇಲ್‌ನ ಪ್ರತೀಕಾರದ ಸಮರದಲ್ಲಿ ಹಮಾಸ್‌ನ ಸಾವಿರಾರು ಉಗ್ರರು ಮತ್ತು ಪ್ಯಾಲೆಸ್ತೀನ್ ನಾಗರಿಕರು ಸೇರಿದಂತೆ 52,928 ಮಂದಿ ಅಸುನೀಗಿದ್ದಾರೆ. ಇತ್ತೀಚೆಗೆ ಮಾ.18ರಂದು ಇಸ್ರೇಲ್ ಕದನ ವಿರಾಮ ಕೊನೆಗೊಳಿಸಿದ ನಂತರಲ್ಲೇ 3,000 ಜನ ಹತರಾಗಿದ್ದಾರೆ.

ಗಾಜಾ 'ಫ್ರೀಡಂ ಜೋನ್': ಟ್ರಂಪ್

ಇಸ್ರೇಲ್ ದೇಶದ ಸಂಘರ್ಷ ಪೀಡಿತ ಪ್ರದೇಶ ಗಾಜಾವನ್ನು 'ಫ್ರೀಡಂ ಜೋನ್' ಆಗಿ ಪರಿವರ್ತಿಸಲಾಗುವುದು ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಹೇಳಿದ್ದಾರೆ. ಆದರೆ, ಹಮಾಸ್ ಉಗ್ರರನ್ನು ಮಾತ್ರ ಹಾಗೇ ಸುಮ್ಮನೆ ಬಿಡುವುದಿಲ್ಲ ಎಂದೂ ಎಚ್ಚರಿಕೆ ನೀಡಿದ್ದಾರೆ. ಉಗ್ರರ ಹಿಂಸಾವಿನೋದ: ಮೊನ್ನೆ ಹಮಾಸ್ ಉಗ್ರರು ಬಿಡುಗಡೆ ಮಾಡಿದ ಇಸ್ರೇಲ್-ಅಮೆರಿಕ ಯೋಧ ಈಡನ್ ಅಲೆಕ್ಸಾಂಡರ್‌ನ ತಂದೆ, 'ಪುತ್ರ ಈಡನ್‌ನನ್ನು ಒತ್ತೆಯಾಳಾಗಿಸಿಕೊಂಡಿದ್ದ ಹಮಾಸ್ ಉಗ್ರರು ಬ್ಯಾಗ್‌ನಿಂದ ಈಡನ್ ಮುಖವನ್ನು ಮುಚ್ಚಿ ವಿಪರೀತ ಥಳಿಸಿ ಗಾಯಗೊಳಿಸಿದ್ದಾರೆ' ಎಂದು ಸುದ್ದಿಗೋಷ್ಠಿಯಲ್ಲಿ ಉಗ್ರರ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ರಾಸಾಯನಿಕ ಟ್ಯಾಂಕ್ ಸ್ಫೋಟ 20 ಮಂದಿಗೆ ಗಾಯ

ಚೆನ್ನೈ: ತಮಿಳುನಾಡಿನಲ್ಲಿ ಕಡಲೂರು ಜಿಲ್ಲೆಯ ಕುಡಿಕಾಡು ಗ್ರಾಮದ ಬಳಿ ಇರುವ 'ಸಿಪ್ಕಾಟ್' ಕೈಗಾರಿಕಾ ಎಸ್ಟೇಟ್‌ನಲ್ಲಿರುವ ಖಾಸಗಿ ಬಣ್ಣದ ಕಾರ್ಖಾನೆಯಲ್ಲಿ 6 ಲಕ್ಷ ಲೀ. ರಾಸಾಯನಿಕ ದ್ರಾವಣವಿದ್ದ ಟ್ಯಾಂಕ್ ಗುರುವಾರ ಬೆಳಗ್ಗೆ ಸ್ಫೋಟಗೊಂಡ ಪರಿಣಾಮ 20 ಕಾರ್ಮಿಕರು ಗಾಯಗೊಂಡಿದ್ದಾರೆ.

ಬಳಿಕ ರಾಸಾಯನಿಕ ದ್ರಾವಣ ಸಮೀಪದ ವಸತಿ ಪ್ರದೇಶಕ್ಕೆ ಹರಿಹು ಮನೆಗಳಿಗೂ ನುಗ್ಗಿದ ಪರಿಣಾಮ ಹಲವು ಜನರು ಮೂರ್ಛೆ ಹೋಗಿದ್ದಾರೆ. ಜನರಿಗೆ ಕಣ್ಣಿನ ಉರಿ, ಉಸಿರಾಟ ಸಮಸ್ಯೆ, ವಾಂತಿ ಕಾಣಿಸಿಕೊಂಡಿದೆ. ಹಲವರು ವಾಂತಿ ಮಾಡಿಕೊಂಡು ಅಸ್ವಸ್ಥರಾಗಿದ್ದಾರೆ. ಗಾಯಾಳು ಕಾರ್ಮಿಕರು ಮತ್ತು ಅಸ್ವಸ್ಥ ನಾಗರಿಕರನ್ನು ಸಮೀಪದ ಕಡಲೂರು ಸರಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಲಾಗುತ್ತಿದೆ.

ಅತಿಯಾದ ಶಾಖದಿಂದ ಕಾರ್ಖಾನೆಯಲ್ಲಿದ್ದ ರಾಸಾಯನಿಕ ದ್ರಾವಣದ ಟ್ಯಾಂಕ್ ಸಿಡಿದಿದೆ ಎನ್ನಲಾಗಿದೆ. ರಾಸಾಯನಿಕ ದ್ರಾವಣ ವಸತಿ ಪ್ರದೇಶಕ್ಕೆ ಹರಿದು ಮನೆಗಳಿಗೆ ನುಗ್ಗಿದ್ದರಿಂದ ಹಲವು ಮನೆಗಳ ಗೋಡೆಗಳು ಕರಗಿಹೋಗಿ ಮನೆಗಳು ಭಾಗಶಃ ಕುಸಿದಿವೆ.

ಪ್ರತಿಭಟನೆ: 6 ಲಕ್ಷ ಲೀ. ರಾಸಾಯನಿಕದ ಟ್ಯಾಂಕ್ ಸ್ಫೋಟಿಸಿ 20 ಕಾರ್ಮಿಕರು ಗಾಯಗೊಂಡು, ಹತ್ತಾರು ನಾಗರಿಕರು ಅಸ್ವಸ್ಥರಾಗಿ ಆಸ್ಪತ್ರೆ ಸೇರಿದ್ದರೂ ಯಾವುದೇ ಅಧಿಕಾರಿ ಸ್ಥಳಕ್ಕೆ ಬಂದಿಲ್ಲ ಎಂದು ಆಕ್ರೋಶಗೊಂಡ ಜನರು, ಕಡಲೂರು-ಚಿದಂಬರಂ ಹೆದ್ದಾರಿ ತಡೆ ನಡೆಸಿ ಪ್ರತಿಭಟಿಸಿದರು. ಆ ಬಳಿಕ ತಹಸಿಲ್ದಾರ್ ಮತ್ತು ಪೊಲೀಸರು ಸ್ಥಳಕ್ಕೆ ತೆರಳಿ ಪ್ರತಿಭಟನೆ ಕೊನೆಗೊಳ್ಳುವಂತೆ ಮಾಡಿದರು. ಕಡಲೂರು ಮುಧುನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದು, ತನಿಖೆ ನಡೆದಿದೆ.

ಮೊದಲು ಕ್ಷಮೆ ಕೋರಿ ಸುಪ್ರೀಂ ತರಾಟೆ

ದೆಹಲಿ: 'ಆಪರೇಷನ್ ಸಿಂದೂರ್' ಸಂದರ್ಭ ಅಧಿಕೃತ ಸುದ್ದಿಗೋಷ್ಠಿಯಲ್ಲಿ ಭಾಗಿಯಾಗುತ್ತಿದ್ದ ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ ಬಗೆಗೆ ನಕಾರಾತ್ಮಕ ಹೇಳಿಕೆ



ನೀಡಿ ವಿವಾದಕ್ಕೆ ಸಿಲುಕಿರುವ ಮಧ್ಯಪ್ರದೇಶದ ಸಚಿವ ವಿಜಯ್ ಶಾರನ್ನು ಗುರುವಾರ ತರಾಟೆಗೆ ತೆಗೆದುಕೊಂಡ ಸುಪ್ರೀಂ ಕೋರ್ಟ್, 'ಮೊದಲು ಕರ್ನಲ್ ಖುರೇಷಿ ಅವರ ಕ್ಷಮೆ ಕೇಳಿಬನ್ನಿ. ಆ ಬಳಿಕ ನೀವು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸೋಣ' ಎಂದು ಕಟುವಾಗಿ ಹೇಳಿದೆ. ಸೋಫಿಯಾ ಖುರೇಷಿ ಅವರನ್ನು ಉಗ್ರರ ಸೋದರಿ ಎಂಬರ್ಥದಲ್ಲಿ ಮಾತನಾಡಿದ್ದಕ್ಕೆ ಎಫ್‌ಐಆರ್ ದಾಖಲಿಸುವಂತೆ ಮಧ್ಯಪ್ರದೇಶ ಹೈಕೋರ್ಟ್ ನೀಡಿರುವ ಆದೇಶವನ್ನು ಅನೂರ್ಜಿತಗೊಳಿಸುವಂತೆ ಕೋರಿ ಸಚಿವ ವಿಜಯ್ ಶಾ ಸಲ್ಲಿಸಿದ ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಶುಕ್ರವಾರ ನಡೆಸಲು ಸಮ್ಮತಿಸಿದೆ.

ಈ ವೇಳೆ ಪೀಠ, ನೀವು ಎಂಥ ಹೇಳಿಕೆ ನೀಡಿದ್ದೀರಿ? ಮಾತನಾಡುವುದರಲ್ಲಿ ಎಚ್ಚರವಿರಲಿ, ಸ್ವಲ್ಪವಾದರೂ ಸಂವೇದನಾಶೀಲತೆ ಇರಲಿ ಎಂದು ಕಿಡಿಕಾರಿದೆ.ಕ್ಷಮೆ ಯಾಚನೆ:ತಮ್ಮ ಹೇಳಿಕೆ ವಿವಾದದ ಸ್ವರೂಪ ಪಡೆಯುತ್ತಲೇ ವಿಜಯ್ ಶಾ ಮಾಧ್ಯಮಗಳ ಮೂಲಕ ಕರ್ನಲ್ ಸೋಫಿಯಾ ಖುರೇಷಿ ಅವರ ಕ್ಷಮೆ ಯಾಚಿಸುವೆ ಎಂದಿದ್ದಾರೆ. 'ನನ್ನದೂ ಸೇನಾ ಹಿನ್ನೆಲೆಯ ಕುಟುಂಬ. ನನ್ನವರೂ ಸೇನೆಯಲ್ಲಿ ಹುತಾತ್ಮರಾಗಿದ್ದಾರೆ. ಸೋದರಿ ಸೋಫಿಯಾ ಬಗ್ಗೆ ಕನಸಿನಲ್ಲೂ ಆ ರೀತಿ ಭಾವಿಸಿಲ್ಲ, ನನ್ನ ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ' ಎಂದು ಸಮಜಾಯಿಷಿ ಕೊಟ್ಟಿದ್ದಾರೆ.

ಭಾರತದಲ್ಲಿ ಹೂಡಿಕೆ ಬೇಡ: ಟಿಮ್ ಕುಕ್‌ಗೆ ಟ್ರಂಪ್ ಸಲಹೆ

ಭಾರತ ಅಧಿಕ ಸುಂಕ: ಅವರ ದಾರಿ ಅವರಿಗೆ

ದೋಹಾ: ಭಾರತ-ಪಾಕಿಸ್ತಾನ ನಡುವೆ ಕದನ ವಿರಾಮಕ್ಕೆ ತಾವೇ ಕಾರಣ ಎಂದು ಹೇಳಿಕೊಳ್ಳುತ್ತಿದ್ದ, ಪ್ರಧಾನಿ ನರೇಂದ್ರ ಮೋದಿ ನನ್ನ ಪರಮಾಪ್ತ ಮಿತ್ರ ಎನ್ನುತ್ತಿದ್ದ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ದಿಢೀರ್ ನಿಲುವು ಬದಲಿಸಿ, ಭಾರತದ ವಿರುದ್ಧವಾಗಿ ಮಾತನಾಡಲಾರಂಭಿಸಿದ್ದಾರೆ.

'ಆಪಲ್' ಕಂಪನಿಯ 'ಸಿಇಒ' ಟಿಮ್ ಕುಕ್‌ಗೆ, 'ನೀವು ಭಾರತದಲ್ಲಿ ಹೂಡಿಕೆ ಮಾಡಬೇಡಿ. ಭಾರತದ ದಾರಿಯೇ ಬೇರೆ. ಅವರ ದಾರಿ ಅವರೇ ನೋಡಿಕೊಳ್ಳುತ್ತಾರೆ' ಎಂದು ಟ್ರಂಪ್ ಒತ್ತಡ ಹಾಕುತ್ತಿದ್ದಾರೆ. ದೋಹಾದಲ್ಲಿನ ಉದ್ಯಮ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದ ಟ್ರಂಪ್, ಟಿಮ್ ಕುಕ್ ನನ್ನ ಸ್ನೇಹಿತ. ಅವರನ್ನು ಚೆನ್ನಾಗಿ ನಡೆಸಿಕೊಳ್ಳುತ್ತಿದ್ದೇನೆ. ಕುಕ್ ಭಾರತದಲ್ಲಿ 50,000 ಕೋಟಿ ಡಾಲರ್ ಹೂಡಿಕೆ ಮಾಡಲಿದ್ದೀರಿ ಎಂದು ಕೇಳಿರುವೆ. ಆದರೆ, ನೀವು ಭಾರತದಲ್ಲಿ ಹೂಡಿಕೆ ಮಾಡದಿರಿ. ಏಕೆಂದರೆ ಭಾರತ ವಿಶ್ವದಲ್ಲೇ ಅತ್ಯಧಿಕ ಸುಂಕ ವಿಧಿಸುವ ರಾಷ್ಟ್ರಗಳಲ್ಲಿ ಒಂದಾಗಿದೆ. ಭಾರತದಲ್ಲಿ ತ್ವನ್ನಗಳ ಮಾರಾಟವೂ ಬಹಳ ಕಷ್ಟ ಎಂದು ಬುದ್ಧಮಾತು ಹೇಳಿದ್ದಾರೆ. ಐಫೋನ್ ತಯಾರಿಕಾ ಘಟಕಗಳನ್ನು ನೀವು ಚೀನಾದಲ್ಲಿ ಆರಂಭಿಸಿದಾಗ ಅಮೆರಿಕ ಸಹಿಸಿಕೊಂಡಿತು. ಆದರೆ, ಭಾರತದಲ್ಲಿ ಹೂಡಿಕೆ ಮಾಡುವುದರಲ್ಲಿ, ತಯಾರಿಕಾ ಘಟಕ ಸ್ಥಾಪಿಸುವ ವಿಚಾರದಲ್ಲಿ ನಮಗೆ ಆಸಕ್ತಿ ಇಲ್ಲ ಎಂದು ಅಸಮಾಧಾನದಿಂದ ಮಾತನಾಡಿದ್ದಾರೆ. ಆಪಲ್ ಕಂಪನಿ ಅಮೆರಿಕದಲ್ಲಿಯೇ ತಯಾರಿಕಾ ಘಟಕಗಳನ್ನು ವಿಸ್ತರಿಸಲು ಸಿದ್ಧವಿದೆ ಎಂದೂ ಟ್ರಂಪ್ ಇದೇ ವೇಳೆ ಹೇಳಿದ್ದಾರೆ.



ಭಾರತದಲ್ಲಿ ಆಪಲ್

ಪ್ರಸ್ತುತ ಭಾರತದಲ್ಲಿ ಆಪಲ್ ಕಂಪನಿಯ 3 ಘಟಕಗಳಿವೆ. ತಮಿಳುನಾಡಿನಲ್ಲಿ 2 ಮತ್ತು ಕರ್ನಾಟಕದಲ್ಲಿ 1 ಕಡೆ ಐಫೋನ್ ಜೋಡಣೆ ಘಟಕಗಳಿವೆ. ಒಂದು ಘಟಕವನ್ನು ಫಾಕ್ಸ್‌ಕಾನ್ ಕಂಪನಿ, ಇನ್ನೆರಡನ್ನು ಟಾಟಾ ಸಮೂಹ ನಿರ್ವಹಿಸುತ್ತವೆ. 2 ಆಪಲ್ ಘಟಕಗಳು ಭಾರತದಲ್ಲಿ ನಿರ್ಮಾಣ ಹಂತದಲ್ಲಿದೆ.

ಲಷ್ಕರೆ ನೆಲೆ ಸರಕಾರದಿಂದ ಮರು ನಿರ್ಮಾಣ: ಪಾಕ್

ಇಸ್ಲಾಮಾಬಾದ್: ಭಾರತದ ಸೇನಾಪಡೆಗಳು 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಲ್ಲಿ ನಾಶ ಪಡಿಸಿದ ಲಷ್ಕರ್ ಎ ತಯ್ಯಬಾ(ಎಲ್‌ಇಟಿ) ಉಗ್ರರ ತರಬೇತಿ ಕೇಂದ್ರಗಳ ಮರಳಿ ನಿರ್ಮಾಣ

ಮಾಡುವೆ ಎಂದು ಪಾಕಿಸ್ತಾನ ಸಚಿವ ರಾಣಾ ತನ್ವೀರ್ ಹುಸೈನ್ ಹೇಳಿದ್ದಾರೆ.

ಭಾರತದ ಸೇನಾ ಕಾರ್ಯಾಚರಣೆಯಲ್ಲಿ ನಾಶವಾಗಿರುವ ಮುರಿಡ್ಕೆಯಲ್ಲಿನ ಉಗ್ರರ ಶಿಬಿರಗಳ ಸ್ಥಳಕ್ಕೆ ಭೇಟಿ ನೀಡಿದ ಸಚಿವ ಹುಸೈನ್, 'ಸರಕಾರದ ಹಣದಲ್ಲೇ ಈ ಪ್ರದೇಶವನ್ನು ಮರು ನಿರ್ಮಿಸಿಕೊಡಲಾಗುವುದು' ಎಂದು ಭರವಸೆ ನೀಡಿದ್ದಾರೆ. ಆ ಮೂಲಕ ಉಗ್ರ ಸಂಘಟನೆಗಳಿಗೆ ಸರಕಾರದಿಂದ ದೊಡ್ಡ ಮಟ್ಟದ ನೆರವು ಸಿಗಲಿದೆ ಎಂದು ಬಹಿರಂಗವಾಗಿಯೇ ಹೇಳಿದ್ದಾರೆ. ಭಾರತ ಧ್ವಂಸಗೊಳಿಸಿದ ಮಸೀದಿ, ಕಟ್ಟಡಗಳ ಪುನರ್‌ನಿರ್ಮಾಣಕ್ಕೆ ಪ್ರಧಾನಿ ಶೆಹಬಾಝ್ ಶರೀಫ್ ಮತ್ತು ಸೇನಾ ವರಿಷ್ಠ ಅಸೀಮ್ ಮುನೀರ್ ವೈಯಕ್ತಿಕವಾಗಿಯೂ ಆರ್ಥಿಕ ನೆರವು ನೀಡಲಿದ್ದಾರೆ ಎಂದು ರಾಣಾ ಭರವಸೆ ನೀಡಿದ್ದಾರೆ.

200 ಎಕರೆ: 1980ರಲ್ಲಿ ಉಗ್ರ ಹಫೀಜ್ ಸಯೀದ್, ಪಾಕ್‌ನ ಗುಪ್ತಚರ ಸಂಸ್ಥೆ 'ಐಎಸ್‌ಐ' ನೆರವಿನಲ್ಲಿ ಲಷ್ಕರ್ ಎ ತಯ್ಯಬಾ ಉಗ್ರ ಸಂಘಟನೆ ಹುಟ್ಟುಹಾಕಿದ್ದ. ಲಾಹೋರ್‌ನಿಂದ 33 ಕಿಮೀ ದೂರದ ಮುರಿಡ್ಕೆಯ ಐತಿಹಾಸಿಕ ಗ್ರ್ಯಾಂಡ್ ಟ್ರಂಕ್ ರಸ್ತೆಯ ಸಮೀಪವೇ ಉಗ್ರ ಸಂಘಟನೆ ಲಷ್ಕರ್ ಎ ತಯ್ಯಬಾದ ಪ್ರಧಾನ ಕಚೇರಿ ಇದೆ. ಅದನ್ನು ಮರ್ಕಝ್ ಎ ತಯ್ಯಬಾ ಎಂದು ಕರೆಯಲಾಗುತ್ತದೆ. 200 ಎಕರೆಗೂ ಹೆಚ್ಚು ವಿಸ್ತಾರವಾದ ಈ ಜಾಗದಲ್ಲಿ ಹಲವು ಕಟ್ಟಡಗಳಿದ್ದವು. ಅದರಲ್ಲಿ ಉಗ್ರರ ನೇಮಕ, ತರಬೇತಿ, ದಾಳಿ ಸಂಚು ಮೊದಲಾದವು ನಡೆಯುತ್ತಿತ್ತು ಎನ್ನಲಾಗಿದೆ.

ಸಮಾಚಾರ ಸಣ್ಣದಲ್ಲ

ಇಂದು ಟ್ರೇಲರ್, ಆಡಿಯೊ ಬಿಡುಗಡೆ

ಬೆಂಗಳೂರು: ಕಾಲಿಗೌಡ ನಿರ್ದೇಶಕದ ನಾಯಿ ಇದೆ ಎಚ್ಚರಿಕೆ ಚಿತ್ರದ ಟ್ರೇಲರ್ ಹಾಗೂ ಆಡಿಯೊ ಶುಕ್ರವಾರ ಸಂಜೆ ಬಿಡುಗಡೆ ಯಾಗಲಿದೆ. ವೈರಸ್ ಸಂಬಂಧಿತ ಕಥಾ ಹಂದರ ಇರುವ ಹಾಸ್ಯ ಪ್ರಧಾನ ಚಿತ್ರ ಇದು. ಇದರಲ್ಲಿ ಜರ್ಮನ್ ಷೆಫರ್ಡ್ ನಾಯಿಯದ್ದೇ ಪ್ರಮುಖ ಪಾತ್ರ ಎನ್ನಲಾಗಿದ್ದು, ಕನ್ನಡದಲ್ಲಿ ಇದು ಮೊದಲ ಪ್ರಯೋಗ ಎನ್ನುವುದು ಚಿತ್ರತಂಡ ಅಭಿಪ್ರಾಯ ವಾಗಿದೆ. ಚಿತ್ರದ ನಿರ್ಮಾಣವನ್ನು ಲಾವಣ್ಯ ಗಡ್ಡೆ, ನಿರ್ದೇಶನವನ್ನು ಜಿ.ಎಸ್. ಕಲಿಗೌಡ ಮಾಡಿದ್ದಾರೆ. ಚಿತ್ರದ ಫಸ್ಟ್ ಲುಕ್ ಸಾಕಷ್ಟು ಕುತೂಹಲ ಮೂಡಿಸಿದ್ದು, ಶುಕ್ರವಾರ ಸಂಜೆ ನಾಲ್ಕು ಗಂಟೆಗೆ ಜಿ.ಟಿ ಮಾಲ್‌ನಲ್ಲಿ ಬಿಡುಗಡೆ ಯಾಗಲಿದೆ ಎಂದು ಚಿತ್ರತಂಡ ಪ್ರಕಟಿಸಿದೆ.

20 ಪ್ರವಾಸಿಗರು ಅಸ್ವಸ್ಥ

ಬಾಲೇಶ್ವರ: ಒಡಿಶಾದ ಪುರಿಗೆ ಬಸ್‌ನಲ್ಲಿ ತೆರಳುತ್ತಿದ್ದ ಬೆಂಗಳೂರಿನ 20 ಪ್ರವಾಸಿಗರು ಮಾರ್ಗಮಧ್ಯೆ ಅಸ್ವಸ್ಥಗೊಂಡಿದ್ದಾರೆ. ಈ ಪ್ರವಾಸಿಗರನ್ನು ಸೊರೊ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಬುಧವಾರ ರಾತ್ರಿ ಊಟ ಮುಗಿಸಿಕೊಂಡು ಬಸ್‌ನಲ್ಲಿ ಪುರಿಗೆ ತೆರಳುತ್ತಿದ್ದಾಗ, ಬಾಲೇಶ್ವರ ಜಿಲ್ಲೆಯ ಸೊರೊ ಎಂಬಲ್ಲಿ ಈ ಘಟನೆ ನಡೆದಿದೆ. ಬೆಂಗಳೂರು ಮೂಲದ ಸುಮಾರು 50 ಯಾತ್ರಿಕರು ಬಸ್ ಧಾರ್ಮಿಕ ಕ್ಷೇತ್ರಗಳ ಪ್ರವಾಸ ಕೈಗೊಂಡಿದ್ದರು. ಏಪ್ರಿಲ್ 26ರಂದು ಗಯಾದಿಂದ ಪುರಿಗೆ ಬರುತ್ತಿದ್ದರು. ಸೊರೊ ಎಂಬಲ್ಲಿ ತಾವೇ ತಯಾರಿಸಿದ್ದ ಅನ್ನ ಮತ್ತು ಸಾಂಬರ್ ಸೇವಿಸಿದ್ದರು. ಬಸ್ ಸೊರೊ ನಗರ ತಲುಪುವಷ್ಟರಲ್ಲಿ 20 ಪ್ರವಾಸಿಗರು ವಾಂತಿ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಪ್ರವಾಸಿಗರ ಅಸ್ವಸ್ಥತೆಗೆ ಬಿಸಿಗಾಳಿ ಕಾರಣವಿರಬಹುದು ಎಂದು ವೈದ್ಯರು ಶಂಕೆ ವ್ಯಕ್ತಪಡಿಸಿದ್ದಾರೆ.

ರಾಷ್ಟ್ರಪತಿ ನಡೆಗೆ ಖಂಡನೆ

ಚೆನ್ನೈ: ರಾಜ್ಯ ವಿಧಾನಸಭೆ ಅಂಗೀಕರಿಸಿದ ಮಸೂದೆಗಳಿಗೆ ಅಂಕಿತ ಹಾಕಲು ರಾಜ್ಯಪಾಲರಿಗೆ ಕಾಲಮಿತಿ ಕುರಿತು ಸುಪ್ರೀಂ ಕೋರ್ಟ್ ಅಭಿಪ್ರಾಯ ಕೇಳಲು ಕೇಂದ್ರ ಸರಕಾರ ರಾಷ್ಟ್ರಪತಿಗಳ ಮೂಲಕ ಪ್ರಶ್ನೆಗಳನ್ನು ಕೇಳಿರುವುದು ಖಂಡನೀಯ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಗುರುವಾರ ಹೇಳಿದ್ದಾರೆ. 'ಈ ವಿಚಾರವನ್ನು ಈಗಾಗಲೇ ಇತ್ಯರ್ಥಪಡಿಸಿರುವಾಗ, ಬಿಜೆಪಿ ನೇತೃತ್ವದ ಕೇಂದ್ರ ಸರಕಾರ ಸುಪ್ರೀಂಕೋರ್ಟ್‌ನ ತೀರ್ಪನ್ನು ಬುಡಮೇಲು ಮಾಡಲು ಯತ್ನಿಸುತ್ತಿದೆ' ಎಂದು ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಇಮ್ರಾನ್ ಸುಳ್ಳುಪತ್ತೆ ಪರೀಕ್ಷೆಗೆ ಅನುಮತಿ

ಲಾಹೋರ್: ಭಯೋತ್ಪಾದನೆ ನಿಗ್ರಹ ನ್ಯಾಯಾಲಯವು ಜೈಲಿನಲ್ಲಿರುವ ಪಾಕಿಸ್ತಾನ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರನ್ನು ಸುಳ್ಳು ಪತ್ತೆ ಪರೀಕ್ಷೆ ಹಾಗೂ ಮುಖಭಾವ, ಧ್ವನಿ ವಿಶ್ಲೇಷಣಾ ಪರೀಕ್ಷೆಗೆ ಒಳಪಡಿಸಲು ಪೊಲೀಸರಿಗೆ ಗುರುವಾರ ಅನುಮತಿ ನೀಡಿದೆ. ಇಮ್ರಾನ್ ಖಾನ್ ಅವರನ್ನು ಅರೆಸೇನಾ ಪಡೆ ಯೋಧರು ಇಸ್ಲಾಮಾಬಾದ್ ಹೈಕೋರ್ಟ್ ಆವರಣದಲ್ಲಿ 2023, ಮೇ 9ರಂದು ಬಂಧಿಸಿದ್ದರು. ಈ ಘಟನೆ ಬೆನ್ನಲ್ಲೇ, ಹಲವೆಡೆ ಹಿಂಸಾತ್ಮಕ ಪ್ರತಿಭಟನೆಗಳು ನಡೆದಿದ್ದವು. ಗಲಭೆಗೆ ಕುಮ್ಮಕ್ಕು ನೀಡಿದ ಆರೋಪದಲ್ಲಿ ಇಮ್ರಾನ್ ವಿರುದ್ಧ 12 ಭಯೋತ್ಪಾದನಾ ಪ್ರಕರಣಗಳು ದಾಖಲಾಗಿದ್ದು ಆ ಸಂಬಂಧ ಇಮ್ರಾನ್ ಅವರನ್ನು ಪರೀಕ್ಷೆ ನಡೆಸಲು ಕೋರ್ಟ್ ಅಸ್ತು ಎಂದಿದೆ.

ಸಾಮರ್ ಇಸ್ಲಾಮಿಕ್ ಸ್ಕೂಲ್‌ಗೆ ನೋಟಿಸ್

ಬೆಂಗಳೂರು: ಕಾನೂನು ಬಾಹಿರವಾಗಿ ನಡೆಸುತ್ತಿರುವ ಹೆಗಡೆ ನಗರದ ಸಾಮರ್ ಇಂಟರ್‌ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್‌ಗೆ ಕಾರಣ ಕೇಳಿ ಬೆಂಗಳೂರು ದಕ್ಷಿಣ ಜಿಲ್ಲೆಯ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರು ಅಂತಿಮ ನೋಟಿಸ್ ಜಾರಿ ಮಾಡಿದ್ದಾರೆ. ಏಳು ದಿನಗಳ ಒಳಗಾಗಿ ಉತ್ತರ ನೀಡುವಂತೆ ಸೂಚಿಸಿ ಜಾರಿ ಮಾಡಿರುವ ನೋಟಿಸ್‌ನಲ್ಲಿ, ಕಾನೂನಿಗೆ ವಿರುದ್ಧವಾಗಿ ಶಿಕ್ಷಣ ಸಂಸ್ಥೆ ನಡೆಯುತ್ತಿರುವ ಕುರಿತು ಹಲವು ದೂರುಗಳು ಕೇಳಿ ಬಂದಿದ್ದು, ಇವೆಲ್ಲವನ್ನೂ ಪರಿಶೀಲಿಸಲಾಗಿದೆ. ಹೀಗಾಗಿ ಮೂಲ ದಾಖಲೆ ಒದಗಿಸುವಂತೆ ಹಲವು ಬಾರಿ ನೋಟಿಸ್ ನೀಡಿದ್ದು, ಈ ವರೆಗೆ ದಾಖಲೆ ಸಲ್ಲಿಸಿಲ್ಲ.

{ **ಬೈರತಿ ಸುರೇಶ್** } ನಗರಾಭಿವೃದ್ಧಿ ಸಚಿವ

ಮುಖ್ಯಮಂತ್ರಿ ಸಿದ್ದರಾಮಯ್ಯ ದೇಶ ಕಂಡ ಅತ್ಯಂತ ಪ್ರಾಮಾಣಿಕ ರಾಜಕಾರಣಿಗಳಲ್ಲಿ ಒಬ್ಬರು. ಅವರ ರಾಜಕೀಯ ಬದುಕಿನಲ್ಲಿ ಒಂದು ಕಪ್ಪು ಚುಕ್ಕೆಯೂ ಇಲ್ಲ, ಬಿಜೆಪಿ ನಾಯಕರು ಅವರ ಹೆಸರಿಗೆ ಕಳಂಕ ಮೆತ್ತುವ ಪ್ರಯತ್ನ ಮಾಡಿದರು, ಆದರೆ ಬಿಜೆಪಿಯ ಆ ತಂತ್ರ ವಿಫಲವಾಗಿದೆ.

ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ನಟಿಯರಾದ ಭಾರತಿ ವಿಷ್ಣುವರ್ಧನ್, ಜಯಮಾಲಾ ಸೇರಿದಂತೆ 63 ಸಾಧಕರಿಗೆ ಆರ್ಯಭಟ ಪ್ರಶಸ್ತಿ

ಮೇ 22ಕ್ಕೆ ಆರ್ಯಭಟ ಸಂಸ್ಥೆ ಸುವರ್ಣ ಸಂಭ್ರಮ



ಬೆಂಗಳೂರು: ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ 63 ಸಾಧಕರಿಗೆ ಆರ್ಯಭಟ ಪ್ರಶಸ್ತಿಯನ್ನು ಪ್ರಕಟಿಸಲಾಗಿದೆ.

ಆರ್ಯಭಟ ಸಾಂಸ್ಕೃತಿ ಸಂಸ್ಥೆಯ 50ನೇ ವರ್ಷದ ಸುವರ್ಣ ಸಂಭ್ರಮದ ಹಿನ್ನೆಲೆಯಲ್ಲಿ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿರುವ ಗಣ್ಯರನ್ನು ಸನ್ಮಾನಿಸುವ ಕಾರ್ಯಕ್ರಮವನ್ನು ಮೇ.22ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಶಸ್ತಿಯನ್ನು ಪದ್ಮಶ್ರೀ ಭಾರತಿ ವಿಷ್ಣು ವರ್ಧನ್, ಡಾ.ಜಯಮಾಲಾ, ರಾಜೇಂದ್ರ ಸಿಂಗ್ ಬಾಬು, ವಿಶ್ವೇಶ್ವರ ಭಟ್, ಕೆ.ಕಲ್ಯಾಣ್ ಹಾಗೂ ದೇಶದ 63 ಸಾಧಕರು ಸೇರಿದಂತೆ, ವಿದೇಶಿ ಭಾರತೀಯರಾದ ಡಾ.ಸುಧಾಕರ್ ರಾವ್, ಮಂದಾರ ಶೆಟ್ಟಿ, ಭಾವನ ಪ್ರದ್ಯುಮ್ನ, ನಿತಿನ್ ಶ್ರೀವಾಸ್ತವ, ಎಸ್.ಡಿ.ಟಿ. ಪ್ರಸಾದ್, ಸುಮಾ ಮಹೇಶ್ ಗೌಡ, ಶ್ವೇತಾರಾಮ್, ದೀಪಕ್.ಎಸ್.ಪಿ ಅವರಿಗೆ ಆರ್ಯಭಟ ಅಂತಾರಾಷ್ಟ್ರೀಯ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ನ್ಯಾಯಮೂರ್ತಿ ಡಾ.ಅಶೋಕ್.ಬಿ.ಹಿಂಚಿಗೇರಿ, ವಿಧಾನ ಪರಿಷತ್ ಸಭಾಪತಿ ಬಸವರಾಜ್ ಹೊರಟ್ಟಿ, ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ. ಮಹೇಶ್ ಜೋಶಿ, ಆರ್ಯಭಟ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಡಾ.ಎಚ್.ಎಲ್.ಎನ್.ರಾವ್ ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ವಿದ್ವಾನ್ ಎಚ್.ಎಸ್. ವೇಣುಗೋಪಾಲ್ ಅವರು ವಿಶೇಷ ವಾಗಿ 50 ಕೊಳಲು ವಾದಕರಿಂದ ಸಾಮೂಹಿಕ ಕೊಳಲು ವಾದನ ನಡೆಸಿಕೊಡಲಿದ್ದಾರೆ.

ಬೆಂಗಳೂರು ಒಡೆಯಲು ಕಾಂಗ್ರೆಸ್ ಸಜ್ಜು | ಬಿಜೆಪಿಯಿಂದ ಕಾನೂನು ಹೋರಾಟ

ಕಾಂಗ್ರೆಸ್ ನಿಲುವು ಸ್ಪಷ್ಟಪಡಿಸಲಿ: ಅಶೋಕ

ಬೆಂಗಳೂರು: ಕಾಂಗ್ರೆಸ್‌ನಲ್ಲಿ ಒಬ್ಬರು ಯುದ್ಧ ಬೇಕು ಎಂದರೆ, ಮತ್ತೊಬ್ಬರು ಶಾಂತಿ ಬೇಕು ಎನ್ನುತ್ತಾರೆ. ಎಐಸಿಸಿಯಲ್ಲಿ ಈ ಬಗ್ಗೆ ಸರಿಯಾದ ನಿಲುವು ಪ್ರಕಟಿಸಲಿ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಆಡಳಿತದಲ್ಲಿದ್ದಾಗ ಅಮೆರಿಕದ ಬಳಿ ಹೋಗಿ ಭಿಕ್ಷೆ ಬೇಡಿದ್ದನ್ನು ನೋಡಿದ್ದೇವೆ. ಮುಂಬೈಯಲ್ಲಿನ ಉಗ್ರ ದಾಳಿಯಲ್ಲಿ 175 ಜನರು ಸತ್ತಿದ್ದರು. ಆಗ ಮನಮೋಹನ್ ಸಿಂಗ್ ನೇತೃತ್ವದ ಯುಪಿಎ ಸರಕಾರ ಪ್ರತಿಕ್ರಿಯೆ ನೀಡಲೇ ಇಲ್ಲ. ಆದರೆ ಈಗ ಪ್ರಧಾನಿ ಮೋದಿ ತಕ್ಕ ಪ್ರತ್ಯುತ್ತರ ನೀಡಿದ್ದಾರೆ. ಸಿಂಧೂ ನದಿ ಒಪ್ಪಂದಕ್ಕೆ ನಾವು ಸಹಿ ಹಾಕಿಲ್ಲ. ಅದನ್ನು ಪ್ರಧಾನಿ ಮೋದಿ ರದ್ದು ಮಾಡಿದ್ದಾರೆ. ಭಯೋತ್ಪಾದಕ ದಾಳಿಗಳಾದಾಗಲೇ ಕಾಂಗ್ರೆಸ್ ಅದನ್ನು ಮಾಡಬೇಕಿತ್ತು. ಇದನ್ನು ಸಚಿವ ಸಂತೋಷ್ ಲಾಡ್ ಅರಿಯಬೇಕು ಎಂದರು.

ಜಮ್ಮು ಕಾಶ್ಮೀರ ಪ್ರಧಾನಿ ಮೋದಿ ಪರವಾಗಿ ನಿಂತಿದೆ. ಅಲ್ಲಿನ ಮುಖ್ಯಮಂತ್ರಿ ಕೂಡ ಕೇಂದ್ರ ಸರಕಾರಕ್ಕೆ ಬೆಂಬಲ ನೀಡಿದ್ದಾರೆ. ಅಲ್ಲಿನ ಅಭಿವೃದ್ಧಿ ಜನರು ನೋಡಿದ್ದಾರೆ. ಪಾಕ್ ಆಕ್ರಮಿತ ಕಾಶ್ಮೀರ ನಮ್ಮದು, ಅದನ್ನು ಮರಳಿ ಪಡೆಯುತ್ತೇವೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ. ಕಾಂಗ್ರೆಸ್‌ನ ಒಬ್ಬೇ ಒಬ್ಬ ನಾಯಕರು ಈ ಮಾತನ್ನು ಧೈರ್ಯವಾಗಿ ಹೇಳಿಲ್ಲ. ಯಾವುದೇ ಮಧ್ಯಸ್ಥಿಕೆ ಒಪ್ಪಲ್ಲ ಎಂದು ವಿದೇಶಾಂಗ ಸಚಿವರು ಈಗಾಗಲೇ ಹೇಳಿದ್ದಾರೆ. ಆದರೂ ಕಾಂಗ್ರೆಸ್‌ನವರು ಮೊಸರಲ್ಲಿ ಕಲ್ಲು ಹುಡುಕುತ್ತಿದ್ದಾರೆ. ಮೊದಲು ಯುದ್ಧ ಬೇಡ, ಶಾಂತಿ ಬೇಕು ಎಂದವರು ನಂತರ ಯುದ್ಧ ಮಾಡಿ ಎಂದರು. ಸಿಎಂ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್, ಮಲ್ಲಿಕಾರ್ಜುನ ಖರ್ಗೆ ಕದನ ವಿರಾಮ ಸ್ವಾಗತಿಸಿದ್ದಾರೆ. ಆದರೆ ಅದೇ ಕಾಂಗ್ರೆಸ್‌ನಲ್ಲಿ ಹಲವರು ಯುದ್ಧ ಮುಂದುವರಿಸಬೇಕಿತ್ತು ಎಂದಿದ್ದಾರೆ. ಕಾಂಗ್ರೆಸ್‌ನಲ್ಲೇ ಅನೇಕ ಗುಂಪುಗಳಿದ್ದು, ಒಬ್ಬೊಬ್ಬರು ಒಂದೊಂದು ಅಭಿಪ್ರಾಯ ಹೇಳುತ್ತಾರೆ.

ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು

ಬೆಂಗಳೂರನ್ನು ಗ್ರೇಟರ್ ಅಲ್ಲ, ಕ್ವಾರ್ಟರ್ ಬೆಂಗಳೂರು ಮಾಡಿದ್ದಾರೆ. ನಾಡಪ್ರಭು ಕೆಂಪೇಗೌಡರು ಒಂದು ಬೆಂಗಳೂರು ಕಟ್ಟಿದರೆ, ಕಾಂಗ್ರೆಸ್ ಸರಕಾರ ಬೆಂಗಳೂರನ್ನು ಮೂರು ಭಾಗ ಮಾಡಿದೆ. ಇದರಿಂದಾಗಿ ಅಭಿವೃದ್ಧಿ ಸಾಧ್ಯವಾಗುವುದಿಲ್ಲ. 110 ಹಳ್ಳಿಗಳಲ್ಲಿ ಜನರಿಗೆ ಹೆಚ್ಚು ತೆರಿಗೆ ವಿಧಿಸಲಾಗಿದೆ. ಯಾರದ್ದೋ ಜಮೀನಿಗೆ ಬೆಲೆ ಹೆಚ್ಚುವಂತೆ ಮಾಡಲು ಇಂತಹ ಯೋಜನೆ ರೂಪಿಸಲಾಗಿದೆ. ಇದರಿಂದಾಗಿ ಕೆಂಪೇಗೌಡರ ಚಿಂತನೆಗೆ ದ್ರೋಹ ಬಗೆದಂತಾಗಿದೆ. ಬೆಂಗಳೂರು ಭಾಗವಾದರೆ ಆದಾಯ ಬರುವುದಿಲ್ಲ. ಐಟಿ ಬಿಟಿ ಕೇಂದ್ರಗಳು ಒಂದು ಕಡೆ ಇರುವಾಗ, ಮತ್ತೊಂದು ಕಡೆಗೆ ಆದಾಯವೇ ಬರುವುದಿಲ್ಲ. ಮೂರು ಪಾಲಿಕೆಗಳು ನಿರ್ಮಾಣವಾದರೆ ಅಲ್ಲಿ ಕನ್ನಡಿಗರೇ ಮೇಯರ್ ಆಗುತ್ತಾರೆ ಎಂಬ ಖಚಿತತೆ ಇಲ್ಲ ಎಂದರು. ಮುಖ್ಯಮಂತ್ರಿಗಳು ಪಾಲಿಕೆಯಿಂದ ಆಯ್ಕೆಯಾಗುವುದಿಲ್ಲ ಎಂದಾದ ಮೇಲೆ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ ಅವರನ್ನು ಹೇಗೆ ಅಧ್ಯಕ್ಷರನ್ನಾಗಿ ಮಾಡುತ್ತಾರೆ? ಮುಖ್ಯಮಂತ್ರಿ ಸಿದ್ದರಾಮಯ್ಯ ಪಾಲಿಕೆ ಸಭೆಯಲ್ಲಿ ಬಂದು ಕೂರಲು ಸಾಧ್ಯವಿಲ್ಲ. ಬೆಂಗಳೂರು ಭಾಗ ಆಗಬಾರದು ಎಂಬುದು ಬಿಜೆಪಿಯ ಅಭಿಪ್ರಾಯ. ಮುಂದೆ ನಮ್ಮ ಸರಕಾರ ಬಂದರೆ ಬೆಂಗಳೂರನ್ನು ಒಂದು ಮಾಡುವ ಕೆಲಸ ಮಾಡುತ್ತೇವೆ. ಗ್ರೇಟರ್ ಬೆಂಗಳೂರಿಗೆ ವಿರುದ್ಧವಾಗಿ ಕಾನೂನು ಹೋರಾಟ ಮಾಡಲಿದ್ದೇವೆ ಎಂದರು.

ಡಿಸಿಎಂ ಡಿ.ಕೆ.ಶಿವಕುಮಾರ್ ತಮ್ಮ ಲಾಭಕ್ಕೆ ಎಲ್ಲವನ್ನೂ ಮಾಡುತ್ತಿದ್ದಾರೆ. ಬಿಡಿಎ ಲೇಔಟ್‌ಗಳು ಇನ್ನೂ ಖಾಲಿ ಇದ್ದು, ಅಲ್ಲಿಗೆ ನೀರು, ವಿದ್ಯುತ್ ಕೊಡಲು ಆಗುತ್ತಿಲ್ಲ. ಬಿಬಿಎಂಪಿ ಚುನಾವಣೆಯನ್ನು ಮುಂದೂಡಲು ಈ ಯೋಜನೆ ಮಾಡಿದ್ದಾರೆ. ನಗರದಲ್ಲಿ ಎಲ್ಲ ಕಡೆ ಕಸದ ರಾಶಿ ಇದೆ, ಮೇಕೆದಾಟು ಯೋಜನೆ ಜಾರಿ ಮಾಡಿಲ್ಲ, ನಗರದ ಆಡಳಿತ ನಡೆಸಲು ಆಗುತ್ತಿಲ್ಲ. ಇಂತಹ ವಿಫಲತೆಯನ್ನು ಒಪ್ಪಿಕೊಳ್ಳದೆ ಇಂತಹ ಯೋಜನೆ ತಂದಿದ್ದಾರೆ.

-ಆರ್.ಅಶೋಕ, ಪ್ರತಿಪಕ್ಷ ನಾಯಕ

ಜೈರಾಮ್ ರಮೇಶ್ ಅವರು ಎಚ್ಚರಿಕೆ ನೀಡಿದ ನಂತರವೂ ಎಲ್ಲರೂ ವಿರುದ್ಧ ಹೇಳಿಕೆ ನೀಡುತ್ತಾರೆ ಎಂದು ದೂರಿದರು. ಎಐಸಿಸಿಯಲ್ಲಿ ಯುದ್ಧದ ಕುರಿತು ಸರಿಯಾದ ನಿಲುವು ಪ್ರಕಟ ಮಾಡಲಿ. ಯುದ್ಧ ಬೇಕೆ, ಶಾಂತಿ ಬೇಕೆ, ಸಂಧಾನ ಬೇಕೆ ಎಂಬುದನ್ನು ಸರಿಯಾಗಿ ತಿಳಿಸಲಿ. ಆ ನಂತರ ಅಧಿವೇಶನದ ಬಗ್ಗೆ ಮಾತಾಡಲಿ. ಯೋಧರು ಈಗಲೂ ಭಯೋತ್ಪಾದಕರನ್ನು ಹುಡುಕಿ ಕೊಲ್ಲುತ್ತಿದ್ದಾರೆ. ಯೋಧರ ಬಗ್ಗೆ ಎಲ್ಲರೂ ನಂಬಿಕೆ ಇರಿಸಬೇಕು. ಕಾಶ್ಮೀರದಲ್ಲಿ ಕಾಂಗ್ರೆಸ್ ಮಿತ್ರಪಕ್ಷಗಳ ಆಡಳಿತವಿದ್ದು, ಅದನ್ನು ಇವರು ಎಂದಿಗೂ ಪ್ರಶ್ನಿಸುವುದಿಲ್ಲ. ಇಂತಹ ಸಮಯದಲ್ಲಿ ರಾಜಕೀಯ ಮಾಡಬಾರದು ಎಂದರು.

ಕೇಂದ್ರದಿಂದ ಟರ್ಕಿ ಕಂಪನಿಯ ಏರ್‌ಪೋರ್ಟ್ ಸೇವೆಗಳ ರದ್ದು

ದಿಲ್ಲಿ: ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಪಾಕಿಸ್ತಾನಕ್ಕೆ ಬೆಂಬಲ ನೀಡಿರುವ ಟರ್ಕಿಯ ವಿರುದ್ಧ ಭಾರತ ಇದೀಗ ಕ್ರಮ ಜರುಗಿಸಿದೆ. ಮುಂಬಯಿ, ಬೆಂಗಳೂರು, ದಿಲ್ಲಿ, ಗೋವಾ, ಅಹಮದಾಬಾದ್, ಹೈದರಾಬಾದ್, ಕೊಚ್ಚಿ, ಚೆನ್ನೈ, ಕಣ್ಣೂರು ವಿಮಾನ ನಿಲ್ದಾಣದಲ್ಲಿ ಗ್ರೌಂಡ್ ಹ್ಯಾಂಡ್ಲಿಂಗ್ ಸೇವೆಯನ್ನು ನೀಡುತ್ತಿದ್ದ ಟರ್ಕಿ ಮೂಲದ ಸೆಲೆಬಿ ಏರ್‌ಪೋರ್ಟ್ ಇಂಡಿಯಾ ಸರ್ವೀಸ್ ಕಂಪನಿಗೆ ಕೊಟ್ಟಿದ್ದ ಅನುಮೋದನೆಯನ್ನು ಕೇಂದ್ರ ಸರಕಾರ ರದ್ದುಪಡಿಸಿದೆ. ರಾಷ್ಟ್ರೀಯ ಭದ್ರತೆಯ ಹಿತಾಸಕ್ತಿ ದೃಷ್ಟಿಯಿಂದ ಟರ್ಕಿ ಕಂಪನಿಗೆ ನೀಡಿದ್ದ ಸೆಕ್ಯುರಿಟಿ ಕ್ಲಿಯರೆನ್ಸ್ ಅನ್ನು ಕೇಂದ್ರ ಸರಕಾರ ರದ್ದುಪಡಿಸಿದೆ ಎಂದು ಪ್ರಕಟಣೆ ತಿಳಿಸಿದೆ. ಕಂಪನಿಯು ಭಾರತದ ಪ್ರಮುಖ ವಿಮಾನ ನಿಲ್ದಾಣಗಳಲ್ಲಿ ಪ್ರಯಾಣಿಕರ ನಿರ್ವಹಣೆ, ಫ್ಲೈಟ್ ಆಪರೇಷನ್ಸ್, ಬ್ಯಾಗೇಜ್ ನಿರ್ವಹಣೆ, ಸರಕು ಸಾಗಣೆ, ಇತ್ಯಾದಿ ಸೇವೆಗಳನ್ನು ವಹಿಸುತ್ತಿತ್ತು. ಸೆಲೆಬಿ ಕಂಪನಿಯು ಹತ್ತು ವರ್ಷಗಳ ಹಿಂದೆ ಮುಂಬಯಿ ಇಂಟರ್‌ನ್ಯಾಷನಲ್ ಏರ್‌ಪೋರ್ಟ್ ಸಹಭಾಗಿತ್ವದಲ್ಲಿ ಭಾರತೀಯ ವೈಮಾನಿಕ ಕ್ಷೇತ್ರವನ್ನು ಪ್ರವೇಶಿಸಿತ್ತು.

ಶೈಕ್ಷಣಿಕ ಒಪ್ಪಂದವೂ ರದ್ದು

ಟರ್ಕಿಶ್ ಸಂಸ್ಥೆಗಳೊಂದಿಗಿನ ಎಲ್ಲ ರೀತಿಯ ಶೈಕ್ಷಣಿಕ ಸಂಬಂಧವನ್ನು ದಿಲ್ಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾ ರದ್ದುಪಡಿಸಿದೆ. ಟರ್ಕಿಯ ಜಾಗತಿಕ ನಿಲುವಿನ ವಿರುದ್ಧ ಉಂಟಾದ ಉದ್ವಿಗ್ನತೆ ಮತ್ತು ರಾಷ್ಟ್ರವ್ಯಾಪಿ ಪ್ರತಿಭಟನೆಗಳ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಮೂಲಗಳು ತಿಳಿಸಿವೆ.

ಗುರುವಾರದಿಂದಲೇ ಗ್ರೇಟರ್ ಬೆಂಗಳೂರು

ಬೆಂಗಳೂರು: ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆಗೆ ರಾಜ್ಯಪಾಲರ ಅಂಕಿತ ದೊರೆತಿದ್ದು, ಗುರುವಾರದಿಂದ ಜಾರಿಯಾಗಲಿದೆ. ಗ್ರೇಟರ್ ಬೆಂಗಳೂರು ಅಧಿಕೃತವಾಗಿ ಅನುಷ್ಠಾನಕ್ಕೆ ತರಲು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ತುಷಾರ್‌ಗಿರಿನಾಥ್ ಆಡಳಿತಾಧಿಕಾರಿಯಾಗಿ ಕಾರ್ಯನಿರ್ವಹಣೆ ಮಾಡಲಿದ್ದಾರೆ.

ದೈನಂದಿನ ಆಡಳಿತವನ್ನು ಮುಖ್ಯ ಆಯುಕ್ತ ಎಂ.ಮಹೇಶ್ವರ್ ರಾವ್ ಮುನ್ನಡೆಸಲಿದ್ದಾರೆ. ಗ್ರೇಟರ್ ಬೆಂಗಳೂರು ಪೂರ್ಣ ಪ್ರಮಾಣದಲ್ಲಿ ಅಸ್ತಿತ್ವಕ್ಕೆ ಬರಲು 4 ತಿಂಗಳು ಬೇಕಾಗಿದ್ದು, ಅಲ್ಲಿಯವರೆಗೂ ಹಾಲಿ ಬಿಬಿಎಂಪಿ ವ್ಯವಸ್ಥೆಯೇ ಮುಂದು ವರಿಯಲಿದೆ. ಈ ನಡುವೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ ಆಯುಕ್ತ ರಾಗಿ ಗುರುವಾರದಿಂದ ಮಹೇಶ್ವರ್ ರಾವ್ ಅವರು ಅಧಿಕಾರ ವಹಿಸಿ ಕೊಂಡಿದ್ದಾರೆ.

ಈ ವೇಳೆ ಅವರು ಗ್ರೇಟರ್ ಬೆಂಗಳೂರು ಅಭಿವೃದ್ಧಿಗೆ ಗ್ರೇಟರ್ ಯೋಜನೆಗಳನ್ನೇ ಹಮ್ಮಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರತಿಕ್ರಿಯಿಸಿದ್ದು, ಗ್ರೇಟರ್ ಬೆಂಗಳೂರು ಆಡಳಿತ ಕಾಯಿದೆಗೆ ರಾಜ್ಯಪಾಲರ ಅಂಕಿತ ದೊರೆತಿದ್ದು, ಗುರುವಾರದಿಂದ ಜಾರಿಯಾಗಲಿದೆ. ಬಿಬಿಎಂಪಿ ಬದಲು ಗ್ರೇಟರ್ ಬೆಂಗಳೂರು ಪ್ರಾಧಿಕಾರ ರಚನೆಯಾಗಲಿದೆ ಎಂದರು.

ಮನೆಯಂಗಳದಲ್ಲಿ ಮಾತುಕತೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಜೆ.ಸಿ. ರಸ್ತೆಯಲ್ಲಿರುವ ಕನ್ನಡ ಭವನದ ನಯನ ಸಭಾಂಗಣದಲ್ಲಿ 2025ನೇ ಮೇ 17ರಂದು ಸಂಜೆ 4ಗಂಟೆಗೆ 237ನೇ ಮನೆಯಂಗಳದಲ್ಲಿ ಮಾತುಕತೆ ಕಾರ್ಯಕ್ರಮ ಆಯೋಜಿಸಲಾಗಿದೆ. ಕಾರ್ಯಕ್ರಮದಲ್ಲಿ ತಿಂಗಳ ಅತಿಥಿಯಾಗಿ ಹಿರಿಯ ಗಾಯಕಿ ಎಚ್.ಆರ್.ಲೀಲಾವತಿ ಅವರು ತಿಂಗಳ ಅತಿಥಿಯಾಗಿ ಭಾಗವಹಿಸಲಿದ್ದು, ಇಲಾಖೆಯ ನಿರ್ದೇಶಕಿ ಕೆ.ಎಂ. ಗಾಯತ್ರಿ ಉಪಸ್ಥಿತರಿರಲಿದ್ದಾರೆ ಎಂದು ಪ್ರಕಟಣೆ ಹೇಳಿದೆ.

ವಿದ್ಯಾರ್ಥಿಗಳ ಕೌಶಲ್ಯ ವರ್ಧನೆಯ ಮೂಲ ಸೌಕರ್ಯ ಕೇಂದ್ರ ಉದ್ಘಾಟನೆ

ಕೆಎಸ್‌ಜಿಐ, ಆಲ್ಟಿಯಮ್ ಮಹತ್ವದ ಒಪ್ಪಂದ

ಬೆಂಗಳೂರು: ಸೆಮಿ ಕಂಡಕ್ಟರ್ ನಾವೀನ್ಯತೆ ಮುನ್ನಡೆಸಲು ಕಮ್ಮವರಿ ಸಂಘಮ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಆಲ್ಟಿಯಮ್ ಡಿಸೈನರ್ ಮಹತ್ವದ ಒಪ್ಪಂದ ಮಾಡಿಕೊಂಡಿವೆ.

ಕೆಎಸ್‌ಐಟಿ ರಜತ ಮಹೋತ್ಸವ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ, ಕೆಎಸ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಕೆಎಸ್ ಸ್ಕೂಲ್‌ಆಫ್ ಎಂಜಿನಿಯರಿಂಗ್ ಮತ್ತು ಮ್ಯಾನೇಜ್ಮೆಂಟ್ ಮತ್ತು ಕೆಎಸ್‌ಪಾಲಿಟೆಕ್ನಿಕ್ ಒಳಗೊಂಡಿರುವ ಕಮ್ಮವರಿ ಸಂಘಮ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ಪಿಸಿಬಿ ವಿನ್ಯಾಸ ಸಾಫ್ಟ್‌ವೇರ್‌ನಲ್ಲಿ ಜಾಗತಿಕ ಮಟ್ಟದಲ್ಲಿ ಹೆಸರು ಮಾಡಿರುವ ಆಲ್ಟಿಯಮ್ ಡಿಸೈನರ್ ಜತೆ ತಿಳುವಳಿಕೆ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಮೌಲ್ಯಾಧಾರಿತ ಶಿಕ್ಷಣಕ್ಕೆ ಮತ್ತು ಕೈಗಾರಿಕಾ ಸಮನ್ವಯ ಶಿಕ್ಷಣಕ್ಕೆ ಒಂದು ಪ್ರಮುಖ ಹೆಜ್ಜೆಯಾಗಿ, ವಿದ್ಯಾರ್ಥಿಗಳನ್ನು ಜಾಗತಿಕ ವೃತ್ತಿ ಅವಕಾಶಗಳಿಗೆ ಸಿದ್ಧಪಡಿಸುವಲ್ಲಿ ಸಹಕಾರಿಯಾಗಲಿದೆ.

ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಕೌಶಲ್ಯ ವರ್ಧನೆಗೆ ಬೇಕಾಗುವ ಮೂಲ ಸೌಕರ್ಯ ಒಳಗೊಂಡ ಉತ್ಕೃಷ್ಟತಾ ಕೇಂದ್ರಗಳನ್ನು ಕೆಯಸ್‌ಐಟಿ, ಕೆಎಸ್‌ಎಸ್‌ಈಎಂ ಮತ್ತು ಕೆಎಸ್‌ಪಿಯಲ್ಲಿ ಉದ್ಘಾಟಿಸಲಾಯಿತು.

ಕಮ್ಮ ವರಿ ಸಂಘದ ಅಧ್ಯಕ್ಷ ಆರ್. ರಾಜಗೋಪಾಲ್ ನಾಯ್ಡು, ಗೌರವ ಕಾರ್ಯದರ್ಶಿ ಆರ್.ಲೀಲಾಶಂಕರ್ ರಾವ್, ಖಜಾಂಚಿ ಟಿ.ನೀರ ಜಾಕ್ಷುಲು ನಾಯ್ಡು, ಕೆಎಸ್‌ಜಿಐ ಸಿಇಒ ಡಾ.ಕೆ.ವಿ.ಎ.ಬಾಲಾಜಿ, ಕೆಎಸ್‌ಆರ್‌ಐಎಫ್ ಕಾರ್ಯನಿರ್ವಾಹಕ ನಿರ್ದೇಶಕ ಡಾ.ಡಿ.ಆರ್.ಸ್ವಾಮಿ, ಕೆಎಸ್ ಐಟಿಯ ಪ್ರಾಂಶುಪಾಲ ಡಾ.ದಿಲೀಪ್ ಕುಮಾರ್.ಕೆ., ಕೆಎಸ್‌ಎಸ್‌ಇಎಂ ಸಹ ನಿರ್ದೇಶಕ ಡಾ.ಬಾಲಾಜಿ.ಬಿ., ಕೆಎಸ್ ಪಾಲಿಟೆಕ್ನಿಕ್ ಪ್ರಾಂಶುಪಾಲ ಪ್ರೊ.ಸುರೇಶ್.ಕೆ ಉಪಸ್ಥಿತರಿದ್ದರು.

ಕೆಎಸ್‌ಐಟಿ ರಜತ ಮಹೋತ್ಸವ ಸಭಾಂಗಣದಲ್ಲಿ ಕಮ್ಮವರಿ ಸಂಘಮ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್ ಮತ್ತು ಆಲ್ಟಿಯಮ್ ಡಿಸೈನರ್ ಮಹತ್ವದ ಒಪ್ಪಂದಕ್ಕೆ ಸಹಿ ಹಾಕಿದವು. ಆಲ್ಟಿಯಮ್ ಶಿಕ್ಷಣದ ಉಪಾಧ್ಯಕ್ಷ ರಿಯಾ ಕ್ಯಾಲೆಂಡರ್, ಕಮ್ಮವರಿ ಸಂಘದ ಅಧ್ಯಕ್ಷ ಆರ್.ರಾಜಗೋಪಾಲ್ ನಾಯ್ಡು ಇದ್ದರು.

ಎಲೆಕ್ಟ್ರಾನಿಕ್ ವಿನ್ಯಾಸ ಅಳವಡಿಸಿಕೊಳ್ಳಿ

ಆಲ್ಟಿಯಮ್ ಶಿಕ್ಷಣದ ಉಪಾಧ್ಯಕ್ಷ ರಿಯಾ ಕ್ಯಾಲೆಂಡರ್, ವಿದ್ಯಾರ್ಥಿಗಳನ್ನು ಕುರಿತು ಇಂದಿನ ತಂತ್ರಜ್ಞಾನ ಭೂದೃಶ್ಯದಲ್ಲಿ ಎಲೆಕ್ಟ್ರಾನಿಕ್ ವಿನ್ಯಾಸ ಯಾಂತ್ರೀಕರಣದ ಹೆಚ್ಚುತ್ತಿರುವ ಪ್ರಾಮುಖ್ಯತೆಯನ್ನು ಒತ್ತಿ ಹೇಳಿದರು. ಕೌಶಲ್ಯ ವರ್ಧನೆ ಮತ್ತು ನಾವೀನ್ಯತೆಗಾಗಿ ಅಂತಹ ಸಹಯೋಗದ ವೇದಿಕೆಗಳನ್ನು ಬಳಸಿಕೊಳ್ಳಲು ಪ್ರೋತ್ಸಾಹಿಸಿದರು.

ಅವರ ಭಾಷಣವು ಮಹತ್ವಾಕಾಂಕ್ಷಿ ಎಂಜಿನಿಯರ್‌ಗಳ ಮೇಲೆ ಶಾಶ್ವತವಾದ ಪ್ರಭಾವ ಬೀರಿತು, ಜಾಗತಿಕ ಉದ್ಯಮ ಮಾನದಂಡಗಳೊಂದಿಗೆ ತಮ್ಮ ಶೈಕ್ಷಣಿಕ ಅನ್ವೇಷಣೆಗಳನ್ನು ಜೋಡಿಸಲು ಪ್ರೇರೇಪಿಸಿತು.

ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ | ನಗರದಲ್ಲಿ ನಾನಾ ಕಾಮಗಾರಿ ಪರಿಶೀಲನೆ

ಅನಧಿಕೃತ ಒಎಫ್‌ಸಿ ಕೇಬಲ್ ತೆರವುಗೊಳಿಸಿ

ಬೆಂಗಳೂರು: ನಗರದಲ್ಲಿ ಎಲ್ಲೆಂದರಲ್ಲಿ ಒಎಫ್‌ಸಿ ಕೇಬಲ್ ಅಳವಡಿಕೆ ಮಾಡುತ್ತಿದ್ದು, ಇದರಿಂದ ವಾಹನ ಸವಾರರಿಗೆ ಸಾರ್ವಜನಿಕರಿಗೆ ಭಾರಿ ಸಮಸ್ಯೆಯಾಗುತ್ತಿದೆ. ಈ ಹಿನ್ನೆಲೆ ಬಿಬಿಎಂಪಿಯು ನಗರದಲ್ಲಿ ಅನಧಿಕೃತವಾಗಿ ಅಳವಡಿಸಿದ ಒಎಫ್‌ಸಿ ಕೇಬಲ್‌ಗಳನ್ನು ತೆರವುಗೊಳಿಸುವಂತೆ ಅಧಿಕಾರಿಗಳಿಗೆ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಸೂಚನೆ ನೀಡಿದರು.

ಅರಮನೆ ರಸ್ತೆ ಹಾಗೂ ಇನ್ನಿತರೆ ಕಡೆ ಗೋಡೆ, ಬ್ಯಾರಿಕೇಡ್ ಗಳಿಗೆ ಭಿತ್ತಿ ಪತ್ರಗಳನ್ನು ಅಂಟಿಸಲಾಗಿದೆ. ಅದರಿಂದ ನಗರ ಸೌಂದರ್ಯಕ್ಕೆ ಧಕ್ಕೆ ಉಂಟಾಗಲಿದೆ. ಈ ಸಂಬಂಧ ಎಲ್ಲೆಲ್ಲಿ ಭಿತ್ತಿಪತ್ರಗಳನ್ನು ಅಂಟಿಸಲಾಗಿದೆ ಎಂಬುದನ್ನು ಗುರುತಿಸಿ ಅದನ್ನು ತೆರವುಗೊಳಿಸಬೇಕು. ಅದಲ್ಲದೆ ರಸ್ತೆ ಬದಿ ಖಾಸಗಿ ಸಂಸ್ಥೆ, ಶಾಲಾ-ಕಾಲೇಜುಗಳ ಜಾಹೀರಾತು ಫಲಕಗಳನ್ನು ತೆರವುಗೊಳಿಸಿ ದಂಡ ವಿಧಿಸಬೇಕು.

-ಮಹೇಶ್ವರ್ ರಾವ್, ಮುಖ್ಯ ಆಯುಕ್ತ

ಬಿಬಿಎಂಪಿಯ ಪೂರ್ವ ವಲಯ ವ್ಯಾಪ್ತಿಯಲ್ಲಿ ಗುಟ್ಟಹಳ್ಳಿ ಮೇಲ್ಸೇತುವೆ ಪರಿಶೀಲನೆ ನಡೆಸಿ ಮಾತನಾಡಿ, ಪಾದಚಾರಿ ಮಾರ್ಗದಲ್ಲಿ ಅನಧಿಕೃತ ಒಎಫ್‌ಸಿ ಕೇಬಲ್‌ಗಳು ನೇತಾಡುತ್ತಿರುವುದನ್ನು ಕಂಡು ಅದನ್ನು ಕೂಡಲೇ ತೆರವುಗೊಳಿಸಬೇಕು. ಟೆಂಡರ್ ಶ್ಯೂರ್, ವೈಟ್ ಟಾಪಿಂಗ್ ಮಾಡಿರುವ ರಸ್ತೆಗಳಲ್ಲಿ ಕೇಬಲ್‌ಗಳನ್ನು ನೆಲದಡಿ ಅಳವಡಿಸಲು ಡಕ್ಟ್‌ಗಳ ವ್ಯವಸ್ಥೆ ಮಾಡಲಾಗಿದ್ದರೂ ಕೂಡಾ ಕೆಲ ಸಂಸ್ಥೆಗಳು ರಸ್ತೆ ಬದಿ, ಪಾದಚಾರಿ ಮಾರ್ಗ, ವಿದ್ಯುತ್ ಕಂಬಗಳು ಹಾಗೂ ಮರಗಳಲ್ಲಿ ನೇತಾಡುವ ರೀತಿಯಲ್ಲಿದೆ. ಇದರಿಂದ ನಾಗರಿಕರಿಗೆ ಸಮಸ್ಯೆಯಾಗುವುದರಿಂದ ಡಕ್ಟ್‌ಗಳನ್ನು ಅಳವಡಿಸಿರುವ ಕಡೆ ಯಾವುದೇ ರೀತಿಯ ಅನಧಿಕೃತ ಒಎಫ್‌ಸಿ ಕೇಬಲ್‌ಗಳನ್ನು ಅಳವಡಿಸಿದಂತೆ ಕ್ರಮವಹಿಸಿ ಎಂದರು.

ಹೊಸದಾಗಿ ಪಾದಚಾರಿ ಮಾರ್ಗ ನಿರ್ಮಾಣ ನಗರದ ಅರಮನೆ ರಸ್ತೆ, ವಸಂತನಗರದ 12ನೇ ಮುಖ್ಯ ರಸ್ತೆ ಹಾಗೂ ಕಂಟೋನ್ಮೆಂಟ್ ರೈಲ್ವೇ ಹಳಿ ಬಳಿ ಪಾದಚಾರಿ ಮಾರ್ಗ ನಿರ್ಮಾಣ ಮಾಡದಿರುವುದನ್ನು ಗಮನಿಸಿ, ಕೂಡಲೆ ಪರಿಶೀಲಿಸಿ ಎಲ್ಲೆಲ್ಲಿ ಪಾದಚಾರಿ ಮಾರ್ಗ ನಿರ್ಮಾಣ ಮಾಡಬೇಕಿದೆ ಹಾಗೂ ವಿಸ್ತರಿಸಬೇಕಿದೆ ಎಂಬುದನ್ನು ಗುರುತಿಸಿ ಹೊಸದಾಗಿ ಪಾದಚಾರಿ ಮಾರ್ಗ ನಿರ್ಮಾಣ ಮಾಡಬೇಕು ಎಂದು ಸೂಚನೆ ನೀಡಿದರು.

ಮಿಲ್ಲರ್ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್‌ಗೆ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಬೆಳಗಿನ ಉಪಹಾರಕ್ಕೆ ಸಿದ್ಧಪಡಿಸಿದ್ದ ಇಡ್ಲಿ ಹಾಗೂ ಪಲಾವ್‌ನ್ನು ಸೇವಿಸಿ ಆಹಾರದ ಗುಣಮಟ್ಟವನ್ನು ಪರಿಶೀಲಿಸಿದರು. ಉಪಾಹಾರದ ರುಚಿ ಚೆನ್ನಾಗಿದ್ದು, ಆಹಾರದ ಗುಣಮಟ್ಟ ಕಾಯ್ದುಕೊಳ್ಳುವ ಜತೆಗೆ ಶುಚಿತ್ವ ಕಾಪಾಡಲು ಸಿಬ್ಬಂದಿಗೆ ಸೂಚನೆ ನೀಡಿದರು.

ಬಿಬಿಎಂಪಿಯ ಪೂರ್ವ ವಲಯ ವ್ಯಾಪ್ತಿಯಲ್ಲಿ ಗುಟ್ಟಹಳ್ಳಿ ಮೇಲ್ಸೇತುವೆಯನ್ನು ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಪರಿಶೀಲನೆ ನಡೆಸಿದರು.

ಮಿಲ್ಲರ್ ರಸ್ತೆಯಲ್ಲಿರುವ ಇಂದಿರಾ ಕ್ಯಾಂಟೀನ್‌ನಲ್ಲಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಉಪಾಹಾರ ಸೇವಿಸಿ, ಗುಣಮಟ್ಟ ಪರಿಶೀಲಿಸಿದರು.

ಸಾರ್ವಜನಿಕ ಉಪಯೋಗಕ್ಕೆ ಖಾಲಿ ಜಾಗ

ಪಾಲಿಕೆಯ ಒಡೆತನದ ಖಾಲಿ ಜಾಗಗಳು ಸಾಕಷ್ಟು ಕಡೆ ಬಳಕೆ ಮಾಡದೆ ಸ್ವಚ್ಛತೆ ಇಲ್ಲದಂತಾಗಿದ್ದು, ಅಂತಹ ಸ್ಥಳಗಳನ್ನು ಗುರುತಿಸಿ ಸಾರ್ವಜನಿಕರ ಬಳಕೆಗೆ ಅನುವು ಮಾಡಿಕೊಡಬೇಕು. ಸದ್ಯ ನಗರದಲ್ಲಿ ಬೀದಿ ಬದಿ ವ್ಯಾಪಾರಿಗಳಿಗಾಗಿ ವ್ಯಾಪಾರ ವಲಯಗಳನ್ನು ಗುರುತಿಸುವ ಕಾರ್ಯ ನಡೆಯುತ್ತಿದೆ. ಪಾಲಿಕೆ ಒಡೆತನದ ವಿಶಾಲ ಜಾಗಗಳನ್ನು ಗುರುತಿಸಬೇಕು ಹಾಗೂ ಟ್ರಾನ್ಸ್‌ಫಾರ್ಮರ್‌ಗಳ ಬಳಿ ಸ್ವಚ್ಛತೆ ಕಾಪಾಡಿ. ರಸ್ತೆ ಬದಿ ಪಾದಚಾರಿ ಮಾರ್ಗಗಳಲ್ಲಿರುವ ಟ್ರಾನ್ಸ್‌ಫಾರ್ಮರ್ ಗಳ ಬಳಿ ಸ್ವಚ್ಛತೆ ಇಲ್ಲದೆ ಓಡಾಡದಂತಹ ಸ್ಥಿತಿ ನಿರ್ಮಾಣ ಆಗಿರುತ್ತದೆ. ಈ ನಿಟ್ಟಿನಲ್ಲಿ ಟ್ರಾನ್ಸ್‌ಫಾರ್ಮರ್ ಇರುವ ಕಡೆ ಫೆನ್ಸಿಂಗ್ ಅಳವಡಿಸಿ ಫೆನ್ಸಿಂಗ್ ಮಾಡಬೇಕು. ಜತೆಗೆ ಅಲ್ಲಿ ಸದಾ ಸ್ವಚ್ಛತೆಯನ್ನು ಕಾಪಾಡುವ ಜವಾಬ್ದಾರಿಯನ್ನು ಬೆಸ್ಕಾಂ ಅಧಿಕಾರಿಗಳ ವಹಿಸಿದರು.

ಶಾಸಕ ವಿನಯ್ ವಿರುದ್ಧ ಬಲವಂತದ ಕ್ರಮ ಬೇಡ

ಬೆಂಗಳೂರು: ಕಾಂಗ್ರೆಸ್ ಮಾಜಿ ಸಂಸದ ಡಿ.ಕೆ.ಸುರೇಶ್ ಸಹೋದರಿಯ ಸೋಗಿನಲ್ಲಿ ಕೋಟ್ಯಂತರ ರೂಪಾಯಿ ಮೌಲ್ಯದ ಚಿನ್ನಾಭರಣ ವಂಚಿಸಿದ್ದ ಐಶ್ವರ್ಯಾ ಗೌಡ ಪ್ರಕರಣದಲ್ಲಿ ಅಕ್ರಮ ಹಣ ವರ್ಗಾವಣೆ ಕಾಯಿದೆಯಡಿ (ಪಿಎಂಎಲ್ಎ) ಕಾಂಗ್ರೆಸ್ ಶಾಸಕ ವಿನಯ್ ಕುಲಕರ್ಣಿ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂದು ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ಹೈಕೋರ್ಟ್ ಮಧ್ಯಂತರ ಆದೇಶ ನೀಡಿದೆ.

ಪ್ರಕರಣ ಸಂಬಂಧ ಏಪ್ರಿಲ್ 24 ಮತ್ತು 25ರಂದು ತಮ್ಮ ವಿರುದ್ಧ ನಡೆಸಿರುವ ಶೋಧ ಕಾರ್ಯಾಚರಣೆ, ಜಪ್ತಿ ಹಾಗೂ ಪಿಎಂಎಲ್ಎ ಕಾಯಿದೆ ಸೆಕ್ಷನ್ 17ರ ಅಡಿ ಹೇಳಿಕೆ ದಾಖಲಿಸಿಕೊಂಡಿರುವುದು ಕಾನೂನುಬಾಹಿರ ಎಂದು ಘೋಷಿಸುವಂತೆ ಕೋರಿ ವಿನಯ್ ಕುಲಕರ್ಣಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಶಿವಶಂಕರ್ ಅಮರಣ್ಣವರ್ ಅವರಿದ್ದ ರಜಾ ಕಾಲದ ಏಕ ಸದಸ್ಯ ಪೀಠ ನಡೆಸಿತು.

ಪ್ರಕರಣ ಸಂಬಂಧ ಕೇಂದ್ರ ಸರಕಾರಕ್ಕೆ ನೋಟಿಸ್ ಜಾರಿ ಮಾಡಿದ್ದು, ಮಧ್ಯಂತರ ಆದೇಶ ಪ್ರಶ್ನಿಸಿ ಅರ್ಜಿ ಸಲ್ಲಿಕೆಗೆ ಕೇಂದ್ರ ಸರಕಾರಕ್ಕೆ ಸಂಪೂರ್ಣ ಸ್ವಾತಂತ್ರ್ಯ ಇರಲಿದೆ ಎಂದು ತಿಳಿಸಿತು. ನ್ಯಾಯಾಲಯದಲ್ಲಿದ್ದ ಕೇಂದ್ರ ಸರಕಾರದ ಪರ ವಕೀಲರು, ನಮ್ಮ ವಾದ ಆಲಿಸದೆ ಮಧ್ಯಂತರ ಆದೇಶ ನೀಡಬಾರದು ಎಂದು ಮನವಿ ಮಾಡಿದರು. ಅದಕ್ಕೆ ಪೀಠ, ನಮ್ಮ ಆದೇಶವನ್ನು ಪ್ರಶ್ನೆ ಮಾಡಬಹುದು ಎಂದು ತಿಳಿಸಿ ವಿಚಾರಣೆ ಮುಂದೂಡಿತು.

ಇ.ಡಿ ಪರ ವಕೀಲರು, ಇ.ಡಿ ಸಮನ್ಸ್ ಪ್ರಶ್ನಿಸುವಂತಿಲ್ಲ ಎಂದು ಹೈಕೋರ್ಟ್‌ಗೆ ವಿಭಾಗೀಯ ಪೀಠ ಆದೇಶಿಸಿದೆ. ಪಿಎಂಎಲ್ಎ ಅಡಿ ತನಿಖೆ ಮುಂದುವರಿಸಲು ಮುಖ್ಯ ನ್ಯಾಯಮೂರ್ತಿಗಳ ಪೀಠವು ಸ್ವಾತಂತ್ರ್ಯ ಕಲ್ಪಿಸಿದೆ. ಹೀಗಾಗಿ, ಮಧ್ಯಂತರ ಪರಿಹಾರ ನೀಡುವುದನ್ನು ಪರಿಗಣಿಸುವು ದಾದರೆ ನಮ್ಮ ವಾದವನ್ನು ಆಲಿಸಬೇಕು. ವಿನಯ್ ಪರ ವಕೀಲರು ಇಂದಿನ ತುರ್ತಿನ ಅಗತ್ಯತೆಯನ್ನು ಪೀಠಕ್ಕೆ ಮನವರಿಕೆ ಮಾಡಿಕೊಡಬೇಕಿತ್ತು. ವಿನಯ್‌ಗೆ ಸಮನ್ಸ್ ಜಾರಿ ಮಾಡಿದ್ದೆವು, ಅವರು ಹಾಜರಾಗಿದ್ದರು. ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಈಗ ಮತ್ತೆ ಹೊಸದಾಗಿ ಸಮನ್ಸ್ ಜಾರಿ ಮಾಡಿಲ್ಲ ಎಂದು ಪೀಠಕ್ಕೆ ವಿವರಿಸಿದರು.

ಜೂನ್ 11ರಿಂದ ಲಾರ್ಡ್ಸ್‌ನಲ್ಲಿ ಆಸ್ಟ್ರೇಲಿಯಾ-ದ.ಆಫ್ರಿಕಾ ಫೈನಲ್ ಹಣಾಹಣಿ

ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಬಹುಮಾನ ಮೊತ್ತ ದುಪ್ಪಟ್ಟು

ಲಾರ್ಡ್ಸ್: 2025ರ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ (ಡಬ್ಲ್ಯುಟಿಸಿ) ವಿಜೇತ ತಂಡ ರು.30.80 ಕೋಟಿ (3.6 ದಶಲಕ್ಷ ಡಾಲರ್) ಬಹುಮಾನದ ಮೊತ್ತ ಪಡೆಯಲಿದೆ, ಇದು ಈ ಹಿಂದಿನ ಆವೃತ್ತಿಗಿಂತ ಎರಡು ಪಟ್ಟು ಹೆಚ್ಚು.

2023ರ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಭಾರತ ತಂಡವನ್ನು ಸೋಲಿಸಿ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಗೆದ್ದ ಸಂದರ್ಭದಲ್ಲಿ ಆಸ್ಟ್ರೇಲಿಯಾ 13.68 ಕೋಟಿ ರು. ಬಹುಮಾನದ ಮೊತ್ತ ಪಡೆದಿತ್ತು. ಜೂನ್ 11ರಿಂದ ಲಾರ್ಡ್ಸ್‌ನಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ತಂಡಗಳ ನಡುವೆ ಮೂರನೇ ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್‌ನ ಫೈನಲ್ ನಿಗದಿಯಾಗಿದೆ. ಈ ಬಾರಿ ರನ್ನರ್ ಅಪ್ ಆಗುವ ತಂಡ ಸುಮಾರು 18 ಕೋಟಿ ನಗದು ಬಹುಮಾನವನ್ನು ಜೇಬಿಗಿಳಿಸಲಿದೆ. ಈ ಹಿಂದಿನ ಎರಡು ಆವೃತ್ತಿಗಳಲ್ಲಿ ರನ್ನರ್ ಅಪ್ ತಂಡ 6.84 ಕೋಟಿ ರು. ಬಹುಮಾನ ಪಡೆದಿತ್ತು. 'ಬಹುಮಾನ ಮೊತ್ತದಲ್ಲಿ ಹೆಚ್ಚಳ ಮಾಡಿರುವುದು ಟೆಸ್ಟ್ ಕ್ರಿಕೆಟ್‌ಗೆ ಆದ್ಯತೆ ನೀಡುವ ವಿಶ್ವ ಕ್ರಿಕೆಟ್ ಸಮಿತಿಯ ಪ್ರಯತ್ನವನ್ನು ಎತ್ತಿ ತೋರಿಸುತ್ತಿದೆ' ಎಂದು ಐಸಿಸಿ ಗುರುವಾರ ತನ್ನ ಹೇಳಿಕೆಯಲ್ಲಿ ತಿಳಿಸಿದೆ.

ಈ ಹಿಂದಿನ (2024-25) ಡಬ್ಲ್ಯುಟಿಸಿ ಅಭಿಯಾನದಲ್ಲಿ ದಕ್ಷಿಣ ಆಫ್ರಿಕಾ ತಂಡವು ತನ್ನ ತವರಿನಲ್ಲಿ ಲಂಕಾ ಮತ್ತು ಪಾಕಿಸ್ತಾನ ತಂಡಗಳ ಮೇಲೆ 2-0 ಗೆಲುವು ಪಡೆದಿದ್ದು, ಅಂತಿಮವಾಗಿ ಶೇ 69.44% ಪಾಯಿಂಟ್ಸ್ ಗಳಿಸಿತ್ತು. ಆಸ್ಟ್ರೇಲಿಯಾ (67.54%ಪಾಯಿಂಟ್ಸ್) 2ನೇ ಸ್ಥಾನ ಗಳಿಸಿತ್ತು, ಆದರೆ ಅಭಿಯಾನದ ಬಹುಭಾಗ ಮುನ್ನಡೆಯಲ್ಲಿದ್ದ ಭಾರತ ಅಂತಿಮವಾಗಿ (50.00% ಪಾಯಿಂಟ್ಸ್) ಮೂರನೇ ಸ್ಥಾನಕ್ಕಿಳಿದಿತ್ತು. 'ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಪ್ರಶಸ್ತಿ ಉಳಿಸಿಕೊಳ್ಳುವ ಅವಕಾಶ ನಮಗೆ ದೊರಕಿದೆ. ಕಳೆದ ಎರಡು ವರ್ಷಗಳಿಂದ ಸತತ ಪರಿಶ್ರಮ ಪಟ್ಟಿರುವ ಕಾರಣ ತಂಡದ ಗೆಲುವಿನ ವಿಶ್ವಾಸ ಇದೆ' ಎಂದು ಆಸ್ಟ್ರೇಲಿಯಾ ತಂಡದ ನಾಯಕ ಪ್ಯಾಟ್ ಕಮಿನ್ಸ್ ಹೇಳಿದ್ದಾರೆ. 'ಟೆಸ್ಟ್ ಕ್ರಿಕೆಟ್‌ನ ಮಹತ್ವವನ್ನು ಎಲ್ಲರೂ ಅರಿತುಕೊಂಡಿದ್ದಾರೆ. ಫೈನಲ್ ಪಂದ್ಯವಾಡಲು ಲಾರ್ಡ್ಸ್ ಸೂಕ್ತ ವೇದಿಕೆ. ನಾವೆಲ್ಲರೂ ಆಸ್ಟ್ರೇಲಿಯಾ ವಿರುದ್ಧ ಉತ್ತಮ ಆಟವಾಡಲು ಪ್ರಯತ್ನಿಸುತ್ತೇವೆ' ಎಂದು ದಕ್ಷಿಣ ಆಫ್ರಿಕಾ ತಂಡದ ನಾಯಕ ತೆಂಬಾ ಬವುಮಾ ಹೇಳಿದ್ದಾರೆ.

ಲೀಗ್‌ನಲ್ಲಷ್ಟೇ ಆರ್‌ಸಿಬಿಗೆ ವಿದೇಶಿ ಆಟಗಾರರ ಬಲ

ಬೆಂಗಳೂರು: ಹದಿನೆಂಟನೇ ಆವೃತ್ತಿಯ ಐಪಿಎಲ್ ಟೂರ್ನಿಯ ಇನ್ನುಳಿದ ಪಂದ್ಯಗಳನ್ನು ಆಡಲು ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡಕ್ಕೆ ಇಂಗ್ಲೆಂಡ್ ಆಲ್‌ರೌಂಡರ್ ಲಿಯಾಮ್ ಲಿವಿಂಗ್‌ಸ್ಟೋನ್ ಹಾಗೂ ವೀಂಡೀಸ್ ದೈತ್ಯ ಆಲ್‌ರೌಂಡರ್ ರೊಮ್ಯಾರಿಯೊ ಶೆಫರ್ಡ್ ಸೇರ್ಪಡೆಯಾಗಿದ್ದಾರೆ. ಆ ಮೂಲಕ ಮೇ 17ರಂದು ಚಿನ್ನಸ್ವಾಮಿ ಸ್ಟೇಡಿಯಂನಲ್ಲಿ ಕೋಲ್ಕತ್ತಾ ನೈಟ್‌ರೈಡರ್ಸ್ ತಂಡದ ಎದುರಿನ ಪಂದ್ಯಕ್ಕೂ ಮುನ್ನ ಆರ್‌ಸಿಬಿ ಆನೆಬಲ ಸಿಕ್ಕಂತಾಗಿದೆ. ಅದೇ ರೀತಿ ಕೋಲ್ಕತಾ ನೈಟ್ ರೈಡರ್ಸ್ ತಂಡಕ್ಕೆ ವಿಂಡೀಸ್ ಸ್ಟಾರ್‌ಗಳಾದ ಆ್ಯಂಡ್ರೆ ರಸೆಲ್ ಹಾಗೂ ಸುನೀಲ್ ನರೇನ್ ಕೂಡ ಮರಳಿದ್ದಾರೆ. ಕೆಕೆಆರ್ ಮೆಂಟರ್ ಡ್ವೇನ್ ಬ್ರಾವೊ ಕೂಡ ತಂಡದಲ್ಲಿ ಕಾಣಿಸಿಕೊಂಡಿದ್ದಾರೆ.

ಆರ್‌ಸಿಬಿ ಪಾಲಿಗೆ ನಿರಾಸೆಯ ವಿಷಯ ಏನೆಂದರೆ ಟೂರ್ನಿಯ ಸಂಪೂರ್ಣ ಪಂದ್ಯಗಳಿಗೆ ಈ ಆಟಗಾರರು ಲಭ್ಯರಾಗುವುದು ಅನುಮಾನ. ಮೇ 29ರಂದು ಇಂಗ್ಲೆಂಡ್ ಹಾಗೂ ವೆಸ್ಟ್ ಇಂಡೀಸ್ ನಡುವೆ ಏಕದಿನ ಸರಣಿ ಆರಂಭವಾಗಲಿದ್ದು, ವೆಸ್ಟ್ ಇಂಡೀಸ್ ಏಕದಿನ ತಂಡದಲ್ಲಿ ಶೆಫರ್ಡ್‌ಗೆ ಸ್ಥಾನ ಸಿಗುವ ಸಾಧ್ಯತೆ ಇದೆ. ಆಗ ಅವರು ಪ್ಲೇಆಫ್ಸ್‌ಗೆ ಅಲಭ್ಯರಾಗಲಿದ್ದು, ಆ ಮೂಲಕ ಆರ್‌ಸಿಬಿಗೆ ಭಾರಿ ಹಿನ್ನಡೆಯಾಗಲಿದೆ.

ಇಂಗ್ಲೆಂಡ್ ಆರಂಭಿಕ ಫಿಲ್ ಸಾಲ್ಟ್ ಹಾಗೂ ಆಸ್ಟ್ರೇಲಿಯಾ ಆಲ್‌ರೌಂಡರ್ ಟಿಮ್ ಡೇವಿಸ್ ಕೊನೆಯವರೆಗೂ ಆರ್‌ಸಿಬಿಗೆ ಲಭ್ಯರಾಗಲಿದ್ದಾರೆ. ಫಿಲ್ ಸಾಲ್ಟ್ ಇಂಗ್ಲೆಂಡ್ ಟಿ20 ತಂಡದಲ್ಲಿ ಸ್ಥಾನವನ್ನು ಪಡೆದಿದ್ದರೂ, ಅದು ಜೂನ್ 6ರಂದು ಆರಂಭವಾಗುವ ಹೊತ್ತಿಗೆ ಐಪಿಎಲ್ ಫೈನಲ್ ಪಂದ್ಯವೇ ಮುಗಿದಿರುತ್ತದೆ.

ಜೂನ್ 11ರಂದು ವಿಶ್ವ ಟೆಸ್ಟ್ ಚಾಂಪಿಯನ್‌ಶಿಪ್ ಫೈನಲ್ ಆರಂಭವಾಗಲಿದ್ದು, ಆಸ್ಟ್ರೇಲಿಯಾದ ಜೋಸ್ ಹೇಝಲ್‌ವುಡ್ ಹಾಗೂ ದಕ್ಷಿಣ ಆಫ್ರಿಕಾದ ಲುಂಗಿ ಎನ್‌ಗಿಡಿ ಅವರು ರಾಷ್ಟ್ರೀಯ ತಂಡಗಳಿಗೆ ಸೇರ್ಪಡೆಯಾಗಲಿರುವ ಹಿನ್ನೆಲೆಯಲ್ಲಿ ಅವರಿಬ್ಬರೂ ನಾಕೌಟ್ ಪಂದ್ಯಗಳಿಗೆ ಲಭ್ಯರಾಗುವುದು ಅನುಮಾನ. ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡ ಪ್ಲೇಆಫ್ಸ್‌ಗೆ ಬಹುತೇಕ ಅರ್ಹತೆ ಪಡೆದಿದ್ದು, ಶನಿವಾರದಂದು ಕೋಲ್ಕತಾ ನೈಟ್ ರೈಡರ್ಸ್ ಎದುರು ಗೆದ್ದರೆ ಆರ್‌ಸಿಬಿ ಅಧಿಕೃತವಾಗಿ ಮುಂದಿನ ಹಂತಕ್ಕೆ ಅರ್ಹತೆ ಪಡೆಯಲಿದೆ.

ಟಕಿಲಾ ಕಿಕ್ಕೇರಿಸಿದ ನಿಖಿತಾ

ಟಕಿಲಾ ಶೀರ್ಷಿಕೆಯಲ್ಲಿಯೇ ನಶೆ ಏರಿಸಿದೆ. ಚಿತ್ರದಲ್ಲಿಯೂ ಡ್ರಗ್ಸ್‌ನಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಹೇಳಲಾಗಿದೆ. ಹಾಗಂತ ಇದು, ಮಾದಕ ವ್ಯಸನಗಳ ಬಗ್ಗೆಯೇ ಸಾಗುವ ಕಥೆಯಲ್ಲ. ಬದಲಾಗಿ ಎಲ್ಲರೂ ತಿಳಿಯಬೇಕಾದ ಸಾಮಾಜಿಕ ಸಂದೇಶವೂ ಇಲ್ಲಿ ಅಡಕವಾಗಿದೆ. ಚಿತ್ರದಲ್ಲಿ ನಿಖಿತಾ ನಾಯಕಿಯಾಗಿ ನಟಿಸಿದ್ದು ತಮ್ಮ ಪಾತ್ರ ಹಾಗೂ ಚಿತ್ರದ ಕುರಿತಂತೆ ವಿ. ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

ವಿ.ಸಿ: ಟಕಿಲಾ ಟೈಟಲ್‌ನಲ್ಲಿಯೇ ಕಿಕ್ಕೇರಿಸುತ್ತಿದ್ದೆಯಲ್ಲ?

ನಿಖಿತಾ: ಟಕಿಲಾ ಟೈಟಲ್ ಕೇಳದಾಕ್ಷಣ ಇದು ಮದ್ಯ ವ್ಯಸನದ ಕಥೆ ಅನ್ನಿಸುತ್ತದೆ. ಅಂತೆಯೇ ಇಲ್ಲಿ ಮದ್ಯ ವ್ಯಸನದ ಜತೆಗೆ ಮಾದಕ ವ್ಯಸನಕ್ಕೆ ತುತ್ತಾದ ವ್ಯಕ್ತಿಯ ಕಥೆಯೂ ಇದೆ. ಅದಕ್ಕಿಂತ ಹೆಚ್ಚಾಗಿ ಕೌಟುಂಬಿಕ ಕಥನವೂ ಅಡಕವಾಗಿದೆ. ಅದು ಏನು ಎಂಬುದನ್ನು ಸಿನಿಮಾ ನೋಡಿಯೇ ತಿಳಿಯಬೇಕು.

> **ಈ ಚಿತ್ರದಲ್ಲಿ ಪಾತ್ರಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡಲಾಗಿದೆ, ಹಾಗಾಗಿಯೇ ಸಿನಿಮಾದಲ್ಲಿ ನಟಿಸಲು ಒಪ್ಪಿದೆ. ನಾಯಕಿಯ ಕುರಿತಾ ಗಿಯೇ ಟೈಟಲ್ ಸಾಂಗ್ ಸಾಗಲಿದೆ. ಇದು ಈ ಚಿತ್ರದ ವಿಶೇಷ.**

ವಿ.ಸಿ : ನಿಮ್ಮ ಪಾತ್ರದ ಬಗ್ಗೆ ಹೇಳುವುದಾದರೆ ?

ನಿಖಿತಾ: ನಾನು ಈ ಚಿತ್ರದಲ್ಲಿ ಅಪ್ಸರಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಹೋಮ್‌ಲಿ ಗರ್ಲ್ ಆಗಿ ಗಂಡನಿಗೆ ತಕ್ಕ ಮಡದಿಯಾಗಿ ಕಾಣಿಸಿಕೊಂಡಿದ್ದೇನೆ. ದುಡಿಮೆ ಅನ್ನತ್ತಾ ಮಡದಿಯ ಬಗ್ಗೆ ಕಾಳಜಿ ವಹಿಸದಿದ್ದಾಗ ಆಕೆಯ ಮನೋಭಾವ ಹೇಗಿರುತ್ತದೆ. ಆ ಬಳಿಕ ಆಕೆ ಹೇಗೆ ಅಡಿಕ್ಷನ್‌ಗೆ ಒಳಗಾಗುತ್ತಾಳೆ ಎಂಬುದನ್ನು ಕಣ್ಣಿಗೆ ಕಟ್ಟುವಂತೆ ಚಿತ್ರದಲ್ಲಿ ಹೇಳಲಾಗಿದೆ.

ವಿ.ಸಿ :ಇದು ನೈಜ ಕಥೆಯೆ ?

ನಿಖಿತಾ: ಇದು ನೈಜ ಕಥೆ ಅನ್ನುವುದಕ್ಕಿಂತ ಇಂದಿನ ದಿನಗಳಲ್ಲಿ ನಡೆಯುತ್ತಿರುವ ಸ್ಟೋರಿ ಎನ್ನ ಬಹುದು. ಇಂದು ಹಣದ ಹಿಂದೆ ಬಿದ್ದವರು ಹೇಗೆ ತಮ್ಮ ಸಂಸಾರದ ಸುಖವನ್ನು ಮರೆತಿದ್ದಾರೆ ಎಂಬ ಸಾರ ಇಲ್ಲಿದೆ. ಹಣಕ್ಕಿಂತ ಕುಟುಂಬದ ಸೌಖ್ಯ ಮುಖ್ಯ ಎಂಬುದೇ ಚಿತ್ರದ ಕಥೆಯ ತಿರುಳು. ಅದನ್ನು ಎಲ್ಲರಿಗೂ ಕನೆಕ್ಟ್ ಆಗುವಂತೆ ನಿರ್ದೇಶಕರು ತೆರೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

> **ಚಿತ್ರದಲ್ಲಿ ನನ್ನ ಪಾತ್ರ ಮೂರು ಶೇಡ್‌ನಲ್ಲಿ ಸಾಗುತ್ತದೆ. ಒಂದು ಹೋಮ್‌ಲಿ ಗರ್ಲ್ ಆಗಿ, ಅಡಿಕ್ಷನ್‌ಗೆ ಒಳಗಾದ ಹುಡುಗಿಯಾಗಿ ಮತ್ತೊಂದು ಮಾನಸಿಕ ವ್ಯಸನಕ್ಕೆ ಸೀಮಿತವಾದ ಯುವತಿಯಾಗಿ ಕಾಣಿಸಿ ಕೊಂಡಿದ್ದೇನೆ.**

ವಿ.ಸಿ: ಇದು ಯುವ ಸಮೂಹಕ್ಕೆ ಸೀಮಿತವಾದ ಕಥೆಯೆ?

ನಿಖಿತಾ: ಯುವ ಸಮುದಾಯಕ್ಕೆ ಸೀಮಿತವಾದ ಕಥೆಯಲ್ಲ, ಬದಲಾಗಿ ಇದು ಕುಟುಂಬ ಕುಟುಂಬ ಸಮೇತ ನೋಡಬೇಕಾದ ಸಿನಿಮಾವಾಗಿದೆ. ಸಂಸಾರದಲ್ಲಿ ಪತಿ ಪತ್ನಿಯ ಸಂಬಂಧ ಹೇಗಿರಬೇಕು ಎಂಬುದನ್ನು ಇಲ್ಲಿ ಹೇಳಲಾಗಿದೆ.

ಬೆಳ್ಳಿತೆರೆಯಲ್ಲಿ ದಿ ಸದ್ದು

ಹೀಗೊಂದು ವಿಭಿನ್ನ ಶೀರ್ಷಿಕೆಯ ಸಿನಿಮಾ ಬೆಳ್ಳಿತೆರೆಯಲ್ಲಿ ಸದ್ದು ಮಾಡುತ್ತಿದೆ. ಟ್ರೇಲರ್‌ನಲ್ಲಿ ಸಿನಿಪ್ರಿಯರ ಮನಗೆದ್ದಿದೆ. ದಿ ಅಂದಾಕ್ಷಣ ಇದು ಬಾಲಿವುಡ್ ಸಿನಿಮಾವೇ ಎಂದು ಕೆಲವರು ಅಂದುಕೊಂಡಿದ್ದರು. ದಿ ಅಪ್ಪಟ ಕನ್ನಡ ಸಿನಿಮಾ. ಅಷ್ಟಕ್ಕೂ ದಿ ಶೀರ್ಷಿಕೆ ಇಡಲು ಕಾರಣ ಏನು, ಚಿತ್ರದ ಕಥೆ ಏನು ಎಂಬುದರ ಬಗ್ಗೆ ನಿರ್ದೇಶಕ ವಿನಯ್ ವಾಸುದೇವ್ ವಿ.ಸಿನಿಮಾಸ್‌ನೊಂದಿಗೆ ಮಾತನಾಡಿದ್ದಾರೆ.

> **ಇದು ಇಂದಿನ ಜನರೇಷನ್‌ಗೆ ಹೇಳಿ ಮಾಡಿಸಿದ ಕಥೆಯಾಗಿದೆ, ದಿ ಲವ್ ಸ್ಟೋರಿಗೆ ಸೀಮಿತವಾಗಿಲ್ಲ. ಎಲ್ಲರೂ ಕುಳಿತು ನೋಡಬಹುದಾದ ಕೌಟುಂಬಿಕ ಕಥೆಯೂ ಇಲ್ಲಿ ಮಿಳಿತವಾಗಿದೆ.**

ಶೀರ್ಷಿಕೆಯೇ ಹೈಲೈಟ್

ನಾಯಕನ ಹೆಸರು ದೀಪಕ್, ಅಂತೆಯೇ ನಾಯಕಿಯ ಹೆಸರು ದಿವ್ಯಾ. ಅದಕ್ಕಾಗಿಯೇ ದಿ ಎನ್ನುವ ಶೀರ್ಷಿಕೆ ಇಡಲಾಗಿದೆಯಂತೆ. ದಿ ಅಂದಾಕ್ಷಣ ಇದು ಪರಭಾಷಾ ಸಿನಿಮಾವಲ್ಲ ಇದು ಅಪ್ಪಟ ಕನ್ನಡ ಸಿನಿಮಾ. ದಿ ಶೀರ್ಷಿಕೆ ಆಯ್ದುಕೊಳ್ಳಲು ಇನ್ನೂ ಒಂದು ಕಾರಣವಿದೆ. ನಾನು ಸುದೀಪ್ ಅವರ ಅಭಿಮಾನಿ ಹಾಗಾಗಿ ಅವರ ಹೆಸರಿನ ದಿ ಅಕ್ಷರವನ್ನು ಆಯ್ದು ಈ ಶೀರ್ಷಿಕೆಯನ್ನೇ ಇಟ್ಟಿದ್ದೇವೆ ಎನ್ನುತ್ತಾರೆ ನಿರ್ದೇಶಕರು.

ಡಾಲರ್ ಹಿಂದಿನ ಕಥೆ

ದಿ ಒಂದು ಡಾಲರ್ ಸುತ್ತ ಸಾಗುವ ಕಥೆಯನ್ನು ಒಳಗೊಂಡಿದೆ. ನಾಯಕ ನಾಯಕಿ ಒಂದೇ ರಿತಿಯ ಪೆಂಡೆಂಟ್ ಧರಿಸಿರುತ್ತಾರೆ. ಅದರ ಸುತ್ತಲೇ ಈ ಕಥೆ ಸಾಗುತ್ತದೆ. ಒಮ್ಮೆ ಈ ಡಾಲರ್ ಕಳೆದು ಹೋಗುತ್ತದೆ, ಅದನ್ನು ಹುಡುಕಲು ಹಲವರು ಪ್ರಯತ್ನಿಸುತ್ತಾರೆ, ಅಷ್ಟಕ್ಕೂ ಆ ಡಾಲರ್‌ನಲ್ಲಿ ಅಂತಹದ್ದೇನಿದೆ ಎಂಬುದೇ ಸಸ್ಪೆನ್ಸ್. ನಾಯಕ ಹಾಗೂ ನಾಯಕಿ ಅರಣ್ಯ ಪ್ರದೇಶಕ್ಕೆ ಪ್ರವೇಶಿಸಿದಾಗ ಹಲವು ಪಾತ್ರಗಳು ರಿವಿಲ್ ಆಗುತ್ತವೆ. ಅಷ್ಟಕ್ಕೂ ಅಲ್ಲಿಗೆ ನಾಯಕ ಹೋಗಿದ್ದು ಯಾಕೆ ಅಲ್ಲಿ ಇಬ್ಬರು ಯಾವ ಸಮಸ್ಯೆಗಳನ್ನು ಎದಿಸಿರುತ್ತಾರೆ ಎಂಬುದೇ ಚಿತ್ರದ ಕಥೆಯಂತೆ.

> **ನಿರ್ದೇಶನ ಮತ್ತು ನಟನೆ ನಿಜವಾಗಿಯೂ ಚಾಲೆಂಜಿಂಗ್ ಆಗಿತ್ತು. ಚಿತ್ರತಂಡದ ಸಹಕಾರದಿಂದ ಸವಾಲನ್ನು ಸುಲಭವಾಗಿ ನಿಭಾಯಿಸಿದೆ. ಅಂದುಕೊಂಡಂತೆ ಎಲ್ಲರಿಗೂ ಮೆಚ್ಚುಗೆಯಾಗುವಂತೆ ಸಿನಿಮಾ ಮೂಡಿ ಬಂದಿದೆ.**

ತೇಜಸ್ವಿ ಅವರೇ ಸ್ಫೂರ್ತಿ

ಈ ಕಥೆಯನ್ನು ಹೆಣೆಯಲು ಮೇರು ಸಾಹಿತಿ ಪೂರ್ಣಚಂದ್ರ ತೇಜಸ್ವಿ ಅವರೇ ಸ್ಫೂರ್ತಿ, ಕಾಡು ಮತ್ತು ಮನುಷ್ಯನ ಸಂಬಂಧದ ಕುರಿತ ಅವರ ಬರಹಗಳು ಮನಸೆಳೆಯುತ್ತವೆ, ಅಂತೆಯೇ ಮನುಷ್ಯ ಮತ್ತು ಕಾಡಿನ ಸಂಬಂಧ ಏನು ಎಂಬುದನ್ನು ಚಿತ್ರದಲ್ಲಿ ಹೇಳಲಾಗಿದೆ. ಚಿತ್ರದಲ್ಲಿ ನಾನು ಅನಿಮಲ್ ಸೈಕ್ಯಾಟ್ರಿಸ್ಟ್ ಆಗಿ ನಟಿಸಿದ್ದೇನೆ. ಕಾಡಿಗೆ ಹೋದಾಗ ಅಲ್ಲಿ ಕಾಡುವ ಸಮಸ್ಯೆಗಳು ಏನು ಎಂಬುದನ್ನು ಹೇಳಲಾಗಿದೆ. ಚಿತ್ರದಲ್ಲಿ ಗ್ರಾಫಿಕ್ಸ್‌ಗೂ ಒತ್ತು ನೀಡಲಾಗಿದ್ದು ಯುಎಸ್ ಹಾಗೂ ಉಜ್ಬೇಕಿಸ್ತಾನದಲ್ಲಿ ಗ್ರಾಫಿಕ್ಸ್ ಮಾಡಿಸಲಾಗಿದೆ.

ಉ.ಕ.ದ ಕರಾವಳಿ, ಮಾಕ್ ಡ್ರಿಲ್‌ನ ಪ್ರಭಾವಳಿ

ಜಿಲ್ಲಾ ನೋಟ

ವಿನುತಾ ಹೆಗಡೆ, ಶಿರಸಿ

ಸಾರ್ವಜನಿಕರಲ್ಲಿ ಗಲಿಬಿಲಿ, ಆತಂಕ. ಮಿಸೈಲ್ ದಾಳಿ, ಬಾಂಬ್ ಸ್ಫೋಟ, ಹೊತ್ತಿ ಉರಿದ ಕಟ್ಟಡ, ಅಣು ವಿಕಿರಣದಿಂದ ರಕ್ಷಣೆ ಹೀಗೆ ತುರ್ತು ಸಂದರ್ಭದಲ್ಲಿ ಜನತೆಯ ರಕ್ಷಣಾ ಕಾರ್ಯಾಚರಣೆಯ ಮಾಕ್ ಡ್ರಿಲ್ ಯಶಸ್ವಿಯಾಗಿ ನಡೆಯಿತು. ಉತ್ತರ ಕನ್ನಡ ಜಿಲ್ಲೆಯ ಕೈಗಾ ಅಣು ವಿದ್ಯುತ್ ಸ್ಥಾವರಕ್ಕೆ ಏನಾದರೂ ಸಮಸ್ಯೆಯಾದರೆ ಅದರಿಂದ ರಕ್ಷಣೆ ಹೇಗೆ ಎಂದೂ ಅಣಕು ಪ್ರದರ್ಶನದ ಮೂಲಕ ತೋರಿಸಲಾಯಿತು.

ಮಾದರಿ ಆಪರೇಷನ್

ಉತ್ತರ ಕನ್ನಡ ಜಿಲ್ಲಾಡಳಿತ ಯುದ್ಧದ ಪರಿಸ್ಥಿತಿ ಎದುರಿಸಲು ಸಜ್ಜಾಗುವ ಬಗ್ಗೆ ಜಾಗೃತಿ ಮೂಡಿಸಿದ್ದು ಹೀಗೆ.. ಯುದ್ಧದಂಥ ತುರ್ತು ಸಂದರ್ಭ ಸಾರ್ವಜನಿಕರನ್ನು ರಕ್ಷಿಸುವ ಕುರಿತು ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದಡಿ ಕಾರವಾರದಲ್ಲಿ 'ಆಪರೇಷನ್ ಅಭ್ಯಾಸ್' ನಾಗರೀಕ ರಕ್ಷಣಾ ಮಾದರಿಯ ಅಣಕು ಕಾರ್ಯಾಚರಣೆ ನಡೆಸಲಾಯಿತು.

ಅಣಕು ಕಾರ್ಯಾಚರಣೆ

ಬಿಣಗಾದ ಗ್ರಾಸಿಂ ಇಂಡಸ್ಟ್ರೀಸ್‌ನಲ್ಲಿ ಕಟ್ಟಡ ಕುಸಿದು ಬಿದ್ದಾಗ ಸ್ಥಳದಲ್ಲಿದ್ದ ಜನರನ್ನು ರಕ್ಷಣೆ ಮಾಡುವ ಬಗ್ಗೆ ಕೈಗಾ ಅಣು ವಿದ್ಯುತ್ ಕೇಂದ್ರದ ಒಳಗೆ ಬೆಂಕಿ ಅವಘಡದಿಂದ ರಕ್ಷಣೆ ಮಾಡುವುದು ಹೇಗೆ, ಅಮದಳ್ಳಿಯ ನೇವಲ್ ಬೇಸ್ ಬಳಿ ಸಿವಿಲಿಯನ್ ಕಾಲೋನಿಯಲ್ಲಿ ಅಗ್ನಿ ಅವಘಡದಿಂದ ರಕ್ಷಣಾ ಕಾರ್ಯ ಹೇಗೆ?, ಕಾರವಾರದ ರವೀಂದ್ರನಾಥ ಠಾಗೋರ ಬೀಚ್‌ನಲ್ಲಿ ಬಾಂಬ್ ದಾಳಿಯಿಂದ ಸಾರ್ವಜನಿಕರನ್ನು ರಕ್ಷಣೆ ಮಾಡುವುದು ಹೇಗೆ?, ಅಣು ವಿಕಿರಣದಿಂದ ಸಾರ್ವಜನಿಕರ ರಕ್ಷಣೆ ಕುರಿತಂತೆ ಹರ್ಟುಗಾ ಗ್ರಾಮದಿಂದ ಸಾರ್ವಜನಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರ, ರೈಲ್ವೆ ನಿಲ್ದಾಣದಲ್ಲಿ ಬಾಂಬ್ ದಾಳಿಯಿಂದ ಜನರನ್ನು ರಕ್ಷಣೆ ಮಾಡುವುದು ಹೇಗೆ ಎಂಬ ಬಗ್ಗೆ ಅಣಕು ಕಾರ್ಯಾಚರಣೆಗಳನ್ನು ಅತ್ಯಂತ ಯಶಸ್ವಿಯಾಗಿ ಕೈಗೊಳ್ಳಲಾಯಿತು.

ವಿವಿಧ ಪಡೆಗಳು ಭಾಗಿ:

ಕಾರ್ಯಾಚರಣೆಯಲ್ಲಿ ನೌಕಾಪಡೆ, ಕೋಸ್ಟ್ ಗಾರ್ಡ್, ಕೇಂದ್ರಿಯ ಕೈಗಾರಿಕಾ ಭದ್ರತಾ ಪಡೆ, ಎನ್.ಡಿ.ಆರ್.ಎಫ್, ಪೊಲೀಸ್, ಕರಾವಳಿ ಪೊಲೀಸ್, ರೈಲ್ವೆ ರಕ್ಷಣಾ ಪಡೆ, ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆ, ಗೃಹ ರಕ್ಷಕ ದಳ, ಎನ್.ಎಸ್.ಎಸ್., ಎನ್.ಸಿ.ಸಿ., ಸ್ವಯಂ ಸೇವಾ ಸಂಘಟನೆಗಳ ಸದಸ್ಯರು ಸಕ್ರಿಯವಾಗಿ ಭಾಗವಹಿಸಿದ್ದರು.

ಸಂಜೆಯ ಬ್ಲ್ಯಾಕ್ ಔಟ್:

ಸಂಜೆ 7.30 ರಿಂದ 8 ಗಂಟೆಯ ಅವಧಿಯಲ್ಲಿ ಬ್ಲ್ಯಾಕ್ ಔಟ್ ಕಾರ್ಯಾಚರಣೆ ನಡೆಸಲಾಗಿದ್ದು, ಈ ಅವಧಿಯಲ್ಲಿ ಸೈರನ್ ಮೊಳಗಿದ ತಕ್ಷಣ ಕಾರವಾರ ನಗರಪ್ರದೇಶದಲ್ಲಿ ಸಾರ್ವಜನಿಕರು ತಮ್ಮ ಮನೆಗಳ ಕಿಟಕಿ, ಬಾಗಿಲು ಮುಚ್ಚಿ, ವಿದ್ಯುತ್ ದೀಪಗಳನ್ನು ಬಂದ್ ಮಾಡಿ ಕತ್ತಲು ಮಾಡಿದರು. ವಾಹನ ಸವಾರರು ಕೂಡ ವಾಹನಗಳನ್ನು ನಿಲ್ಲಿಸಿ ಹೆಡ್‌ಲೈಟ್ ಆರಿಸಿ ರಸ್ತೆಯ ಪಕ್ಕ ಸುರಕ್ಷಿತವಾಗಿ ನಿಂತು ಬ್ಲ್ಯಾಕ್ ಔಟ್ ಕಾರ್ಯಾಚರಣೆಗೆ ಸಹಕಾರ ನೀಡಿದರು. ಕೈಗಾ ಟೌನ್‌ಶಿಪ್‌ನಲ್ಲಿ ಕೂಡಾ ಬ್ಲ್ಯಾಕ್ ಔಟ್ ನಡೆಯಿತು. ಈ ಕಾರ್ಯಾಚರಣೆಗಾಗಿ ಒಟ್ಟು 13 ಸೈರನ್‌ಗಳನ್ನು ಅಳವಡಿಸಲಾಗಿತ್ತು.

ಹೇಗಿತ್ತು ಆಪರೇಷನ್ ?

ಬಿಣಗಾದ ಗ್ರಾಸಿಂ ಇಂಡಸ್ಟ್ರೀಸ್‌ನಲ್ಲಿ ಕಟ್ಟಡ ಕುಸಿದಿದೆ ಎಂದು ಡಿಸಿ ಕಂಟ್ರೋಲ್ ರೂಮ್‌ಗೆ ಸಂಜೆ 4 ಗಂಟೆಗೆ ಕರೆ ಮೂಲಕ ಮಾಹಿತಿ ತಿಳಿಯುತ್ತದೆ. ತಕ್ಷಣ ಅಲ್ಲಿಗೆ ರಕ್ಷಣಾ ತಂಡವನ್ನು ಅಂಬ್ಯುಲೆನ್ಸ್ ವ್ಯವಸ್ಥೆ ಮಾಡಿ ಕಳುಹಿಸಿ ಸಾರ್ವಜನಿಕರನ್ನು ಸುರಕ್ಷಿತ ಸ್ಥಳಕ್ಕೆ ಕರೆ ತರಲಾಯಿತು. ಗಾಯಗೊಂಡವರಿಗೆ ಆಸ್ಪತ್ರೆಗೆ ಸೇರಿಸಿ ಪ್ರಥಮ ಚಿಕಿತ್ಸೆ ನೀಡಲಾಯಿತು. ಈ ಅಣಕು ಆಪರೇಷನ್ 38 ನಿಮಿಷದಲ್ಲಿ ಮುಗಿಯಿತು. ಅಣು ವಿಕಿರಣ ಸಂದರ್ಭ ಹರ್ಟುಗಾ ಗ್ರಾಮದಿಂದ ಜನರನ್ನು ಸಿದ್ದರದ ಬಿ.ಸಿ.ಎಂ ಹಾಸ್ಟೆಲ್ ಸ್ಥಳಾಂತರಿಸುವ ಕುರಿತು ಅಣಕು ರಕ್ಷಣೆ ನಡೆಯಿತು.

- ಯುದ್ಧ ಕಾರಣ ಕರಾವಳಿ ಉತ್ಸವ ಮುಂದಕ್ಕೆ
- ಜಾಲತಾಣದಲ್ಲಿ ಯುದ್ಧ ಸುದ್ದಿ ವೈರಲ್
- ಹನಿಮೂನ್ ಬಿಟ್ಟು ಕರ್ತವ್ಯಕ್ಕೆ ಯೋಧ
- ರಜೆಗೆ ಬಂದ ಯೋಧರೆಲ್ಲ ಮರಳಿ ಯುದ್ಧಕ್ಕೆ

ಹಾಟ್ ಲೈನ್ ಸಂಪರ್ಕ

ಈ ಅಣಕು ಕಾರ್ಯಾಚರಣೆ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಕಚೇರಿಯ ಕಂಟ್ರೋಲ್ ರೂಂ, ಪೊಲೀಸ್ ಕಂಟ್ರೋಲ್ ರೂಂ ನ್ನು ಅತ್ಯಂತ ಪರಿಣಾಮಕಾರಿಯಗಿ ವ್ಯವಸ್ಥಿತಗೊಳಿಸಿದ್ದು ಮಾತ್ರವಲ್ಲದೇ ಒಂದು ಶಾಡೋ ಕಂಟ್ರೋಲ್ ರೂಂ ಕೂಡಾ ತೆರೆಯಲಾಗಿತ್ತು. ಹಾಟ್ ಲೈನ್ ಸಂಪರ್ಕಗಳನ್ನೂ ಕೂಡಾ ಪಡೆಯಲಾಗಿತ್ತು.

ಮೀನುಗಾರರಿಗೆ ಸೂಚನೆ

ಕಡಲಿನಲ್ಲಿ ಯಾವುದೇ ಶಂಕಾಸ್ಪದ ಘಟನೆಗಳು ಕಂಡು ಬಂದರೂ ಅವುಗಳ ಬಗ್ಗೆ ಕೋಸ್ಟ್ ಗಾರ್ಡ್, ಕರಾವಳಿ ಕಾವಲು ಪಡೆ, ಮೀನುಗಾರಿಕಾ ಇಲಾಖೆಗೆ ತಕ್ಷಣ ಮಾಹಿತಿ ನೀಡುವಂತೆ ಮೀನುಗಾರಿಕೆ ಇಲಾಖೆಯ ಜಂಟಿ ನಿರ್ದೇಶಕ ಬಬೀನ್ ಬೋಪಣ್ಣ ಮೀನುಗಾರರಿಗೆ ತಿಳಿಸಿದರು.

ಈಗಾಗಲೇ ಕೋಸ್ಟ್ ಗಾರ್ಡ್, ಕರಾವಳಿ ಕಾವಲು ಪಡೆ ಸಮುದ್ರದಲ್ಲಿ ಗಸ್ತು ತಿರುಗುತ್ತಿದೆ. ನಮ್ಮ ವ್ಯಾಪ್ತಿಯಲ್ಲಿ ನಡೆಯುವ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ದೇಶದ ಭದ್ರತೆಗೆ ಸಹಾಯ ಮಾಡಬೇಕು. ಶತ್ರುಗಳು ಯಾವ ಸ್ವರೂಪದಲ್ಲಿ ಬರಬಹುದು. ಮೀನುಗಾರರು ದೇಶದ ರಕ್ಷಣೆಗೆ ಹೇಗೆ ಸೇವೆ ಸಲ್ಲಿಸಬಹುದು ಎಂಬ ಬಗ್ಗೆ ಅಣಕು ಸಭೆಯಲ್ಲಿ ಮಾಹಿತಿ ನೀಡಿದರು.

> **ಕೈಗಾ ಅಣು ವಿದ್ಯುತ್ ಕೇಂದ್ರಕ್ಕೆ ಬೆಂಕಿ ಬಿದ್ದ ಬಗ್ಗೆ ಕಂಟ್ರೋಲ್ ರೂಮ್‌ಗೆ ಸಂಜೆ 4.15 ಗಂಟೆಗೆ ಕರೆ ಮೂಲಕ ತಿಳಿಯಿತು. ತಕ್ಷಣ ಅಗ್ನಿ ಶಾಮಕ ದಳದ ಜತೆ ಪೊಲೀಸ್, ಕಂದಾಯ ಇಲಾಖೆ ಹಾಗೂ ವೈದ್ಯರನ್ನು ಸ್ಥಳಕ್ಕೆ ಕಳುಹಿಸಲಾಯಿತು. ಸಾರ್ವಜನಿಕರನ್ನು ರಕ್ಷಣೆ ಮಾಡಿ ಸುರಕ್ಷಿತ ಸ್ಥಳಕ್ಕೆ ಕಳುಹಿಸಲಾಯಿತು. ಈ ಅಣಕು ಕಾರ್ಯಾಚರಣೆಗೆ 40 ನಿಮಿಷ ಕಾಲಾವಕಾಶವನ್ನು ತೆಗೆದುಕೊಳ್ಳಲಾಯಿತು.**
>
> -ಲಕ್ಷ್ಮೀಪ್ರಿಯಾ, ಜಿಲ್ಲಾಧಿಕಾರಿ.

ಜಲಾಶಯಗಳಿಗೆ ಭದ್ರತೆ

ಭಾರತ -ಪಾಕ್ ದಾಳಿ ಹಿನ್ನೆಲೆಯಲ್ಲಿ ಉತ್ತರ ಕನ್ನಡ ಜಿಲ್ಲೆಯ ಪ್ರಮುಖ ಜಲಾಶಯಗಳಾದ ಸುಪಾ,

ಕದ್ರಾ, ಕೊಡಸಳ್ಳಿ, ಗೇರಸೊಪ್ಪ, ತಟ್ಟಿಹಳ್ಳಗಳಿಗೆ ಡಿಎಆರ್ ಪೊಲೀಸ್ ಭದ್ರತೆ ಒದಗಿಸಲಾಗಿದೆ. ಆಣೆಕಟ್ಟೆಗಳು ದಾಳಿಗೆ ತುತ್ತಾದಲ್ಲಿ ಪ್ರವಾಹ ಪರಿಸ್ಥಿತಿ ಬಂದರೆ ಪಾರಾಗುವ ಬಗೆ ಹೇಗೆ ಎಂಬ ಬಗ್ಗೆ ಕದ್ರಾ ಜಲಾಶಯದ ಕೆಳಭಾಗದಲ್ಲಿ ಮಾಕ್ ಡ್ರಿಲ್ ನಡೆಯಿತು.

ಪಾಕಿಸ್ತಾನದ ಹಡಗುಗಳಿಗೆ ನಿಷೇಧ

ಪಹಲ್ಗಾಮ್ ದಾಳಿಯ ತರುವಾಯ ಪಾಕಿಸ್ತಾನದ ಹಡಗುಗಳಿಗೆ ಭಾರತದ ಯಾವುದೇ ಬಂದರುಗಳಿಗೆ ಪ್ರವೇಶ ನಿರ್ಬಂಧಿಸಲಾಗಿದೆ. ಅಷ್ಟು ಕಟ್ಟುನಿಟ್ಟಿನ ಕ್ರಮ ಬಂದರು ಇಲಾಖೆ ಅನುಸರಿಸುತ್ತಿದೆ. ಬಂದರಿಗೆ ಬರುವ ಹಡಗುಗಳ ಮೇಲೆ ನಿಗಾ ಇಡುವಂತೆ ಅಧಿಕಾರಿ, ಸಿಬ್ಬಂದಿಗೆ ಸೂಚನೆ ನೀಡಲಾಗಿದೆ.

ಅದೊಂದು ಊರು ಕ್ರೀಡಾ ಪ್ರತಿಭೆಗಳ ತವರು ಖೋಖೋ ವಿಶ್ವಕಪ್‌ಗೆ ಆಡಿದ ಹೆಗ್ಗಳಿಕೆ ತೇರು

ಜಿಲ್ಲಾ ನೋಟ

ವೀರೇಶ್ ಕೆಂಭಾವಿ, ಯಾದಗಿರಿ

ಜಿಲ್ಲೆಯ ಸುರಪುರ ತಾಲೂಕಿನ ದೇವರಗೋನಾಲ ಗ್ರಾಮ ಖೋಖೋ ಪಟುಗಳನ್ನು ರಾಷ್ಟ್ರ, ರಾಜ್ಯಕ್ಕೆ ನೀಡುವ ಮೂಲಕ ಖೋಖೋ ಪಟುಗಳು ತವರು ಎನ್ನಿಸಿಕೊಳ್ಳುತ್ತಿದೆ..!

ಸದ್ಯ, ದೇವರ ಗೋನಾಲ ಗ್ರಾಮದ ಮೂವರು ಪ್ರತಿಭೆಗಳು ಖೋಖೋ ಕ್ರೀಡೆಯಲ್ಲಿ ರಾಜ್ಯ ಮಟ್ಟದಲ್ಲಿ ಉತ್ತಮ ಸಾಧನೆ ತೋರಿ ರಾಷ್ಟ್ರ ತಂಡದ ಅವಕಾಶಕ್ಕಾಗಿ ಕಾಯುತ್ತಿದ್ದಾರೆ. ಇತ್ತೀಚೆಗೆ ಬಿಹಾರ ರಾಜ್ಯದಲ್ಲಿ ನಡೆದ ಖೇಲೋ ಇಂಡಿಯಾ ಯೂತ್ ಗೇಮ್ ನಲ್ಲಿ ಕರ್ನಾಟಕದ ಖೋ ಖೋ ತಂಡದಲ್ಲಿ ಇದೇ ಗ್ರಾಮದ ಇಬ್ಬರು ಕ್ರೀಡಾಪಟುಗಳಾದ ಉದಯಕುಮಾರ ಗುರಿಕಾರ, ಮಲ್ಲಿಕಾರ್ಜುನ ವಗ್ಗರ ಅವರು ಭಾಗವಹಿಸಿ ದೇಶದ ವಿವಿಧ ರಾಜ್ಯಗಳ ಪೈಕಿ ನಮ್ಮ ರಾಜ್ಯಕ್ಕೆ 3 ನೇ ಸ್ಥಾನ ಲಭಿಸುವಲ್ಲಿ ಪ್ರಮುಖ ಪಾತ್ರವಹಿಸಿ ಸಾಧನೆ ಮೆರೆದಿದ್ದಾರೆ.

ಭಾರತ ತಂಡ ಸೇರ್ಪಡೆ

ಇದೇ ವರ್ಷಾರಂಭದಲ್ಲಿ ನಡೆದ ಖೋಖೋ ವಿಶ್ವಕಪ್ ಪಂದ್ಯಾವಳಿಯಲ್ಲಿ ಭಾರತ ತಂಡ ಪ್ರತಿನಿಧಿಸಿದ 60 ಮಂದಿ ಆಟಗಾರರಲ್ಲಿ ದೇವರ ಗೋನಾಲ ಗ್ರಾಮದ ಮರೆಪ್ಪ ಗುರಿಕಾರ ಸಹ ಇದ್ದ ಎನ್ನುವುದು ಇಲ್ಲಿನ ಖೋ ಖೋ ಪ್ರೀತಿಗೆ ಸಾಕ್ಷಿ. ಇದೇ ರೀತಿಯಾಗಿ ಹಲವು ಪ್ರತಿಭೆಗಳ ಜಿಲ್ಲಾ ಮಟ್ಟ, ವಿಭಾಗೀಯ ಮಟ್ಟದ ಖೋ ಖೋ ಪಂದ್ಯಾವಳಿಯಲ್ಲಿ ಭಾಗವಹಿಸಿ ಉತ್ತಮ ಸಾಧನೆ ತೋರಿದ್ದಾರೆ. ಆದರೆ, ಇಲ್ಲಿಯವರೆಗೂ ಇವರಿಗೆ ಬೇಕಾದ ಪ್ರೋತ್ಸಾಹ, ಸಹಕಾರ ಮಾತ್ರ ಸರಕಾರದ ಮಟ್ಟದಿಂದ ಸಿಕ್ಕಿಲ್ಲ ಎನ್ನುವ ಗ್ರಾಮಸ್ಥರು, ಉತ್ತಮ ಕೋಚಿಂಗ್ ದೊರೆತರೆ ನಮ್ಮೂರಿನ ಆಟಗಾರರು ಅದ್ಭುತ ಸಾಧನೆ ತೋರಲಿದ್ದಾರೆ ಎಂದು ಆಶಾಭಾವನೆ ವ್ಯಕ್ತಪಡಿಸುತ್ತಿದ್ದಾರೆ.

ಗ್ರಾಮಸ್ಥರಿಂದ ಸಹಕಾರ

ರಾಜ್ಯ, ರಾಷ್ಟ್ರಮಟ್ಟದಲ್ಲಿ ಖೋಖೋ ತಂಡವನ್ನು ಪ್ರತಿನಿಧಿಸುತ್ತಿರುವ ಗ್ರಾಮದ ಕ್ರೀಡಾಪಟುಗಳು ಆರ್ಥಿಕವಾಗಿ ಸಬಲರಾಗಿಲ್ಲ. ಅವರೆಲ್ಲರೂ ಬಡತನದಲ್ಲಿ ಅರಳುತ್ತಿರುವ ಪ್ರತಿಭೆಗಳು. ಅಲ್ಲದೇ ಬಿಹಾರದಲ್ಲಿ ನಡೆದ ಖೇಲೋ ಇಂಡಿಯಾ ಯೂತ್ ಗೇಮ್ ನಲ್ಲಿ ಪಾಲ್ಗೊಳ್ಳಲು ವಿಮಾನದಲ್ಲಿ ಪ್ರಯಣಕ್ಕೂ ಇವರ ಹತ್ತಿರ ಹಣವಿರಲಿಲ್ಲ. ಆದರೂ ಸಹಿತ ಗ್ರಾಮದ ಜನರು, ಸ್ನೇಹಿತರು ಹಣ ಹೊಂದಿಸಿ ಕಳುಹಿಸಿದ್ದಾರೆ. ಆದಾಗ್ಯೂ ಜಿಲ್ಲಾಡಳಿತದಿಂದ ಇಲ್ಲಿಯವರೆಗೂ ಯಾವುದೇ ಸಹಾಯಧನ ಸಿಕ್ಕಿಲ್ಲ ಎನ್ನಲಾಗಿದೆ.

ಉತ್ತೇಜನ ಸಿಗಲಿ

ಶಾಲಾ ಕಾಲೇಜು ಹಂತದಲ್ಲಿ ವರ್ಷಕ್ಕೆ ಒಂದು ಸಲ ನಡೆಯುವ ಕ್ರೀಡಾಕೂಟಗಳ ಪರಿಣಾಮಕಾರಿ ಅನುಷ್ಠಾನಗೊಳಿಸಲು ಒತ್ತು ನೀಡಬೇಕಿದೆ. ಹಾಗಾದರೆ ಮಾತ್ರ ಎಲೆ ಮರೆ ಕಾಯಿಯಂತೆ ಇರುವ ಹಲವು ಕ್ರೀಡಾಪಟುಗಳು ಹೊರಬರಲು ಸಾಧ್ಯ. ಇದರಿಂದ ಅನೇಕರು ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಶಸ್ತಿ, ಪದಕಗಳನ್ನು ಗೆಲ್ಲಲು ಸಾಧ್ಯವಾಗುತ್ತದೆ. ಪ್ರಾಥಮಿಕ, ಪ್ರೌಢಶಾಲೆ, ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಕ್ರೀಡಾಕೂಟಗಳು ವರ್ಷಕ್ಕೊಮ್ಮೆ ನಡೆಯುತ್ತಲೇ ಇರುತ್ತವೆ. ಅನೇಕ ಪ್ರತಿಭಾನ್ವಿತ ಕ್ರೀಡಾಪಟುಗಳು ಜಿಲ್ಲೆ ಹಾಗೂ ವಿಭಾಗ ಮಟ್ಟದಲ್ಲಿ ಮಾತ್ರ ಉತ್ತಮ ಸಾಧನೆ ಮಾಡಿದರೆ, ಕೆಲವರು ಮಾತ್ರ ರಾಜ್ಯಮಟ್ಟದಲ್ಲಿ ಅವಕಾಶ ಪಡೆಯುತ್ತಾರೆ. ಅಂಥವರನ್ನು ಗುರುತಿಸಿ ಬೆಂಬಲಿಸುವ ವಾತಾವರಣ ಬೇಕಿದೆ.

- ಖೋ ಖೋ ಪ್ರತಿಭೆಗಳ ತವರು ದೇವರ ಗೋನಾಲ
- ರಾಷ್ಟ್ರಮಟ್ಟದ ತಂಡ ಪ್ರತಿನಿಧಿಸಿದ್ದ ಕ್ರೀಡಾ ಸ್ಟಾರ್‌ಗಳು
- ಈ ಬಡ ಆಟಗಾರರಿಗೆ ಬೇಕಿದೆ ಇಲಾಖೆಯ ಉತ್ತೇಜನ

> **ನಮ್ಮ ಕ್ರೀಡಾಕ್ಷೇತ್ರವನ್ನು ಬೇರುಮಟ್ಟದಲ್ಲಿ ಗಟ್ಟಿಗೊಳಿಸುವ ವ್ಯವಸ್ಥೆ ಇನ್ನೂ ಜಾರಿಗೆ ಬರಲಿಲ್ಲ. ಕ್ರೀಡಾಂಗಣ ಒಳಗೊಂಡಂತೆ ಇತರೆ ಸೌಲಭ್ಯಗಳು ಮತ್ತು ಅಗತ್ಯ ಸಲಕರಣೆಗಳನ್ನು ಒದಗಿಸುವ ಕಾರ್ಯ ಕ್ರೀಡಾ ಇಲಾಖೆಯಿಂದ ಸಮರ್ಪಕವಾಗಿ ನಡೆಯುತ್ತಿಲ್ಲ. ಚೀನಾ, ಜಪಾನ್ ದೇಶಗಳಲ್ಲಿ ಬಾಲ್ಯದಲ್ಲೇ ತರಬೇತಿ ನೀಡಿ ಅವರವರ ಸಾಮರ್ಥ್ಯಕ್ಕೆ ತಕ್ಕಂತೆ ಮುನ್ನಡೆಸಲಾಗುತ್ತದೆ. ನಮ್ಮಲ್ಲಿ ಹೀಗೆ ಶಿಸ್ತುಬದ್ಧ ತರಬೇತಿ, ಆಯ್ಕೆ ಇತ್ಯಾದಿಗಳ ಕೊರತೆ ಕಾಣಿಸುತ್ತಿದೆ.**
>
> -ಭೀಮರಾಯ,
> ದೈಹಿಕ ಶಿಕ್ಷಣ ಶಿಕ್ಷಕರು, ದೇವರ ಗೋನಾಲ

> **ಬಾಲ್ಯದಿಂದಲೂ ಕ್ರೀಡೆಯಲ್ಲಿ ಆಸಕ್ತಿ ಜತೆಗೆ ಏನಾದರೂ ಸಾಧಿಸಬೇಕೆಂಬ ಹಂಬಲವಿತ್ತು. ಇದಕ್ಕೆ ಬೆಂಬಲವಾಗಿ ನಿಂತ ದೈಹಿಕ ಶಿಕ್ಷಣ ಶಿಕ್ಷಕ ಭೀಮರಾಯ, ಮತ್ತಪ್ಪ ಸರ್ ಅವರಿಂದಾಗಿ ಇಲ್ಲಿಯವರೆಗೆ ಬಂದಿದ್ದೇವೆ. ನಮ್ಮೂರಲ್ಲಿ ಹಲವು ಖೋಖೋ ಪಟುಗಳು ತಮ್ಮ ಪ್ರತಿಭೆ ಹೊರಹಾಕಲು ಅವಕಾಶಕ್ಕಾಗಿ ಕಾಯುತ್ತಿದ್ದಾರೆ.**
>
> -ಉದಯಕುಮಾರ ಗುರಿಕಾರ,
> ಖೋಖೋ ಆಟಗಾರ

ಕ್ಲಬ್ ಸಂಸ್ಕೃತಿ ಸಿಗಲಿ:

ಹರಿಯಾಣ ಮತ್ತಿತರ ರಾಜ್ಯಗಳ ಗ್ರಾಮೀಣ ಪ್ರದೇಶಗಳಲ್ಲಿ ಕ್ಲಬ್ ಸಂಸ್ಕೃತಿ ಕ್ರೀಡಾ ಬೆಳವಣಿಗೆಯಲ್ಲಿ ದೊಡ್ಡ ಪಾತ್ರ ವಹಿಸುತ್ತಿದೆ. ನಮ್ಮಲ್ಲೂ ಹಳ್ಳಿಗಳ ಶಾಲೆಕಾಲೇಜುಗಳಲ್ಲಿ ಕ್ರೀಡಾಕ್ಲಬ್‌ಗಳನ್ನು ಹುಟ್ಟುಹಾಕಿ ಅಲ್ಲಿ ರಾಷ್ಟ್ರೀಯ-ಅಂತಾರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳನ್ನು ಬೆಳೆಸುವ ಕಾರ್ಯ ನಡೆಯಬೇಕು. ಉತ್ತಮ ತರಬೇತಿ, ಕ್ರೀಡಾ ಸೌಲಭ್ಯ ಸಿಗಬೇಕೆಂದು ಕ್ರೀಡಾಪಟುಗಳ ಆಶಯ.

ಶಿಕ್ಷಣ ತೋಟದ ಹೂಬಳ್ಳಿ ಡಾ. ಪುಷ್ಪಲತಾ ವೈದ್ಯ

ಬದುಕಿನ ಪಥ ತೋರುವ ಬೀನಾ ವೈದ್ಯ ಶಿಕ್ಷಣ ಸಂಸ್ಥೆ

ಇದೊಂದು ಸುಂದರವಾದ ಹೂ ಬಳ್ಳಿ; ಶಿಕ್ಷಣ, ಸಂಸ್ಕಾರ, ಸ್ವಾವಲಂಬನೆ, ಧೈರ್ಯ, ಶಿಸ್ತು, ಸಂಯಮ, ಕ್ರಿಯಾಶೀಲತೆ ಹೀಗೆ ಹತ್ತಾರು ತರಹದ ಹೂವನ್ನು ಹೊಂದಿರುವ ಬಳ್ಳಿ. ಯಾಕೆ ಈ ದೃಷ್ಟಾಂತ ಎಂದು ಅನಿಸಬಹುದು. ಹೌದು, ಡಾ. ಪುಷ್ಪಲತಾ ವೈದ್ಯ ಅವರ ವ್ಯಕ್ತಿತ್ವಕ್ಕೆ ಬೇರೆ ಉದಾಹರಣೆಯನ್ನು ನೀಡಲಾಗದು. ಇವರ ಗುಣ ವಿಶೇಷವೇ ಹಾಗೆ. ಒಂದು ಸಂಸ್ಥೆಯ ಸರ್ವತೋಮುಖ ಅಭಿವೃದ್ಧಿಗೆ ಬೇಕಾದ ಅಷ್ಟು ಅಂಶವೂ ಇವರಲ್ಲಿದೆ. ಈ ಕಾರಣದಿಂದಲೇ ಭಟ್ಕಳ ತಾಲೂಕಿನ ನೀರಗದ್ದೆಯಲ್ಲಿರುವ 'ಬೀನಾ ವೈದ್ಯ ಶಿಕ್ಷಣ ಸಂಸ್ಥೆ' ಇಂದು ಉತ್ತರ ಕನ್ನಡ ಜಿಲ್ಲೆ ಮಾತ್ರವಲ್ಲ ಬೇರೆ ಕಡೆಗೂ ತನ್ನ ಖ್ಯಾತಿಯನ್ನು ಹೆಚ್ಚಿಕೊಂಡಿದೆ.

ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ಮಂಕಾಳ ವೈದ್ಯ ಅವರ ಧರ್ಮ ಪತ್ನಿ ಡಾ. ಪುಷ್ಪಲತಾ ವೈದ್ಯ. ಇವರು ತಮ್ಮ ಪತಿಯ ಚಿಂತನೆಯನ್ನು ಮೂರ್ತರೂಪಕ್ಕೆ ತರುತ್ತಾ ಇದ್ದಾರೆ. ಮಂಕಾಳ ವೈದ್ಯ ಅವರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತಾ ಬಂದಿದ್ದಾರೆ. 'ಬಡತನದ ಕಾರಣದಿಂದ ತಾವು ಕಲಿಯಲು ಆಗಲಿಲ್ಲ ಎಂಬ ಕೊರಗು ಇದೆ' ಎಂಬುದನ್ನು ಮಂಕಾಳ ವೈದ್ಯರು ಹಲವು ಕಡೆ ಹೇಳಿಕೊಂಡಿದ್ದಾರೆ. ತನಗೆ ಆದಂತೆ ಬಡವರ ಮಕ್ಕಳಿಗೆ ಆಗಬಾರದು, ದೇವರು ಕರುಣಿಸಿದ ಸಂಪತ್ತಿನಿಂದ ಶಿಕ್ಷಣ ಸಂಸ್ಥೆ ಕಟ್ಟಿದರೆ ಸಾವಿರಾರು ಮಕ್ಕಳು ಕಲಿತು ವಿದ್ಯಾವಂತರಾಗುತ್ತಾರೆ ಎಂಬ ಕಾರಣದಿಂದ ಬೀನಾ ವೈದ್ಯ ಶಿಕ್ಷಣ ಸಂಸ್ಥೆ ಕಟ್ಟಿದರು. ಇವರು ಕಟ್ಟಿದ ಸಂಸ್ಥೆಯನ್ನು ವ್ಯವಸ್ಥಿತವಾಗಿ ನಡೆಸುತ್ತಾ ಬಂದವರು ಡಾ. ಪುಷ್ಪಲತಾ ವೈದ್ಯ ಅವರು. ಮಂಕಾಳ ವೈದ್ಯ ಅವರು ಶಿಕ್ಷಣ ಸಂಸ್ಥೆ ಕಟ್ಟಿದರು. ಅದಕ್ಕೆ ಅಗತ್ಯವಾದ ವ್ಯವಸ್ಥೆಯನ್ನು ಹೇಗೆ ಯೋಜಿಸಬೇಕು, ಆಯೋಜಿಸಬೇಕು ಎನ್ನುವುದನ್ನು ಪುಷ್ಪಲತಾ ವೈದ್ಯ ಅವರು ಸಮರ್ಪಕವಾಗಿ ನೆರವೇರಿಸುತ್ತಾ ಬಂದಿದ್ದಾರೆ. ಪತಿಯ ಯೋಚನೆಯನ್ನು 100ಕ್ಕೆ 100 ಫಲಿತಾಂಶ ಬರುವಂತೆ ಅಳವಡಿಸುತ್ತಾ ಬಂದಿದ್ದಾರೆ. ಇಲ್ಲಿ ಪಠ್ಯೇತರ ಚಟುವಟಿಕೆಗೂ ಆದ್ಯತೆ ನೀಡುತ್ತಿದ್ದಾರೆ. ಸಂಗೀತ, ಭರತನಾಟ್ಯ, ಕರಾಟೆ, ಚಿತ್ರಕಲೆ, ಕ್ರೀಡೆ, ಕೃಷಿ ಎಲ್ಲದರ ಶಿಕ್ಷಣವೂ ಇಲ್ಲಿದೆ. ಜತೆಯಲ್ಲಿ ಜೀವನ ಮೌಲ್ಯ ಹೇಳಿ ಕೊಡುತ್ತಾರೆ.

ವಸತಿಯುತ ಶಾಲೆ

ಕಾರವಾರ- ಮಂಗಳೂರು ರಾಷ್ಟ್ರೀಯ ಹೆದ್ದಾರಿ ಪಕ್ಕದಲ್ಲಿ, ಮುರ್ಡೇಶ್ವರಕ್ಕಿಂತ ಕೊಂಚ ಹಿಂದೆ ಸಿಗುವ ನೀರಗದ್ದೆ ಎನ್ನುವ ಊರಲ್ಲಿ ಬೀನಾ ವೈದ್ಯ ಶಿಕ್ಷಣ ಸಂಸ್ಥೆಯಿದೆ. ಇಲ್ಲಿ ನರ್ಸರಿಯಿಂದ ಆರಂಭವಾಗಿ ಡಿಗ್ರಿವರೆಗೂ ಓದಬಹುದು. ವಸತಿಯುತ ಶಾಲೆದಾಗಿದ್ದು, ಅನೇಕರು ಮನೆಯಿಂದ ನೇರವಾಗಿ ಶಾಲೆ ಬರುತ್ತಾರೆ. ಇಲ್ಲಿ ಶಿಸ್ತಿಗೆ ಮೊದಲ ಆದ್ಯತೆ. ಡಾ. ಪುಷ್ಪಲತಾ ವೈದ್ಯ ಅವರೇ ಮಕ್ಕಳನ್ನು ತಂದೆ-ತಾಯಿ ರೂಪದಲ್ಲಿ ನೋಡಿಕೊಳ್ಳುತ್ತಾರೆ. ಡೇ ಸ್ಕಾಲರ್ ಸ್ಕೂಲ್ ಮತ್ತು ಕಾಲೇಜ್ ಕೂಡ ಇದೆ. ಒಟ್ಟು ನಾಲ್ಕು ಸಂಸ್ಥೆಗಳು ಒಂದೇ ಸೂರಿನಡಿ ಕೆಲಸ ಮಾಡುತ್ತಿವೆ. 6 ನೇ ತರಗತಿಯಿಂದ ವಸತಿ ಶಾಲೆ ಲಭ್ಯವಿದೆ. ಸಿಬಿಎಸ್‌ಇ ಹಾಗೂ ರಾಜ್ಯ ಪಠ್ಯ ಕ್ರಮ ವಿದೆ. ವಿದ್ಯಾರ್ಥಿಗಳ ಆಯ್ಕೆಯಂತೆ ಶಿಕ್ಷಣ ನೀಡುವ ವ್ಯವಸ್ಥೆಯನ್ನು ಇಲ್ಲಿ ಮಾಡಿಕೊಡಲಾಗುತ್ತದೆ. ಸಾವಿರಕ್ಕೂ ಅಧಿಕ ವಿದ್ಯಾರ್ಥಿಗಳು ಇಲ್ಲಿ ಶಿಕ್ಷಣ ಪಡೆಯುತ್ತಿದ್ದಾರೆ. ಹಾಸ್ಟೆಲ್‌ನಲ್ಲಿ ಇರುವ ಸಾವಿರ ವಿದ್ಯಾರ್ಥಿಗಳ ಹೊರತಾಗಿಯೂ ಪ್ರತಿ ನಿತ್ಯ ಸಾವಿರ ಜನರಿಗೂ ಮಧ್ಯಾಹ್ನದ ಊಟ ನೀಡುತ್ತಾರೆ. ಈ ಊಟದ ಕುರಿತು ಎಂಡಿಯಾದ ಪುಷ್ಪಲತಾ ವೈದ್ಯ ಅವರೇ ಕಾಳಜಿ ವಹಿಸುತ್ತಾರೆ. ತಾವೇ ಅಡುಗೆ ಮನೆಗೆ ಹೋಗಿ ಯಾವ ರೀತಿಯಲ್ಲಿ ಅಡುಗೆ ಮಾಡಿ ದ್ದಾರೆ ಎಂದು ಪರಿಶೀಲಿಸುತ್ತಾರೆ. ಬೆಳಗಿನ ತಿಂಡಿಯನ್ನೂ ವಿಶೇಷ ಕಾಳಜಿಯಿಂದ ನೀಡುತ್ತಾರೆ. ತಾವೇ ದೋಸೆಯನ್ನು ಎರೆದು ನೀಡುತ್ತಾರೆ. ಪುಷ್ಪ ಲತಾ ವೈದ್ಯರಿಗೆ ಅಡುಗೆ ಮಾಡು ವುದು ಎಂದರೆ ಇಷ್ಟ. ಅದಕ್ಕಾಗಿಯೇ ಮತ್ತಷ್ಟು ವಿಶೇಷತೆ ಇದರಲ್ಲಿದೆ.

ಶಾಲೆಯಲ್ಲೇ ತರಕಾರಿ ಬೆಳೆ!

ಸಾವಿರ ವಿದ್ಯಾರ್ಥಿಗಳಿಗೆ ಮಾಡುವ ಅಡುಗೆಗೆ ಬೇಕಾಗುವ ತರಕಾರಿಯಲ್ಲಿ ಶೇ.90ರಷ್ಟನ್ನು ಶಾಲೆಯ ಆವರಣದಲ್ಲಿಯೇ ಬೆಳೆದುಕೊಳ್ಳುತ್ತಾರೆ. ತರಕಾರಿ ಬೆಳೆಯುವುದರಲ್ಲಿಯೂ ವಿಶೇಷ ಆಸಕ್ತಿ ತೋರಿಸುವವರು ಪುಷ್ಪಲತಾ ವೈದ್ಯ ಅವರು, ತಾವು ಎಲ್ಲೇ ಹೋದರೂ, ತರಕಾರಿ ಬೀಜವನ್ನು ಕಲೆಕ್ಟ್ ಮಾಡಿಕೊಂಡು ಬರುತ್ತಾರೆ. ತಾವೇ ಖುದ್ದಾಗಿ ತರಕಾರಿ ಸಸಿ ಬೆಳೆಸಿ ನಾಟಿ ಮಾಡಿ, ಸಾವಯವ ರೀತಿಯಲ್ಲಿ ತರಕಾರಿ ಬೆಳೆದು ಆರೋಗ್ಯಕರವಾದ ಊಟ ಮಕ್ಕಳಿಗೆ ನೀಡುತ್ತಾರೆ.

ಶಾಲೆಯ ಮಕ್ಕಳೆಲ್ಲ ನಮ್ಮ ಮಕ್ಕಳು

ಮಂಕಾಳ ವೈದ್ಯ ಮತ್ತು ಪುಷ್ಪಲತಾ ದಂಪತಿಗೆ ಇಬ್ಬರು ಹೆಣ್ಣು ಮಕ್ಕಳು. ಬೀನಾ ಮತ್ತು ಸೋನಾಲಿ. ಬೀನಾ ಇದೇ ಶಿಕ್ಷಣ ಸಂಸ್ಥೆಯಲ್ಲಿ ಅಂತಿಮ ಡಿಗ್ರಿಯಲ್ಲಿ ಅಭ್ಯಾಸ ಮಾಡುತ್ತಿದ್ದಾರೆ. ಸೋನಾಲಿ ಅವರು ಎಂಬಿಬಿಎಸ್ ವ್ಯಾಸಂಗ ಮಾಡುತ್ತಿದ್ದಾರೆ. ಬೀನಾ ಅವರಿಗೆ ಸಾಮಾಜಿಕ ಕಾಳಜಿ ಮತ್ತು ಸಾರ್ವಜನಿಕ ಜೀವನ ಕುರಿತು ಆಸಕ್ತಿ. ಈಗಾಗಲೇ ಸಹಕಾರಿ ರಂಗಕ್ಕೂ ಇವರು ಧುಮುಕಿದ್ದು, ಸಹಕಾರಿ ಸಂಸ್ಥೆಯೊಂದರ ನಿರ್ದೇಶಕಿಯಾಗಿಯೂ ಕಾರ್ಯನಿರ್ವಹಿಸುತ್ತ ಇದ್ದಾರೆ. ಸೋನಾಲಿ ಅವರು ಶಿಕ್ಷಣದ ಬಗ್ಗೆ ಆಸಕ್ತಿಯನ್ನು ಹೊಂದಿದ್ದು ಎಂಬಿಬಿಎಸ್ ಮಾಡುವ ಮೂಲಕ ಸಾರ್ವಜನಿಕ ಸೇವೆಯನ್ನು ಮಾಡುವ ಇರಾದೆಯಲ್ಲಿ ಇದ್ದಾರೆ. 'ನಾವು ಹೆತ್ತಿದ್ದು ಇಬ್ಬರು ಮಕ್ಕಳಾದರೆ ನಮ್ಮ ಶಾಲೆಯ ಎಲ್ಲ ಮಕ್ಕಳು ನಮ್ಮ ಮಕ್ಕಳು. ಅವರ ಶ್ರೇಯೋಭಿವೃದ್ಧಿಯೇ ನಮಗೆ ಮುಖ್ಯ' ಎನ್ನುತ್ತಾರೆ ಪುಷ್ಪಲತಾ ವೈದ್ಯ ಅವರು.

ಉತ್ತಮ ಫಲಿತಾಂಶ

ಬೀನಾ ವೈದ್ಯ ಶಿಕ್ಷಣ ಸಂಸ್ಥೆ ವಿದ್ಯಾರ್ಥಿಗಳಿಗೆ ಬೇಕಾಗುವ ಸಕಲ ವ್ಯವಸ್ಥೆಯೂ ಇದೆ. ಪ್ರಯೋಗ ಶಾಲೆ, ಸಾವಿರಾರು ಪುಸ್ತಕಗಳನ್ನು ಹೊಂದಿರುವ ಗ್ರಂಥಾಲಯವಿದೆ. ವಿಸ್ತಾರವಾದ ಕಂಪ್ಯೂಟರ್ ಲ್ಯಾಬ್ ಕೂಡ ಇದೆ. ಶಿಕ್ಷಕರ ಕಾಳಜಿಯ ಕಲಿಕೆಯಿಂದ ಬೀನಾ ವೈದ್ಯ ಕಾಲೇಜ್‌ನಲ್ಲಿ ನೂರಕ್ಕೆ ನೂರು ಫಲಿತಾಂಶವನ್ನು ನೀಡುತ್ತಿದ್ದಾರೆ.

ಪತಿಯ ಸಾಥ್

ಪುಷ್ಪಲತಾ ವೈದ್ಯ ಅವರ ಯೋಜನಾಬದ್ಧ ಮತ್ತು ಶಿಸ್ತಿನ ಕೆಲಸಕ್ಕೆ ಶಾಸಕರಾದ ಮಂಕಾಳ ವೈದ್ಯ ಅವರ ಸಹಕಾರ ಸದಾ. ಪತ್ನಿಯ ಮೇಲಿನ ವಿಶ್ವಾಸ ಮತ್ತು ಸಾಮಾಜಿಕ ಕಾಳಜಿಯನ್ನು ಸರಿಯಾಗಿ ಅರಿತಿರುವ ಮಂಕಾಳ ವೈದ್ಯ ಅವರು ಶಿಕ್ಷಣ ಸಂಸ್ಥೆಗೆ ಬೇಕಾದ ವ್ಯವಸ್ಥೆಯನ್ನು ಸರಿಯಾಗಿ ಮಾಡಿಕೊಡುತ್ತಾರೆ. ಅಲ್ಲದೆ, ಪತ್ನಿಯ ಕ್ರಿಯಾಶೀಲ ಚಟುವಟಿಕೆಗೆ ಪ್ರೋತ್ಸಾಹ ನೀಡಿ ಹೊಸ ಹೊಸ ಯೋಜನೆಗೆ ಉತ್ತೇಜನ ನೀಡುತ್ತಾ ಬಂದಿದ್ದಾರೆ.

ಶಿಕ್ಷಣ ತಜ್ಞೆಯ ಕಲಾಪ್ರೇಮ

ಪುಷ್ಪಲತಾ ವೈದ್ಯ ಅವರು ಕಲಾವಿದೆಯೂ ಹೌದು; ಸಂಗೀತ ಜೂನಿಯರ್ ಆಗಿರುವ ಇವರು ಸುಶ್ರಾವ್ಯವಾಗಿ ಹಾಡನ್ನು ಹಾಡುತ್ತಾರೆ; ಭರತನಾಟ್ಯವನ್ನು ಮಾಡುತ್ತಾರೆ. ಯಕ್ಷಗಾನದಲ್ಲಿಯೂ ಆಸಕ್ತಿ ಹೊಂದಿದ್ದಾರೆ. ಕರಾವಳಿ ಉತ್ಸವದಲ್ಲಿಯೂ ಇವರು ಪ್ರದರ್ಶನ ನೀಡಿದ್ದು ಇವರ ಕಲಾ ಪ್ರೌಢಿಮೆಗೆ ಸಾಕ್ಷಿಯಾಗಿದೆ. ತಮ್ಮ ಶಾಲೆಯ ಮಕ್ಕಳು ಕಲೆಯ ಪರಿಚಯ ಹೊಂದಲೆಂದು, ಎಲ್ಲಾ ಕಲೆಗಳಿಗೂ ಶಿಕ್ಷಕರನ್ನು ನೇಮಿಸಿರುವುದು ವಿಶೇಷವಾಗಿದೆ.

ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ

ಶಿಕ್ಷಣ ಕ್ಷೇತ್ರದಲ್ಲಿ ಸೇವೆ ಸಲ್ಲಿಸುತ್ತಿರುವ ಡಾ.ಪುಷ್ಪಲತಾ ವೈದ್ಯ ಅವರು ಕಲಾವಿದೆಯೂ ಹೌದು, ಸಂಗೀತ ಮತ್ತು ನೃತ್ಯದಲ್ಲಿ ಸಾಧನೆ ಮಾಡಿದ್ದಾರೆ. ಸಮಾಜಕ್ಕೆ ಇವರ ಸರ್ವತೋಮುಖ ಕೊಡುಗೆಯನ್ನು ಗುರುತಿಸಿ, 'ವಿಶ್ವವಾಣಿ ಗ್ಲೋಬಲ್ ಅಚೀವರ್ಸ್' ಪ್ರಶಸ್ತಿಯನ್ನು ಇತ್ತೀಚೆಗೆ ರಷ್ಯಾದಲ್ಲಿ ನೀಡಿ ಗೌರವಿಸಲಾಯಿತು.

ಬೀನಾ ವೈದ್ಯ ಶಿಕ್ಷಣ ಸಂಸ್ಥೆ ವಿಶೇಷತೆ

- ಒಂದೇ ಸೂರಿನಡಿ ನಾಲ್ಕು ಸಂಸ್ಥೆ
- ನರ್ಸರಿಯಿಂದ ಡಿಗ್ರಿಯವರೆಗೆ
- ಕೇಂದ್ರೀಯ ಮತ್ತು ರಾಜ್ಯ ಪಠ್ಯ ಕ್ರಮ
- ಯೋಗ, ಸಂಗೀತ, ಚಿತ್ರಕಲೆ, ನೃತ್ಯ, ಕೃಷಿ ವಿಷಯದ ಕಲಿಕೆ
- ಕ್ರೀಡೆಗೆ ಪ್ರಾಮುಖ್ಯತೆ, ಆಧುನಿಕ ಸೌಕರ್ಯ
- ಸಾವಿರಕ್ಕೂ ವಿದ್ಯಾರ್ಥಿಗಳಿಂದ ಕಲಿಕೆ, ನೂರಕ್ಕೂ ಅಧಿಕ ಶಿಕ್ಷಕವೃಂದ
- ಜೀವನಕ್ಕಾಗಿ ಶಿಕ್ಷಣ, ಉತ್ಕೃಷ್ಟತೆಗಾಗಿ ಪ್ರಯತ್ನ ಎಂಬ ಧ್ಯೇಯ



ವಿಶೇಷ ಸ್ಕಾಲರ್‌ಶಿಪ್

ಬೀನಾ ವೈದ್ಯ ಶಿಕ್ಷಣ ಸಂಸ್ಥೆಯ 'ಅಕ್ಷರ ಪರ್ವ' ಎನ್ನುವ ಸ್ಕಾರ್‌ಶಿಪ್ ಮೂಲಕ ಪ್ರತಿ ವರ್ಷ ಐವತ್ತು ಜನರ ವಿದ್ಯಾಭ್ಯಾಸದ ಸಂಪೂರ್ಣ ಖರ್ಚನ್ನು ನೋಡಿಕೊಳ್ಳುತ್ತಾರೆ. ಈ ಬಾರಿ ಇದರ ವ್ಯಾಪ್ತಿಯನ್ನು ವಿಸ್ತರಿಸುವ ಯೋಚನೆಯನ್ನು ಮಾಡಿದ್ದು ನೂರು ಜನರಿಗೆ ಕೊಡಬೇಕು ಎಂದಿದ್ದಾರೆ. ವಿಶೇಷ ವೆಂದರೆ, ಇವರ ಜತೆ, ಸ್ಕಾಲರ್‌ಶಿಪ್ ಪಡೆಯದೇ ಇತರ ನೂರಾರು ಜನರು ಉಚಿತವಾಗಿ ಶಿಕ್ಷಣ ಪಡೆ ಯುತ್ತಿದ್ದಾರೆ. ಆರ್ಥಿಕವಾಗಿ ಹಿಂದುಳಿದವರು ಇದರಲ್ಲಿ ಸೇರಿದ್ದಾರೆ. ಆರ್ಥಿಕ ಕಾರಣದಿಂದ ಯಾರೂ ಶಿಕ್ಷಣದಿಂದ ವಂಚಿತರಾಗಬಾರದು ಎನ್ನುವುದು ವೈದ್ಯ ದಂಪತಿ ಆಶಯ.

ಭವಿಷ್ಯದ ಶೈಕ್ಷಣಿಕ ಹಬ್!

ಡಾ. ಪುಷ್ಪಲತಾ ವೈದ್ಯ ಅವರು ನೀರಗದ್ದೆ ಎಂಬ ಪುಟ್ಟ ಹಳ್ಳಿಯನ್ನು ಶೈಕ್ಷಣಿಕ ಹಬ್ ಮಾಡುವ ಕನಸನ್ನು ಕಾಣುತ್ತಿದ್ದಾರೆ. ಇದನ್ನು ಸಾಕಾರಗೊಳಿಸಲು ಅವಿರತವಾಗಿ ಶ್ರಮಿಸುತ್ತಿದ್ದಾರೆ. ಮೆಡಿಕಲ್ ಕಾಲೇಜ್, ನರ್ಸಿಂಗ್ ಕಾಲೇಜ್ ಸ್ಥಾಪಿಸುವುದರೊಂದಿಗೆ ಮುಂದಿನ ದಿನಗಳಲ್ಲಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಮಾಡುವ ಇರಾದೆ ಹೊಂದಿದ್ದಾರೆ. ಇದಕ್ಕಾಗಿ ಈಗಾಗಲೇ ಕೆಲಸವನ್ನು ಆರಂಭಿಸಿದ್ದಾರೆ. ಶಿಕ್ಷಣ ಆಕಾಂಕ್ಷಿಯಾಗಿ ನೀರಗದ್ದೆಗೆ ಬಂದರೆ ಎಲ್ಲವೂ ಇಲ್ಲೆ ದೊರೆಯುವಂತೆ ಮಾಡಬೇಕು ಎನ್ನುವ ಸಂಕಲ್ಪವನ್ನು ಮಾಡಿದ್ದಾರೆ.

ದೈವತ್ವದ ಬೆಳಕು ಇದ್ದಾಗ ಕತ್ತಲೆ ಭಯವಿಲ್ಲ

ಒಂದು ಸಲ ಕತ್ತಲೆ ಭಗವಂತನ ಬಳಿಗೆ ಬಂದು, ದೇವಾ ನಾನು ಸೂರ್ಯನಿಗೆ ಯಾವ ಕೆಡುಕನ್ನೂ ಉಂಟು ಮಾಡಿಲ್ಲ. ಆದರೆ ಅವನು ಪ್ರತಿ ದಿನ ಬೆಳಗ್ಗೆ ಬಂದು ನನ್ನನ್ನು ಓಡಿಸುತ್ತಾನೆ ಅವನು ಬಂದ ತಕ್ಷಣ ನಾನು ಓಡಬೇಕು. ಇದ್ಯಾವ ನ್ಯಾಯ? ನಿರಂತರವಾಗಿ ಇದು ನಡೆಯುತ್ತಲೇ ಇದೆ, ನಾನು ಮಾಡಿರುವ ತಪ್ಪಾದರೂ ಏನು? ನೀವಾದರೂ ಸೂರ್ಯನಿಗೆ ಸ್ವಲ್ಪ ಬುದ್ಧಿಹೇಳಿ ಎಂದು ದೂರು ಹೇಳಿತು.

ಆಗ ದೇವರು ಸೂರ್ಯನ ಬಳಿಗೆ ಬಂದು ಸೂರ್ಯ ನೀನೇಕೆ ಅನಾವಶ್ಯಕವಾಗಿ ಕತ್ತಲೆಗೆ ತೊಂದರೆ ಕೊಡುತ್ತಿರುವೆ? ನಿರಂತರವಾಗಿ ಅದನ್ನು ಓಡಿಸುವೆಯಲ್ಲಾ ಕತ್ತಲೆ, ನಿನಗೇನು ತೊಂದರೆ ಮಾಡಿತ್ತು? ಎಂದು ಕೇಳಿದ.

ಆಗ ಸೂರ್ಯನಿಗೆ ಆಶ್ಚರ್ಯವಾಯಿತು! ದೇವಾ ನಾನು ಕತ್ತಲೆ ಎಂಬುದನ್ನು ನೋಡಿಯೇ ಇಲ್ಲವಲ್ಲ. ಇನ್ನು ತೊಂದರೆ ಕೊಡುವುದು ಎಲ್ಲಿಂದ ಬಂತು? ಬೇಕಾದರೆ ಅವನನ್ನು ಕರೆಸಿ, ಎಲ್ಲವೂ ನಿಮ್ಮ ಮುಂದೆಯೇ ನಿರ್ಣಯವಾಗಲಿ ಎಂದ ಸೂರ್ಯ. ದೇವರ ಮುಂದಿಟ್ಟಿರುವ ಇವರಿಬ್ಬರ ನ್ಯಾಯ ಇನ್ನೂ ಇತ್ಯರ್ಥವಾಗಿಲ್ಲ. ದೇವರು ಇಂದಿಗೂ ಪ್ರಯತ್ನಿಸುತ್ತಲೇ ಇದ್ದಾನೆ, ಆದರೆ ಸೂರ್ಯನ ಮುಂದೆ ಕತ್ತಲು ಎಂದೂ ಬಂದೇ ಇಲ್ಲ.ಅದು ಸಾಧ್ಯವೂ ಇಲ್ಲ. ಸೂರ್ಯನಿದ್ದಲ್ಲಿ ಕತ್ತಲು ಎಂದೂ ಬರುವುದಿಲ್ಲ.

ಹಾಗೆಯೇ ದೆವ್ವ, ಭೂತ ಪಿಶಾಚಿಗಳೆಂಬ ದುಷ್ಟ ಶಕ್ತಿಗಳೆಲ್ಲಾ ಕತ್ತಲೆ ಇದ್ದಂತೆ ಅವು ದೇವರ ಅಭಾವದಲ್ಲಿ ಹುಟ್ಟಿಬಿಡುವ ನಕಾರಾತ್ಮಕ ಶಕ್ತಿಗಳು. ಬೆಳಕಿನ ಅಭಾವ ಕತ್ತಲೆ ಹೇಗೋ ಹಾಗೆಯೇ ದೇವರ ಅಭಾವ ದೆವ್ವ ದುಷ್ಟಶಕ್ತಿಗಳು ಎನ್ನುವುದು. ಹೇಗೆ ಬೆಳಕಿದ್ದರೆ ಕತ್ತಲಿಗೆ ಜಾಗವಿಲ್ಲವೋ.. ನಮ್ಮ ಮನಸ್ಸಿನಲ್ಲಿ ಸಕಾರಾತ್ಮಕ ಯೋಚನೆಗಳು, ದೈವದ ಆಚರಣೆಯ ಒಂದು ಶಿಸ್ತು, ಬದುಕಿನಲ್ಲಿ ಸದಾ ಚಟುವಟಿಕೆಯಿಂದ ಇರುವ ಜೀವನ ಶೈಲಿ ಇದ್ದಾಗ ಅಲ್ಲಿ ಖಿನ್ನತೆಗೆ ಜಾಗವಿರುವುದಿಲ್ಲ. ಪರಮಾತ್ಮ ಎನ್ನುವ ಆಲೋಚನೆಯೇ ನಮ್ಮೊಳಗೊಂದು ಸಕಾರಾತ್ಮಕ ಭರವಸೆಯನ್ನು, ಆಚಾರ ವಿಚಾರಗಳೆಂಬ ಶಿಸ್ತನ್ನು ನಮಗೆ ನೀಡುತ್ತದೆ.

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಭಗವಂತನಲ್ಲಿ ಅಪರಿಮಿತವಾದ ನಂಬಿಕೆ ಮತ್ತು ಸಮರ್ಪಣಾ ಭಾವವಿದ್ದಾಗ ಎಲ್ಲವನ್ನು ಅವನಿಗೆ ಅರ್ಪಿಸಿ ಕಷ್ಟ ಸುಖ ಎರಡನ್ನು ಕೂಡ ಸಮಚಿತ್ತದಿಂದ ಸ್ವೀಕರಿಸುವ ಮನೋಭಾವ ರೂಢಿಯಾಗುತ್ತದೆ. ಏನೇ ಕಷ್ಟ ಎದುರಾದರು ಪ್ರಾರ್ಥನೆಯ ಮೂಲಕ ಅವನಿಗೆ ಅರಿಕೆ ಮಾಡಿ ಬಂದದ್ದನ್ನು ಎದುರಿಸುವ ಮಾನಸಿಕ ಧೈರ್ಯವನ್ನು ಭಗವಂತನ ಪ್ರಾರ್ಥನೆಯಲ್ಲಿ ಪಡೆದುಕೊಳ್ಳುತ್ತೇವೆ.

ಪರಿಸ್ಥಿತಿ ಅದೆಷ್ಟೇ ಕೈ ಮೀರಿದರೂ ಎಲ್ಲವನ್ನು ಮೀರಿದ ದೇವರಿದ್ದಾನೆ ಅವನಿಗೆ ಸೋಲಿಲ್ಲ ಎನ್ನುವ ಆತ್ಮಸ್ಥೈರ್ಯವಿರುತ್ತದೆ. ಇದೇ ಅಲ್ಲವೇ ನಮ್ಮೊಳಗಿರುವ ಬೆಳಕು. ಮಾನಸಿಕವಾಗಿ ಸದೃಢರಾಗಿದ್ದಾಗ ಏನನ್ನಾದರೂ ಸ್ವೀಕರಿಸಿ ನಿಭಾಯಿಸುವ ಶಕ್ತಿ ನಮಗಿರುತ್ತದೆ. ನಮ್ಮೊಳಗೆ ದೈವತ್ವದ ನೆಲೆ ಇಲ್ಲದಿದ್ದಾಗ ಆತಂಕದ ಪರಿಸ್ಥಿತಿಯಲ್ಲಿ, ಕಷ್ಟಗಳನ್ನು ತೋಡಿಕೊಳ್ಳಲು ನಮ್ಮನ್ನು ಸಮರ್ಪಿಸಿಕೊಳ್ಳಲು, ಮಾನಸಿಕವಾಗಿ ಧೈರ್ಯ ತುಂಬಲು ಸಲಹುವ ಶಕ್ತಿಯೇ ಇಲ್ಲದಂತಾಗುತ್ತದೆ. ಯಾರು ಸಲಹಲು ಇಲ್ಲದ ಅನಾಥ ಜೀವದಂತೆ, ಆತ್ಮ ಅನಾಥ ಪ್ರಜ್ಞೆಯಿಂದ ಬಳಲುತ್ತದೆ. ಆಗ ಬೆಳಗ್ಗ ಇಲ್ಲದ ಕತ್ತಲಿನಲ್ಲಿ ಸಿಲುಕಿದ ಅನುಭವ. ಕತ್ತಲ ಸಾಮ್ರಾಜ್ಯದಲ್ಲಿ ನಕಾರಾತ್ಮಕ ಆಲೋಚನೆಗಳು, ಖಿನ್ನತೆ, ಅಪನಂಬಿಕೆ , ಅನುಮಾನ ಇವೆಲ್ಲವುಗಳ ಜನನ.

ಇದರಿಂದ ಹೊರಬರಲು ಬೆಳಕಿನೆಡೆಗೆ ನಾವು ಮುಖ ಮಾಡಲೇಬೇಕು. ಬೆಳಕು ಭಗವಂತನ ರೂಪದಲ್ಲಿ ಕೈಹಿಡಿದು ನಮ್ಮನ್ನು ಒಳಿತಿ ನಡೆಗೆ ನಡೆಸುವ ಸಾಮರ್ಥ್ಯವಿರುವ ಶಕ್ತಿ. ಆದ್ದರಿಂದಲೇ ದೇವಸ್ಥಾನಗಳು, ಮಠ ಮಂದಿರಗಳು ಮನುಷ್ಯರ ಮನಸ್ಸಿಗೆ ಸಾಂತ್ವನ ನೀಡಲು ಇರುವ ಅದ್ಭುತವಾದ ತಾಣಗಳು. ದೇವರಲ್ಲಿನ್ನ ನಂಬಿಕೆ, ಸಮರ್ಪಣಾ ಭಾವ, ಮತ್ತು ಶ್ರದ್ಧೆ ಎಂದಿಗೂ ನಮ್ಮನ್ನು ತಪ್ಪು ದಾರಿಯಲ್ಲಿ ಅಥವಾ ಕೆಟ್ಟ ದಾರಿಯಲ್ಲಿ ನಡೆಸಲು ಸಾಧ್ಯವಿಲ್ಲ.

ಹೇಗೆ ಕತ್ತಲೆ ಬೆಳಕು ಜೊತೆಯಾಗಿರಲಾರವೊ ಹಾಗೆಯೇ ದೇವರು ಮತ್ತು ದೆವ್ವ ಭೂತ ದುಷ್ಟ ಶಕ್ತಿಗಳು ಮುಖಾಮುಖಿಯಾಗಲು ಸಾಧ್ಯವಿಲ್ಲ. ಬೆಳಕು ಬಂದೊಡನೆ ಕತ್ತಲು ಇಲ್ಲವಾಗುವಂತೆ ನಮ್ಮೊಳಗಿನ ದೈವತ್ವದ ಎದುರು ದೆವ್ವ ಭೂತ ಎನ್ನುವ ದುಷ್ಟಶಕ್ತಿಗಳು ಇಲ್ಲವಾಗುವುದು.

ಕರ್ಮವೆಂದರೇನು?

ವ್ಯಕ್ತಿ ಕೃಷ್ಣ ನಲ್ಲಿಯೇ ಆಶ್ರಯ ಪಡೆದು ಮೋಕ್ಷಕ್ಕಾಗಿ ಪ್ರಯತ್ನಿಸಿದಾಗ ಅಖಿಲ ಕರ್ಮ (ಕರ್ಮ,ಅಕರ್ಮ ಮತ್ತು ವಿಕರ್ಮಗಳ ಎಲ್ಲ ಮುಖಗಳು) ವನ್ನು ತಿಳಿದುಕೊಳ್ಳುತ್ತಾನೆ ಎಂಬ ಕೃಷ್ಣನ ಭರವಸೆಗೆ ಪ್ರತಿಯಾಗಿ ಅರ್ಜುನ ಕರ್ಮವೆಂದರೇನು? ಎಂದು ಪ್ರಶ್ನಿಸುತ್ತಾನೆ. ಇದಕ್ಕೆ ಕೃಷ್ಣ ಈ ರೀತಿಯಾಗಿ ಉತ್ತರಿಸುತ್ತಾನೆ- ಸೃಷ್ಟಿಸುವ ಸಾಮರ್ಥ್ಯ ಹೊಂದಿದ ವಿಶ್ವ ಶಕ್ತಿಯನ್ನು ತ್ಯಜಿಸುವುದೇ ಕರ್ಮ (8.3). ಈ ವಿವರಣೆಯನ್ನು ಗ್ರಹಿಸುವುದು ಕಷ್ಟ. ಕರ್ಮದ ಸಾಮಾನ್ಯವಾದ ವ್ಯಾಖ್ಯೆಗಳು ಅದು ಉದಾತ್ತವಾದ ಕೃತ್ಯ, ಸೃಷ್ಟಿ ಅಥವಾ ಯಜ್ಞ ಎಂದು ಹೇಳುತ್ತವೆ. ಆದರೆ ಅವೆಲ್ಲವೂ ಕೃಷ್ಣ ಹೇಳುವ ಅರ್ಥವನ್ನು ಪೂರ್ಣ ಗೊಳಿಸುವುದಿಲ್ಲ.

ಕರ್ಮದ ಬಗ್ಗೆ ಕೃಷ್ಣನ ಉತ್ತರ 'ಇರುವಿಕೆ'ಯ ಹಂತದಲ್ಲಿದ್ದರೆ, ನಾವು ಅದನ್ನು 'ಮಾಡುವ' ಹಂತದಲ್ಲಿ ಎಂದು ಅರ್ಥೈಸಿಕೊಳ್ಳುತ್ತೇವೆ. ಆದ್ದರಿಂದ ನಾವೇನು ಮಾಡುತ್ತೇವೆ ಎಂಬುದೇ ಕರ್ಮ ಎಂಬ ನಮ್ಮ ತಿಳುವಳಿಕೆಯಲ್ಲಿ ಕೊರತೆ ಇದೆ. ಯಾಕೆಂದರೆ ಜನರು ಬೇರೆ ಬೇರೆ ಸಮಯದಲ್ಲಿ ಬೇರೆ ಬೇರೆ ಕೆಲಸ ಮಾಡುತ್ತಿರುತ್ತಾರೆ. ಆದರೆ ಯಾವುದೇ ವ್ಯಾಖ್ಯೆ ಯಾವುದೇ ಕಾಲದಲ್ಲಿ ಸಮಂಜಸವಾಗಿರತಕ್ಕದ್ದು. ಅದು ಭೂತ- ವರ್ತಮಾನ - ಭವಿಷ್ಯದಲ್ಲಾಗಿರಬಹುದು ಮತ್ತು ಪ್ರತಿ ವಸ್ತುವಿಗೂ ಆಗಿರಬಹುದು. ಕೃಷ್ಣ 'ವಿಸರ್ಗ' ಎಂದರೆ ತ್ಯಾಗ ಎಂಬ ಶಬ್ದವನ್ನು ಉಪಯೋಗಿಸಿದ್ದಾನೆ. ಸೃಷ್ಟಿ ಮಾಡುವ ಸಾಮರ್ಥ್ಯವನ್ನು ಹೊಂದಿದ ಶಕ್ತಿಯನ್ನು ನಿರ್ಲಿಪ್ತ ಗೊಳಿಸುವುದು ಅಥವಾ ಕ್ರಮ ಬದಲಾಯಿಸುವುದೇ ಕರ್ಮ. ಸಮರ್ಪಕ ಉದಾಹರಣೆಯೆಂದರೆ ದೊಡ್ಡ ಪ್ರಮಾಣದಲ್ಲಿ ಎಲೆಕ್ಟ್ರಿಸಿಟಿ (ಶಕ್ತಿ)ಯನ್ನು ಒಯ್ಯುವ ಅತಿಹೆಚ್ಚಿನ ವೋಲ್ಟೇಜ್ ಟ್ರಾನ್ಸ್‌ಮಿಷನ್ ನ್ನಿನ ಲೈನ್ ಇದ್ದಹಾಗೆ. ಅದರಲ್ಲಿಯ ಕೆಲವು ಭಾಗವನ್ನು ಕ್ರಮ ಬದಲಾಯಿಸಿದರೆ ಅದೇ ಕರ್ಮ ಮತ್ತು ಹಲವಾರು ಎಲೆಕ್ಟ್ರಿಕ್ ಉಪಕರಣಗಳನ್ನು ಕ್ರಿಯಾಶೀಲಗೊಳಿಸುವುದೇ ಕರ್ಮಫಲ.

ನಿತ್ಯಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಈ ಉದಾಹರಣೆಯನ್ನು ನಮ್ಮ ಅಸ್ತಿತ್ವಕ್ಕೆ ಅನ್ವಯಿಸಿದರೆ ಕರ್ಮವು ಅಮಿತ ವಿಶ್ವಶಕ್ತಿಯಿಂದ ಸ್ವಲ್ಪವನ್ನು ಎಳೆದುಕೊಳ್ಳುತ್ತದೆ. ಮೊದಲನೆಯದಾಗಿ ಶಕ್ತಿಯನ್ನು ಎಳೆದುಕೊಳ್ಳುವವರು ಯಾರು? ವೋಲ್ಟೇಜ್‌ನಲ್ಲಿ ವ್ಯತ್ಯಾಸ ಇದ್ದ ಹಾಗೆ ಬೇರೆ ಬೇರೆ ವಸ್ತುಗಳು ಹೊಂದಿರುವ ಮೂರು ಗುಣಗಳಲ್ಲಿಯ ವ್ಯತ್ಯಾಸವು ಶ್ರದ್ಧೆ ಎಂಬ ತಂತಿಯ ಮುಖಾಂತರ ಎಳೆದುಕೊಳ್ಳುವುದಾಗಿದೆ. ಭ್ರಮೆಯಿಂದಾಗಿ ನಾವು ವಿಸರ್ಗ ಪ್ರಕ್ರಿಯೆಗೆ ನಮ್ಮನ್ನು ಜೋಡಿಸಿಕೊಳ್ಳುತ್ತೇವೆ ಮತ್ತು ನಾವು ಕರ್ತು ಅಲ್ಲದಿದ್ದರೂ ನಾವೇ ಕರ್ತು ಎಂದು ಕಲ್ಪಿಸಿಕೊಳ್ಳುತ್ತೇವೆ. ಎರಡನೆಯದಾಗಿ ಒಮ್ಮೆ ಶಕ್ತಿಯನ್ನು ಎಳೆದುಕೊಂಡರೆ ಮುಂದೆ ಅದರ ಪರಿಣಾಮ ಅಥವಾ ಕರ್ಮಫಲದ ಮೇಲೆ ಯಾರಿಗೂ ನಿಯಂತ್ರಣ ಇರುವುದಿಲ್ಲ. (2.47)

ಇಲ್ಲಿ ಎಲ್ಲಾ ಸಮಾನರು

ಕಿವುಡುತನ ತಪ್ಪೀತೆ ರನ್ನ ಕುಂಡಲದಿಂದ?
ತೊವಲು ಜಬ್ಬಲು ಬಿಳದೆ ಮೃಷ್ಟಾನ್ನದಿಂದ?
ಭುವಿಯ ಪರಿಣಾಮದಲಿ ಸಿರಿಬಡತನಗಳೊಂದೆ
ಜವರಾಯ ಸಮವರ್ತಿ - ಮಂಕುತಿಮ್ಮ॥

ಕಿವಿಗೆ ರನ್ನಕುಂಡಲಗಳನ್ನು ಧರಿಸಿದಾಕ್ಷಣ ಇರುವ ಕಿವುಡುತನ ತಪ್ಪುವುದೇ ಮೃಷ್ಟಾನ್ನ ಉಂಡರೆ ಸುಕ್ಕಾಗಿ ಕೃಷವಾಗಿರುವ ದೇಹವು ಮತ್ತೆ ಪ್ರಾಯಕ್ಕೆ ಬಲಿಷ್ಠವಾಗುವುದೇ? ಈ ಭೂಮಿಯ ಮೇಲೆ ಇರುವ ಎಲ್ಲಾ ಜೀವರಾಶಿಗಳಿಗೂ ಪ್ರಕೃತಿಯ ಪರಿಣಾಮದಲ್ಲಿ, ಆಯಾ ಕಾಲಘಟ್ಟಕ್ಕೆ ಸಿರಿವಂತ, ಬಡವಂತ ಇಬ್ಬರಿಗೂ ಒಂದೇ ಪರಿಣಾಮ ಹಾಗೂ ಫಲಿತಾಂಶ ಇರುತ್ತದೆ. ಜವರಾಯ ಎಂಬುವನು ಎಲ್ಲರಿಗೂ ಸಮವರ್ತಿಯಾಗಿಯೇ ತನ್ನ ಕೆಲಸವನ್ನು ಮಾಡಿ ಮುಗಿಸುತ್ತಾನೆ.

ಶುಭೋದಯಕ್ಕೊಂದು ಕಗ್ಗ

ರವೀ ಚಿಕ್ಕನಾಯಕನಹಳ್ಳಿ

ಈ ಪ್ರಕೃತಿಗೆ ಈ ದೇಹದ ಮೇಲೆ ಅಧಿಕಾರ ಉಂಟು. ಪ್ರಕೃತಿಯ ಕೊಡುಗೆಯ ಪರಿಣಾಮವಾಗಿಯೇ ಈ ದೇಹದಲ್ಲಿ ಅನೇಕಾನೇಕ ಬದಲಾವಣೆಗಳುಂಟಾಗಿ ಕೊನೆಗೆ ಅಂತ್ಯ ಕಾಣುವುದು. ಈ ದೇಹದ ಬದಲಾವಣೆಗಳಲ್ಲಿ ಬಡವ ಬಲ್ಲಿದರಲ್ಲಿ ಭೇಧ ಇರುವುದಿಲ್ಲ. ಕೇವಲ ಪುಷ್ಟಿಕ ಆಹಾರವನ್ನೇ ತಿನ್ನುತ್ತಾ ನನ್ನ ಆರೋಗ್ಯವನ್ನು ಸದಾ ಕಾಲ ಹೀಗೇ ಕಾಪಾಡಿಕೊಳ್ಳುವೆ ಎನ್ನುವುದು ಕೇವಲ ಭ್ರಮೆಯಷ್ಟೇ! ಬದುಕಿರುವವರೆಗೆ ನಮಗೆ ಈ ದೇಹದ ಮೇಲಿನ ಮಮಕಾರ, ಪ್ರೀತಿ, ಮೋಹಗಳನ್ನು ನಾವು ಬಿಡುವುದೇ ಇಲ್ಲ. ಸದಾಕಾಲ ಇದನ್ನು ಜತನವಾಗಿಟ್ಟುಕೊಳ್ಳಬೇಕೆಂಬ ತವಕ ಇದ್ದೇ ಇರುತ್ತದೆ. ಅದು ತಪ್ಪಲ್ಲ. ಆದರೆ ಈ ದೇಹವು ಆತ್ಮೋದ್ಧಾರಕ್ಕೆ ಒಂದು ಸಾಧನವಷ್ಟೇ ಎಂದು ಅರಿತು ಇದಕ್ಕೆ ಎಷ್ಟು ಪ್ರಾಮುಖ್ಯತೆ ನೀಡಬೇಕೋ ಅಷ್ಟನ್ನೇ ನೀಡಿದರೆ ಸರಿ. ಅದನ್ನು ಮರೆತು ದೇಹವನ್ನಾಶ್ರಯಿಸಿರುವ ಇಂದ್ರಿಯಗಳ ಸುಖದ ಚಿಂತನೆಯೇ ಸದಾಕಾಲ ನಡೆದರೆ ಅದು ಊರ್ಧ್ವಮುಖನಾದ ಬೆಳವಣಿಗೆ ಅಷ್ಟೇ. ಈ ದೇಹವು ನಿಶ್ಚಯವಾಗಿ ಬೀಳುವುದರಿಂದ ಅಂದು ನಾವು ಬಯಸುವ ಸುಖಗಳಿಗೂ ಅಂತ್ಯವಾಗುತ್ತದೆ. ಹಾಗಾಗಿ ದೇಹದ ಅತೀ ಹಾರೈಕೆಯೂ ಉತ್ತಮವಲ್ಲ. ಒಂದು ದೇಹದಲ್ಲಿ ಆಶ್ರಯಿಸಿಕೊಂಡ ಆತ್ಮದ ವಾಸದ ಸಮಯ ಮುಗಿದಾಗ ಈ ದೇಹ ಕೇವಲ ಭೌತಿಕವಸ್ತುವಾಗಿ ಉಳಿಯುತ್ತದೆ. ಸಮಯ ಮುಗಿದಾಗ ದೇಹದಿಂದ ಆತ್ಮವನ್ನು ಕೊಂಡೊಯ್ಯುವುದೇ ಆ ಯಮರಾಯನ ಕೆಲಸ. ಅವನಿಗೂ ನಮ್ಮ ಆತ್ಮಕ್ಕೆ ಆಶ್ರಯ ನೀಡಿದ್ದ ಈ ದೇಹಕ್ಕೂ ಸಂಬಂಧವೇ ಇರುವುದಿಲ್ಲ. ಹಾಗಾಗಿ ನಮ್ಮ ಕಾಲ ಮುಗಿದಾಕ್ಷಣವೇ ಆತ ತನ್ನ ಕೆಲಸವನ್ನು ಬಲು ಪ್ರಾಮಾಣಿಕತೆಯಿಂದ, ಸಮವರ್ತಿಯಾಗಿಯೇ ಆತ ಬಡವ ಬಲ್ಲಿದ, ರೋಗಿ-ನಿರೋಗಿ, ಸುಂದರ - ಕುರೂಪಿ, ಗಂಡು-ಹೆಣ್ಣು, ಮನುಷ್ಯ - ಪ್ರಾಣಿ - ಕೀಟಗಳೆಂಬ ಬೇಧವಿಲ್ಲದೆ ಆತ್ಮಗಳಿಗೆ ಈ ದೇಹದಿಂದ ಮುಕ್ತಿಯನ್ನು ನೀಡುವುದರಲ್ಲಿ ಸಮನಾಗಿ ವರ್ತಿಸುತ್ತಾನೆ. ಈ ಜಗತ್ತಿನಲ್ಲಿ ಉತ್ತಮ ಪ್ರಾಣಿಯೆಂದು ಪರಿಗಣಿಸಲ್ಪಡುವ ಮನುಷ್ಯರಾಗಿ ಹುಟ್ಟಿದ ಮೇಲೆ ಉತ್ತಮ ರೀತಿಯಲ್ಲಿ ಯೋಚಿಸಿ ದೇಹದ ಮೇಲಿನ ಮೋಹವನ್ನು ತೊರೆದು, ಇಂದ್ರಿಯ ಸುಖಕ್ಕೆ ಹೆಚ್ಚು ಪ್ರಾಮುಖ್ಯತೆ ನೀಡದೆ, ಆತ್ಮೋದ್ಧಾರದ ವಿಷಯಗಳಲ್ಲಿ ತಲ್ಲೀನರಾದರೆ, ನಾವೂ ಸಹ ಎಂದೋ ಒಂದು ದಿನ ಬರುವ ಈ ಮರಣದ ಭಯದಿಂದ ಮುಕ್ತರಾಗಬಹುದು.

ಮಕ್ಕಳ ಕವನಗಳು



ಅಜ್ಜ ಮತ್ತು ಮೊಮ್ಮಕ್ಕಳ ಜುಗಲ್ ಬಂದಿ ಎನ್ನಬಹುದಾದ ಕವನಗಳು ಈ ಸಂಕಲನದಲ್ಲಿ ಅಡಕಗೊಂಡಿವೆ. ಹಿರಿಯ ಸಾಹಿತಿ ಡಾ.ಚನ್ನಪ್ಪ ಕಟ್ಟಿಯವರು ರಚಿಸಿರುವ ಈ ಕವನ ಸಂಕಲನದ ವಿಶೇಷವೆಂದರೆ, ಇಲ್ಲಿನ ಕವನಗಳು ಕನ್ನಡ ಮತ್ತು ಇಂಗ್ಲಿಷ್ ಎರಡರಲ್ಲೂ ರೂಪುಗೊಂಡಿವೆ; ಕನ್ನಡ ಕವನ ಸಂಕಲನವು ಪ್ರತ್ಯೇಕವಾಗಿ ಪ್ರಕಟಗೊಂಡಿದ್ದು, ಇಂಗ್ಲಿಷ್ ಸಂಕಲನದ ಹೆಸರು 'ರೂಟ್ಸ್ ಅಂಡ್ ಶೂಟ್ಸ್'! ಮೊಮ್ಮಕ್ಕಳ ಅಜ್ಜನ ಪ್ರೀತಿಯಿಂದ, ಆತ್ಮೀಯತೆಯಿಂದ, ಕಕ್ಕುಲಾತಿಯಿಂದ ರಚಿಸಿದ ಸರಳ ಕವನಗಳು ಮಕ್ಕಳ ಮನಗೆಲ್ಲು ವಂತಿವೆ. ಇಂಗ್ಲಿಷ್‌ನಲ್ಲಿ ಪ್ರಾಥಮಿಕ ಶಿಕ್ಷಣ ಪಡೆಯುತ್ತಿರುವ ಕನ್ನಡ ಮಕ್ಕಳಿಗೆ ಸೂಕ್ತ ಎನ್ನಬಹುದಾದ ಇಲ್ಲಿನ ಕವನಗಳು, ಆತ್ಮದಲ್ಲಿ ಕನ್ನಡತನವನ್ನು ಹೊಂದಿವೆ, ನಮ್ಮ ನೆಲದ ಕಂಪನ್ನು ಪಡೆದಿವೆ. ಅನುವಾದ ಸಾಹಿತ್ಯದಲ್ಲಿ ಸಾಕಷ್ಟು ಕೃಷಿ ಮಾಡಿರುವ ಡಾ. ಚನ್ನಪ್ಪ ಕಟ್ಟಿಯವರು, ಈಗ ಕುವೆಂಪು ಭಾಷಾ ಭಾರತಿ ಪ್ರಾಧಿಕಾರದ ಅಧ್ಯಕ್ಷರೂ ಹೌದು. ವಿವಿಧ ಭಾಷೆಗಳ ಕೊಡು ಕೊಳ್ಳುವಿಕೆಯು ಪ್ರಮುಖವಾಗಿರುವ ಇಂದಿನ ಸಂದರ್ಭದಲ್ಲಿ, 'ರೂಟ್ಸ್ ಅಂಡ್ ಶೂಟ್ಸ್' ಮಕ್ಕಳ ಕವನ ಸಂಕಲನವು, ಅರ್ಥಪೂರ್ಣ ಪುಸ್ತಕವಾಗಿ ಹೊರಹೊಮ್ಮಿದೆ.

ಪದಬಂಧ

● ಸಿ.ರವಿಶಂಕರ ಶಾಸ್ತ್ರಿ, ದಂಬೆ



ಎಡದಿಂದ ಬಲಕ್ಕೆ

2. ಸುಂದರಗೊಳಿಸು (5)
6. ಕೂಸು ಹುಟ್ಟುವ ಮೊದಲೇ? (3)
7. ಸುಡುವಿಕೆ ಎಂದರ್ಥ (3)
8. ನಾಕ ತೋರಿಸುತ್ತೇನೆಂದ ಮುಖಂಡ (3)
10. ನಮ್ಮ ಹೆತ್ತಮ್ಮ (3)
11. ತಿಳಿವಳಿಕೆ ಇಲ್ಲದವನು, ಮೂರ್ಖ (3)
12. ದೋಸೆ ಹುಯ್ಯುವ ಸಾಧನ (3)
14. ಆ ಕಡೆಯಿಂದ ಬಂದಿರುವ ಭಲ್ಲೂಕ (3)
19. ನಮೂನೆ ದಿಕ್ಕು ತಪ್ಪಿಸಿ ಬಂದಿದೆ (3)
20. ಮರವೇರಿ ಕುಳಿತಿದೆ ನಮ್ಮ ರಾಷ್ಟ್ರಪಕ್ಷಿ (3)
21. ಸುಂದರವಾಗಿ ಕಾಣು ಎನ್ನುವ ಪದ (5)

ಮೇಲಿಂದ ಕೆಳಕ್ಕೆ

1. ರಾಜನ ತಲೆಯ ಮೇಲಿರುವ ಕಿರೀಟ (3)
2. ಹೇಳಿದ ಮಾತನ್ನು ಕೇಳದವನು (4)
3. ಬನವಾಸಿಯು ಈ ವಂಶದ ರಾಜಧಾನಿ (3)
4. ವಿಷ್ಣುವಿನ ಚಕ್ರದ ಹೆಸರು (4)
5. ಮುಖಕ್ಕೆ ಮತ್ತೊಂದು ಹೆಸರಿದು (3)
9. ತಲೆಬುರುಡೆಯನ್ನು ಹಿಡಿದಿರುವ ಶಿವ (3)
10. ಕಾಳು ಹಸನು ಮಾಡುವ ಸಾಧನ (3)
13. ಮದುವೆಯ ಗಂಡಿನಿಂದಲೂ ಆದಾಯ (4)
15. ಬಹಳ ಇಂಪಾದ ಎನ್ನುವುದು ತಲೆಕೆಳಗಾಗಿದೆ (4)
16. ಗಣೇಶನಿಗೆ ಪ್ರಿಯವಾದ ಹುಲ್ಲು (3)
17. ವನದಲ್ಲಿ ಕೊಟ್ಟ ಮಾತು (3)
18. ಅಗಲಿಕೆಯಿಂದ ಉಂಟಾದ ನೋವು (3)

ಸರಿಯುತ್ತರಗಳು

ಚಿತ್ರತಂಡದ ವತಿಯಿಂದ ಇಂದು ವೀರೇಶ್ ಚಿತ್ರಮಂದಿರದಲ್ಲಿ
ಬೆಳಿಗ್ಗೆ 9:30ಕ್ಕೆ ಅನ್ನ ಸಂತರ್ಪಣೆಯನ್ನು ಏರ್ಪಡಿಸಲಾಗಿದೆ
SRI VINAYAKA NAMAHA
U/A
IN CINEMAS
TODAY
A FILM BY VINAY VASUDEV
DISTRIBUTION: VIJAY CINEMAS 9743123126
ವೀರೇಶ್ ಸಿನಿಮಾಸ್ (10:30, 1:30)
PVR INOX
GT 11:00AM
VAISHNAVI 7:10
CENTRAL 4:25
cinépolis
ETA 1:05PM
SJR 1:30PM
GOPALAN CINEMAS
LEGACY 4:45PM
ತುಮಕೂರು
ಮಾರುತಿ
ತುಮಕೂರು(1:15)
PVR INOX
ಚನ್ನಪಟ್ಟಣ
ಬಾಲಾಜಿ
ರಾಮನಗರ
ಶಂಕರ್
ಮೈಸೂರು
PVR INOX
FORUM 10:50AM
DRC CINEMAS
7:05PM
ಮಹದೇಶ್ವರ
ಮಂಡ್ಯ
ಸಂಜಯ
ಹಾಸನ
ಸಹ್ಯಾದ್ರಿ
ಮದ್ದೂರು
ಸಂಜಯ
ಚಾಮರಾಜನಗರ
ಗುರು ರಾಘವೇಂದ್ರ
ಹೊಳೆನರಸೀಪುರ
ಎಸ್.ಎಲ್.ಎನ್
ಬನ್ನೂರು
ಸೋಮೇಶ್ವರ
ಚನ್ನರಾಯಪಟ್ಟಣ
ಬಾಲಾಜಿ
ಪಾಂಡವಪುರ
ಕೋಕಿಲಾ
ಚಾಬುರಾಯನಕೊಪ್ಪಲು
ಭಾರತಿ
ಅರಸೀಕೆರೆ
ರತ್ನ
ಜಗಳೂರು
ನಟರಾಜ
ಹುಬ್ಬಳ್ಳಿ
cinépolis 12:55 PM
ಧಾರವಾಡ
ವಿಜಯ
ಬೆಳಗಾವಿ
ಸಂತೋಷ್
ಬಿಜಾಪುರ
ಅಮೀರ್
ಮುಧೋಳ
ಸುಭಾಷಿಣಿ
ಹೊನ್ನಾವರ
ಪದ್ಮಾಂಜಲಿ
ಗಾವತಿ
ಮೊಯಿದ್ದೀನ್
ಕೊಪ್ಪಳ
ಶಾರದ

SAI SIVANI PRESENTS
Vaaraahi Chalana Chitram
A SAI KORRAPATI PRODUCTION
KIREETI
ಜೂನಿಯರ್
IN CINEMAS
18TH JULY 2025
KANNADA - TELUGU - HINDI - TAMIL - MALAYALAM
DOP KK SENTHIL KUMAR ISC MUSIC DEVI SRI PRASAD PRODUCTION DESIGN RAVEENDAR, AVINASH KOLLA
ACTION PETER HEIN, VENKAT EDITOR NIRANJAN DEVARAMANE DIALOGUES KALYANCHAKRAVARTHI COSTUMES NEETA LULLA
PRO VAMSI SHEKAR, HARISH ARASU
WRITTEN & DIRECTED BY RADHA KRISHNA REDDY PRODUCED BY RAJANI KORRAPATI
ADITYA MUSIC
WORKING TITTLE

ಕರ್ನಾಟಕದ ಮಹಾಜನತೆಗೆ
ಹೃತ್ಪೂರ್ವಕ ವಂದನೆಗಳು
ಧರ್ಮ ಕೀರ್ತಿರಾಜ್
ದಾಸರಹಳ್ಳಿ
ಕೆಟ್ಟಮೇಲೆ ಬುದ್ದಿ ಬಂತು....
DOLBY SURROUND 7.1
ನಿರ್ಮಾಪಕರು: ಪಿ. ಉಮೇಶ
ಚಿತ್ರಕಥೆ ಮತ್ತು ನಿರ್ದೇಶನ: ಎಂ. ಆರ್. ಶ್ರೀನಿವಾಸ್
ಯಶಸ್ವಿ
25 ನೇ ದಿನ
ಹಾರೋಹಳ್ಳಿ
ವಿನಾಯಕ
ಬನಹಟ್ಟಿ
ವೈಭವ್
ಮುಧೋಳ
ಸುಭಾಷಿಣಿ
ಹಾವೇರಿ
ಸರಸ್ವತಿ
ಶಿವಮೊಗ್ಗ
Bharath Cinemas
ಅಥಣಿ
ದುರ್ಗಾಲಕ್ಷ್ಮಿ
ಸಿಂಧನೂರು
ಮಂಜುನಾಥ
ಗಂಗಾವತಿ
ಅಮರ್
ಹಾಗೂ ರಾಜ್ಯಾದ್ಯಂತ
Releasing by Deva Films 9845169975
ಬಾಂಬೆ ಕರ್ನಾಟಕ, ಶಿವಮೊಗ್ಗ ಮತ್ತು ಮಂಗಳೂರು:- ವೈಷ್ಣವಿ ವಸುಂಧರ ಕ್ರಿಯೇಶನ್ಸ್
ಎಮ್.ಎಮ್.ಸಿ.ಹೆಚ್:- ಬೀನಾ ಫಿಲಂಸ್

ಶ್ರೀ ಸಿದ್ದಿವಿನಾಯಕ ಫಿಲಂಸ್
ಇಂದಿನಿಂದ
ಕಿಕ್ಕೋ ಕಿಕ್ಕು
MUSIC
ಚಕೀಲ
...ಕಿಕ್ಕೋ ಕಿಕ್ಕು
ನಿರ್ದೇಶನ ಕೆ ಪ್ರವೀಣ್ ನಾಯಕ್
ನಿರ್ಮಾಪಕರು ಮರಡಿಹಳ್ಳಿ ನಾಗಚಂದ್ರ
ಸಹ ನಿರ್ಮಾಪಕರು ಶಂಕರ್ ರಾಮರೆಡ್ಡಿ
ಹಂಚಿಕೆ : ಜಯಣ್ಣ ಫಿಲಂಸ್
AMAZING MOVIE
ಬೆಂಗಳೂರು:4.ಆಟ
ಸಂತೋಷ್
ಮಾಗಡಿ ರಸ್ತೆ:2.ಆಟ
VEERESH CINEMAS
ತಾವರೆಕೆರೆ: 2.ಆಟ
ಬಾಲಾಜಿ
ಉತ್ತರಹಳ್ಳಿ :
ವೈಷ್ಣವಿವೈಭವಿ
ಆವಲಹಳ್ಳಿ : 2.ಆಟ
ವೆಂಕಟೇಶ್ವರ
ಮಲ್ಲತಹಳ್ಳಿ: 2.ಆಟ
ವಿ.ಆರ್‌ಸಿನಿಮಾಸ್
ಗೊಲ್ಲರಹಟ್ಟಿ:4.ಆಟ
ವೆಂಕಟೇಶ್ವರ
PVR INOX
MALL OF ASIA
NEXUS |VAISHNAVI
ORION (1 SHOW)
REGALIA (1 SHOW)
MARKET CITY | SPIRIT
UPTOWN (1 SHOW)
BHARATIYA | REX
GT | VR MALL
GLOBAL (1 SHOW)
FALCONCITY
SWAGATH | CENTRAL
LIDO | MANTRI (1 SHOW)
RMZ (1 SHOW)
GARUDA | YELAHANKA
NEIGHBOURHOOD
SBR | BROOKFIELD
cinépolis
ETA (1 SHOW)
MEENAKSHI (1 SHOW)
ORION EAST (1 SHOW)
LULU (1 SHOW)
SHANTINIKETAN (1 SHOW)
SJR (1 SHOW)
GOPALAN CINEMAS
ARCH (1 SHOW)
INNOVATION
GRAND (1 SHOW)
SIGNATURE
LEGACY (1 SHOW)
ROCKLINE mall & cinemas
MIRAJ
SUNKADAKATTE
CINEPHILE HSR LAYOUT
INNOVATIVE MULTIPLEX
MARATHALLI
KINO CINEMAS
SEEGEHALLI
MOVIETIME
RR NAGAR
new fangled
MG ROAD
ತುಮಕೂರು:2.ಆಟ
ಗಾಯತ್ರಿ
PVR INOX
ದೊಡ್ಡಬಳ್ಳಾಪುರ :
ರಾಜ್‌ಕಮಲ್
ಮಧುಗಿರಿ :
ಶಾಂತಲಾ
ಸಿರಾ :
ಭಾಗ್ಯಲಕ್ಷ್ಮೀ
ಕೊರಟಗೆರೆ :
ಶಿವಗಂಗಾ
ಮೈಸೂರು :
ಗಾಯತ್ರಿ
DRC CINEMAS
PVR INOX
GARUDA|FORUM
SATYAM|CENTRO
VISION CINEMAS
ಮಂಡ್ಯ :
ಗುರುಶ್ರೀ
ಹಾಸನ :
ಎಸ್.ಬಿ.ಜಿ
ಕೆ.ಆರ್.ನಗರ :
ವೆಂಕಟೇಶ್ವರ
ಗುಂಡ್ಲುಪೇಟೆ :
ವೆಂಕಟೇಶ್ವರ
ನಂಜನಗೂಡು :
ಭಾರ್ಗವಿ
ಟಿ.ನರಸೀಪುರ :
ಮುರುಗನ್
ಅರಸೀಕೆರೆ :
ಸಾಧನಾ
ಶಿವಮೊಗ್ಗ :
Bharath Cinemas
ಚಿಕ್ಕಮಗಳೂರು:2.ಆಟ
ಶ್ರೀಲೇಖಾ
ಭದ್ರಾವತಿ :
ನೇತ್ರಾವತಿ
ಕೊಪ್ಪಳ :
ಜೆ.ಎಂ.ಜೆ
ಬಾಳೆಹೊನ್ನೂರು:2.ಆಟ
ಸುದರ್ಶಿನಿ
ದಾವಣಗೆರೆ :
ತ್ರಿಶೂಲ್
MOVIETIME
ಚಿತ್ರದುರ್ಗ :
ಪ್ರಸನ್ನ
ಬಳ್ಳಾರಿ :
MOVIETIME
ಹುಬ್ಬಳ್ಳಿ :
ಸುಧಾ
LAXMI CITY PRIDE
cinépolis
ಧಾರವಾಡ :
ಸಂಗಮ್
PVR INOX
ಬೆಳಗಾವಿ :
ಚಿತ್ರಾ
PVR INOX
KAPEEL CINEMA
Bharath Cinemas
ಬಿಜಾಪುರ :
ಲಕ್ಷ್ಮೀ
ಗದಗ :
ಮಹಾಲಕ್ಷ್ಮೀ
ರಾಣೇಬೆನ್ನೂರು :
ಶಿವಶಕ್ತಿ
ಬಾಗಲಕೋಟೆ :
ವಾಸವಿ
ಇಳಕಲ್ :
ಶ್ರೀನಿವಾಸ
ಸಿಂಧಗಿ :
ಆನಂದ್
ಲಕ್ಷ್ಮೇಶ್ವರ :
ರವಿ
ಹಾವೇರಿ :
ಮಾಗವಿ
ಬಾದಾಮಿ :
ಮಹಾಕೂಟೇಶ್ವರ
ಗಜೇಂದ್ರಗಢ :
ಅಲಂಕಾರ್
ನಿಪ್ಪಾಣಿ :
ಮ್ಯಾಗ್ನಮ್‌ಸಿನಿಮಾಸ್
ಕಲಬುರ್ಗಿ :
ಶೆಟ್ಟಿಮಲ್ಟಿಪ್ಲೆಕ್ಸ್
PVR INOX
MIRAJ
ಗಂಗಾವತಿ :
ಶಿವೆ
ಕೊಪ್ಪಳ :
ಲಕ್ಷ್ಮೀ
ರಾಯಚೂರು :
MIRAJ
ಬೀದರ್ :
ಸಪ್ನಮಹಲ್
ಮಂಗಳೂರು :
PVR INOX
cinépolis
Bharath Cinemas
BHARATH MALL
Cine GALAXY
SURATHKAL
ಉಡುಪಿ :
ಅಲಂಕಾರ್
Bharath Cinemas
ಮಣಿಪಾಲ :
PVR INOX
cinépolis
ಕುಂದಾಪುರ :
Bharath Cinemas
ಪಡುಬಿದ್ರೆ :
Bharath Cinemas
ಪುತ್ತೂರು :
Bharath Cinemas
ದೇರಳಕಟ್ಟೆ :
Bharath Cinemas
ಹಾಗೂ ರಾಜ್ಯಾದ್ಯಂತ